ಗುರುವಾರ, ಮೇ 30, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 150 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಆರ್ಟೆಮಿಸ್ ಬಾಹ್ಯಾಕಾಶ ಒಪ್ಪಂದ ಗೊತ್ತೆ?



ಆಳ-ಅಗಲ
ಆರೋಪಿಗಳಿಗೆ ಎಲ್ಲ ಪಕ್ಷಗಳಲ್ಲೂ ಮಣೆ

ರಾಜ್ಯದಲ್ಲಿ ಏಳು ದಿನ ಸಾಧಾರಣ ಮಳೆ 11

ಐಪಿಪಿಬಿ ಖಾತೆ: ಮಹಿಳೆಯರ ಲಗ್ಗೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,502	22,704	₹75,000 (ಬೆಂಗಳೂರು)	₹97,100 (ಬೆಂಗಳೂರು)	83.39

ರಿಯಲ್ ಎಸ್ಟೇಟ್ ಚೇತರಿಕೆ ಕಂಡರೂ ಮರಳು ಕೊರತೆ • ಸಮರ್ಪಕ ಮರಳು ನೀತಿ ಜಾರಿಗೆ ಆಗ್ರಹ

ಅಕ್ರಮ ಮರಳು; ಕಾಣದ ಕಡಿವಾಣ

• ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ರಾಜ್ಯದಲ್ಲಿ ರಿಯಲ್ ಎಸ್ಟೇಟ್ ಚೇತರಿಕೆ ಕಂಡಿದೆ. ಆದರೆ, ಅಗತ್ಯಕ್ಕೆ ತಕ್ಕಂತೆ ಮರಳು ಸಿಗುತ್ತಿಲ್ಲ. ನದಿ, ಹಳ್ಳ, ಕೆರೆಗಳ ದಡದಲ್ಲಿ ನೈಸರ್ಗಿಕ ಮರಳಿದೆ. ಆದರೆ, ಗ್ರಾಹಕರಿಗೆ ತಲುಪುತ್ತಿಲ್ಲ. ಮರಳು ಸುಲಭವಾಗಿ 'ಸಿಗದ' ರೀತಿ ವ್ಯವಸ್ಥಿತ ಷಡ್ಯಂತ್ರ ನಡೆದಿದೆ; ಈ ಷಡ್ಯಂತ್ರವನ್ನು ಬಯಲಿಗೆ ತರುವ ಪ್ರಯತ್ನವೇ ನಡೆದಿಲ್ಲ.

ರಾಜ್ಯದಲ್ಲಿ ವರ್ಷಕ್ಕೆ 4.50 ಕೋಟಿ ಟನ್ ಮರಳು ಬೇಕು. ಕಟ್ಟಡ ನಿರ್ಮಾಣಕ್ಕೆ ನೈಸರ್ಗಿಕ ಮರಳು ಸೂಕ್ತ ಎಂಬ ಕಾರಣಕ್ಕೆ ಅದಕ್ಕೆ ಹೆಚ್ಚು ಬೇಡಿಕೆಯಿದೆ. ಪ್ರಸ್ತುತ, 1 ಟನ್ ಮರಳಿಗೆ ಅಂದಾಜು ದರ ₹3 ಸಾವಿರ ಇದೆ. ಕೇಳಿದಷ್ಟು ಹಣ ಕೊಟ್ಟರೂ ಅಗತ್ಯ ಇರುವಷ್ಟು ಮರಳು ಸಿಗುತ್ತಿಲ್ಲ. ರಾಜ್ಯದಲ್ಲಿ 50 ಲಕ್ಷ ಟನ್ ಮಾತ್ರ ಮರಳು ಪೂರೈಕೆ ಆಗುತ್ತಿದೆ.

13ನೇ ಪುಟ ನೋಡಿ



ಕಾರವಾರ ತಾಲ್ಲೂಕಿನ ಸಿದ್ಧರ ಗ್ರಾಮದಲ್ಲಿ ಕಾಳಿನದಿಯಲ್ಲಿ ಮರಳುಗಾರಿಕೆ

'2013ರ ನೀತಿ ಪುನಃ ಅಳವಡಿಸಿ'

'2013ರ ಮರಳು ನೀತಿ ಪುನರ್ ಅನುಷ್ಠಾನಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೋರಲಾಗಿದೆ. ಬಿಜೆಪಿ ಅವಧಿಯಲ್ಲಿ ರೂಪಿಸಿದ ಅವೈಜ್ಞಾನಿಕ ನಿಯಮಗಳ ಫಲವಾಗಿ ಮರಳಿನ ಸಮಸ್ಯೆ ಹೆಚ್ಚಾಗಿದೆ' ಎಂದು ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಹೇಳಿದ್ದಾರೆ.

'ಮರಳು ತೆಗೆಯುವ ಸಾಂಪ್ರದಾಯಿಕ ಸಮುದಾಯಕ್ಕೆ ಪರವಾನಗಿ ನೀಡಬೇಕು. ಹೊಸದಾಗಿ ಅರ್ಜಿ ಕರೆದು ತಾತ್ಕಾಲಿಕ ಪರವಾನಗಿ ವಿತರಿಸಬೇಕು. ಗಣಿ ಮಂಜೂರಾತಿಗೆ ಪರಿಸರ ನಿರಾಕ್ಷೇಪಣಾ ಪತ್ರ ನೀಡಲು ಜಿಲ್ಲಾಮಟ್ಟದ ಸಮಿತಿ ರಚಿಸಿ, ಅನುಮತಿ ನೀಡಬೇಕು. ಕರಾವಳಿ ಜಿಲ್ಲೆ ನದಿಪಾತ್ರದಲ್ಲಿ ಸಿಆರ್‌ಜೆಡ್ ನಿಯಮದಂತೆ ಮರಳು ತೆಗೆಯಲು ಅವಕಾಶ ಕಲ್ಪಿಸಬೇಕು' ಎಂದರು.

ರಾಜ್ಯದಲ್ಲಿ ವಾರ್ಷಿಕ 4.50 ಕೋಟಿ ಟನ್ ಮರಳಿಗೆ ಬೇಡಿಕೆ ಇದೆ. 80 ಲಕ್ಷ ಟನ್ ಕೊರತೆ ನೀಗಿಸಲು ಎಂ–ಸ್ಯಾಂಡ್ ಉತ್ಪಾದನೆ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗಿದೆ
ಎಸ್.ಎಸ್. ಮಲ್ಲಿಕಾರ್ಜುನ, ಗಣಿ ಸಚಿವ

ಕಟ್ಟಡ ನಿರ್ಮಾಣ ಕ್ಷೇತ್ರ ಚೇತರಿಕೆಯಾಗುತ್ತಿದೆ. ಆದರೆ, ಸಮರ್ಪಕವಾಗಿ ಮರಳು ಸಿಗುತ್ತಿಲ್ಲ. ಮರಳು ನೀತಿಯನ್ನು ಸರ್ಕಾರ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು
ಪ್ರದೀಪ ರಾಯ್ಕರ್, ಅಧ್ಯಕ್ಷ, ಕ್ರೆಡೈ

ಮರಳು ನೀತಿ ಸಮರ್ಪಕವಾಗಿ ಜಾರಿಯಾಗಿಲ್ಲ. ವಿದೇಶಗಳಿಂದ ಮರಳು ತರಿಸುವುದಾಗಿ ನೀಡಿದ ಹೇಳಿಕೆ ಇನ್ನೂ ಸಾಕಾರಗೊಂಡಿಲ್ಲ. ಎಂ–ಸ್ಯಾಂಡ್ ಗುಣಮಟ್ಟವನ್ನು ಯಾರೂ ಪರೀಕ್ಷಿಸುತ್ತಿಲ್ಲ
ಶಶಿಧರ ಕೊರವಿ, ಬಿಲ್ಡರ್, ಹುಬ್ಬಳ್ಳಿ

ರಾಜ್ಯದಲ್ಲಿ ಮರಳು ದರ

ಮರಳು ವಿಧ	ದರ (ಟನ್‌ಗೆ ₹ ಗಳಲ್ಲಿ)
ಎಂ–ಸ್ಯಾಂಡ್	800 -1,200
ನದಿ ಮರಳು	3,000

ರಾಜ್ಯದಲ್ಲಿ ಮರಳು ಸ್ಥಿತಿ (ಟನ್‌ಗಳಲ್ಲಿ)

ವಾರ್ಷಿಕ ಬೇಡಿಕೆ	4.50 ಕೋಟಿ
ಎಂ–ಸ್ಯಾಂಡ್	3 ಕೋಟಿ
ನದಿ ಮರಳು	50 ಲಕ್ಷ,
ಹೊರ ರಾಜ್ಯಗಳಿಂದ	20 ಲಕ್ಷ
ಕೊರತೆ	80 ಲಕ್ಷ

ರಾಜ್ಯದಲ್ಲಿ ಎಂ–ಸ್ಯಾಂಡ್ ಉತ್ಪಾದಿಸುವ ಕ್ರಷರ್‌ಗಳು 648

ಬೆಂಗಳೂರಿನ ಬೇಡಿಕೆ (ಟನ್‌ಗಳಲ್ಲಿ)

ವಾರ್ಷಿಕ ಬೇಡಿಕೆ	1.75 ಕೋಟಿ
ಎಂ–ಸ್ಯಾಂಡ್	1.15 ಕೋಟಿ
ನದಿ ಮರಳು	22 ಲಕ್ಷ,
ತಮಿಳುನಾಡಿನಿಂದ	16 ಲಕ್ಷ
ಕೊರತೆ	22 ಲಕ್ಷ



ಮಳೆ ಅವಾಂತರ ರೀಮಲ್ ಚಂಡಮಾರುತ ಅಪ್ಪಳಿಸಿದ ಪರಿಣಾಮ ಅಸ್ಸಾಂನ ನಾಗಾವ್ ಜಿಲ್ಲೆಯ ಸಿಂಗಿ ಮಾರಿ ಗ್ರಾಮದಲ್ಲಿ ಬುಧವಾರ ಭಾರಿ ಮಳೆ ಸುರಿದು ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ
– ಪಿಟಿಐ ಚಿತ್ರ

ಪಾಕ್ ಶಕ್ತಿವೃದ್ಧಿಗೆ ಚೀನಾ ನೆರವು

ಎಲ್‌ಒಸಿ ಉದ್ದಕ್ಕೂ ಕಾರ್ಯಾಚರಣೆ: ಅಧಿಕಾರಿಗಳ ಹೇಳಿಕೆ

ಕುಪ್ವಾರ (ಜಮ್ಮು–ಕಾಶ್ಮೀರ) (ಪಿಟಿಐ): ಜಮ್ಮು–ಕಾಶ್ಮೀರಕ್ಕೆ ಹೊಂದಿಕೊಂಡಿರುವ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಉದ್ದಕ್ಕೂ ಪಾಕಿಸ್ತಾನ ಸೇನೆಯ ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಅದರ ಮಿತ್ರ ರಾಷ್ಟ್ರ ಚೀನಾ ನೆರವು ನೀಡುತ್ತಿದೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

'ಕಳೆದ ಮೂರು ವರ್ಷಗಳಿಂದ ಪಾಕಿಸ್ತಾನಕ್ಕೆ ಚೀನಾ ನೆರವು ನೀಡುತ್ತಿದೆ. ಉಕ್ಕು ಬಳಸಿ ಬಂಕರ್‌ಗಳ ನಿರ್ಮಾಣ, ಡ್ರೋನ್‌ಗಳು, ಯುದ್ಧವಿಮಾನಗಳು ಸೇರಿದಂತೆ ಹಲವು ರೀತಿಯ ನೆರವು ನೀಡುತ್ತಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಚೀನಾ ನೀಡುತ್ತಿರುವ ನೆರವು ಕೇವಲ ಶಸ್ತ್ರಾಸ್ತ್ರ ಒದಗಿಸುವುದು, ಬಂಕರ್‌ಗಳ ನಿರ್ಮಾಣಕ್ಕೆ ಸೀಮಿತವಾಗಿಲ್ಲ. ಸಂವಹನದಲ್ಲಿ ಗರಿಷ್ಠ ಸುರಕ್ಷತೆಯನ್ನು ಖಾತ್ರಿಪಡಿಸಲು ಟವರ್‌ಗಳು ಹಾಗೂ ಭೂಗತ ಕೇಬಲ್‌ಗಳನ್ನು ಎಲ್‌ಒಸಿಯ ಉದ್ದಕ್ಕೂ ಅಳವಡಿಸುವ ಕಾರ್ಯದಲ್ಲೂ ಚೀನಾ ನೆರವು ನೀಡುತ್ತಿದೆ ಎಂದು ಹೇಳಿದ್ದಾರೆ.

'ಜೆವೈ' ಹಾಗೂ 'ಎಚ್‌ಜಿಆರ್' ಸರಣಿಯ ಅತ್ಯಾಧುನಿಕ ರೇಡಾರ್ ವ್ಯವಸ್ಥೆಯನ್ನು ಪಾಕಿಸ್ತಾನ ಸೇನೆ ಗಡಿ ನಿಯಂತ್ರಣ ರೇಖೆ ಬಳಿ ಅಳವಡಿಸಿದೆ. ಇವುಗಳನ್ನು ಚೀನಾದಲ್ಲಿಯೇ ತಯಾರಿಸಲಾಗಿದೆ. ಟ್ರಕ್‌ನಲ್ಲಿ ಅಳವಡಿಸಿರುವ 155 ಎಂಎಂ ಹೊವಿಟ್ಜರ್ ಫಿರಂಗಿಯನ್ನು (ಎಸ್‌ಎಚ್–15) ಗಡಿಯಲ್ಲಿ ನಿಯೋಜನೆ ಮಾಡಿರುವುದನ್ನು ಗುರುತಿಸಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ಪಾಕಿಸ್ತಾನದೊಂದಿಗಿನ ತನ್ನ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುವುದು, ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ಸೇರಿದಂತೆ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ತನ್ನ ಹೂಡಿಕೆಗಳನ್ನು ರಕ್ಷಿಸುವ ಭಾಗವಾಗಿ ಚೀನಾ ಈ ನೆರವು ನೀಡುತ್ತಿದೆ' ಎಂದು ಅಧಿಕಾರಿಗಳು ವಿಶ್ಲೇಷಿಸಿದ್ದಾರೆ.

ಪಾಕ್‌ನಲ್ಲಿ ಚೀನಾ ಚಟುವಟಿಕೆಗಳು

- 2007ರಲ್ಲಿ ಪಾಕಿಸ್ತಾನ ಟೆಲಿಕಾಂ ಕಂಪನಿಯನ್ನು ಚೀನಾ ಕಂಪನಿ ಸ್ವಾಧೀನ ಪಡಿಸಿಕೊಂಡು, 'ಚೀನಾ ಮೊಬೈಲ್ ಪಾಕಿಸ್ತಾನ' (ಸಿಎಂಪಾಕ್) ಎಂಬ ಸಂಸ್ಥೆಯನ್ನು ರಚಿಸಲಾಗಿತ್ತು. ಇದು ಚೀನಾ ಮೊಬೈಲ್ ಕಮ್ಯುನಿಕೇಷನ್ಸ್ ಕಾರ್ಪೊರೇಷನ್‌ನ ಸಂಪೂರ್ಣ ಒಡೆತನದಲ್ಲಿದೆ
- ಪಾಕಿಸ್ತಾನ ಆಕ್ರಮಿತ ಕಾಶ್ಮೀರದ (ಪಿಒಕೆ) ಲೀಪಾ ಕಣಿವೆಯಲ್ಲಿ ಸುರಂಗ ಮಾರ್ಗ ನಿರ್ಮಾಣದಲ್ಲಿ ಚೀನಾ ತಜ್ಞರು ನಿರತರಾಗಿದ್ದರು

'ಗಡಿಯಲ್ಲಿನ ಬೆಳವಣಿಗೆ ಮೇಲೆ ನಿಗಾ'

'ಚೀನಾ ಮತ್ತು ಭಾರತದ ನಡುವೆ ಸಂಘರ್ಷ ಇನ್ನೂ ಶಮನಗೊಂಡಿಲ್ಲ. ಆದರೂ, ಗಡಿ ನಿಯಂತ್ರಣ ರೇಖೆಗುಂಟ ಕಂಡುಬಂದಿರುವ ಬೆಳವಣಿಗೆಗಳನ್ನು ಭಾರತ ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಗಡಿಯಲ್ಲಿನ ಸಂಭಾವ್ಯ ಬೆದರಿಕೆಗಳನ್ನು ಮಟ್ಟ ಹಾಕಲು ಸನ್ನದ್ಧವಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರದೇಶದಲ್ಲಿ ಚೀನಾ ಸೇನೆಯು ಸಕ್ರಿಯವಾಗಿರುವ ಕುರಿತು ಈ ಹಿಂದೆಯೂ ಹಲವಾರು ಭಾರಿ ಭಾರತ ತನ್ನ ಆತಂಕವನ್ನು ವ್ಯಕ್ತಪಡಿಸಿದೆ. ಅದರಲ್ಲೂ, ಗಿಲ್ಗಿಟ್ ಮತ್ತು ಬಾಲ್ಟಿಸ್ತಾನ ಪ್ರದೇಶಗಳಲ್ಲಿ ಚೀನಾ ಸೇನೆಯ ಚಟುವಟಿಕೆಗಳ ಕುರಿತು ಭಾರತ ಬಲವಾದ ಆಕ್ಷೇಪ ವ್ಯಕ್ತಪಡಿಸಿತ್ತು.

'ಬ್ಯಾಂಕ್‌ನಿಂದ ₹94 ಕೋಟಿ ದುರ್ಬಳಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ವಾಲ್ಮೀಕಿ ಅಭಿವೃದ್ಧಿ ನಿಗಮದ ₹94 ಕೋಟಿ ಹಣ ವರ್ಗಾವಣೆ ಮಾಡಿಕೊಂಡಿರುವ ಆರೋಪದ ಮೇಲೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಸಿಇಒ ಸೇರಿದಂತೆ ಬ್ಯಾಂಕ್‌ನ ಆರು ಮಂದಿ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಮಣಿಮೇಖಲೈ, ಕಾರ್ಯನಿರ್ವಾಹಕ ನಿರ್ದೇಶಕ ನಿತೇಶ್ ರಂಜನ್, ರಾಮಸುಬ್ರಮಣ್ಯಂ, ಸಂಜಯ್‌ರುದ್ರ, ಪಂಕಜ್ ದ್ವಿವೇದಿ ಹಾಗೂ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕಿ ಸುಶಿಚಿತಾ ರಾವ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ನಿಗಮದ ಪ್ರಧಾನ ವ್ಯವಸ್ಥಾಪಕ ಎ.ರಾಜಶೇಖರ್ ಅವರು ನೀಡಿದ ದೂರು ಆಧರಿಸಿ, ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ವಾಲ್ಮೀಕಿ ಅಭಿವೃದ್ಧಿ ನಿಗಮವು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ವಸಂತನಗರದ ಶಾಖೆಯಲ್ಲಿ ಖಾತೆ ತೆರೆದಿತ್ತು. ಇದೇ ಬ್ಯಾಂಕ್‌ನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಶಾಖೆಗೆ ಫೆಬ್ರುವರಿ 2ರಂದು ಖಾತೆಯನ್ನು ವರ್ಗಾವಣೆ ಮಾಡಿಕೊಳ್ಳಲಾಗಿತ್ತು. ಖಾತೆ ನಿರ್ವಹಣೆ ಮಾಡುವ ಸಂಬಂಧ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹಾಗೂ ಲೆಕ್ಕಾಧಿಕಾರಿಯಿಂದ ಬ್ಯಾಂಕ್ ಸಿಬ್ಬಂದಿ ಸಹಿ ಪಡೆದುಕೊಂಡಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

7ನೇ ಪುಟ ನೋಡಿ

₹88.62 ಕೋಟಿ ಅಕ್ರಮ: ಎಂಡಿ, ಲೆಕ್ಕಾಧಿಕಾರಿ ಅಮಾನತು

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರ ಆರೋಪಗಳ ಕಾರಣ ನಿಗಮದ ವ್ಯವಸ್ಥಾಪಕ ನಿರ್ದೇಶಕ (ಎಂಡಿ) ಜೆ.ಜಿ. ಪದ್ಮನಾಭ ಮತ್ತು ಲೆಕ್ಕಾಧಿಕಾರಿ ಪರುಶುರಾಮ್ ಜಿ. ದುರ್ಗಣ್ಣನವರ್ ಅವರನ್ನು ರಾಜ್ಯ ಸರ್ಕಾರ ಅಮಾನತು ಮಾಡಿದೆ. ವ್ಯವಸ್ಥಾಪಕ ನಿರ್ದೇಶಕ ಸ್ಥಾನಕ್ಕೆ ಪ್ರಭಾರಿಯಾಗಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಕೆ.ಆರ್. ರಾಜ್‌ಕುಮಾರ್ ಅವರನ್ನು ನೇಮಿಸಿ ಆದೇಶಿಸಲಾಗಿದೆ.

7ನೇ ಪುಟ ನೋಡಿ

ಕೇಜ್ರಿವಾಲ್ ಅರ್ಜಿ ತುರ್ತು ವಿಚಾರಣೆಗೆ ನಕಾರ 10

ನ್ಯಾ.ವಿ.ಕೆ.ರಾವ್ ಕರ್ನಾಟಕ ಹೈಕೋರ್ಟ್‌ಗೆ ವರ್ಗ

ಬೆಂಗಳೂರು: ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ವಲ್ಲೂರಿ ಕಾಮೇಶ್ವರ ರಾವ್ ಅವರನ್ನು ಕರ್ನಾಟಕ ಹೈಕೋರ್ಟ್‌ಗೆ ವರ್ಗಾವಣೆ ಮಾಡಿ ಆದೇಶಿಸಲಾಗಿದೆ. ಈ ಕುರಿತಂತೆ ಕೇಂದ್ರ ಕಾನೂನು ಸಚಿವಾಲಯ ಬುಧವಾರ ಆದೇಶ ಹೊರಡಿಸಿದೆ.

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಗರ್ಭಪಾತದಿಂದ ಸಾವು; ಮಹಿಳೆ ಸೇರಿ ಏಳು ಮಂದಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಮಹಾಲಿಂಗಪುರ (ಬಾಗಲಕೋಟೆ): ಇಲ್ಲಿನ ಆಯಿಲ್ ಪ್ಲಾಟ್‌ನಲ್ಲಿರುವ ನಿವಾಸದಲ್ಲಿ ಸೋಮವಾರ ಗರ್ಭಪಾತ ಮಾಡಿಸಿಕೊಂಡ ಮಹಾರಾಷ್ಟ್ರದ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಪಟ್ಟಣದ ಮಹಿಳೆಯೊಬ್ಬರು ಸೇರಿ ಏಳು ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಮಹಾಲಿಂಗಪುರದ ಕವಿತಾ ಬಾಡನವರ, ಮಹಾರಾಷ್ಟ್ರದ ದೂದ್‌ಗಾವ್‌ನ ಸಂಜಯ ಗೌಳಿ, ಸಂಗೀತಾ ಸಂಜಯ ಗೌಳಿ, ವಿಜಯ ಸಂಜಯ ಗೌಳಿ, ಕುಪ್ವಾಡದ ಮಾರುತಿ ಬಾಬುಸೋ ಖರಾತ್, ಒಬ್ಬರು ಸೋನೊಗ್ರಾಫರ್, ಅಥಣಿಯ ಡಾ. ಕೋತ್ವಾಲೆ ವಿರುದ್ಧ ಸಾಂಗ್ಲಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿಗಳಾದ ವಿಜಯ ಸಂಜಯ ಗೌಳಿ, ಡಾ.ಮಾರುತಿ ಬಾಬುಸೋ ಖರಾತ್, ಕವಿತಾ ಬಾಡನವರ ಅವರನ್ನು ಬಾಗಲಕೋಟೆಯ ಪೊಲೀಸರು ಬಂಧಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ನಡೆದಿದ್ದೇನು?: ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತಕಲಂಗಡ ತಾಲ್ಲೂಕಿನ ಆಳತೆ ಗ್ರಾಮದ ಸೋನಾಲಿ ಸಚಿನ್ ಕದಮ್ (32) ಅವರಿಗೆ ಇಬ್ಬರು ಹೆಣ್ಣುಮಕ್ಕಳಿದ್ದು, ಮೂರನೇ ಬಾರಿ ಗರ್ಭಿಣಿ ಆಗಿದ್ದರು.

13ನೇ ಪುಟ ನೋಡಿ

ರಾತ್ರಿ ವೇಳೆ ಗರ್ಭಪಾತ

'ಗರ್ಭಪಾತಕ್ಕೆ ಮಧ್ಯರಾತ್ರಿ ಬರುತ್ತಿದ್ದ ಮಹಿಳೆಯರಿಗೆ 15ರಿಂದ 20 ನಿಮಿಷದಲ್ಲಿ ಆರೋಪಿ ಕವಿತಾ ಗರ್ಭಪಾತ ಮಾಡಿ, ಕಳುಹಿಸುತ್ತಿದ್ದರು ಎಂಬುದು ಪ್ರಾಥಮಿಕ ಹಂತದ ತನಿಖೆಯಿಂದ ಗೊತ್ತಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ತಿಳಿಸಿದರು.

'ಯಾರಿಗೂ ಮೊಬೈಲ್ ನಂಬರ್ ನೀಡುತ್ತಿರಲಿಲ್ಲ. ಪರಿಚಿತ ಮಧ್ಯವರ್ತಿಗಳು ಕರೆದುಕೊಂಡು ಬಂದರೆ ರಾತ್ರೋರಾತ್ರಿ ಗರ್ಭಪಾತ ಮಾಡುತ್ತಿದ್ದರು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಬಂದ ತಕ್ಷಣವೇ ಪ್ರಜ್ವಲ್ ವಶಕ್ಕೆ ಪಡೆಯುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ, ಹಾಸನದ ಸಂಸದ ಪ್ರಜ್ವಲ್ ರೇವಣ್ಣ ಅವರು ವಿದೇಶದಲ್ಲಿ ತಲೆಮರೆಸಿಕೊಂಡಿದ್ದು, ಗುರುವಾರ ಮಧ್ಯರಾತ್ರಿ ದೇವನಹಳ್ಳಿ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬಂದಿಳಿಯುವ ಸಾಧ್ಯತೆಯಿದೆ.

ಪ್ರಜ್ವಲ್ ನಿಲ್ದಾಣಕ್ಕೆ ಬಂದ ತಕ್ಷಣವೇ ವಶಕ್ಕೆ ಪಡೆದು ಬಂಧಿಸಲು ಎಸ್‌ಐಟಿ ಅಧಿಕಾರಿಗಳು ವಿಮಾನ ನಿಲ್ದಾಣದಲ್ಲೇ ಬೀಡುಬಿಟ್ಟಿದ್ದಾರೆ.

ಜರ್ಮನಿಯ ಮ್ಯೂನಿಕ್‌ನಿಂದ ಬೆಂಗಳೂರಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಲುಫ್ತಾನ್ಸಾ ಏರ್‌ಲೈನ್ಸ್ ವಿಮಾನದಲ್ಲಿ ಪ್ರಜ್ವಲ್ ರೇವಣ್ಣ ಹೆಸರಿನಲ್ಲೇ ಟಿಕೆಟ್ ಕಾದಿರಿಸಲಾಗಿದೆ. ಆ ವಿಮಾನವು ಗುರುವಾರ ರಾತ್ರಿ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬರಲಿದೆ. ಅದೇ ವಿಮಾನದಲ್ಲಿ ಪ್ರಜ್ವಲ್ ಬರಲಿದ್ದಾರೆ ಎಂದು ತನಿಖಾಧಿಕಾರಿಗಳು ವಿಮಾನದ ನಿಲ್ದಾಣದ ಬಳಿ ಕಾದು ಕುಳಿತಿದ್ದಾರೆ.

7ನೇ ಪುಟ ನೋಡಿ

ಕಚೇರಿ ಸಮಯದಲ್ಲಿ ಪಾರ್ಟಿ • ಕೆಪಿಟಿಸಿಎಲ್ ಸಿಬ್ಬಂದಿ ನಡುವೆ ಹೊಡೆದಾಟ

ಬಿಯರ್ ಬಾಟಲಿ ಬಳಸಿ ಬಡಿದಾಟ

ಪ್ರಜಾವಾಣಿ ವಾರ್ತೆ

ಪಾವಗಡ (ತುಮಕೂರು): ವಾರದ ಹಿಂದೆ ನಡೆದ ಪಾರ್ಟಿಯಲ್ಲಿ ಇಲ್ಲಿಯ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) ಕಚೇರಿಯ ಜೂನಿಯರ್ ಎಂಜಿನಿಯರ್ ಮತ್ತು ಸಿಬ್ಬಂದಿ ಬಿಯರ್ ಬಾಟಲಿಯಿಂದ ಹೊಡೆದಾಡಿಕೊಂಡಿದ್ದಾರೆ ಎಂಬ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಈಗ ಹರಿದಾಡುತ್ತಿದೆ.

ಮೇ 23ರಂದು ಕಚೇರಿಯ ಸಮಯದಲ್ಲೇ ಪಟ್ಟಣದ ಹೊರವಲಯದ ತೋಟವೊಂದರಲ್ಲಿ ಕೆಪಿಟಿಸಿಎಲ್ ಅಧಿಕಾರಿಗಳು ಮತ್ತು ಸಿಬ್ಬಂದಿ ಸೇರಿ ಪಾರ್ಟಿ ಮಾಡಿದ್ದರು. ಪಾರ್ಟಿ ಮಧ್ಯೆ ಮಾತಿಗೆ ಮಾತು ಬೆಳೆದು ಕೈ ಕೈ ಮಿಲಾಯಿಸಿದ್ದಾರೆ.

ಮೆಕ್ಯಾನಿಕಲ್ ಗ್ರೇಡ್ (ಜೆಎಂ) ಸಿಬ್ಬಂದಿ ನರಸಿಂಹಮೂರ್ತಿ ಎಂಬವರು ಜೂನಿಯರ್ ಎಂಜಿನಿಯರ್ ವರದರಾಜು ಎಂಬವರ ತಲೆಗೆ ಬಿಯರ್ ಬಾಟಲಿಯಿಂದ ಬಲವಾಗಿ ಹೊಡೆದಿದ್ದಾರೆ. ತಲೆಗೆ ಪೆಟ್ಟು ಬಿದ್ದು ರಕ್ತ ಸುರಿದಿದೆ. ವರದರಾಜು ಅವರೂ ಬಿಯರ್ ಬಾಟಲಿ ಹಿಡಿದು ನರಸಿಂಹಮೂರ್ತಿ ಮೇಲೆ ಹಲ್ಲೆ ಮಾಡಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಮತ್ತೊಬ್ಬ ಜೂನಿಯರ್ ಎಂಜಿನಿಯರ್ ಶ್ರೀನಿವಾಸ್, ಕಚೇರಿ ಅಟೆಂಡರ್ ಸಂತೋಷ್ ಜಗಳ ಬಿಡಿಸಿದ್ದಾರೆ. ಪಾರ್ಟಿಯಲ್ಲಿ ಭಾಗವಹಿಸಿದ್ದ ಸಿಬ್ಬಂದಿಯೊಬ್ಬರು ಈ ಹೊಡೆದಾಟವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ.


ಈ ಘಟನೆಯಲ್ಲಿ ಗಾಯಗೊಂಡ ಸಿಬ್ಬಂದಿ ಸೇರಿದಂತೆ ಎಲ್ಲರೂ ಕಚೇರಿಗೆ ಹೋಗಿದ್ದಾರೆ. ಆದರೆ, ಜಗಳ ನಡೆದಿರುವುದನ್ನು ಮುಚ್ಚಿಟ್ಟಿದ್ದಾರೆ. ಕಚೇರಿಯ ಅಧಿಕಾರಿಗಳ ಮಧ್ಯೆ ಇರುವ ಮನಸ್ತಾಪದಿಂದ ವಾರದ ನಂತರ ವಿಡಿಯೊ ಬಹಿರಂಗವಾಗಿದೆ ಎಂದು ಮೂಲಗಳು ಹೇಳಿವೆ.

ಕೆಪಿಟಿಸಿಎಲ್ ಕಚೇರಿ ಸಿಬ್ಬಂದಿ ಮಧ್ಯೆ ಹಣ ಹಂಚಿಕೆಯ ವಿಷಯದಲ್ಲಿನ ಮನಸ್ತಾಪದಿಂದ ವಿಡಿಯೊ ಹೊರ ಬಂದಿದೆ. ಪರಸ್ಪರ ಹೊಡೆದಾಟ ಮಾಡಿಕೊಂಡ ಸಿಬ್ಬಂದಿಯ ವಿರೋಧಿ ಬಣದವರು ವಿಡಿಯೊ ಬಿಡುಗಡೆ ಮಾಡಿದ್ದಾರೆ ಎಂದು ಹೇಳಲಾಗುತ್ತಿದೆ.



ಕೆಪಿಟಿಸಿಎಲ್ ಜೂನಿಯರ್ ಎಂಜಿನಿಯರ್ ವರದರಾಜು ಮತ್ತು ಸಿಬ್ಬಂದಿ ನರಸಿಂಹಮೂರ್ತಿ ವಾಗ್ವಾದ ನಡೆಸಿದರು

ಅಪರಾಧ ಸುದ್ದಿ



ಗಲಾಟೆಯಲ್ಲಿ ಗಾಯಗೊಂಡ ವರದರಾಜು

ನೋಟಿಸ್ ಜಾರಿ

ಪಾವಗಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಇದುವರೆಗೂ ಯಾವುದೇ ದೂರು ದಾಖಲಾಗಿಲ್ಲ. ಆದರೆ, ಎಂಜಿನಿಯರ್ ಸೇರಿದಂತೆ ನಾಲ್ವರು ಸಿಬ್ಬಂದಿಗೆ ಕಾರಣ ಕೇಳಿ ಮಧುಗಿರಿ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಜಯದೇವಪ್ಪ ನೋಟಿಸ್ ಜಾರಿ ಮಾಡಿದ್ದಾರೆ.

‘ಹೊಸ ಇಂದಿರಾ ಕ್ಯಾಂಟೀನ್: ಶೀಘ್ರದಲ್ಲಿಯೇ ನಿರ್ಧಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಹೊಸ ಇಂದಿರಾ ಕ್ಯಾಂಟೀನ್ ತೆರೆಯಲು ಹಾಗೂ ಹೊಸ ಮೆನು ಆರಂಭಿಸಲು ಟೆಂಡರ್ ಅಂತಿಮಗೊಳಿಸುವ ವಿಚಾರ ಸಚಿವ ಸಂಪುಟ ಮುಂದಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಲೋಕಸಭಾ ಚುನಾವಣೆ ನೀತಿ ಸಂಹಿತೆ ಇರುವುದರಿಂದ ಸಚಿವ ಸಂಪುಟ ಸಭೆ ನಡೆದಿಲ್ಲ. ಮುಂದಿನ ದಿನಗಳಲ್ಲಿ ಅಲ್ಲಿ ನಿರ್ಧಾರವಾದಂತೆ ನಾವು ಕ್ರಮ ಕೈಗೊಳ್ಳುತ್ತೇವೆ’ ಎಂದು ಸುದ್ದಿಗಾರರಿಗೆ ಬುಧವಾರ ಮಾಹಿತಿ ನೀಡಿದರು.

ಈಗಾಗಲೇ ನಗರದಲ್ಲಿ ಸುಮಾರು 700 ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ. ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಎಲ್ಲ ಗುಂಡಿಗಳನ್ನೂ ದುರಸ್ತಿ ಮಾಡಲಾಗುತ್ತದೆ. ಅತ್ಯಾಧುನಿಕ ಕ್ಯಾಮೆರಾಗಳಿರುವ 15 ವಾಹನಗಳು ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳಲ್ಲಿ ಸಂಚರಿಸಲಿವೆ. ದಿನವೊಂದಕ್ಕೆ ನಾಲ್ಕರಿಂದ ಐದು ತಾಸು, ಗಂಟೆಗೆ ಸುಮಾರು 5 ಕಿ.ಮೀ ವೇಗದಲ್ಲಿ ಸಂಚರಿಸುವ ವಾಹನ, ಗುಂಡಿಗಳು ಹಾಗೂ ರಸ್ತೆಯ ಸ್ಥಿತಿಯ ಮಾಹಿತಿ ನೀಡಲಿದೆ. ಇದರಿಂದ ರಸ್ತೆಗಳ ನಿರ್ವಹಣೆ ಉತ್ತಮವಾಗಲಿದೆ ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ಬಸ್‌ಪಾಸ್ ವಿತರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸರ್ಕಾರದ ನಿರ್ದೇಶನದಂತೆ ಬಿಎಂಟಿಸಿ ನೀಡುವ ಉಚಿತ/ರಿಯಾಯಿತಿ ದರದ ವಿದ್ಯಾರ್ಥಿ ಪಾಸ್‌ಗಾಗಿ ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಿ, ಜೂನ್ 1ರಿಂದ ವಿತರಣೆ ನಡೆಯಲಿದೆ.

ಆನ್‌ಲೈನ್ ಅರ್ಜಿಯು ಸೇವಾಸಿಂಧು ಪೋರ್ಟಲ್ https://sevasindhu.karnataka.gov.in ನಲ್ಲಿ ಲಭ್ಯವಿದೆ. ವಿದ್ಯಾರ್ಥಿಗಳು ಬೆಂಗಳೂರು ಒನ್ ಕೇಂದ್ರಗಳ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಬೆಂಗಳೂರು ಒನ್ ಕೇಂದ್ರಗಳಲ್ಲಿ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೆಂಪೇಗೌಡ ಬಸ್‌ನಿಲ್ದಾಣ, ಕೆಂಗೇರಿ ಟಿಟಿಎಂಸಿ, ಹೊಸಕೋಟೆ, ಎಲೆಕ್ಟ್ರಾನಿಕ್ ಸಿಟಿ ಘಟಕ -19, ಶಾಂತಿನಗರ ಟಿಟಿಎಂಸಿ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಆನೇಕಲ್ ಬಸ್ ನಿಲ್ದಾಣದಲ್ಲಿ ವಿತರಿಸಲಾಗುವುದು. ಶಕ್ತಿ ಯೋಜನೆಯಡಿ ರಾಜ್ಯದ ವಿದ್ಯಾರ್ಥಿನಿಯರಿಗೆ ಸಂಸ್ಥೆಯ ಸಾಮಾನ್ಯ ಸೇವೆಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲಾಗಿದೆ. ಮಾಹಿತಿಗಾಗಿ ಸಂಸ್ಥೆಯ ದೂರವಾಣಿ: 08022483777 ಸಂಪರ್ಕಿಸಬಹುದು. ಇಲ್ಲವೇ ಸಂಸ್ಥೆಯ ಜಾಲತಾಣದಲ್ಲಿ ಮಾಹಿತಿ ಪಡೆಯಬಹುದು ಎಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಈಜಿಪುರ: ಬಿಬಿಎಂಪಿ ಎಂಜಿನಿಯರ್, ಗುತ್ತಿಗೆದಾರರ ಪ್ರತ್ಯಾರೋಪ; ನಾಗರಿಕರಿಗೆ ನಿತ್ಯವೂ ಸಂಕಟ

ಮೇಲ್ಸೇತುವೆ: ನಿವಾರಣೆಯಾಗದ ಕಂಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಯೋಜನೆ ವಿಭಾಗದ ಎಂಜಿನಿಯರ್‌ಗಳು, ಗುತ್ತಿಗೆದಾರರ ಪ್ರತ್ಯಾರೋಪ ಹಾಗೂ ನಿರಾಸಕ್ತಿಯಿಂದ ಈಜಿಪುರ ಮೇಲ್ಸೇತುವೆ ಕಾಮಗಾರಿ ಕುಂಠಿತಗೊಂಡಿದೆ. ಎಂಜಿನಿಯರ್‌ಗಳು ಮತ್ತು ಗುತ್ತಿಗೆದಾರರ ನಡುವೆ ಸಮನ್ವಯ ಕೊರತೆಯಿಂದ ನಾಗರಿಕರು ನಿತ್ಯವೂ ಸಂಕಷ್ಟ ಎದುರಿಸುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರ ಸುತ್ತಾಟದ ಸಂದರ್ಭದಲ್ಲಿ ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬಕ್ಕೆ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡಲು ಸೂಚಿಸಿದ್ದರು. ಅದರಂತೆ ಬಿಬಿಎಂಪಿ ಎಂಜಿನಿಯರ್‌ಗಳು ಮೇ 24ರಂದು ನೋಟಿಸ್ ನೀಡಿದ್ದಾರೆ. ಗುತ್ತಿಗೆದಾರರೂ ಇದಕ್ಕೆ ಮೇ 27ರಂದು ಉತ್ತರ ನೀಡಿದ್ದಾರೆ. ಇಬ್ಬರೂ ಪರಸ್ಪರ ಆರೋಪಗಳನ್ನು ಮಾಡಿದ್ದಾರೆ.

2021ರಲ್ಲಿ ಸ್ಥಗಿತಗೊಂಡಿದ್ದ ಈಜಿಪುರ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಳಿಸಲು ಬಿಎಸ್‌ಸಿಪಿಎಲ್ ಸಂಸ್ಥೆಗೆ 2023ರ ನವೆಂಬರ್ 15ರಂದು ಕಾರ್ಯಾದೇಶ ನೀಡಲಾಗಿತ್ತು. ಆದರೆ ಈವರೆಗೂ ಶೇ 5ರಷ್ಟೂ ಕಾಮಗಾರಿ ಮುಗಿದಿಲ್ಲ. ನವೆಂಬರ್ 16ರಂದೇ ಮುಂಗಡ ಹಣಕ್ಕೆ ಗುತ್ತಿಗೆದಾರರು ಬ್ಯಾಂಕ್ ಗ್ಯಾರಂಟಿ ಸಹಿತ ಬೇಡಿಕೆ ಸಲ್ಲಿಸಿದ್ದರೂ 2024ರ ಮಾರ್ಚ್ 8ರಂದು ಶೇ 75ಷ್ಟು ಮುಂಗಡ ಪಾವತಿ ಮಾಡಲಾಗಿದೆ. ಇದನ್ನು ಗುತ್ತಿಗೆದಾರರು ಪ್ರಮುಖ ಕಾರಣವನ್ನಾಗಿ ನೀಡಿದ್ದು, ‘ಹಣ ನೀಡದಿದ್ದರೆ ಕಾಮಗಾರಿ ಆರಂಭಿಸುವುದಾದರೂ ಹೇಗೆ?’ ಎಂದು ಪ್ರಶ್ನಿಸಿದ್ದಾರೆ.

ಈಜಿಪುರ ಮೇಲ್ಸೇತುವೆಗೆ ಸಾಕಷ್ಟು ಭಾಗದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ನಡೆದಿಲ್ಲ. ಈ ಬಗ್ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಜನವರಿಯಲ್ಲಿ ಮಾತುಕತೆ ನಡೆದು, ಅಂತಿಮಗೊಳಿಸಲಾಗಿದ್ದರೂ, ಎಂಜಿನಿಯರ್‌ಗಳು ಭೂಸ್ವಾಧೀನ ಪ್ರಕ್ರಿಯೆ ಮುಗಿಸಿಲ್ಲ.

ಐಐಎಸ್ಸಿ ವರದಿ: ನಾಲ್ಕು ವರ್ಷ ನಿಂತಿದ್ದ ಈಜಿಪುರ ಮೇಲ್ಸೇತುವೆ ಕಾಮಗಾರಿಯನ್ನು ಮುಂದುವರಿಸುವ ಬಗ್ಗೆ ತಾಂತ್ರಿಕ ಸಲಹೆಯನ್ನು ಭಾರತೀಯ ವಿಜ್ಞಾನ ಸಂಸ್ಥೆಯಿಂದ ಪಡೆದುಕೊಳ್ಳಲು ಸೂಚಿಸಲಾಗಿತ್ತು. ಅದರ ವೆಚ್ಚವನ್ನು ಗುತ್ತಿಗೆದಾರರು ಪಾವತಿಸಿದ್ದರು. ಈ ವರದಿಯನ್ನು ಬಿಬಿಎಂಪಿ ಮೇ 27ರಂದು ಗುತ್ತಿಗೆದಾರರಿಗೆ ನೀಡಿದೆ.

ವಿಳಂಬ: ಈಜಿಪುರ ಮೇಲ್ಸೇತುವೆಗೆ ಲಭ್ಯವಿರುವ ಸ್ಥಳದಲ್ಲಿ ಗುತ್ತಿಗೆದಾರರು ಕಾಮಗಾರಿಯನ್ನು ವೇಗವಾಗಿ ನಡೆಸಿದ್ದರೆ, ಈ ವೇಳೆಗೆ ಸುಮಾರು 25ರಷ್ಟು ಕಾಮಗಾರಿ ಮುಗಿಯುತ್ತಿತ್ತು. ಈ ಕಾಮಗಾರಿ ವಿಳಂಬಕ್ಕೆ ಗುತ್ತಿಗೆದಾರರು ಕಾರಣ ಎಂದು ಬಿಬಿಎಂಪಿ ಕೇಂದ್ರ ಯೋಜನೆ ವಿಭಾಗದ ಎಂಜಿನಿಯರ್‌ಗಳು ದೂರಿದ್ದಾರೆ.

ಕ್ರಮ ಕೈಗೊಳ್ಳಿ: ‘ಮುಖ್ಯಮಂತ್ರಿಯವರು ಸ್ಥಳ ಪರಿಶೀಲನೆಗೆ ಬಾರದೆ ಇದ್ದಿದ್ದರೆ ಈ ಮೇಲ್ಸೇತುವೆ ಕಾಮಗಾರಿ ಇನ್ನೂ ವಿಳಂಬವಾಗುತ್ತಿತ್ತೇನೋ? ಒಬ್ಬರ ಮೇಲೆ ಮತ್ತೊಬ್ಬರು ದೂರುವುದನ್ನು ಬಿಟ್ಟು, ಬಿಬಿಎಂಪಿ ಎಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರು ಯಾರೇ ವಿಳಂಬಕ್ಕೆ ಕಾರಣರಾಗಿದ್ದರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಸಾರಿಗೆ ಸಚಿವರು, ಮುಖ್ಯ ಆಯುಕ್ತರು ಆಗಾಗ್ಗೆ ಇತ್ತ ಗಮನಹರಿಸಬೇಕು. 2017ರಿಂದ ನಿತ್ಯವೂ ಜನರಿಗೆ ಸಮಸ್ಯೆ ಆಗುತ್ತಿರುವುದನ್ನು ತಪ್ಪಿಸಬೇಕು’ ಎಂದು ಸ್ಥಳೀಯ ನಿವಾಸಿ ರಾಮಕೃಷ್ಣ ಆಗ್ರಹಿಸಿದರು.



ಕೋರಮಂಗಲದ ಬಳಿ ನಡೆಯುತ್ತಿರುವ ಈಜಿಪುರ ಮೇಲ್ಸೇತುವೆ ಕಾಮಗಾರಿ

ಬಿಬಿಎಂಪಿ ನೋಟಿಸ್‌ನಲ್ಲಿ ಏನಿದೆ? ಗುತ್ತಿಗೆದಾರರ ಉತ್ತರ ಏನು?

- **ಮೇಲ್ಸೇತುವೆ ಕಾಮಗಾರಿ ಸ್ಥಳದಲ್ಲಿ ಅಗತ್ಯ ಎಂಜಿನಿಯರ್‌ಗಳನ್ನು ನಿಯೋಜಿಸಿಲ್ಲ. ಹಲವು ಬಾರಿ ಹೇಳಿದ್ದರೂ ಈ ಕ್ರಮವಾಗಿಲ್ಲ**

-ಕಾಮಗಾರಿ ಸ್ಥಳದಲ್ಲಿ ಆರು ಎಂಜಿನಿಯರ್‌ಗಳಿದ್ದಾರೆ. ಕಾಮಗಾರಿ ಪ್ರಗತಿ ಹೆಚ್ಚಾದಾಗ ಇನ್ನಷ್ಟು ಎಂಜಿನಿಯರ್‌ಗಳನ್ನು ನಿಯೋಜಿಸಲಾಗುತ್ತದೆ.

- **ಕಾಮಗಾರಿಗೆ ಅಗತ್ಯವಾದ ರಚನೆಗಳನ್ನು ನಿರ್ಮಿಸಿಕೊಳ್ಳಲು ‘ಕಾಸ್ಟಿಂಗ್ ಯಾರ್ಡ್’ ಸ್ಥಾಪಿಸಿಕೊಳ್ಳುವ ಕಾರ್ಯ ಗುತ್ತಿಗೆದಾರರದ್ದೇ ಆಗಿರುತ್ತದೆ. ಸ್ಥಾಪಿಸಿಕೊಳ್ಳದ್ದರಿಂದ ಕಾಮಗಾರಿ ವಿಳಂಬವಾಗಿದೆ**

-2023ರ ನವೆಂಬರ್ 15ರ ಒಪ್ಪಂದದಂತೆ, ಆನೇಕಲ್‌ನಲ್ಲಿ ಹಿಂದಿನ ಗುತ್ತಿಗೆದಾರರು ಬಳಸುತ್ತಿದ್ದ ಕಾಸ್ಟಿಂಗ್ ಯಾರ್ಡ್ ಅನ್ನೇ ಬಳಸಲು ಅನುಮತಿ ನೀಡಲಾಗಿದೆ. ಯೋಜನೆಯ ಕಾರ್ಯಪಾಲಕ ಎಂಜಿನಿಯರ್-9 ಹಾಗೂ ನವೆಂಬರ್ 26ರಂದು ಅಧೀಕ್ಷಕ ಎಂಜಿನಿಯರ್ ಕೂಡ ಆ ಸ್ಥಳಕ್ಕೆ ಭೇಟಿ ನೀಡಿ ಉಪಯೋಗಿಸಿಕೊಳ್ಳಲು ಒಪ್ಪಿದ್ದರು. ಆದರೆ, ಆ ಸ್ಥಳದ ಮಾಲೀಕರಿಗೆ ₹2 ಕೋಟಿ ಬಾಡಿಗೆ ಬಾಕಿ ಇದ್ದು, ಅದನ್ನು ಅವರು ಬಳಸಲು ಕೊಡುತ್ತಿಲ್ಲ. ಈ ಬಗ್ಗೆ ನಿಮಗೆ ಹಲವು ಬಾರಿ ತಿಳಿಸಿದ್ದರೂ ಕ್ರಮ ಕೈಗೊಂಡಿಲ್ಲ.

- **‘ಕಾಸ್ಟಿಂಗ್ ಯಾರ್ಡ್’ ಹಾಗೂ ಅಲ್ಲಿರುವ ಸಾಮಗ್ರಿಗಳನ್ನು ಪಡೆದುಕೊಳ್ಳುವಲ್ಲಿ ವಿಳಂಬ, ಅಲ್ಲಿರುವ ಸಾಮಗ್ರಿಗಳ ಮೌಲ್ಯೀಕರಣ ಮಾಡಿಲ್ಲ. ಇದರಿಂದ ಲಭ್ಯವಿರುವ ಸಾಮಗ್ರಿಗಳನ್ನು ಹಸ್ತಾಂತರಿಸಲು ನಿಧಾನವಾಗುತ್ತಿದೆ**

-ಬಿಬಿಎಂಪಿ ನಿಗದಿಪಡಿಸುವ ದರಕ್ಕೆ ಸಾಮಗ್ರಿಗಳನ್ನು ಪಡೆದುಕೊಳ್ಳುತ್ತೇವೆ ಎಂದು ಮೇ 15ರ ಪತ್ರದಲ್ಲಿ ತಿಳಿಸಿದ್ದೇವೆ. ಕಾಸ್ಟಿಂಗ್ ಯಾರ್ಡ್‌ನ ಮಾಲೀಕರಿಗೆ ಬಾಡಿಗೆ ನೀಡದಿರುವುದರಿಂದ ಅವರು ಆ ಪ್ರದೇಶಕ್ಕೆ ಹೋಗಲು ಬಿಡುತ್ತಿಲ್ಲ. ಈ ಬಗ್ಗೆ ಬಿಬಿಎಂಪಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕೇಳಿಕೊಳ್ಳುತ್ತೇವೆ.

- **ರಕ್ಷಣಾ ಇಲಾಖೆ ಪ್ರದೇಶದಲ್ಲಿ 2023ರ ಡಿಸೆಂಬರ್ 17ರಂದು ಆರಂಭವಾದ ಕಾಂಪೌಂಡ್ ನಿರ್ಮಾಣದ ಕಾಮಗಾರಿ ಇನ್ನೂ ಅಗತ್ಯ ಪ್ರಗತಿಯನ್ನು ಕಂಡಿಲ್ಲ. ಅಗತ್ಯ ಕಾರ್ಮಿಕರು ಮತ್ತು ಯಂತ್ರಗಳನ್ನು ಒದಗಿಸಿಲ್ಲ**

-ಕಾಂಪೌಂಡ್ ನಿರ್ಮಾಣ ಪೂರ್ಣಗೊಂಡಿದ್ದು, ‘ಫಿನಿಷಿಂಗ್’ ಕಾರ್ಯ ಮಾತ್ರ ಪ್ರಗತಿಯಲ್ಲಿದೆ.

- **ಕಾಮಗಾರಿ ಪ್ರದೇಶದಲ್ಲಿ ಕಟ್ಟಡ ತ್ಯಾಜ್ಯವನ್ನು(ಡೆಬ್ರಿ) ತೆರವುಗೊಳಿಸಲು ಹಲವು ಬಾರಿ ಸೂಚಿಸಲಾಗಿದೆ. ಹೊರಗಡೆಯಿಂದ ಡೆಬ್ರಿ ತಂದು ಹಾಕುವುದನ್ನು ತಡೆಯಲು ಭದ್ರತಾ ಸಿಬ್ಬಂದಿ ನಿಯೋಜಿಸಲು ಹೇಳಿದ್ದರೂ ಈ ಕಾರ್ಯಗಳು ಆಗಿಲ್ಲ**

-ಕಾಮಗಾರಿ ಮೇಲುಸ್ತುವಾರಿ ಹೊಂದಿರುವ ಸಹಾಯಕ ಎಂಜಿನಿಯರ್ ಕಾಲಕಾಲಕ್ಕೆ ಸೂಚಿಸುವಂತೆ ಡೆಬ್ರಿ ವಿಲೇವಾರಿ ಮಾಡಲಾಗಿದೆ. ರಾತ್ರಿವೇಳೆ ಹೊರಭಾಗದಿಂದ ಬರುವ ಡೆಬ್ರಿ ತಡೆಯಲು ಕ್ರಮ ಕೈಗೊಳ್ಳಲಾಗುವುದು.

- **ಕಾಮಗಾರಿ ನಡೆಯುವ ಸ್ಥಳದಲ್ಲಿ ಲೈಟಿಂಗ್, ಸೂಚನಾಫಲಕ ಸೇರಿದಂತೆ ಅಗತ್ಯ ಸುರಕ್ಷತಾ ಕ್ರಮಗಳ ಕೊರತೆ ಇದೆ**

-ಮೇಲುಸ್ತುವಾರಿ ಸಹಾಯಕ ಎಂಜಿನಿಯರ್ ಅವರ ಸೂಚನೆಯಂತೆ ಸುರಕ್ಷತಾ ಕ್ರಮ ಕೈಗೊಳ್ಳಲಾಗಿದೆ. ಇತರೆ ಸೂಚನೆಗಳನ್ನೂ ಪಾಲಿಸಲಾಗುವುದು.

- **ಕಾಮಗಾರಿಗೆ ಅಗತ್ಯವಾದ ಕಾರ್ಮಿಕರು, ಯಂತ್ರಗಳನ್ನು ನಿಯೋಜಿಸಲು ವಿಫಲವಾಗಿದ್ದು, ಯೋಜನೆ ಪ್ರಗತಿ ಕುಂಠಿತವಾಗಿದೆ**

-ಅಗತ್ಯ ಸಿಬ್ಬಂದಿ ನಿಯೋಜಿಸಲ್ಲ ಎಂಬ ಆರೋಪ ಸುಳ್ಳು. ಬೇಕಿರುವ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಈಜಿಪುರ ಜಂಕ್ಷನ್, ಸೇಂಟ್ ಜಾನ್ಸ್ ಆಸ್ಪತ್ರೆ ಜಂಕ್ಷನ್ ಮತ್ತು ಕೇಂದ್ರೀಯ ಸದನ ಜಂಕ್ಷನ್‌ನಲ್ಲಿ ಕಾಮಗಾರಿ ನಡೆಸಲು ಬಿಬಿಎಂಪಿ ಸ್ಥಳವನ್ನು ಇನ್ನೂ ನೀಡಿಲ್ಲ.

ನಗರದಲ್ಲೆಡೆ ‘ಜಾಹೀರಾತು ಮುಕ್ತ ಅಭಿಯಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತ ಫ್ಲೆಕ್ಸ್, ಬ್ಯಾನರ್ಸ್, ಬಂಟಿಂಗ್ಸ್, ಭಿತ್ತಿಪತ್ರಗಳು ಸೇರಿದಂತೆ ಇನ್ನಿತರೆ ಜಾಹೀರಾತುಗಳ ತೆರವು ಹಾಗೂ ಅವುಗಳನ್ನು ನಿಯಂತ್ರಿಸಲು ‘ಜಾಹೀರಾತು ಮುಕ್ತ ಅಭಿಯಾನ’ ಆರಂಭಿಸಲಾಗಿದೆ ಎಂದು ಜಾಹೀರಾತು ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

ಅನಧಿಕೃತ ಜಾಹೀರಾತುಗಳ ಬಗ್ಗೆ ನಾಗರಿಕರು ಮಾಹಿತಿ ನೀಡಿದರೆ, ಸಂಬಂಧಪಟ್ಟವರಿಗೆ ದಂಡ ವಿಧಿಸಿ ತಕ್ಷಣವೇ ತೆರವುಗೊಳಿಸುವುದು. ಎಫ್‌ಐಆರ್ ದಾಖಲು ಮಾಡಿ, ಕಾನೂನು ರೀತಿಯ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ದೂರು ನೋಂದಾಯಿಸುವ ಸಂಖ್ಯೆಗಳು: ಜಾಹೀರಾತು ವಿಭಾಗದ ಉಪ ಆಯುಕ್ತರು: 9480683939, ಬಿಬಿಎಂಪಿ ಕೇಂದ್ರ ಕಚೇರಿ: 080-22221188, ನಿಯಂತ್ರಣ ಕೊಠಡಿ ಐಪಿಪಿ: 22660000, ಪೂರ್ವ ವಲಯ: 080-22975803 / 22975502, ಪಶ್ಚಿಮ ವಲಯ: 080-23561692 / 23463366, ದಕ್ಷಿಣ ವಲಯ: 080-26566362 / 22975703, ರಾಜರಾಜೇಶ್ವರಿ ನಗರ ವಲಯ: 080-28601851 / 28600957, ಬೊಮ್ಮನಹಳ್ಳಿ ವಲಯ: 080-25732447 / 25735642, ಮಹದೇವಪುರ ವಲಯ: 080-28512300 / 28512301, ಯಲಹಂಕ ವಲಯ: 080-23636671 / 22975936, ದಾಸರಹಳ್ಳಿ ವಲಯ: 080-28394909 / 28393688.

ಜೂನ್ 4, 5ರಂದು ನೀರು ಪೂರೈಕೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ 5ನೇ ಹಂತದ ಯೋಜನೆ ಅನುಷ್ಠಾನಕ್ಕೆ ಸಂಪರ್ಕ ಸೇರಿದಂತೆ ಹಲವು ಕಾಮಗಾರಿ ನಡೆಯಲಿರುವುದರಿಂದ ಜೂನ್ 4 ಮತ್ತು 5ರಂದು ನಗರದಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಕಾವೇರಿ 1, 2, 3ನೇ ಹಂತ ಮತ್ತು 4ನೇ ಹಂತದ 1–2 ಘಟ್ಟಗಳ ನೀರು ಸರಬರಾಜು ಘಟಕಗಳಲ್ಲಿ ಕ್ರಮವಾಗಿ 12 ಹಾಗೂ 6 ಗಂಟೆ ಕಾಮಗಾರಿ ನಡೆಯಲಿದೆ. ಹೀಗಾಗಿ, ನಗರಕ್ಕೆ ಪೂರೈಕೆಯಾಗುವ ನೀರಿನಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ಮಿತಿ ಮೀರುತ್ತಿರುವ ವಾಹನಗಳ ಸಂಚಾರ • ಪ್ರಾಯೋಗಿಕ ಜಾರಿಯಲ್ಲಿ ನಿರಾಸೆ • ಅಧಿಕಾರಿಗಳ ಸಮನ್ವಯದ ಕೊರತೆ

ಲೆಕ್ಕಕ್ಕೆ ಸಿಗದ ದಟ್ಟಣೆ: ಆನ್ ಆಗದ ‘ಮೊಡೆರಾಟೊ’

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ‘ದಟ್ಟಣೆ ನಗರ ಬೆಂಗಳೂರು’ ಎಂಬ ಅಪಖ್ಯಾತಿ ಹೋಗಲಾಡಿಸಲು ರೂಪಿಸಿರುವ ಮೊಡೆರಾಟೊ (ವಾಹನಗಳ ದಟ್ಟಣೆ ಆಧರಿಸಿ ಸ್ವಯಂಚಾಲಿತ ಸಿಗ್ನಲ್ ನಿರ್ವಹಣೆ ತಂತ್ರಜ್ಞಾನ) ವ್ಯವಸ್ಥೆ ಜಾರಿಗೆ ಹಲವು ಸಮಸ್ಯೆಗಳು ಎದುರಾಗಿವೆ. ಲೆಕ್ಕಕ್ಕೆ ಸಿಗದ ನಗರದ ದಟ್ಟಣೆಯಿಂದಾಗಿ ಮೊಡೆರಾಟೊ ವ್ಯವಸ್ಥೆಯನ್ನು ಸಂಪೂರ್ಣವಾಗಿ ಜಾರಿಗೊಳಿಸಲು ಜಪಾನ್ ತಜ್ಞರು ಹಿಂದೇಟು ಹಾಕುತ್ತಿದ್ದಾರೆ.

ನಗರದಲ್ಲಿ ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ದಟ್ಟಣೆ ಪ್ರಮಾಣವೂ ವೃದ್ಧಿಸುತ್ತಿದೆ. ಮಿತಿ ಮೀರುತ್ತಿರುವ ದಟ್ಟಣೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ನಗರ ಭೂ ಸಾರಿಗೆ ನಿರ್ದೇಶನಾಲಯ (ಡಲ್ಟ್), ಜಪಾನ್‌ನಲ್ಲಿ ಬಳಕೆಯಲ್ಲಿರುವ ಮೊಡೆರಾಟೊ ವ್ಯವಸ್ಥೆಯನ್ನು ನಗರದಲ್ಲಿ ಜಾರಿಗೊಳಿಸುವ ಪ್ರಕ್ರಿಯೆಗೆ ಹಲವು ವರ್ಷಗಳ ಹಿಂದೆಯೇ ಚಾಲನೆ ನೀಡಿದೆ.

ಜಪಾನ್‌ನಲ್ಲಿ ಯಶಸ್ವಿಯಾಗಿರುವ ಮೊಡೆರಾಟೊ ವ್ಯವಸ್ಥೆಯನ್ನು ಮುಂಬೈ ಹಾಗೂ ದೆಹಲಿಯಲ್ಲೂ ಅಳವಡಿಸಲಾಗಿದೆ. ಎರಡೂ ಕಡೆಯ ಹಲವು ರಸ್ತೆಗಳಲ್ಲಿ ವ್ಯವಸ್ಥೆ ಜಾರಿಯಲ್ಲಿದ್ದು, ತಕ್ಕಮಟ್ಟಿಗೆ ದಟ್ಟಣೆ ತಗ್ಗಿದೆ. ಇದೇ ಕಾರಣಕ್ಕೆ ಆ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಜಾರಿಗೆ ತರಲು ಡಲ್ಟ್ ಯೋಜನೆ ರೂಪಿಸಿದ್ದು, ಕೆಲ ವೃತ್ತಗಳಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆಸಲಾಗುತ್ತಿದೆ.

ಜಪಾನೀಸ್ ಇಂಟರ್‌ನ್ಯಾಷನಲ್ ಕೋ–ಆಪರೇಷನ್ ಏಜೆನ್ಸಿ (ಜೆಐಸಿಎ) ಮೂಲಕ ಮೊಡೆರಾಟೊ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ. ನಗರದ ಪ್ರಮುಖ ರಸ್ತೆಗಳಲ್ಲಿರುವ 28 ವೃತ್ತಗಳಲ್ಲಿ ಸಿಗ್ನಲ್ ಹಾಗೂ ಇತರೆ ಉಪಕರಣ ಅಳವಡಿಕೆಯ ಜವಾಬ್ದಾರಿಯನ್ನು ಜೆಐಸಿಎ ವಹಿಸಿಕೊಂಡಿದೆ.

ಎಂ.ಜಿ. ರಸ್ತೆಯ ಅನಿಲ್ ಕುಂಬ್ಳೆ ವೃತ್ತ, ಕೆನ್ಸಿಂಗ್‌ಟನ್ ಜಂಕ್ಷನ್, ಹಳೇ ಮದ್ರಾಸ್ ರಸ್ತೆ, ಮಾರ್ಫಿ ರಸ್ತೆ ಜಂಕ್ಷನ್, ಕ್ವೀನ್ಸ್ ರಸ್ತೆ ಸೇರಿದಂತೆ 28 ವೃತ್ತಗಳಲ್ಲಿ ಜಪಾನ್ ತಜ್ಞರು ಹಾಗೂ ವಿವಿಧ ಕಂಪನಿಗಳ ಸಿಬ್ಬಂದಿಯೇ ಸಿಗ್ನಲ್ ಹಾಗೂ ಸೆನ್ಸಾರ್ ಉಪಕರಣ ಅಳವಡಿಸಿದ್ದಾರೆ. ಆದರೆ, ಯಾವ ವೃತ್ತಗಳಲ್ಲಿಯೂ ಸಿಗ್ನಲ್‌ಗಳು ಸಂಪೂರ್ಣವಾಗಿ ಆನ್ ಆಗಿಲ್ಲ. ಇದಕ್ಕೆ ಹಲವು ಕಾರಣಗಳಿರುವುದಾಗಿ ಡಲ್ಟ್ ಅಧಿಕಾರಿಗಳು ಹಾಗೂ ಸಂಚಾರ ಪೊಲೀಸರು ಹೇಳುತ್ತಿದ್ದಾರೆ.

‘ಮೊಡೆರಾಟೊ ವ್ಯವಸ್ಥೆಗೆ ಸಂಬಂಧಪಟ್ಟಂತೆ 2014ರಲ್ಲಿ ಪ್ರಸ್ತಾವ ಸಿದ್ಧಪಡಿಸಲಾಗಿತ್ತು. ಆದರೆ, ಯೋಜನೆಗೆ ಅನುಮತಿ ಸಿಕ್ಕಿರಲಿಲ್ಲ. 2021ರ ಜುಲೈನಲ್ಲಿ ಸಿದ್ಧಪಡಿಸಿದ್ದ ಪರಿಷ್ಕೃತ ಪ್ರಸ್ತಾವಕ್ಕೆ ಸರ್ಕಾರದಿಂದ ಒಪ್ಪಿಗೆ ಸಿಕ್ಕಿತ್ತು. ಬಳಿಕವೇ ಜಪಾನ್ ಕಂಪನಿ ಜೊತೆ ಒಪ್ಪಂದ ಮಾಡಿಕೊಂಡು ಮೊಡೆರಾಟೊ ಅಳವಡಿಕೆ ಕೆಲಸ ಆರಂಭಿಸಲಾಗಿದೆ’ ಎಂದು ನಗರ ಭೂ ಸಾರಿಗೆ ನಿರ್ದೇಶನಾಲಯದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘2023ರಿಂದ ಪ್ರಾಯೋಗಿಕವಾಗಿ ಮೊಡೆರಾಟೊ ವ್ಯವಸ್ಥೆ ಜಾರಿಗೊಳಿಸುವ ಕೆಲಸ ಶುರುವಾಗಿದೆ. ಕಳೆದ ಡಿಸೆಂಬರ್‌ನಲ್ಲಿಯೇ ವ್ಯವಸ್ಥೆ ಸಂಪೂರ್ಣ



ನಗರದ ಎಂ.ಜಿ. ರಸ್ತೆಯಲ್ಲಿರುವ ಹಳೇ ಸಿಗ್ನಲ್‌ಗಳ ಪಕ್ಕವೇ ಅಳವಡಿಸಿರುವ ‘ಮೊಡೆರಾಟೊ’ ವ್ಯವಸ್ಥೆಯ ಹೊಸ ಸಂಚಾರ ಸಿಗ್ನಲ್‌ಗಳು – ಪ್ರಜಾವಾಣಿ ಚಿತ್ರ / ಎಸ್‌.ಕೆ. ದಿನೇಶ್

ಜಾರಿಗೊಳಿಸುವ ಗುರಿ ಇತ್ತು. ಆದರೆ, ಹಲವು ಸಮಸ್ಯೆಗಳು ಎದುರಾಗಿರುವುದರಿಂದ ವ್ಯವಸ್ಥೆ ಜಾರಿಗೆ ಮತ್ತಷ್ಟು ದಿನ ತಡವಾಗಬಹುದು’ ಎಂದು ಅವರು ಹೇಳಿದರು.

ಲೆಕ್ಕಕ್ಕೆ ಸಿಗದ ದಟ್ಟಣೆ, ತಜ್ಞರೇ ಸುಸ್ತು: ‘ಸಾಫ್ಟ್‌ವೇರ್ ಸಹಾಯದಿಂದ ಮೊಡೆರಾಟೊ ರೂಪಿಸಲಾಗಿದೆ. ಪ್ರಾಯೋಗಿಕ ಜಾರಿ ಸಂದರ್ಭದಲ್ಲಿ ವಾಹನಗಳ ಸಂಖ್ಯೆ ಆಧರಿಸಿ ದಟ್ಟಣೆ ಪ್ರಮಾಣ ಲೆಕ್ಕ ಹಾಕಲಾಗುತ್ತಿತ್ತು. ಶೇ 30ರಷ್ಟು ದಟ್ಟಣೆ ತಗ್ಗುವ ನಿರೀಕ್ಷೆ ಇತ್ತು. ಆದರೆ, ವಾಹನಗಳ ಓಡಾಟದಲ್ಲಿ ಸಾಕಷ್ಟು ವ್ಯತ್ಯಾಸವಾಗಿದ್ದರಿಂದ ಸೂಕ್ತ ಲೆಕ್ಕ ಸಿಕ್ಕಿಲ್ಲ. ದಟ್ಟಣೆಯೂ ಕಡಿಮೆಯಾಗಲಿಲ್ಲ’ ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಹಲವು ವೃತ್ತಗಳಲ್ಲಿ ವಾಹನಗಳ ಓಡಾಟ ನಿತ್ಯವೂ ಬದಲಾಗುತ್ತಿರುತ್ತದೆ. ವಿವಿಧ ಪ್ರಕಾರಗಳ ವಾಹನಗಳೂ ಸಂಚರಿಸುತ್ತವೆ. ಬಹುತೇಕರು, ಪಥಶಿಸ್ತು ಹಾಗೂ ಇತರೆ ಸಂಚಾರ ನಿಯಮಗಳನ್ನು ಪಾಲಿಸುವುದಿಲ್ಲ. ಇದರಿಂದಾಗಿ ವಾಹನಗಳ ದಟ್ಟಣೆ ಗ್ರಹಿಸಲು ಜಪಾನ್ ತಜ್ಞರಿಗೆ ಸಾಧ್ಯವಾಗುತ್ತಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ತಂತ್ರಜ್ಞಾನ ಜಾರಿಗೊಳಿಸಿದರೆ, ತಮ್ಮ ಕಂಪನಿ ಹೆಸರಿಗೆ ಚ್ಯುತಿ ಉಂಟಾಗಬಹುದೆಂದು ತಜ್ಞರು ಭಯಪಡುತ್ತಿದ್ದಾರೆ. ಹೀಗಾಗಿ, ವ್ಯವಸ್ಥೆ ಜಾರಿಗೆ ಮತ್ತಷ್ಟು ದಿನಗಳ ಕಾಲಾವಕಾಶ ಕೋರುತ್ತಿದ್ದಾರೆ’ ಎಂದು ಹೇಳಿದರು.

ಅಧಿಕಾರಿಗಳ ಸಮನ್ವಯ ಕೊರತೆ: ನಗರ ಭೂ ಸಾರಿಗೆ ನಿರ್ದೇಶನಾಲಯ ರೂಪಿಸಿರುವ ಯೋಜನೆಗೆ ಬಿಬಿಎಂಪಿ, ಜಲಮಂಡಳಿ ಅಧಿಕಾರಿಗಳು, ಸಂಚಾರ ಪೊಲೀಸರು ಹಾಗೂ ಇತರೆ ಸಂಸ್ಥೆಗಳ ಅಧಿಕಾರಿಗಳ ಸಹಕಾರ ಅಗತ್ಯವಿದೆ. ಆದರೆ, ಕೆಲ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಸ್ಪಂದಿಸದಿದ್ದರಿಂದ ಯೋಜನೆಗೆ ಹಿನ್ನಡೆ ಉಂಟಾಗಿರುವುದಾಗಿ ಡಲ್ಟ್ ಅಧಿಕಾರಿಯೊಬ್ಬರು ದೂರಿದರು.

‘ಸಿಗ್ನಲ್ ಅಳವಡಿಸಿರುವ ವೃತ್ತಕ್ಕೆ ಹೊಂದಿಕೊಂಡಿರುವ ಕೆಲ ರಸ್ತೆಗಳಲ್ಲಿ ನೆಲ ಅಗೆಯಲಾಗಿದೆ. ಇದರಿಂದ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿದೆ. ಇಂಥ ಪರಿಸ್ಥಿತಿಯಲ್ಲಿ ಮೊಡೆರಾಟೊ ಜಾರಿ ಮಾಡುವುದು ಹೇಗೆ? ಎಂಬುದಾಗಿ ಜಪಾನ್ ತಜ್ಞರು ಪ್ರಶ್ನಿಸುತ್ತಿದ್ದಾರೆ’ ಎಂದು ಅಧಿಕಾರಿ ಹೇಳಿದರು.

‘ವ್ಯವಸ್ಥೆಯ ಪ್ರಾಯೋಗಿಕ ಜಾರಿ ಸಂದರ್ಭದಲ್ಲಿ ಉಂಟಾದ ಸಮಸ್ಯೆಗಳ ಪಟ್ಟಿ ಸಿದ್ಧಪಡಿಸಲಾಗಿದೆ. ಈ ಬಗ್ಗೆ ಎಲ್ಲ ಇಲಾಖೆ ಅಧಿಕಾರಿಗಳ ಜೊತೆ ಚರ್ಚಿಸಲಾಗುತ್ತಿದೆ. ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಸ್ಪಂದಿಸಿ, ಸಮಸ್ಯೆ ಬಗೆಹರಿಸಲು ಕೈ ಜೋಡಿಸಿದರೆ ಜೂನ್ ಅಂತ್ಯದಲ್ಲಿ ಮೊಡೆರಾಟೊ ವ್ಯವಸ್ಥೆ ಸಂಪೂರ್ಣವಾಗಿ ಜಾರಿ ಮಾಡಲು ಸಾಧ್ಯವಾಗಲಿದೆ’ ಎಂದು ತಿಳಿಸಿದರು.

ಮೊಡೆರಾಟೊ ಕಾರ್ಯನಿರ್ವಹಣೆ

‘ದಿನದ 24 ಗಂಟೆಯೂ ರಸ್ತೆಗಳಲ್ಲಿ ಸಾಲುಗಟ್ಟಿ ನಿಲ್ಲುವ ವಾಹನಗಳ ದಟ್ಟಣೆ ಆಧರಿಸಿ ಮೊಡೆರಾಟೊ ವ್ಯವಸ್ಥೆ ಕಾರ್ಯನಿರ್ವಹಣೆ ಮಾಡಲಿದೆ. ಪ್ರತಿ ವೃತ್ತದಲ್ಲಿ ಕೆಂಪು ಹಾಗೂ ಹಸಿರು ದೀಪಗಳ ಸಿಗ್ನಲ್ ಅಳವಡಿಸಲಾಗಿದ್ದು, ವಾಹನಗಳ ಸಂಚಾರಕ್ಕೆ ಸ್ವಯಂಚಾಲಿತವಾಗಿ ಸೂಚನೆ ನೀಡಲಿದೆ’ ಎಂದು ಅಧಿಕಾರಿ ಹೇಳಿದರು.

‘ವೃತ್ತದ ವಾಹನಗಳ ದಟ್ಟಣೆ ಜೊತೆಯಲ್ಲಿ ಅಕ್ಕ–ಪಕ್ಕದ ರಸ್ತೆಗಳ ದಟ್ಟಣೆ ಬಗ್ಗೆಯೂ ಸೆನ್ಸಾರ್ ಮೂಲಕ ‘ಮೊಡೆರಾಟೊ’ ಮಾಹಿತಿ ಕಲೆಹಾಕಲಿದೆ. ಅದಕ್ಕೆ ತಕ್ಕಂತೆ ಸಿಗ್ನಲ್‌ಗಳನ್ನು ಬದಲಿಸಿ, ದಟ್ಟಣೆ ತಗ್ಗಿಸಲಿದೆ’ ಎಂದು ಹೇಳಿದರು.

ಅಂಕಿ ಅಂಶಗಳು

40 ಸಾವಿರ ನಗರದಲ್ಲಿರುವ ವೃತ್ತಗಳು

888 ಸಂಚಾರ ಸಿಗ್ನಲ್ ಇರುವ ವೃತ್ತಗಳು

500 ಸಿಬ್ಬಂದಿ ನಿರ್ವಹಣೆ ಮಾಡುತ್ತಿರುವ ಸಿಗ್ನಲ್‌ಗಳು

388 ಸಮಯದ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಗ್ನಲ್‌ಗಳು

482 ಮೊಡೆರಾಟೊ ವ್ಯವಸ್ಥೆ ಜಾರಿಗೆ ತರಲು ಉದ್ದೇಶಿಸಿರುವ ವೃತ್ತಗಳು

ರೇವ್ ಪಾರ್ಟಿ: ನಟಿ ಹೇಮಾಗೆ ಮತ್ತೆ ಸಿಸಿಬಿ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೇಕಲ್ ತಾಲ್ಲೂಕಿನ ಜಿ.ಆರ್.ಫಾರ್ಮ್ ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿಯಲ್ಲಿ ಭಾಗಿಯಾಗಿದ್ದ ತೆಲುಗು ನಟಿ ಹೇಮಾ ಅವರಿಗೆ ವಿಚಾರಣೆಗೆ ಹಾಜರಾಗಲು 2ನೇ ಬಾರಿಗೆ ಸಿಸಿಬಿ ನೋಟಿಸ್ ಜಾರಿ ಮಾಡಿದೆ.

ತನಿಖಾಧಿಕಾರಿ ಎದುರು ಮೇ 25ರಂದು ಹಾಜರಾಗುವಂತೆ ನಟಿ ಹೇಮಾ ಸೇರಿದಂತೆ 8 ಆರೋಪಿಗಳಿಗೆ ಸಿಸಿಬಿ ಪೊಲೀಸ್ ನೋಟಿಸ್ ಜಾರಿ ಮಾಡಿತ್ತು. ಆದರೆ, ಅವರು ಅನಾರೋಗ್ಯದ ಕಾರಣ ನೀಡಿ, ಒಂದು ವಾರ ಕಾಲಾವಕಾಶ ಕೋರಿದ್ದರು. ಈಗ ಮತ್ತೊಂದು ನೋಟಿಸ್ ಜಾರಿಗೊಳಿಸಿರುವ ಪೊಲೀಸರು, ಜೂನ್ 1ರಂದು ವಿಚಾರಣೆಗೆ ಹಾಜರಾಗಲು ಸೂಚಿಸಿದ್ದಾರೆ.

ಮೇ 20ರಂದು ರಾತ್ರಿ ಹೆಬ್ಬಗೋಡಿ ಠಾಣಾ ವ್ಯಾಪ್ತಿಯ ಜಿ.ಆರ್. ಫಾರ್ಮ್ ಹೌಸ್‌ನಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದರು. ವಿವಿಧ ಮಾದರಿಯ ಡ್ರಗ್ಸ್‌ಗಳು ಪತ್ತೆಯಾಗಿದ್ದವು. ಮಾದಕ ವಸ್ತು ಪೂರೈಸಿದ ಆರೋಪದಲ್ಲಿ ಐವರನ್ನು ಪೊಲೀಸರು ಬಂಧಿಸಿದ್ದರು. ಪಾರ್ಟಿಯಲ್ಲಿದ್ದ 100 ಮಂದಿಯ ರಕ್ತ ಮಾದರಿಯನ್ನು ಸಂಗ್ರಹಿಸಿ ವೈದ್ಯಕೀಯ ಪರೀಕ್ಷೆಗೆ ಕಳಹಿಸಿದ್ದರು. ಅದರಲ್ಲಿ ಹಲವರು ಡ್ರಗ್ಸ್ ಸೇವಿಸಿರುವುದು ದೃಢಪಟ್ಟಿದೆ. ಹೀಗಾಗಿ, ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿಗೊಳಿಸಿದ್ದಾರೆ.

ನಿರ್ಮಾಪಕರ ನಡುವೆ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರರಂಗದ ಸಮಸ್ಯೆಗಳನ್ನು ಚರ್ಚಿಸಲೆಂದು ಗೋವಾಕ್ಕೆ ತೆರಳಿದ್ದ ಕನ್ನಡ ಚಲನಚಿತ್ರ ರಂಗದ ಕೆಲ ನಿರ್ಮಾಪಕರ ನಡುವೆ ಸೋಮವಾರ ರಾತ್ರಿ ಗಲಾಟೆ ನಡೆದಿದ್ದು, ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ಗಲಾಟೆಯಲ್ಲಿ ತೀವ್ರವಾಗಿ ಗಾಯಗೊಂಡ ರಥಾವರ ಮಂಜುನಾಥ್, ಎ.ಗಣೇಶ್ ಮೊದಲಾದವರು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದಾರೆ.

‘ಚಿತ್ರರಂಗದ 90ನೇ ವರ್ಷದ ಸಂಭ್ರಮದ ಕುರಿತು ಚರ್ಚಿಸಲು ಚಿತ್ರರಂಗದ ನಿಯೋಗ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ. ಸುರೇಶ್ ನೇತೃತ್ವದಲ್ಲಿ ಮೇ 27ರಂದು ಗೋವಾದ ರೆಸಾರ್ಟ್‌ಗೆ ತೆರಳಿತ್ತು. ಎನ್.ಎಂ.ಸುರೇಶ್ ಖಾಸಗಿಯಾಗಿ ನಮ್ಮನ್ನು ಕರೆದುಕೊಂಡು ಹೋಗಿದ್ದರು. ರಾತ್ರಿ ಪಾರ್ಟಿ ಮುಗಿಸಿ ಊಟ ಮಾಡುವ ಸಮಯದಲ್ಲಿ ನಿರ್ಮಾಪಕರಾದ ರಥಾವರ ಮಂಜು ಹಾಗೂ ಸತೀಶ್ ಆರ್ಯ ನಡುವೆ ಮಾತಿಗೆ ಮಾತು ಬೆಳೆಯಿತು. ಆಕ್ರೋಶಗೊಂಡ ಸತೀಶ್ ಆರ್ಯ ಊಟದ ತಟ್ಟೆಯಿಂದ ಮಂಜುನಾಥ್‌ಗೆ ಹೊಡೆದಿದ್ದಾರೆ. ಬಿಡಿಸಲು ಹೋಗಿದ್ದ ನನಗೆ, ಅಧ್ಯಕ್ಷ ಎನ್.ಎಂ.ಸುರೇಶ್‌ಗೂ ಏಟು ಬಿದ್ದಿದೆ’ ಎಂದು ನಿರ್ಮಾಪಕ ಎ.ಗಣೇಶ್ ಹೇಳಿದ್ದಾರೆ.

ಗಲಾಟೆಯ ನಂತರ ಸತೀಶ್ ಆರ್ಯ, ಎ.ಗಣೇಶ್ ಹಾಗೂ ರಥಾವರ ಮಂಜುನಾಥ್ ಅವರನ್ನು ಬೆಂಗಳೂರಿಗೆ ವಾಪಸ್ ಕಳುಹಿಸಲಾಗಿದೆ. ನಿಯೋಗದ ಸದಸ್ಯರು, ಪದಾಧಿಕಾರಿಗಳು ಬುಧವಾರ ಬೆಂಗಳೂರಿಗೆ ಮರಳಿದಿದ್ದಾರೆ. ಈ ಬಗ್ಗೆ ಯಾವುದೇ ದೂರು ದಾಖಲಾಗಿಲ್ಲ.

ಇಬ್ಬರು ವಿದ್ಯಾರ್ಥಿಗಳು ಸಾವು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ತಾಲ್ಲೂಕಿನ ದೊಡ್ಡಬಳ್ಳಾಪುರ-ದೇವನಹಳ್ಳಿ ರಾಷ್ಟ್ರೀಯ ಹೆದ್ದಾರಿ 648 ಸೀಕಾಯನಹಳ್ಳಿ ಗೇಟ್ ಬಳಿ ಮಂಗಳವಾರ ರಾತ್ರಿ ಗೂಡ್ಸ್ ಕ್ಯಾಂಟರ್ ಹರಿದು ದ್ವಿಚಕ್ರ ವಾಹನದಲ್ಲಿದ್ದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಮೃತರನ್ನು ರಾಜಾನುಕುಂಟೆ ಸಮೀಪದ ಖಾಸಗಿ ಎಂಜಿನಿಯರಿಂಗ್ ಕಾಲೇಜಿನ ನಿಖಿಲ್ ಸಾಯಿ ದುರ್ಗೇಶ್ ಮತ್ತು ಪವನ್ ಸಿದ್ರಾಮ ಕೊಳವಿ ಎಂದು ಗುರುತಿಸಲಾಗಿದೆ.

ಯುವತಿಯರ ಫೋಟೊ ಮಾರ್ಫಿಂಗ್ ಮಾಡಿದ ಆರೋಪ

ಬಾಲಕರು ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯರ ಫೋಟೊಗಳನ್ನು ಅಶ್ಲೀಲವಾಗಿ ಮಾರ್ಫಿಂಗ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡುತ್ತಿದ್ದ ಆರೋಪದ ಮೇರೆಗೆ ಇಬ್ಬರು ಬಾಲಕರೂ ಸೇರಿ ಮೂವರು ಆರೋಪಿಗಳನ್ನು ಈಶಾನ್ಯ ವಿಭಾಗದ ಸೆನ್ ಠಾಣೆ (ಸೈಬರ್ ಆರ್ಥಿಕ ಹಾಗೂ ಮಾದಕ ದ್ರವ್ಯ ನಿಯಂತ್ರಣ) ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಾಗಲೂರಿನ ನಿವಾಸಿ, ಕಾಲೇಜು ವಿದ್ಯಾರ್ಥಿಯನ್ನು ಬಂಧಿಸಲಾಗಿದೆ. ಉಳಿದ ಇಬ್ಬರು ಬಾಲಕರನ್ನು ಬಾಲ ನ್ಯಾಯಮಂಡಳಿಗೆ ಹಾಜರು ಪಡಿಸಲಾಗಿದ್ದು, ಮೂವರ ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿಗಳು, ಬಾಲಕಿಯ ಇನ್‌ಸ್ಟಾಗ್ರಾಂ ಖಾತೆಯಿಂದ ಫೋಟೊ ತೆಗೆದು ಅದನ್ನು ಅಶ್ಲೀಲವಾಗಿ ಮಾರ್ಫಿಂಗ್ ಮಾಡುತ್ತಿದ್ದರು. ಅಶ್ಲೀಲ ಫೋಟೊ ಹರಿಯಬಿಡಲು ನಕಲಿ ಖಾತೆಗಳನ್ನು ಸೃಷ್ಟಿಸಿಕೊಂಡಿದ್ದರು. ಇದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ಒಬ್ಬ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಉಳಿದಿಬ್ಬರು ಶಾಲೆಗಳಲ್ಲಿ ಕಲಿಯುತ್ತಿದ್ದಾರೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಬಾಲಕನಿಂದ ವ್ಹೀಲಿಂಗ್; ವಾಹನ ಜಪ್ತಿ

ಬೆಂಗಳೂರು: ಕೆ.ಜಿ.ಹಳ್ಳಿ ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ವ್ಹೀಲಿಂಗ್ ಮಾಡುವವರನ್ನು ಪತ್ತೆ ಹಚ್ಚಲು ಕೈಗೊಂಡ ವಿಶೇಷ ಕಾರ್ಯಾಚರಣೆಯಲ್ಲಿ ಒಬ್ಬ ಬಾಲಕನನ್ನು ಪತ್ತೆಮಾಡಿದ್ದು, ವಾಹನವನ್ನು ಜಪ್ತಿಮಾಡಲಾಗಿದೆ.

ಬುಧವಾರ ಠಾಣಾ ಸಿಬ್ಬಂದಿ ಗಸ್ತಿನಲ್ಲಿರುವಾಗ ಹೆಚ್.ಬಿ.ಆರ್. ಲೇಔಟ್ ಮುಖ್ಯರಸ್ತೆಯಲ್ಲಿ ವ್ಹೀಲಿಂಗ್ ಮಾಡುತ್ತಿದ್ದ ಬಾಲಕನ ದ್ವಿ–ಚಕ್ರ ವಾಹನವನ್ನು ವಶಪಡಿಸಿಕೊಂಡು ವಿಚಾರಣೆ ನಡೆಸಿದ್ದಾರೆ.

‘ವಿಚಾರಣೆಯಲ್ಲಿ ಸವಾರ ಅಪ್ರಾಪ್ತ ವಯಸ್ಕನೆಂದು ತಿಳಿದು ಬಂದಿದ್ದು, ಸಂಚಾರ ಪೊಲೀಸರು ಸವಾರನ ಪೋಷಕರು/ ವಾಹನ ಮಾಲೀಕರ ವಿರುದ್ಧ ಪ್ರಥಮ ವರ್ತಮಾನ ವರದಿ (ಎಫ್.ಐ.ಆರ್) ದಾಖಲಿಸಿಕೊಂಡಿದ್ದಾರೆ. ವಾಹನದಲ್ಲಿ ಡ್ಯಾಗರ್ ಸಿಕ್ಕಿದ್ದು, ಮುಂದಿನ ಕಾನೂನಾತ್ಮಕ ಕ್ರಮ ಕೈಗೊಳ್ಳುವಂತೆ ಡಿ.ಜೆ.ಹಳ್ಳಿ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಯ ವಶಕ್ಕೆ ನೀಡಲಾಗಿದೆ‘ ಎಂದು ಪ್ರಕಟಣೆಯಲ್ಲಿ ಉಪ ಪೊಲೀಸ್ ಆಯುಕ್ತ ಕೆ. ವಂಶಿ ತಿಳಿಸಿದ್ದಾರೆ.

ಅಪಘಾತ: ಫುಡ್ ಡೆಲಿವರಿ ಬಾಯ್ ಸಾವು

ಬೆಂಗಳೂರು: ಮೈಸೂರು ರಸ್ತೆಯ ಗುಡ್ಡದಹಳ್ಳಿಯ ಭಾಗ್ಯಲಕ್ಷ್ಮಿ ಗೋದಾಮು ಬಳಿ ಪೆಟ್ರೋಲ್ ತುಂಬಿದ ಟ್ಯಾಂಕರ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಫುಡ್ ಡೆಲಿವರಿ ಬಾಯ್, ರಾಜರಾಜೇಶ್ವರಿ ನಗರದ ನಿವಾಸಿ ಕಿಶೋರ್ (50) ಅವರು ಮೃತಪಟ್ಟಿದ್ದಾರೆ.

‘ಮಂಗಳವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಫುಡ್ ಡೆಲಿವರಿ ಮಾಡಲು ಕಿಶೋರ್ ಬೈಕ್‌ನಲ್ಲಿ ತೆರಳುತ್ತಿದ್ದರು. ಅದೇ ಸಂದರ್ಭದಲ್ಲಿ ಎದುರಿನಿಂದ ಅತಿವೇಗವಾಗಿ ಬಂದ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ, ಬೈಕ್ ಸವಾರ ಕೆಳಕ್ಕೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳದಲ್ಲಿದ್ದವರು ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ’ ಎಂದು ಮೂಲಗಳು ಹೇಳಿವೆ. ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಸಿ ಬಾಂಬ್ ಬೆದರಿಕೆ: ವಿಮಾನ ನಿಲ್ದಾಣದಲ್ಲಿ ಆತಂಕ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಶೌಚಾಲಯದ ಕನ್ನಡಿಯ ಮೇಲೆ ವಿಮಾನ ನಿಲ್ದಾಣದಲ್ಲಿ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಬುಧವಾರ ಕಂಡು ಬಂದಿದೆ.

ಬಾಂಬ್ ಬೆದರಿಕೆ ಸಂದೇಶ ಹರಡುತ್ತಿದ್ದಂತೆಯೇ ಪ್ರಯಾಣಿಕರಲ್ಲಿ ಆತಂಕ ಮನೆಮಾಡಿತ್ತು. ತಕ್ಷಣ ಕೇಂದ್ರ ಕೈಗಾರಿಕಾ ಮೀಸಲು ಭದ್ರತಾ ಪಡೆಯ ಸಿಬ್ಬಂದಿಯು ಶ್ವಾನದಳ ಮತ್ತು ಬಾಂಬ್ ನಿಷ್ಕ್ರಿಯ ದಳದೊಂದಿಗೆ ಪರಿಶೀಲನೆ ಮಾಡಿದರು. ಎಲ್ಲಿಯೂ ಬಾಂಬ್ ಕಂಡು ಬರಲಿಲ್ಲ. ಇದೊಂದು ಹುಸಿ ಸಂದೇಶ ಎಂದು ಖಚಿತವಾಯಿತು.

ಪದೇ ಪದೇ ಅನಾಮಿಕ ವ್ಯಕ್ತಿಗಳಿಂದ ವಿಮಾನ ನಿಲ್ದಾಣಕ್ಕೆ ಬಾಂಬ್ ಬೆದರಿಕೆ ಕರೆ, ಇ-ಮೇಲ್ ಮತ್ತು ಸಂದೇಶ ಬರುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರು ಈ ಕುರಿತು ತನಿಖೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಸಂಗೀತ ಕಛೇರಿ

ಪ್ರಸಿದ್ಧ ಗಿಟಾರ್ ವಾದಕ ಕೊನಾರಕ್ ರೆಡ್ಡಿ ಅವರು ತಮ್ಮ ಸಂಗೀತ ಯಾನದ 50ನೇ ವರ್ಷದ ಸಂಭ್ರಮಾಚರಣೆ ಪ್ರಯುಕ್ತ ತಾವೇ ಸಂಯೋಜಿಸಿದ ಹಾಗೂ 1970ರ ದಶಕದ ಆಯ್ದ ಜನಪ್ರಿಯ ಗೀತೆಗಳ ಸಂಗೀತ ಕಛೇರಿಯನ್ನು ಬೆಂಗಳೂರು ಅಂತರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಬುಧವಾರ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ವಿಜಯೇಂದ್ರ ದೊಡ್ಡ ಸೊನ್ನೆ: ಶಾಸಕ ಟೀಕೆ

ಬೆಂಗಳೂರು: ‘ನಿಮ್ಮ ತಂದೆಯ ಕಾರಣಕ್ಕೆ ನಿಮಗೆ ಅಧಿಕಾರ ಸಿಕ್ಕಿದೆಯೇ ಹೊರತು ಅದನ್ನು ಬಿಟ್ಟರೆ ನೀವು ದೊಡ್ಡ ಸೊನ್ನೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಉದ್ದೇಶಿಸಿ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಹೇರ್ ಸ್ಟೈಲ್ ಬಗ್ಗೆ ಮಾತನಾಡುವ ಬದಲು ವಿಚಾರಗಳ ಬಗ್ಗೆ ಮಾತನಾಡಲಿ’ ಎಂದರು.

‘ರಾಜ್ಯದ ಭವಿಷ್ಯವನ್ನು ಕಟ್ಟುವಂಥ ಚರ್ಚೆ ನಡೆಸೋಣ. ಅದನ್ನು ಬಿಟ್ಟು ತೇಜೋವಧೆ ಮಾಡುವ ರಾಜಕಾರಣ ಬೇಡವೆಂದು ವಿಜಯೇಂದ್ರ ಅವರಿಗೆ ಸಲಹೆ ನೀಡುತ್ತೇನೆ’ ಎಂದು ಅವರು ಹೇಳಿದರು.

ನಗರದಲ್ಲಿ ಇಂದು

‘ಸಮಸ್ತ ಜಗತ್ತಿಗೆ ಕನ್ನಡ ಸಾಹಿತ್ಯದ ಕೊಡುಗೆ‘ ಕುರಿತು ಉಪನ್ಯಾಸ: ಚಿಕ್ಕಹೆಜ್ಜಾಜಿ ಮಹದೇವ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡ ನಗರ, ಸಂಜೆ 6.30

ಹರಿದಾಸ ಮಂಜರಿ: ಪ್ರಸ್ತುತಿ: ಸಹನಾ ಶ್ರೀವತ್ಸ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 1ನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 6.30

‘ಶ್ರೀಮದ್ಭಾಗವತಾ ಸಪ್ತಾಹ’ ಪ್ರವಚನ: ಕಲ್ಯಾ ಶ್ರೀಕಾಂತಾಚಾರ್ಯ, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, 6ನೇ ಮುಖ್ಯರಸ್ತೆ, 3ನೇ ಬ್ಲಾಕ್, ತ್ಯಾಗರಾಜನಗರ, ಸಂಜೆ 7

ಕೆಎಸ್‌ಆರ್‌ಟಿಸಿ ಕ್ರಮ ಎತ್ತಿಹಿಡಿದ ಹೈಕೋರ್ಟ್

ಕಂಡಕ್ಟರ್ ವಜಾ ಆದೇಶ ಊರ್ಜಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಯಾಣಿಕರಿಗೆ ಟಿಕೆಟ್ ನೀಡದ ಆರೋಪದಡಿ ಕಂಡಕ್ಟರ್ ಒಬ್ಬರನ್ನು ಸೇವೆಯಿಂದ ವಜಾಗೊಳಿಸಿದ್ದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್‌ಆರ್‌ಟಿಸಿ) ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಈ ಸಂಬಂಧ ಕೆಎಸ್‌ಆರ್‌ಟಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಸಿಬ್ಬಂದಿಯನ್ನು ವಜಾಗೊಳಿಸುವ ಸಂದರ್ಭದಲ್ಲಿ ಅವರ ಹಿಂದಿನ ನಡವಳಿಕೆಯನ್ನೂ ಪರಿಗಣಿಸಬೇಕು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಪ್ರಕರಣವೇನು?: ಕಂಡಕ್ಟರ್ ಎನ್.ಎನ್. ಮಹಾದೇವ, ಗೋಣಿಕೊಪ್ಪದಿಂದ ಬಿ.ಶೆಟ್ಟಿಗೇರಿ ಮಾರ್ಗದಲ್ಲಿ ಸಂಚರಿಸುತ್ತಿದ್ದ ಬಸ್‌ನಲ್ಲಿ 2013ರ ಜನವರಿ 23ರಂದು ಕರ್ತವ್ಯ ನಿರ್ವಹಿಸುತ್ತಿದ್ದರು. ಈ ವೇಳೆ ಅವರು ಮೂವರು ಪ್ರಯಾಣಿಕರಿಗೆ ಟಿಕೆಟ್ ನೀಡದೇ ಇರುವುದನ್ನು ತಪಾಸಣಾ ತಂಡ ಪತ್ತೆ ಹಚ್ಚಿತ್ತು.

ಈ ಕುರಿತು ಇಲಾಖಾ ತನಿಖೆ ನಡೆಸಲಾಗಿತ್ತು. ಕರ್ತವ್ಯ ಲೋಪ ಎಸಗಿದ್ದು ಸಾಬೀತಾದ ಹಿನ್ನೆಲೆಯಲ್ಲಿ ಅವರನ್ನು ಕೆಲಸದಿಂದ ವಜಾಗೊಳಿಸಲಾಗಿತ್ತು. ಮಹಾದೇವ ಇದನ್ನು ಮೈಸೂರಿನ ಕಾರ್ಮಿಕ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ಕಾರ್ಮಿಕ ನ್ಯಾಯಾಲಯವು ವಜಾ ಆದೇಶವನ್ನು 2017ರಲ್ಲಿ ರದ್ದುಪಡಿಸಿತ್ತು. ‘ಎರಡು ವೇತನ ಹೆಚ್ಚಳವನ್ನು ಸ್ಥಗಿತಗೊಳಿಸಬೇಕು’ ಎಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಕೆಎಸ್‌ಆರ್‌ಟಿಸಿ ಹೈಕೋರ್ಟ್ ಮೆಟ್ಟಿಲೇರಿತ್ತು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ,‘ಮಹಾದೇವ ಅವರು ಈ ಹಿಂದೆ ಇಂತಹ 122 ಪ್ರಕರಣಗಳಲ್ಲಿ ಭಾಗಿಯಾಗಿದ್ದರು ಎಂಬುದು ಕಂಡು ಬಂದಿದೆ. ಇದನ್ನು ಕೆಎಸ್‌ಆರ್‌ಟಿಸಿಯ ಶಿಸ್ತು ಸಮಿತಿ ಪರಿಗಣಿಸಿಯೇ ಸೇವೆಯಿಂದ ವಜಾ ಮಾಡುವಂತೆ ಆದೇಶಿಸಿದೆ. ಆದ್ದರಿಂದ, ವಜಾ ಆದೇಶವನ್ನು ಕಾರ್ಮಿಕ ನ್ಯಾಯಾಲಯ ಹಗುರವಾಗಿ ಪರಿಗಣಿಸಬಾರದಿತ್ತು’ ಎಂದು ಹೇಳಿದೆ.

ದೇಗುಲ ಜಾಗದಲ್ಲಿ ಮಸೀದಿ ನಿರ್ಮಾಣ ಆರೋಪ: ನೋಟಿಸ್

ಬೆಂಗಳೂರು: 'ಶ್ರೀರಂಗಪಟ್ಟಣದ ಮೂಡಲ ಬಾಗಿಲು ಆಂಜನೇಯ ಸ್ವಾಮಿ ದೇವಾಲಯವನ್ನು ಟಿಪ್ಪು ಸುಲ್ತಾನ್ ಆಡಳಿತಾವಧಿಯಲ್ಲಿ ಧ್ವಂಸಗೊಳಿಸಿ ಜಾಮಿಯಾ ಮಸೀದಿ ನಿರ್ಮಾಣ ಮಾಡಲಾಗಿದೆ. ಈ ಕುರಿತು ಉತ್ಖನನ ನಡೆಸಿ ವರದಿ ಸಲ್ಲಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾಲಯಕ್ಕೆ ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಮಂಡ್ಯ ಜಿಲ್ಲೆಯ ಹಾಲಹಳ್ಳಿಯಲ್ಲಿ ಕೇಂದ್ರ ಕಚೇರಿ ಹೊಂದಿರುವ ಭಜರಂಗ ಸೇನೆಯ ರಾಜ್ಯ ಘಟಕದ ಅಧ್ಯಕ್ಷ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.ವಿಚಾರಣೆಯನ್ನು ಜುಲೈ 11 ಕ್ಕೆ ಮುಂದೂಡಲಾಗಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಸ್.ಎಸ್.ರವಿಶಂಕರ್ ವಾದ ಮಂಡಿಸಿದರು.

ಅರ್ಜಿಯಲ್ಲಿ ಏನಿದೆ?: ‘ಮೂಡಲ ಬಾಗಿಲು ಆಂಜನೇಯ ಸ್ವಾಮಿ ದೇವಾಲಯವನ್ನು ವಿಜಯನಗರ ಸಾಮ್ರಾಜ್ಯ, ಮೈಸೂರು ಸಾಮ್ರಾಜ್ಯ ಹಾಗೂ ದಳವಾಯಿ ದೊಡ್ಡಯ್ಯ ಸೇರಿ ಅನೇಕ ಆಡಳಿತಗಾರರು ಪೋಷಿಸಿಕೊಂಡು ಬಂದಿದ್ದರು. ಆದರೆ, ಇದನ್ನು ಟಿಪ್ಪು ಸುಲ್ತಾನ್ ಧ್ವಂಸಗೊಳಿಸಿದ್ದು ಬಳಿಕ ಅದೇ ಜಾಗದಲ್ಲಿ ಬಳಿಕ ಜಾಮಿಯಾ ಮಸೀದಿ ನಿರ್ಮಿಸಲಾಗಿದೆ’ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

’ಈ ಬಗ್ಗೆ ಅಧ್ಯಯನ ಸರ್ವೆ ಹಾಗೂ ಉತ್ಖನನ ನಡೆಸಿ 30 ದಿನಗಳ ಒಳಗಾಗಿ ಹೈಕೋರ್ಟ್‌ಗೆ ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾಲಯಕ್ಕೆ ನಿರ್ದೇಶಿಸಬೇಕು. ದೇವಾಲಯದ ಆವರಣದಲ್ಲಿರುವ ಹಿಂದೂ ಸಂಸ್ಕೃತಿ ಹಾಗೂ ಪರಂಪರೆಯ ಕುರುಹುಗಳಾಗಿರುವ ಗರುಡ ಕಂಬ, ಕಲ್ಯಾಣಿ, ಸ್ತೂಪ, ಸ್ತಂಭ, ಹಿಂದೂ ದೇವ-ದೇವತೆಗಳ ಕಲ್ಲಿನ ಕೆತ್ತನೆಗಳು ಹಾಗೂ ಭೂಗತ ದೇವಸ್ಥಾನದ ಭಾಗ, ವಾಸ್ತು ಶಿಲ್ಪ, ಹೂತಿಟ್ಟ ವಿಗ್ರಹಗಳನ್ನು ಸಂರಕ್ಷಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾಲಯ, ರಾಜ್ಯ ಸರ್ಕಾರ, ಜಿಲ್ಲಾಡಳಿತಕ್ಕೆ ನಿರ್ದೇಶಿಸಬೇಕು’ ಎಂದು ಮನವಿ ಮಾಡಲಾಗಿದೆ.

ಆರ್ಟೆಮಿಸ್ ಬಾಹ್ಯಾಕಾಶ ಒಪ್ಪಂದ

ಯು.ಟಿ.ಆಯಿಷಾ ಫರ್ಝಾನ

ಆರ್ಟೆಮಿಸ್ ಬಾಹ್ಯಾಕಾಶ ಒಪ್ಪಂದಕ್ಕೆ ಇತ್ತೀಚೆಗೆ ಸ್ಲೋವೇನಿಯಾ ಮತ್ತು ಲಿಥುವೇನಿಯಾ ದೇಶಗಳು ಸಹಿ ಹಾಕಿದ್ದು, ಈ ಒಪ್ಪಂದಕ್ಕೆ ಸಹಿ ಹಾಕಿದ ದೇಶಗಳಲ್ಲಿ ಸ್ಲೋವೇನಿಯಾ 39 ಮತ್ತು ಲಿಥುವೇನಿಯಾ 40ನೇ ದೇಶವಾಗಿದೆ.

ಇದೇ ಏಪ್ರಿಲ್‌ನಲ್ಲಿ ವಾಷಿಂಗ್ಟನ್‌ನ ನಾಸಾ ಪ್ರಧಾನ ಕಚೇರಿಯಲ್ಲಿ ಕೆಲವು ದೇಶಗಳು ಆರ್ಟೆಮಿಸ್ ಒಪ್ಪಂದಗಳಿಗೆ ಸಹಿ ಹಾಕಿದ್ದು, ಈ ಮೂಲಕ ಸ್ವೀಡನ್ ಒಪ್ಪಂದಕ್ಕೆ ಸಹಿಹಾಕಿದ 37ನೇ ದೇಶ ಹಾಗೂ ಸ್ವಿಟ್ಜರ್ಲೆಂಡ್ 38ನೇ ದೇಶ ಎನಿಸಿಕೊಂಡಿದ್ದವು.ಈ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಈ ದೇಶಗಳು ತಮ್ಮ ಚಂದ್ರಯಾನ ಬಾಹ್ಯಾಕಾಶ ಕಾರ್ಯಕ್ರಮಗಳಲ್ಲಿ ಪರಸ್ಪರ ಸಹಕಾರದ ಮತ್ತು ಜವಾಬ್ದಾರಿಯುತ ನಡವಳಿಕೆಗೆ ಬದ್ಧವಾಗಿರುತ್ತವೆ. ಇದು ನಾಸಾದ ಆರ್ಟೆಮಿಸ್ ಕಾರ್ಯಕ್ರಮಕ್ಕೆ ಸೇರ್ಪಡೆಯಾಗಲು ಬೇಕಾದ ಪೂರ್ವ ಅಗತ್ಯಗಳಲ್ಲಿ ಒಂದು. ಸಹಿ ಹಾಕಿದ ದೇಶಗಳೆಲ್ಲವೂ ಚಂದ್ರಯಾನ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದಿಲ್ಲವಾದರೂ, ಈ ವಿಸ್ತರಣೆಯು ಯುಎಸ್‌ಎ ಮತ್ತು ಯುರೋಪಿನ ನಡುವಿನ ಬಾಹ್ಯಾಕಾಶ ಚಟುವಟಿಕೆಗಳ ಸಹಕಾರಕ್ಕೆ ಸಂಬಂಧಿಸಿದಂತೆ ಒಂದು ಗಮನಾರ್ಹ ಹೆಜ್ಜೆಯನ್ನು ಸೂಚಿಸುತ್ತದೆ.

ಯುರೋಪಿಯನ್ ಸ್ಪೇಸ್ ಏಜೆನ್ಸಿ (ಇಎಸ್‌ಎ)ಯ 22 ಸದಸ್ಯ ದೇಶಗಳಲ್ಲಿ 16 ದೇಶಗಳು ಈಗ ಈ ಒಪ್ಪಂದಕ್ಕೆ ಸಹಿ ಹಾಕಿದಂತಾಗಿದ್ದು, ಚಂದ್ರನಲ್ಲಿಗೆ ಮಾನವರನ್ನು ಕಳುಹಿಸುವ ಮಹತ್ವಾಕಾಂಕ್ಷಿ ಗುರಿಯೆಡೆಗೆ ಈ ದೇಶಗಳ ಸಮಾನ ಬದ್ಧತೆಯನ್ನು ಇದು ಎತ್ತಿಹಿಡಿಯುತ್ತದೆ.

> ಚಂದಿರನ ಅಂಗಳದೊಳಗೆ ಪ್ರವೇಶಿಸಲು ಹಲವು ದೇಶಗಳು ಇಚ್ಛಿಸುತ್ತಿವೆ. ಈ ನಿಟ್ಟಿನಲ್ಲಿ ಒಟ್ಟು ಬಾಹ್ಯಾಕಾಶ ಮತ್ತು ಮನುಕುಲದ ಸುರಕ್ಷತೆಗೆ ಹಾಗೂ ಡೇಟಾಗಳ ಹಂಚಿಕೆಗೆ ಸಂಬಂಧಿಸಿದಂತೆ ಒಂದು ರೂಪುರೇಷೆಗಳಿಗೆ ಬದ್ಧರಾಗಿರಬೇಕು ಎಂಬ ನಿಟ್ಟಿನಲ್ಲಿ ನಾಸಾ ಒಂದು ಒಪ್ಪಂದ ತಂದಿದೆ. ಅದುವೇ ಆರ್ಟೆಮಿಸ್ ಒಪ್ಪಂದ.

ಆರ್ಟೆಮಿಸ್ ಒಪ್ಪಂದಗಳು

ಮೊದಲಿಗೆ, ಆರ್ಟೆಮಿಸ್ ಒಪ್ಪಂದಗಳಿಗೆ ಅಕ್ಟೋಬರ್ 13, 2020ರಂದು ಎಂಟು ಸ್ಥಾಪಕ ದೇಶಗಳಾದ ಆಸ್ಟ್ರೇಲಿಯಾ, ಕೆನಡಾ, ಇಟಲಿ, ಜಪಾನ್, ಲುಕ್ಸೆಂಬರ್ಗ್, ಯುಎಇ, ಯುಕೆ ಮತ್ತು ಯುಎಸ್‌ಎ ಸಹಿ ಹಾಕಿದ್ದವು. ಇದೊಂದು ಹಣಕಾಸಿನ ಬದ್ಧತೆ ಇಲ್ಲದಿರುವ ಒಪ್ಪಂದವಾಗಿದ್ದು, ಇದರ ಅಡಿಯಲ್ಲಿ ನಡೆಯುವ ಎಲ್ಲಾ ಚಟುವಟಿಕೆಗಳು ಶಾಂತಿಯುತ ಉದ್ದೇಶಗಳಿಗಾಗಿರುತ್ತವೆ.



ಭಾರತಕ್ಕೆ ಆಗಬಹುದಾದ ಲಾಭವೇನು ?

ಆರ್ಟೆಮಿಸ್ ಒಪ್ಪಂದಗಳ ಪ್ರಕಾರ ಭಾರತವು ಸಮಾನ ನಿಯಮಾವಳಿಗೆ ಒಳಪಟ್ಟು, ಯುಎಸ್‌ಎ ನಡೆಸುವ ಚಂದ್ರ ಮತ್ತು ಇತರ ಆಕಾಶಕಾಯಗಳ ಅನ್ವೇಷಣೆ ಮತ್ತು ಸಂಶೋಧನೆಯ ಆರ್ಟೆಮಿಸ್ ಕಾರ್ಯಕ್ರಮಗಳಲ್ಲಿ ಭಾಗವಹಿಸಬಹುದು. ವಿಶೇಷವಾಗಿ ಎಲೆಕ್ಟ್ರಾನಿಕ್ಸ್ ಸೇರಿ ಬಾಹ್ಯಾಕಾಶ ಕ್ಷೇತ್ರದಲ್ಲಿನ ತಂತ್ರಜ್ಞಾನಗಳ ಆಮದಿನ ಮೇಲೆ ಇರುವ ನಿರ್ಬಂಧಗಳ ಸಡಿಲಿಕೆಗೆ ಈ ಒಪ್ಪಂದವು ದಾರಿಮಾಡಿಕೊಡುತ್ತದೆ. ಯುಎಸ್‌ಎಯ ಮಾರುಕಟ್ಟೆಗಳಿಗಾಗಿ ಸಾಧನಗಳ ಅಭಿವೃದ್ಧಿ ಮತ್ತು ಆವಿಷ್ಕಾರ ನಡೆಸುವ ಮೂಲಕ ಭಾರತೀಯ ಕಂಪನಿಗಳು ಲಾಭ ಪಡೆಯಬಹುದು. ಇನ್ನಷ್ಟು ವೈಜ್ಞಾನಿಕ ಕಾರ್ಯಕ್ರಮಗಳಲ್ಲಿ ಜಂಟಿಯಾಗಿ ಭಾಗವಹಿಸಲು ಭಾರತಕ್ಕೆ ಇದು ಅವಕಾಶ ಮಾಡಿಕೊಡಲಿದೆ. ಮಾನವಸಹಿತ ಗಗನಯಾನ ಸೇರಿದಂತೆ ದೂರಗಾಮಿ ಬಾಹ್ಯಾಕಾಶ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೆ ಒಂದು ಸಮಾನ ಮಾನದಂಡವನ್ನೂ ಭಾರತವು ಹೊಂದಲಿದೆ. ಮೈಕ್ರೋ ಎಲೆಕ್ಟ್ರಾನಿಕ್ಸ್, ಕ್ವಾಂಟಮ್, ಬಾಹ್ಯಾಕಾಶ ಭದ್ರತೆ ಮುಂತಾದ ಹೆಚ್ಚು ಕಾರ್ಯವ್ಯೂಹಾತ್ಮಕವಾದ ಕ್ಷೇತ್ರಗಳಲ್ಲಿ ಯುಎಸ್‌ಎ ಜೊತೆಗೆ ಭಾರತದ ಭಾಗವಹಿಸುವಿಕೆಯು ಹೆಚ್ಚಲಿದೆ.

ಒಪ್ಪಂದಗಳ ಉದ್ದೇಶ

ಈ ಒಪ್ಪಂದಗಳ ಉದ್ದೇಶವು ವಾಸ್ತವಿಕ ತತ್ವಗಳು, ಮಾರ್ಗದರ್ಶಿ ಸೂತ್ರಗಳು ಮತ್ತು ಉತ್ತಮ ಅಭ್ಯಾಸಗಳ ಮೂಲಕ ಬಾಹ್ಯಾಕಾಶದ ನಾಗರಿಕ ಅನ್ವೇಷಣೆ ಮತ್ತು ಬಳಕೆಯ ಅಭ್ಯಾಸಗಳನ್ನು ಮತ್ತಷ್ಟು ಸುಧಾರಿಸುವುದು ಮತ್ತು ಆ ಕುರಿತು ಒಂದು ಸಮಾನ ದೃಷ್ಟಿಯನ್ನು ಹೊಂದುವುದು ಹಾಗೂ ಆರ್ಟೆಮಿಸ್ ಕಾರ್ಯಕ್ರಮವನ್ನು ಮುಂದುವರಿಸುವುದು. ಬಾಹ್ಯಾಕಾಶ ಚಟುವಟಿಕೆಗಳನ್ನು ನಡೆಸುವಾಗ ಕಾರ್ಯಾಚರಣೆಗಳ ಸುರಕ್ಷತೆ ಹೆಚ್ಚಿಸುವುದು, ಅನಿಶ್ಚಿತತೆಯನ್ನು ಕಡಿಮೆ ಮಾಡುವುದು ಮತ್ತು ಬಾಹ್ಯಾಕಾಶದ ಸುಸ್ಥಿರ ಬಳಕೆಗೆ ಉತ್ತೇಜಿಸುವುದಾಗಿದೆ. ಈ ಒಪ್ಪಂದಗಳು ಮೇಲೆ ವಿವರಿಸಿದ ತತ್ವ ಮತ್ತು ಉದ್ದೇಶಗಳಿಗೆ ಒಂದು ರಾಜಕೀಯ ಬದ್ಧತೆಯನ್ನು ಪ್ರತಿನಿಧಿಸುತ್ತವೆ. ಇವುಗಳಲ್ಲಿ ಹಲವು ತತ್ವಗಳು- ಬಾಹ್ಯಾಕಾಶ ಒಪ್ಪಂದ (Outer Space Treaty) ಮತ್ತು ಇತರ ಸಂಬಂಧಿತ ಒಪ್ಪಂದಗಳಲ್ಲಿ ಅಡಕವಾಗಿರುವ ಮುಖ್ಯವಾದ ಗುರಿಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಂಬಂಧಿಸಿವೆ.

ಈ ಒಪ್ಪಂದಗಳಲ್ಲಿ ನಿಗದಿಪಡಿಸಲಾಗಿರುವ ತತ್ವಗಳು, ಸಹಿ ಹಾಕಿದ ಪ್ರತಿ ದೇಶದ ನಾಗರಿಕ ಬಾಹ್ಯಾಕಾಶ ಸಂಸ್ಥೆಗಳು ನಡೆಸುವ ನಾಗರಿಕ ಬಾಹ್ಯಾಕಾಶ ಚಟುವಟಿಕೆಗಳಿಗೆ ಅನ್ವಯಿಸುತ್ತವೆ. ಈ ಚಟುವಟಿಕೆಗಳು ಚಂದ್ರ, ಮಂಗಳ, ಧೂಮಕೇತುಗಳು, ಉಲ್ಕೆಗಳು, ಅವುಗಳ ಮೇಲ್ಮೈ ಮತ್ತು ಹೊರಮೈ ಸೇರಿ ಚಂದ್ರ ಅಥವಾ ಮಂಗಳದ ಕಕ್ಷೆಗಳು, ಭೂಮಿ ಮತ್ತು ಚಂದ್ರ ವ್ಯವಸ್ಥೆಯ ಲಾಗ್ರೇಂಜಿಯನ್ (lagrangian) ಬಿಂದುಗಳು, ಈ ಆಕಾಶಕಾಯಗಳ ನಡುವಿನ ಸಂಚಾರ ಸ್ಥಳಗಳು- ಹೀಗೆ ಎಲ್ಲಿ ಬೇಕಾದರಲ್ಲಿ ನಡೆಯಬಹುದು. ಸಹಿ ಹಾಕಿದ ದೇಶಗಳೆಲ್ಲವೂ ಕಾರ್ಯಕ್ರಮ ಯೋಜನೆ ಮತ್ತು ತಮ್ಮ ಪರವಾಗಿರುವ ಸಂಸ್ಥೆಗಳು ಸೇರಿದಂತೆ, ಎಲ್ಲಾ ಕಾರ್ಯಾಚರಣೆಗಳಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ತಮ್ಮದೇ ಬಾಹ್ಯಾಕಾಶ ಕಾರ್ಯಾಚರಣೆಗಳಲ್ಲಿ ಈ ಒಪ್ಪಂದದಲ್ಲಿ ವಿವರಿಸಿರುವ ತತ್ವಗಳನ್ನು ಅನುಷ್ಠಾನಗೊಳಿಸಲಿವೆ.

ಪಾಲುದಾರ ದೇಶಗಳ ಜವಾಬ್ದಾರಿಗಳು

ತಮ್ಮ ಧೋರಣೆಗಳು ಮತ್ತು ಯೋಜನೆಗಳನ್ನು ಸಾರ್ವಜನಿಕವಾಗಿ ವಿವರಿಸುವ ಮೂಲಕ ಪಾಲುದಾರ ದೇಶಗಳು ಪಾರದರ್ಶಕತೆಯ ತತ್ವಗಳನ್ನು ಪಾಲಿಸಬೇಕು. ಪಾಲುದಾರ ದೇಶಗಳು ಮುಕ್ತವಾಗಿರುವ ಅಂತರರಾಷ್ಟ್ರೀಯ ಗುಣಮಟ್ಟವನ್ನು ಬಳಸಬೇಕು ಮತ್ತು ಅಗತ್ಯ ಬಿದ್ದಾಗ ಹೊಸ ಗುಣಮಟ್ಟವನ್ನು ಅಭಿವೃದ್ಧಿಪಡಿಸಬೇಕು. ಪರಸ್ಪರ ಪೂರಕವಾದ ವ್ಯವಸ್ಥೆಗಳನ್ನು ಬೆಂಬಲಿಸಲು ಪ್ರಯತ್ನಿಸಬೇಕು.

ಪಾಲುದಾರ ದೇಶಗಳು ಯಾವುದೇ ಸಂದರ್ಭದಲ್ಲಿ ಸಂಕಷ್ಟದಲ್ಲಿ ಸಿಲುಕಿರುವ ಗಗನಯಾನಿಗಳಿಗೆ ಸಾಧ್ಯವಿರುವ ಎಲ್ಲಾ ನೆರವು ನೀಡಲು ಬದ್ಧರಾಗಿರಬೇಕು. ನೋಂದಣಿ ಒಪ್ಪಂದಕ್ಕೆ ಅನುಗುಣವಾಗಿ, ಯಾವ ಆಕಾಶಕಾಯಕ್ಕೆ ಯಾರು ನೋಂದಣಿ ಮಾಡಬೇಕು ಎಂಬುದನ್ನು ನಿರ್ಧರಿಸಬೇಕು.

ಆರ್ಟೆಮಿಸ್ ಯಾತ್ರೆಯಿಂದ ಇಡೀ ಪ್ರಪಂಚಕ್ಕೆ ಪ್ರಯೋಜನವಾಗುವಂತೆ, ಪಾಲುದಾರ ದೇಶಗಳು ತಮ್ಮೆಲ್ಲಾ ವೈಜ್ಞಾನಿಕ ದತ್ತಾಂಶಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಬೇಕು. ಸದಸ್ಯ ದೇಶಗಳು ತಮ್ಮ ಬಾಹ್ಯಾಕಾಶ ಚಟುವಟಿಕೆಗಳ ಕುರಿತು ವಿಶ್ವಸಂಸ್ಥೆಗೆ ತಿಳಿಸಬೇಕು. ಪಾಲುದಾರ ದೇಶಗಳು ಬಾಹ್ಯಾಕಾಶದಲ್ಲಿ ಹಾನಿಕಾರಕ ಮಧ್ಯಪ್ರವೇಶದಿಂದ ದೂರ ಉಳಿಯಬೇಕು ಮತ್ತು ಬಾಹ್ಯಾಕಾಶದ ಶಾಂತಿಯುತ ಬಳಕೆಗಳ ಕುರಿತ ವಿಶ್ವಸಂಸ್ಥೆಯ ಸಮಿತಿ (UNCOPUOS)ಯ ಬಾಹ್ಯಾಕಾಶ ತ್ಯಾಜ್ಯ ತಗ್ಗಿಸುವಿಕೆಯ ಕುರಿತ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸಬೇಕು.

ಬಾಹ್ಯಾಕಾಶದ ಶಾಂತಿಯುತ ಬಳಕೆಗಳ ಕುರಿತ ವಿಶ್ವಸಂಸ್ಥೆಯ ಸಮಿತಿ

ಬಾಹ್ಯಾಕಾಶದ ಶಾಂತಿಯುತ ಬಳಕೆಗಳ ಕುರಿತ ವಿಶ್ವಸಂಸ್ಥೆಯ ಸಮಿತಿಯನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ 1959ರಲ್ಲಿ ಸ್ಥಾಪಿಸಲಾಯಿತು.

ಶಾಂತಿ, ಭದ್ರತೆ ಮತ್ತು ಅಭಿವೃದ್ಧಿಗಾಗಿ ಇಡೀ ಮಾನವ ಕುಲಕ್ಕೆ ಲಾಭವಾಗುವಂತೆ ಬಾಹ್ಯಾಕಾಶದ ಅನ್ವೇಷಣೆ ಮತ್ತು ಬಳಕೆಯನ್ನು ನಿರ್ದೇಶಿಸುವ ಉದ್ದೇಶದಿಂದ ಈ ಸಮಿತಿಯನ್ನು ಸ್ಥಾಪಿಸಲಾಯಿತು. ಬಾಹ್ಯಾಕಾಶದ ಶಾಂತಿಯುತ ಬಳಕೆಯಲ್ಲಿ ಅಂತರರಾಷ್ಟ್ರೀಯ ಸಹಕಾರದ ಪರಿಶೀಲನೆ, ವಿಶ್ವಸಂಸ್ಥೆಯು ಕೈಗೊಳ್ಳಬಹುದಾದ ಬಾಹ್ಯಾಕಾಶ ಸಂಬಂಧಿ ಚಟುವಟಿಕೆಗಳ ಅಧ್ಯಯನ, ಬಾಹ್ಯಾಕಾಶ ಅಧ್ಯಯನ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುವುದು,

ಬಾಹ್ಯಾಕಾಶ ಅನ್ವೇಷಣೆಯಿಂದ ಉಂಟಾಗುವ ಕಾನೂನು ಸಮಸ್ಯೆಗಳ ಅಧ್ಯಯನ ಮುಂತಾದ ಜವಾಬ್ದಾರಿಗಳನ್ನು ಈ ಸಮಿತಿಗೆ ನೀಡಲಾಗಿತ್ತು. ಈ ಸಮಿತಿಯಲ್ಲಿ ಎರಡು ಉಪಸಂಸ್ಥೆಗಳಿವೆ: 1.ವೈಜ್ಞಾನಿಕ ಮತ್ತು ತಾಂತ್ರಿಕ ಉಪಸಮಿತಿ, 2. ಕಾನೂನು ಉಪಸಮಿತಿ. ಇವೆರಡನ್ನೂ 1961ರಲ್ಲಿ ಸ್ಥಾಪಿಸಲಾಯಿತು.

ಈ ಸಮಿತಿಯು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಾಲ್ಕನೇ ಸಮಿತಿಗೆ ವರದಿ ಮಾಡುತ್ತದೆ. ಅದು ಬಾಹ್ಯಾಕಾಶದ ಶಾಂತಿಯುತ ಬಳಕೆಗಳಲ್ಲಿ ಅಂತರರಾಷ್ಟ್ರೀಯ ಸಹಕಾರದ ಕುರಿತು ವಾರ್ಷಿಕ ಗೊತ್ತುವಳಿಯನ್ನು ಅಂಗೀಕರಿಸುತ್ತದೆ.

ಬಹುಆಯ್ಕೆಯ ಪ್ರಶ್ನೆಗಳು

1. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಈ ನಿಗಮವನ್ನು 1987ರಲ್ಲಿ ಕಂಪನಿ ಅಧಿನಿಯಮ 1956ರ ಅಡಿಯಲ್ಲಿ ಸ್ಥಾಪಿಸಲಾಗಿದೆ.
ಬಿ. ಈ ನಿಗಮವು ಸಮಾಜದ ದುರ್ಬಲ, ಶೋಷಿತ ಮತ್ತು ಅಸಹಾಯಕ ಮಹಿಳೆಯರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸದೃಢಗೊಳಿಸುವ ಉದ್ದೇಶವನ್ನು ಹೊಂದಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಡಿ

2. ಉದ್ಯೋಗಿನಿ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಈ ಯೋಜನೆಯಡಿ ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ರಿಂದ 55 ವರ್ಷ ಆಗಿದೆ.
ಬಿ. ಮಹಿಳೆಯರು ಹೆಚ್ಚಿನ ಆದಾಯದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಖಾಸಗಿ ಆರ್ಥಿಕ ಸಂಸ್ಥೆಗಳಿಂದ ಪಡೆಯುವ ಸಾಲಕ್ಕೆ ಹೆಚ್ಚಿನ ಬಡ್ಡಿ ನೀಡುವುದನ್ನು ತಪ್ಪಿಸುವುದು ಉದ್ಯೋಗಿನಿ ಯೋಜನೆಯ ಉದ್ದೇಶವಾಗಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಕರ್ನಾಟಕವು ರಾಜ್ಯ ಲಿಂಗತ್ವ ಅಲ್ಪಸಂಖ್ಯಾತರ ನೀತಿಯನ್ನು 2017ರಲ್ಲಿ ಜಾರಿಗೊಳಿಸಿದೆ.
ಬಿ. ಕರ್ನಾಟಕವು ಸರ್ಕಾರಿ ಸೇವೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಉದ್ಯೋಗವಕಾಶ ಒದಗಿಸಲು ಸರ್ಕಾರವು ಎಲ್ಲಾ ವರ್ಗಗಳ ನೇರ ನೇಮಕಾತಿಯಲ್ಲಿ ಶೇ 2ರಷ್ಟು ಮೀಸಲಾತಿಯನ್ನು ಕಲ್ಪಿಸಿದೆ.
ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಎ

4. ಅಮರಾವತಿ ಸ್ತೂಪಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಆಂಧ್ರದ ಅಮರಾವತಿ ಸ್ತೂಪ ದಕ್ಷಿಣ ಭಾರತದಲ್ಲೇ ಅತ್ಯಂತ ದೊಡ್ಡದಾಗಿದೆ.
ಬಿ. ಈ ಸ್ತೂಪದ ಮೇಲೆ ಬುದ್ಧ ಮತ್ತು ಬೋಧಿಸತ್ವರ ಶಿಲ್ಪಗಳನ್ನು ದಿವ್ಯಪುರುಷರಂತೆ ಕೆತ್ತಲಾಗಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

5. ಚೈತ್ಯಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಬುದ್ಧನನ್ನು ಪೂಜಿಸುವ ಪ್ರಾರ್ಥನಾ ಸಭಾಂಗಣಗಳನ್ನು ಚೈತ್ಯಗಳೆಂದು ಕರೆಯುತ್ತಾರೆ.
ಬಿ. ಅಜಂತ, ಕನ್ಹೇರಿ, ಜುನ್ನಾರ್, ಬೇಡ್ಸ, ಕಾರ್ಲೆ, ನಾಸಿಕ್ ಮತ್ತು ಕೊಂಡಾನೆಗಳಲ್ಲಿ ಶಾತವಾಹನರು ನಿರ್ಮಿಸಿದ ಚೈತ್ಯಗಳು ಕಂಡು ಬರುತ್ತವೆ.
ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

6. ವಿಹಾರಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಬೌದ್ಧ ಭಿಕ್ಷುಗಳ ವಾಸಸ್ಥಾನಗಳೇ ವಿಹಾರಗಳಾಗಿವೆ.
ಬಿ. ನಾಸಿಕ್‌ನಲ್ಲಿ 33 ವಿಹಾರಗಳಿವೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಎ

7. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಕರ್ನಾಟಕ ಸರ್ಕಾರವು 1992 ರಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿತು.
ಬಿ. ಇದು ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತದೆ.
ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಬಿ

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಬಹುಆಯ್ಕೆಯ ಪ್ರಶ್ನೋತ್ತರಗಳು ಇಲ್ಲಿವೆ..

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

ಕನ್ನಡ ಮಾಧ್ಯಮ

Second Language ENGLISH
Unit-1 Prose : A Hero

Refusing: *(.....Contd)*
d) It is certainly a possibility. May I think about it?
e) That's very good of you but I am not sure I want to.
f) Do you mind if I didn't? I know you are being kind.

Answer:
Father: Swami, can you think of learning and doing a trekking during this summer vacation?
Swami: Thank you for the suggestion. I will certainly think about it.
Father: You can start with practicing at rock climbing club in town sports complex during weekends.
Swami: That may be good idea. Let me think about it.
Father: You may also learn map reading with help of your school NCC officer.
Swami: I think, on the whole, I would rather not.
Father: If you master the electronic map reading, I will buy you a GPS navigator
Swami: Thank you all the same.
Father: Would you like to increase your physical fitness by accompanying me on morning running?
Swami: It is certainly a possibility. May I think about it?
Father: If you do not want to run with me, would you want to run on your own at school?
Swami: That's very good of you but I am not sure I want to.
Father: Can you at least practice running on the spot at home?
Swami: Do you mind if I didn't? I know you are being kind.

Read and Respond:
Task 1: A man went to the astrologer
Astrologer:- Come my child, your name is Suraj khanna,
Khanna:- yes, indeed!
Astrologer:- You have two sons and two daughters
Khanna:- How true!
Astrologer:- You brought four kilos of sugar and five kilos of rice yesterday, and there are five members of your household remaining after your parents passed away.
Khanna:- I am impressed. But can you tell me about my future?
Astrologer:- Okay then. Come back with your horoscope booklet tomorrow. And, here, take your ration card back

Questions:
1) Mr Khanna was surprised at the astrologer's prediction. What made him feel so?
2) Why astrologer wasn't able to predict Mr Khanna's future?
In the conversation given above, who do you think has better common sense?

Answers:
1) Mr Khanna was surprised as astrologer very accurately said his name, details of family members and even details of grocery brought by him on previous day.
2) Astrologer wasn't able to predict the future as Mr Khanna hadn't brought his horoscope.
3) Astrologer has better common sense. He was able to impress Mr Khanna using his ration card.

****

Dr. B.R. Ambedkar

Questions and Answers
1.Ambedkar spent most of his life by ______
a) purchasing books
b) attending conferences
c) reading books d) importing books
Ans:(c) reading books
2. Pick out the word in the first paragraph which means 'a quality that makes a person or athing different from another.
Ans: Trait
3.How did the fourteenth amendment of the American Constitution benefit the Black Americans?
Ans: The fourteenth amendment of the American cotitution gave freedom to the Block Americ
4. What did Mahatma Phule work for?
Ans: Mahatma Phule was a devotee and worked for classless society and women's upliftment.
5. Mookanayak, Bahishkrit Bharat and Samata were ______
a) Voice mails b) News papers
c) Political parties
Ans: (b) News paper.
6. Gandhiji termed the depressed classes as ______
Ans: Harijan

Share Your Responses
1. Draft is a banking term. How is the word used in the context of this lesson?
Answer: Here the word 'Draft' is used as the meaning of make, write,
Drafting committee means a committee set up to draft (write) the constitution of India.
2. Dr. Ambedkar was not in the Congress party. Yet he was made the chairman of the drafting committee. Why?
Answer: He was made the chairman of the drafting committee because of his undying faith in the dignity of leadership of the Indian National Congress and his capability of doing the task.
3. He raised it 'brick by brick'. In this context, what was raised?
Answer: In this context, he raised brick by brick was the examples and experiences of other nations and the distinctive needs of our society, which now stands as the Fundamental Rights in the constitution of Indian. *(Contd.....)*

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

Chapter -3
ELECTROCHEMISTRY


24. What is Standard Hydrogen Electrode Potential?
Ans:- Standard Hydrogen Electrode Potential is the potential developed when hydrogen gas at one atmospheric pressure is passed through a solution containing hydrogen ions of unit activity.

25. Write a brief note on Sacrificial Protection method of preventing corrosion.
Ans:- Sacrificial Protection - In this method, the surface of the metal to be protected (Eg: iron) is coated with a more reactive metal i.e., metal which occupies a position lower in the electrochemical series than the metal to be protected. Being more reactive, it will take part in the redox reaction and will save the other metal. In other words, it will sacrifice itself for the sake of the metal to be protected. Eg:- iron is generally coated with zinc and this process is called galvanization. Zinc is more reactive than iron as it evident from the E° values.

$$Zn^{2+}(aq) + 2e^- \rightleftharpoons Zn(s); E^\circ = -0.76\,V$$

$$Fe^{2+}(aq) + 2e^- \rightleftharpoons Fe(s); E^\circ = -0.44\,V$$

In case iron has been galvanized, then zinc will be corroded instead of iron because it is more reactive than iron. It will change to the basic zinc carbonate $ZnCO_3.Zn(OH)_2$, a compound which is formed in the same way as hydrated ferric oxide. Sometimes scratches appear on the surface of iron galvanized with zinc. Even then, zinc will be corroded in preference to iron because there will be a competition between both these metals to take part in oxidation half reaction or in competitive oxidation reaction. Atoms of zinc will be oxidized in preference to the iron atoms.



Protection of rusting of iron by zinc

Sometimes surface of iron is coated with tin metal and this process is known as tinning or tin plating. It may be noted that tin is not as effective as zinc since it lies above iron in the electrochemical series as it is evident from its Eo value.

$$Sn^{2+}(aq) + 2e^- \rightleftharpoons Sn(s); E^\circ = -0.14\,V$$

Thus, tin will be effective in checking the rusting of iron as long as the surface of iron is not exposed to the atmosphere. However, If scratches are formed on the surface, then iron will participate in the redox reaction being more reactive than tin and rusting of iron will re-start. This clearly shows that galvanization should be preferred to tinning to check the rusting of iron.

26. What is the significance of the electrochemical series?
Ans:- The significance of the electrochemical series are as follows- (1) The metals on the top of the list are good reducing agents and the metals at the bottom of the list are good oxidising agents.
(2) A metal in the electrochemical series can displace another metal below it in the series, from a solution of the salt.
(3) Metals which are above hydrogen in the list can liberate hydrogen gas from dilute acids whereas metals which come below hydrogen cannot.
(4) The list helps in the selective discharge of different elements from a mixture of their ions


27. Give reason, why Copper cannot displace hydrogen from acid?
Ans:- Copper is found to be below hydrogen in the electrochemical series, hence the reduction potential of Cu is more than that of hydrogen. So, Cu cannot reduce H^+ ions to hydrogen. Thus Cu does not displace hydrogen from an acid.

28. Give reason, why zinc displaces hydrogen from acid?
Ans:- Zinc is found to be situated above hydrogen in the electrochemical series, hence the reduction potential of hydrogen is more than that of Zinc. Hence H^+ ions are easily reduced to hydrogen. Zinc gets oxidized to Zn^{2+} ions. Thus zinc displaces hydrogen from HCl.

$$Zn \rightarrow Zn^{2+} + 2e^-, \quad 2H^+ + 2e \rightarrow H_2 \uparrow$$

29. Give reason, why zinc displaces copper form $CuSO_4$?
Ans:- Zinc is found above copper in the electrochemical series, so the reduction potential of copper is higher than that of zinc.
Hence the copper ions are more easily reduced to Cu and Zn is more easily oxidized to Zn^{2+} giving electrons for reduction. Hence, zinc displaces copper form $CuSO_4$.

30. Write a brief note on the Electrical protection method of preventing corrosion.
Ans:- Electrical protection (cathodic protection) - This method is used for the protection of submerged structures, ships and underground pipes.



Protection of underground pipe or tank by cathodic protection

$$Mg^{2+}(aq) + 2e^- \rightarrow Mg(s); E^\circ = -2.37\,V$$

$$Fe^{2+}(aq) + 2e^- \rightarrow Fe(s); E^\circ = -0.44\,V$$

In this method, the exposed surface of iron is protected by connecting it to some more active metal such as magnesium, zinc or aluminium. The more active metal acts as anode and loses electrons in preference to iron. *(Contd....)*

ವಿವಿಧ ಸಮಸ್ಯೆಗಳ 3,604 ದೂರು ದಾಖಲು • 1,488 ದೂರು ಇತ್ಯರ್ಥ

ಕಾರ್ಮಿಕರಿಗೆ ಭಾರಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಾರ್ಮಿಕ ವಂಚನೆ ಪ್ರಕರಣಗಳು ಹೆಚ್ಚುತ್ತಿದ್ದು, ವೇತನ ತಾರತಮ್ಯ, ವಂಚನೆ, ಕೆಲಸದ ಸ್ಥಳದಲ್ಲಿ ಹಿಂಸೆ ಸೇರಿ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ 'ಇಂಡಿಯಾ ಲೇಬರ್ ಲೈನ್' ಉಚಿತ ಸಹಾಯವಾಣಿಯಡಿ ಈವರೆಗೆ 3,604 ದೂರುಗಳು ದಾಖಲಾಗಿವೆ.

ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ವರ್ಕಿಂಗ್ ಪೀಪಲ್ಸ್ ಚಾರ್ಟರ್ (ಡಬ್ಲ್ಯುಪಿಸಿ) ಮತ್ತು ಆಜೀವಿಕ ಬ್ಯೂರೊ ಸಂಸ್ಥೆ ಜಂಟಿಯಾಗಿ 2021ರ ಜುಲೈನಲ್ಲಿ ಈ ಸಹಾಯವಾಣಿ ಪ್ರಾರಂಭಿಸಿವೆ. ಇದು ಕಾರ್ಮಿಕರಿಗಾಗಿಯೇ ರೂಪಿಸಿರುವ ಸಹಾಯವಾಣಿಯಾಗಿದ್ದು, ಇದಕ್ಕೆ ಪ್ರತಿನಿತ್ಯ ಸರಾಸರಿ 10ರಿಂದ 15 ಕರೆಗಳು ಕಾರ್ಮಿಕರಿಂದ ಬರುತ್ತಿವೆ. ಇಂಡಿಯಾ ಲೇಬರ್ ಲೈನ್ ತಂಡವು ಅವುಗಳಲ್ಲಿನ ಸತ್ಯಾಸತ್ಯತೆ ಪರಿಶೀಲಿಸಿ, ದೂರುಗಳನ್ನು ದಾಖಲಿಸಿಕೊಳ್ಳುತ್ತಿದೆ. ಈ ತಂಡವು ವಕೀಲರು



ಸೇರಿ ಕ್ಷೇತ್ರ ತಜ್ಞರನ್ನು ಒಳಗೊಂಡಿದೆ.

ನಗರದಲ್ಲಿ ದಾಖಲಾಗಿರುವ ದೂರುಗಳಲ್ಲಿ 1,488 ದೂರುಗಳನ್ನು ಇಂಡಿಯಾ ಲೇಬರ್ ಲೈನ್ ತಂಡವು ಬಗೆಹರಿಸಿದ್ದು, ₹3.50 ಕೋಟಿ ವಂಚನೆ ಹಣವನ್ನು 4,400 ಕಾರ್ಮಿಕ ಕುಟುಂಬಗಳಿಗೆ ಒದಗಿಸಿದೆ. ಕೆಲ ಪ್ರಕರಣಗಳಲ್ಲಿ ಹಲವು ಕುಟುಂಬಗಳು ವಂಚನೆಗೆ ಒಳಗಾಗಿದ್ದವು.

ಎಲ್ಲ ಸೇವೆ ಉಚಿತ: ಈ ಸಹಾಯವಾಣಿಯಡಿ ಹುಬ್ಬಳ್ಳಿ, ಮೈಸೂರು, ಮಂಗಳೂರು, ತುಮಕೂರು ಹಾಗೂ ಬೆಳಗಾವಿ ಜಿಲ್ಲೆಯಲ್ಲಿಯೂ ಸೇವೆ ನೀಡಲಾಗುತ್ತಿದೆ. ಭವಿಷ್ಯ ನಿಧಿ (ಪಿಎಫ್) ಮತ್ತು ಗ್ರಾಚ್ಯುಟಿ (ಉಪಧನ) ಸಮಸ್ಯೆ, ಅಧಿಕ ಅವಧಿ ದುಡಿಮೆ, ಅಪಘಾತ ಪರಿಹಾರ ನಿರಾಕರಣೆ ಹಾಗೂ ವೇತನ ವಿಳಂಬದ ಬಗ್ಗೆಯೂ ಹೆಚ್ಚಿನ ಕಾರ್ಮಿಕರು ಸಹಾಯವಾಣಿ ಸಂಪರ್ಕಿಸಿದ್ದಾರೆ ಎಂದು ಸಹಾಯವಾಣಿಯ ಸಹಾಯಕ ರಾಜ್ಯ ಸಂಯೋಜಕಿ ಗಾಯತ್ರಿ ರಘು ಕುಮಾರ್ ತಿಳಿಸಿದ್ದಾರೆ.

ಹೊಟ್ಟೆ ಪಾಡಿಗಾಗಿ ಕೆಲಸ ಹುಡುಕಿಕೊಂಡು ಕಾರ್ಮಿಕರು ಸಾಕಷ್ಟು ಸಂಖ್ಯೆಯಲ್ಲಿ ಬೆಂಗಳೂರಿಗೆ ಬರುತ್ತಿದ್ದಾರೆ. ಅವರಲ್ಲಿ ಕೆಲವರು ಮಾಲೀಕರಿಂದ ವಂಚನೆಗೆ ಒಳಗಾಗುತ್ತಿದ್ದಾರೆ. ಅಂತಹ ಪ್ರಕರಣಗಳಲ್ಲಿ ಸಾವಿರಕ್ಕೂ ಅಧಿಕ ಪ್ರಕರಣಗಳನ್ನು ಕಾನೂನಿನ ಅಡಿ ಇತ್ಯರ್ಥ ಮಾಡಲಾಗಿದೆ. ಎಲ್ಲ ಸೇವೆಯೂ ಉಚಿತವಾಗಿದ್ದು, ಕಾರ್ಮಿಕರಿಗೆ ನ್ಯಾಯ ಒದಗಿಸಲು ನಾವು ಶ್ರಮಿಸುತ್ತಿದ್ದೇವೆ' ಎಂದು ಹೇಳಿದ್ದಾರೆ.

ಯಾರೆಲ್ಲ ಕರೆ ಮಾಡಬಹುದು?

'ಅಸಂಘಟಿತ ವಲಯಗಳಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರ, ಮನೆ ಕೆಲಸ, ಸ್ವಚ್ಛತೆ, ಗಾರ್ಮೆಂಟ್ಸ್, ಸಣ್ಣ ಕೈಗಾರಿಕೆಗಳು, ಕಾರ್ಖಾನೆಗಳು, ಭದ್ರತೆ, ಸೇವಾ ವಲಯಗಳಾದ ನರ್ಸಿಂಗ್, ಹೋಮ್ ನರ್ಸಿಂಗ್ ಹಾಗೂ ಇನ್ನಿತರೆ ಅಸಂಘಟಿತ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ಈ ಸಹಾಯವಾಣಿಗೆ ಕರೆ ಮಾಡಬಹುದು. ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ಸಹಾಯವಾಣಿ ಸಕ್ರಿಯವಾಗಿ ಇರಲಿದೆ. ಬೇರೆ ಅವಧಿಯಲ್ಲಿ ಕರೆ ಮಾಡಿದರೂ, ಕಾರ್ಯಾವಧಿಯಲ್ಲಿ ಸಂಪರ್ಕಿಸಲಾಗುತ್ತದೆ. ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸಹಾಯವಾಣಿಯನ್ನೂ ರೂಪಿಸಲಾಗಿದೆ' ಎಂದು ಸಹಾಯವಾಣಿಯ ರಾಜ್ಯ ಸಂಯೋಜಕ ಮುನಿರಾಜು ಟಿ. ತಿಳಿಸಿದ್ದಾರೆ.

ಉಚಿತ ಸಹಾಯವಾಣಿ ಸಂಖ್ಯೆ: 18008339020, ಬೆಂಗಳೂರು ನಗರದ ಸಹಾಯವಾಣಿ: 080 46805780

ಇಂಗ್ಲಿಷ್ ಮಾಧ್ಯಮ ನಿರ್ಧಾರ ಹಿಂಪಡೆಯಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ಸಾವಿರ ಸರ್ಕಾರಿ ಶಾಲೆಗಳಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಇಂಗ್ಲಿಷ್ ಮಾಧ್ಯಮ ತರಗತಿಗಳ ಆರಂಭಕ್ಕೆ ಸರ್ಕಾರ ಸಿದ್ಧತೆ ನಡೆಸಿದೆ. ಇಂತಹ ನಿರ್ಧಾರಗಳನ್ನು ಮರುಪರಿಶೀಲನೆ ನಡೆಸಬೇಕು ಎಂದು ಸಾಹಿತಿಗಳು, ಶಿಕ್ಷಣ ತಜ್ಞರು ಒತ್ತಾಯಿಸಿದರು.

ಒಂದರಿಂದ ಐದನೇ ತರಗತಿವರೆಗೆ ಮಾತೃಭಾಷೆಯಲ್ಲೇ ಶಿಕ್ಷಣ ನೀಡುವುದನ್ನು ಕಡ್ಡಾಯಗೊಳಿಸಬೇಕು. ಸರ್ಕಾರಿ ಶಾಲೆಗಳಲ್ಲಿ ಕಾರ್ಪೊರೇಟ್ ಕಂಪನಿಗಳು ಸಾಮಾಜಿಕ ಕಾರ್ಯಗಳಿಗೆ ಮೀಸಲಿಡುವ ನಿಧಿ ಬಳಸಿಕೊಂಡು ಸರ್ಕಾರಿ ಶಾಲಾ ಜಾಗದಲ್ಲಿ ಆಂಗ್ಲ ಮಾಧ್ಯಮ ಶಾಲೆಗಳನ್ನು ನಡೆಸುವುದು ಸಮಂಜಸವಲ್ಲ. ಇಂತಹ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವ ಅಧಿಕಾರವೂ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನೀಡಲಾಗಿದೆ. ಇಂತಹ ನಿರ್ಧಾರಗಳಿಂದ ಸರ್ಕಾರ ಹಿಂದೆ ಸರಿಯಬೇಕು. ಕನಿಷ್ಠ ಐದನೇ ತರಗತಿಯವರೆಗೆ ಮಾತೃಭಾಷಾ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು ಎಂದು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ, ಜಿ. ರಾಮಕೃಷ್ಣ, ಅಶ್ವತ್ಥನಾರಾಯಣ, ರಾ.ನಂ. ಚಂದ್ರಶೇಖರ, ಸುದರ್ಶನ, ಸಾಹಿತಿ ವಸುಂಧರಾ ಭೂಪತಿ, ನಿರ್ದೇಶಕ ಟಿ.ಎಸ್. ನಾಗಾಭರಣ, ಪತ್ರಕರ್ತ ಬಿ.ಎಂ. ಹನೀಫ್, ನಿವೃತ್ತ ಅಧಿಕಾರಿ ವಿಶುಕುಮಾರ್ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

2015ರಲ್ಲಿ ವಿಧಾನಸಭೆ, ವಿಧಾನ ಪರಿಷತ್‌ನಿಂದ ಅಂಗೀಕಾರಗೊಂಡು ರಾಷ್ಟ್ರಪತಿ ಒಪ್ಪಿಗೆ ದೊರಕದೇ ನನೆಗುದಿಗೆ ಬಿದ್ದಿರುವ ಮಾತೃಭಾಷಾ ಮಾಧ್ಯಮ ಕಡ್ಡಾಯಗೊಳಿಸುವ ಮಸೂದೆಗೆ ಒಪ್ಪಿಗೆ ಪಡೆಯಬೇಕು. ಅದಕ್ಕಾಗಿ ತಜ್ಞರನ್ನು ಒಳಗೊಂಡ ಅಧಿಕಾರಿಗಳ ನಿಯೋಗವನ್ನು ರಾಷ್ಟ್ರಪತಿ ಬಳಿಗೆ ಕಳುಹಿಸಬೇಕು. ಆಕ್ಷೇಪಣೆಗಳಿಗೆ ಸಮರ್ಪಕ ಉತ್ತರ ನೀಡುವ ಮೂಲಕ ಒಪ್ಪಿಗೆ ಪಡೆಯಲು ಪ್ರಯತ್ನಿಸಬೇಕು ಎಂದರು.

ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಒಂದು ಸಾವಿರ ದ್ವಿಭಾಷಾ ಮಾಧ್ಯಮ ಶಾಲೆಗಳನ್ನು ಆರಂಭಿಸುವ ತೀರ್ಮಾನವನ್ನು ಕೈಬಿಡಬೇಕು. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸರ್ಕಾರಕ್ಕೆ ಸಲ್ಲಿಸಿರುವ ಶಾಲಾ ಸಬಲೀಕರಣ ವರದಿಯನ್ನು ಅಂಗೀಕರಿಸಿ, ಅನುಷ್ಠಾನ ಮಾಡಬೇಕು ಎಂದು ಒತ್ತಾಯಿಸಿದರು.

ಶಿಕ್ಷಣ ಮಾಧ್ಯಮ, ಶಾಲೆಗಳ ಸಬಲೀಕರಣ ಹಾಗೂ ಅಭಿವೃದ್ಧಿ ಕುರಿತು ಚರ್ಚಿಸಲು ಮುಖ್ಯಮಂತ್ರಿ ಬಳಿಗೆ ಶೀಘ್ರ ನಿಯೋಗ ತೆರಳುವುದಾಗಿ ಮಾಹಿತಿ ನೀಡಿದರು.



ಯಲಹಂಕ ಸಮೀಪದ ಶ್ರೀರಾಮನಹಳ್ಳಿಯಲ್ಲಿರುವ ಕೇಂದ್ರ ಗ್ರಾಮಾಭಿವೃದ್ಧಿ ಮಂಡಳಿ ಹಾಗೂ ಪೀಪಲ್ ಟ್ರಸ್ಟ್ ಸೇವಾಕೇಂದ್ರದ ಆಶ್ರಯದಲ್ಲಿ ಏರ್ಪಡಿಸಿದ್ದ ಸಾಮೂಹಿಕ ವಿವಾಹದಲ್ಲಿ 22 ಜೋಡಿ ವಧು–ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು

ನಟ ಅಂಬರೀಶ್ ಜನ್ಮದಿನ; ಸಮಾಧಿಗೆ ಪೂಜೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಟ, ದಿವಂಗತ ಅಂಬರೀಶ್ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಬುಧವಾರ(ಮೇ 29) ನಟಿ ಸುಮಲತಾ ಅಂಬರೀಶ್, ಪುತ್ರ ಅಭಿಷೇಕ್ ಅಂಬರೀಶ್ ಹಾಗೂ ಅಭಿಷೇಕ್ ಪತ್ನಿ ಅವಿವಾ ಬಿದ್ದಪ್ಪ ಕಂಠೀರವ ಸ್ಟುಡಿಯೊದಲ್ಲಿರುವ ಅಂಬರೀಶ್ ಸಮಾಧಿಗೆ ಪೂಜೆ ಸಲ್ಲಿಸಿದರು.

ಅಂಬರೀಶ್ ಅವರ 72ನೇ ಜನ್ಮದಿನದ ಅಂಗವಾಗಿ ಸಮಾಧಿ ಮುಂದೆ ಅಂಬರೀಶ್ ಅವರಿಗೆ ಪ್ರಿಯವಾಗಿದ್ದ ಖಾದ್ಯಗಳನ್ನು ಎಡೆ ಇಟ್ಟು ಕುಟುಂಬದ ಸದಸ್ಯರು ಪುಷ್ಪನಮನ ಸಲ್ಲಿಸಿದರು. ಸಾವಿರಾರು ಅಭಿಮಾನಿಗಳು ಸಮಾಧಿಗೆ ಭೇಟಿ ನೀಡಿ ನಮನ ಸಲ್ಲಿಸಿದರು. ಸ್ಥಳದಲ್ಲಿ ಅಭಿಮಾನಿಗಳಿಗೆ ಅನ್ನದಾನವನ್ನೂ ಏರ್ಪಡಿಸಲಾಗಿತ್ತು.

ಈ ವೇಳೆ ಮಾತನಾಡಿದ ಸುಮಲತಾ ಅಂಬರೀಶ್, 'ಅಂಬರೀಶ್ ನಮ್ಮನ್ನು ಅಗಲಿ ಆರು ವರ್ಷ ಉರುಳಿದೆ. ಆದರೂ ನಮ್ಮ ಮನಸ್ಸಿನಲ್ಲಿ, ಪ್ರೀತಿಸುವ ಅಭಿಮಾನಿಗಳ ಮನದಲ್ಲಿ ಶಾಶ್ವತವಾಗಿ ಇನ್ನೂ ಇದ್ದಾರೆ. ಆ ಪ್ರೀತಿಯಲ್ಲೇ ಅಂಬರೀಶ್ ಅವರನ್ನು ಕಾಣುತ್ತೇನೆ. ಅಂಬರೀಶ್ ಅವರು ಆಹಾರ ಪ್ರಿಯ. ಅವರಿಗೆ ಇಷ್ಟವಾದ ತಿಂಡಿ–ತಿನಿಸುಗಳನ್ನು ಜನ್ಮದಿನದಂದು ಮಾಡುತ್ತಿದ್ದೆವು. ಇದೀಗ ಅವುಗಳನ್ನು ಸಮಾಧಿ ಮುಂದೆ ಎಡೆ ಇಟ್ಟಿದ್ದೇವೆ' ಎಂದರು.

ಅಧಿಕಾರಿಗಳ ವಿರುದ್ಧ ಕ್ರಮ: ಪ್ರಿಯಾಂಕ್

ಬೆಂಗಳೂರು: 'ಗ್ರಾಮೀಣ ಜನವಸತಿ ಪ್ರದೇಶಗಳಿಗೆ ಪೂರೈಕೆಯಾಗುತ್ತಿರುವ ಕುಡಿಯುವ ನೀರು ಕಲುಷಿತಗೊಳ್ಳುವ ಪ್ರಕರಣಗಳು ಪುನಾರಾವರ್ತನೆಯಾದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಈ ಬಗ್ಗೆ ಪತ್ರ ಬರೆದಿರುವ ಸಚಿವರು, 'ಕಲುಷಿತ ನೀರು ಸೇವನೆಯಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿದೆ. ಇಂತಹ ಪ್ರಕರಣಗಳನ್ನು ತಡೆಯುವ ನಿಟ್ಟಿನಲ್ಲಿ ತಕ್ಷಣ ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದ್ದಾರೆ.

ಇಂದು 'ಹಾಸನ ಚಲೋ' 'ಸಮುದಾಯ' ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನದ ಪ್ರಗತಿಪರ ಸಂಘಟನೆಗಳ ಒಕ್ಕೂಟ ಮೇ 30ರಂದು ಹಮ್ಮಿಕೊಂಡಿರುವ 'ಹಾಸನ ಚಲೋ' ಕಾರ್ಯಕ್ರಮಕ್ಕೆ ಸಮುದಾಯ ಬೆಂಗಳೂರು ಹಾಗೂ ಸಮುದಾಯ ಕರ್ನಾಟಕ ಬೆಂಬಲ ಸೂಚಿಸಿವೆ.

ಸಂಸದ ಪ್ರಜ್ವಲ್ ರೇವಣ್ಣ ತನ್ನ ಬಲಾಢ್ಯ ಕುಟುಂಬದ ಕಾರಣಕ್ಕಾಗಿ ದೊರೆತಿರುವ ಜಾತಿಬಲ, ಹಣಬಲ ಮತ್ತು ಅಧಿಕಾರದ ದರ್ಪದಿಂದ ಮಹಿಳೆಯರನ್ನು ದುರ್ಬಳಕೆ ಮಾಡಿಕೊಂಡು ಕ್ರಿಮಿನಲ್ ಸ್ವರೂಪದ ಲೈಂಗಿಕ ಹಿಂಸಾಚಾರಕ್ಕೆ ಗುರಿಪಡಿಸಿದ್ದನ್ನು ಮತ್ತು ಅದನ್ನು ವಿಡಿಯೊ ಚಿತ್ರೀಕರಣ ಮಾಡಿಕೊಂಡಿರುವುದು ಖಂಡನೀಯ ಎಂದು ಸಮುದಾಯ ಬೆಂಗಳೂರು ಹಾಗೂ ಸಮುದಾಯ ಕರ್ನಾಟಕ ತಿಳಿಸಿದೆ.

ರಾಜಕೀಯವಾಗಿ ಇಡೀ ದೇಶದಲ್ಲೇ ಪ್ರಭಾವಶಾಲಿಯಾಗಿರುವ ಈ ಕುಟುಂಬದ ವಿರುದ್ದ ಈಗ ನಡೆಯುತ್ತಿರುವ ತನಿಖೆ ಏನೇನೂ ಸಾಲದು. ಪ್ರಜ್ವಲ್ ರೇವಣ್ಣನ ಪಾಸ್‌ಪೋರ್ಟ್, ವೀಸಾ ರದ್ದುಗೊಳಿಸಿ, ಆತ ಅಡಗಿಕೊಂಡಿರುವ ದೇಶದ ಕಾನೂನು ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಆತನನ್ನು ಬಂಧಿಸಿ ನಮ್ಮ ನೆಲದ ಕಾನೂನಿಗೆ ಒಪ್ಪಿಸಬೇಕು. ಈ ಕೆಲಸವನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಇಚ್ಛಾಶಕ್ತಿಯಿಂದ ಮಾಡಬೇಕು ಎಂದು ಆಗ್ರಹಿಸಿದೆ.

ದೂರುದಾರ ಮಹಿಳೆಯರ ಗೋಪ್ಯತೆ ಕಾಪಾಡಿ, ಅವರಿಗೆ ಆಪ್ತ ಸಮಾಲೋಚನೆ, ಕಾನೂನು ಸಲಹೆ, ರಕ್ಷಣೆ, ಪುನರ್ವಸತಿ ಮತ್ತು ಪರಿಹಾರ ಒದಗಿಸಬೇಕು. ನೊಂದ ಮಹಿಳೆಯರ ಫೋಟೊ, ವಿಡಿಯೋಗಳನ್ನು ಬಳಸದಂತೆ ಮಾಧ್ಯಮಗಳಿಗೆ ಸೂಚನೆ ನೀಡಬೇಕು. ತಪ್ಪಿದ್ದಲ್ಲಿ ಅಂತಹ ಮಾಧ್ಯಮ ಅಥವಾ ವ್ಯಕ್ತಿಗಳ ವಿರುದ್ದ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

'ಪ್ರಜ್ವಲ್ ರೇವಣ್ಣನಿಂದ ಪೀಡನೆಗೆ ಒಳಗಾದ ಯುವತಿಯರನ್ನು ಹಾಸ್ಯಕ್ಕೆ ಬಳಸುವುದು, ಸಂತ್ರಸ್ತ ಮಹಿಳೆಯರ ಹೆಸರಿನಲ್ಲಿ ಜೋಕುಗಳನ್ನು ಹರಿಬಿಡುವ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಸಮುದಾಯ ಬೆಂಗಳೂರು ಕಾರ್ಯದರ್ಶಿ ಕಾವ್ಯ ಅಚ್ಯುತ್, ಸಮುದಾಯ ಕರ್ನಾಟಕ ಕಾರ್ಯದರ್ಶಿ ಮನೋಜ್ ವಾಮಂಜೂರು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿಗೆ ಪತ್ರ ಬರೆದ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ

'ಕಾವೇರಿ ಕಲುಷಿತ: ಪರಿಶೀಲನೆಗೆ ತಂಡ ರಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನದಿಗೆ ಕಲ್ಮಶ ನೀರು ಮಿಶ್ರಣವಾಗುತ್ತಿದ್ದು, ಅದೇ ನೀರನ್ನು ಕುಡಿಯಲು ಪೂರೈಸಲಾಗುತ್ತಿದೆ ಎನ್ನಲಾಗಿದ್ದು, ಪರಿಶೀಲನೆಗೆ ತಾಂತ್ರಿಕ ಪರಿಣಿತರ ತನಿಖಾ ತಂಡ ರಚನೆ ಮಾಡಬೇಕು. ತಂಡದ ವರದಿ ಆಧಾರದಲ್ಲಿ ಸರ್ಕಾರ ಸೂಕ್ತ ಕ್ರಮ ವಹಿಸಬೇಕು ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಈ ಕುರಿತು ಗಮನಹರಿಸಬೇಕು. ಪರಿಸರ, ಕೈಗಾರಿಕೆ, ನೀರಾವರಿ,



ದಿನೇಶ್ ಗೂಳಿಗೌಡ

ಅರಣ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಇರುವ ತಜ್ಞರ ಸಮಿತಿಯನ್ನು ರಚಿಸಬೇಕು ಎಂದು ಅವರು ಕೋರಿದ್ದಾರೆ.

ಬೆಂಗಳೂರು ನಗರಕ್ಕೆ ಕಾವೇರಿ ನದಿಯಿಂದಲೇ ಹೆಚ್ಚಿನ ನೀರು ಪೂರೈಕೆಯಾಗುತ್ತಿದೆ. ಕುಡಿಯುವ ನೀರು ಪೂರೈಕೆಗಾಗಿ 19 ಟಿಎಂಸಿ ಅಡಿ ನೀರು ಬಳಸಲು ಸುಪ್ರೀಂಕೋರ್ಟ್ ಸಹ ಅನುಮತಿ ನೀಡಿದೆ. ಪ್ರಸ್ತುತ ಬೆಂಗಳೂರು ಜಲಮಂಡಳಿಯು ಕಾವೇರಿ ನೀರು ಸರಬರಾಜು ಯೋಜನೆಯ ಮೂಲಕ ನಿತ್ಯ 144 ಕೋಟಿ ಲೀಟರ್ ನೀರು ಪೂರೈಸುತ್ತಿದೆ. ಬೆಂಗಳೂರು ಗ್ರಾಮಾಂತರ, ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ ಜಿಲ್ಲೆಯ ಜನರಿಗೂ ಕಾವೇರಿ ನೀರು ಸರಬರಾಜು ಮಾಡಲಾಗುತ್ತಿದೆ.

ಕುಶಾಲನಗರ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಮೈಸೂರು, ಮಂಡ್ಯ, ಶ್ರೀರಂಗಪಟ್ಟಣ, ನಂಜನಗೂಡು, ಟಿ.ನರಸೀಪುರ, ಕೊಳ್ಳೇಗಾಲ ಮುಂತಾದ ಪ್ರಮುಖ ನಗರ-ಪಟ್ಟಣಗಳ ಭಾಗದಲ್ಲಿ ಹಲವು ಕಾರ್ಖಾನೆಗಳ ತ್ಯಾಜ್ಯವನ್ನು ಸರಿಯಾಗಿ ಸಂಸ್ಕರಿಸದೆ ನೇರವಾಗಿ ನದಿಗೆ ಹರಿಯಬಿಡಲಾಗುತ್ತಿದೆ. ಒಳಚರಂಡಿ ನೀರಿನಿಂದಲೂ ಕಲುಷಿತಗೊಂಡು ಮಲಿನಗೊಳ್ಳುತ್ತಿದೆ. ಇದು ಜಲಚರಗಳ ಸಾವಿಗೂ ಕಾರಣವಾಗಿದೆ. ಹಲವು ಕೈಗಾರಿಕೆಗಳ ತ್ಯಾಜ್ಯದಿಂದ ನದಿಯು ನೈಸರ್ಗಿಕ ಗುಣ ಕಳೆದುಕೊಳ್ಳುತ್ತಿದ್ದು, ಅಪಾಯಕಾರಿಯಾಗುತ್ತಿದೆ ಎಂದಿದ್ದಾರೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ 2023ರಲ್ಲಿ ನದಿಗಳ ಮಾಲಿನ್ಯದ ಬಗ್ಗೆ ಬಿಡುಗಡೆ ಮಾಡಿದ ವರದಿಯಲ್ಲಿ ಕಾವೇರಿ ಕೂಡ ಸೇರಿದೆ. ಸರ್ಕಾರ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸುವ ಮೂಲಕ ಆರೋಗ್ಯವನ್ನು ಕಾಪಾಡಬೇಕು. ನದಿ ನೀರು ಸ್ವಚ್ಛವಾಗಿ ಜಲಚರಗಳು, ನದಿ ನೀರು ಅವಲಂಬಿತ ಪ್ರದೇಶಗಳ ಜನರ ಆರೋಗ್ಯ ಕೂಡ ಸುಧಾರಿಸಬೇಕು ಎಂದು ಮನವಿ ಮಾಡಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ದೆಹಲಿ ನಿವಾಸದಲ್ಲಿ ಚರ್ಚೆ

ಅಭ್ಯರ್ಥಿ ಆಯ್ಕೆ: 'ಕೈ' ನಾಯಕರ ಸಭೆ

ಪರಿಷತ್ ಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ 11 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಕನಿಷ್ಠ ಏಳು ಸ್ಥಾನಗಳನ್ನು ಗೆಲ್ಲುವ ಅವಕಾಶವಿದ್ದು, ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ದೆಹಲಿ ನಿವಾಸದಲ್ಲಿ ಬುಧವಾರ ರಾತ್ರಿ ಸಭೆ ನಡೆಯಿತು.

ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಭಾಗವಹಿಸಿದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಏಳು ಸ್ಥಾನಗಳಿಗೆ ಕಾಂಗ್ರೆಸ್‌ನಿಂದ 300ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದು, ಹಂಚಿಕೆ ಮಾನದಂಡವನ್ನು ಪಕ್ಷದ ಹೈಕಮಾಂಡ್ ನಾಯಕರು ತೀರ್ಮಾನಿಸಲಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ಈಗಾಗಲೇ ಹೇಳಿದ್ದಾರೆ.

ಒಂದು ಸ್ಥಾನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಡಾ.ಯತೀಂದ್ರ ಅವರನ್ನು ಅಭ್ಯರ್ಥಿಯಾಗಿ ಘೋಷಿಸುವ ಸಾಧ್ಯತೆ ಇದೆ. ಯತೀಂದ್ರ ಅವರು 2023ರ ವಿಧಾನಸಭೆ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರಿಗಾಗಿ ವರುಣಾ ಕ್ಷೇತ್ರವನ್ನು ತ್ಯಾಗ ಮಾಡಿದ್ದರು. ಉಳಿದಂತೆ, ಸಚಿವ ಎನ್.ಎಸ್. ಬೋಸರಾಜು ಅವರ ಪುನರಾಯ್ಕೆ ಬಹುತೇಕ ಖಚಿತ ಎನ್ನಲಾಗುತ್ತಿದೆ.

ಪಕ್ಷಕ್ಕಾಗಿ ದುಡಿದವರಿಗೆ ಅವಕಾಶ ಕಲ್ಪಿಸಬೇಕು: ಪರಮೇಶ್ವರ

'ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ನನ್ನ ಹೇಳಿಕೆಯನ್ನು ಯಾರೂ ತಪ್ಪಾಗಿ ಅರ್ಥೈಸಿಕೊಳ್ಳಬೇಕಾದ ಅಗತ್ಯ ಇಲ್ಲ. ಪ್ರಮುಖರ ಜೊತೆ ಸಮಾಲೋಚಿಸಿ ಆಯ್ಕೆ ಮಾಡುವುದು ಪ್ರಕ್ರಿಯೆ. ಕೆಪಿಸಿಸಿ ಅಧ್ಯಕ್ಷನಾಗಿ ಕೆಲಸ ಮಾಡಿದ ಅನುಭವದಿಂದ ಆ ಮಾತು ಹೇಳಿದ್ದೇನೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯಾರು ಪಕ್ಷಕ್ಕಾಗಿ ದುಡಿದಿದ್ದಾರೋ, ಯಾವ ಸಮುದಾಯ ಪಕ್ಷದ ಜೊತೆ ನಿಂತಿದೆಯೋ ಅಂಥವರಿಗೆ ಅವಕಾಶ ಕಲ್ಪಿಸಬೇಕು. ಪಕ್ಷಕ್ಕಾಗಿ ಕೆಲಸ ಮಾಡಿದವರ ಜೊತೆ, ಸಮಾಲೋಚಿಸಿ ಅಭಿಪ್ರಾಯ ಪಡೆಯಬೇಕೆಂದು ನಾನು ಸಲಹೆ ನೀಡಿದ್ದೇನೆ' ಎಂದು ಸ್ಪಷ್ಟಪಡಿಸಿದರು.

'ವಿಧಾನ ಪರಿಷತ್‌ನ 11 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಏಳು ಸ್ಥಾನಗಳು ನಮ್ಮ ಪಕ್ಷಕ್ಕೆ ಬರಲಿವೆ. ಆಯ್ಕೆ ಮಾಡುವುದು ಕಷ್ಟದ ಕೆಲಸ. ಉನ್ನತಮಟ್ಟದ ಸಮಿತಿ ರಚಿಸಿ, ಚರ್ಚಿಸಿದರೆ ಸಲಹೆಗಳು ಬರುತ್ತವೆ. ಆದರೆ, ಆ ಸಮಿತಿ ರಚಿಸುವ ಸಮಯ ಮೀರಿದೆ. ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಮುಖ್ಯಮಂತ್ರಿಯನ್ನು ನಾನು ಭೇಟಿ ಮಾಡಿಲ್ಲ' ಎಂದೂ ಹೇಳಿದರು.

ತಪ್ಪಿತಸ್ಥರ ಬಂಧನಕ್ಕೆ ಪಕ್ಷವಿಲ್ಲ: 'ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೊ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ಬಂಧನಕ್ಕೆ ಪಕ್ಷ ಎಂಬುದು ಬರುವುದಿಲ್ಲ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎಂಬುದಕ್ಕಿಂತ, ಈ ಪ್ರಕರಣದಲ್ಲಿ ಯಾರು ಭಾಗಿಯಾಗಿದ್ದಾರೆಂದು ಕಂಡು ಬರುತ್ತದೆಯೋ ಅಂಥವರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತದೆ. ಈಗಾಗಲೇ 11-12 ಜನರನ್ನು ಬಂಧಿಸಲಾಗಿದೆ' ಎಂದರು.

ಜೂನ್ 3ಕ್ಕೆ ಮತದಾರರಿಗೆ ರಜೆ

ಜೂನ್ 3 ರಂದು ನಡೆಯುವ ವಿಧಾನಪರಿಷತ್ತಿನ ಪದವೀಧರ ಮತ್ತು ಶಿಕ್ಷಕರ ಕ್ಷೇತಗಳ ಚುನಾವಣೆಯ ಕಾರಣ ಅರ್ಹ ಮತದಾರರಿಗಷ್ಟೇ ಸೀಮಿತವಾಗಿ ಮತದಾನ ಮಾಡಲು ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡುವಂತೆ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈಶಾನ್ಯ ಪದವೀಧರರ ಕ್ಷೇತ್ರ, ನೈರುತ್ಯ ಪದವೀಧರರ ಕ್ಷೇತ್ರ, ಬೆಂಗಳೂರು ಪದವೀಧರರ ಕ್ಷೇತ್ರ, ಆಗ್ನೇಯ ಶಿಕ್ಷಕರ ಕ್ಷೇತ್ರ, ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದ್ದು, ಈ ಕ್ಷೇತ್ರದ ವ್ಯಾಪ್ತಿಗೆ ಬರುವ ಜಿಲ್ಲೆಗಳಲ್ಲಿನ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ಈ ಆದೇಶ ಅನ್ವಯವಾಗಲಿದೆ. ಇಲ್ಲಿನ ಸರ್ಕಾರಿ, ಖಾಸಗಿ ಶಾಲಾ ಕಾಲೇಜುಗಳು, ಅನುದಾನಿತ ಮತ್ತು ಅನುದಾನ ರಹಿತ ವಿದ್ಯಾಸಂಸ್ಥೆಗಳು, ಎಲ್ಲ ಶೈಕ್ಷಣಿಕ ಸಂಸ್ಥೆಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಚೇರಿಗಳು, ಕೈಗಾರಿಕಾ ಸಂಸ್ಥೆಗಳು, ಸಹಕಾರ ರಂಗದ ಸಂಘ ಸಂಸ್ಥೆಗಳಲ್ಲಿ ಕಾಯಂ ಅಥವಾ ದಿನಗೂಲಿ ಆಧಾರದಲ್ಲಿ ಕೆಲಸ ಮಾಡುವ ಪದವೀಧರರು ಹಾಗೂ ಶಿಕ್ಷಕರು ಮತದಾನ ಮಾಡಲು ವಿಶೇಷ ಸಾಂದರ್ಭಿಕ ರಜೆ ನೀಡುವಂತೆ ನಿರ್ದೇಶನ ನೀಡಲಾಗಿದೆ.

ಮುಖ್ಯ ಶಿಕ್ಷಕ ಅಮಾನತು

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಸರ್ಕಾರಿ ಶಾಲೆಯೊಂದರ ಏಳನೇ ತರಗತಿ ವಿದ್ಯಾರ್ಥಿನಿಯನ್ನು ಗರ್ಭಿಣಿ ಮಾಡಿದ ಮುಖ್ಯ ಶಿಕ್ಷಕನನ್ನು ಅಮಾನತುಗೊಳಿಸಲಾಗಿದೆ.

ಆರೋಪಿ ಮುಖ್ಯ ಶಿಕ್ಷಕನನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಬಾಲಕಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಾಲಕಿಯರ ಬಾಲ ಮಂದಿರದಲ್ಲಿ ಇರಿಸಲಾಗಿದೆ.

ಡಿಡಿಪಿಐ ಬೈಲಾಂಜನೇಯ, ಕ್ಷೇತ್ರ ಶಿಕ್ಷಣಾಧಿಕಾರಿ ನರೇಂದ್ರ ಕುಮಾರ್ ಹಾಗೂ ಅಧಿಕಾರಿಗಳ ತಂಡ ಬುಧವಾರ ಶಾಲೆಗೆ ಭೇಟಿ ನೀಡಿ ಶಿಕ್ಷಕರು, ಮಕ್ಕಳಿಂದ ಮಾಹಿತಿ ಪಡೆಯಿತು.

ಕೊತ್ತಂಬರಿ ಕಂತೆಗೆ ₹80 ದರ

ಪ್ರಜಾವಾಣಿ ವಾರ್ತೆ

ಕೋಲಾರ: ಕೊತ್ತಂಬರಿ ಸೊಪ್ಪಿನ ದರ ದಿಢೀರನೇ ಏರಿಕೆ ಕಂಡಿದ್ದು ಚಿಲ್ಲರೆ ಮಾರುಕಟ್ಟೆಯಲ್ಲಿ ಕಂತೆಗೆ ₹80ರವರೆಗೆ ಮಾರಾಟವಾಗುತ್ತಿದೆ.



ತಿಂಗಳ ಹಿಂದೆಯಷ್ಟೇ 150 ಕಂತೆಗಳ ಒಂದು ಮೂಟೆ ಕೊತ್ತಂಬರಿಗೆ ₹1,500 ಇತ್ತು. ಈಗ ಒಂದು ಮೂಟೆ ₹12 ಸಾವಿರದವರೆಗೆ ಮಾರಾಟವಾಗುತ್ತಿದೆ.

ಬೆಂಗಳೂರು, ಚೆನ್ನೈ, ಈರೋಡ್, ಹೈದರಾಬಾದ್, ತಿರುಪತಿಯ ವರ್ತಕರಿಂದ ಗುಣಮಟ್ಟದ ಕೊತ್ತಂಬರಿಗೆ ಹೆಚ್ಚಿನ ಬೇಡಿಕೆ ಬರುತ್ತಿದೆ. ಆದರೆ, ಫಸಲು ಕಡಿಮೆಯಾಗಿ ಪೂರೈಕೆ ತಗ್ಗಿದೆ.

ಮಾರ್ಚ್, ಏಪ್ರಿಲ್‌ನಲ್ಲಿ ಬಿಸಿಲ ಧಗೆ ಹೆಚ್ಚಿತ್ತು. ಹೀಗಾಗಿ, ಈ ಬಾರಿ ಕೊತ್ತಂಬರಿ ಬೀಜ ಬಿತ್ತನೆ ಮಾಡಲು ಹೆಚ್ಚಿನ ರೈತರು ಮುಂದಾಗಲಿಲ್ಲ. ಕೆಲವೆಡೆ ಬೆಳೆದರೂ ಸರಿಯಾಗಿ ಫಸಲು ಬರಲಿಲ್ಲ. ನೀರಾವರಿ ಪ್ರದೇಶದಲ್ಲಿ ಬೆಳೆದವರೂ ಬೆಲೆ ಇಲ್ಲದೆ ಕೈ ಸುಟ್ಟುಕೊಂಡರು. ಕೆಲವರು ಮಾವಿನ ತೋಪಿನಲ್ಲಿ ಕೊತ್ತಂಬರಿ ಸೊಪ್ಪು ಬೆಳೆದಿದ್ದಾರೆ. ಮೇ ತಿಂಗಳ ಆರಂಭದಲ್ಲಿ ಸುರಿದ ಭಾರಿ ಮಳೆಯಿಂದ ಬೆಳೆಗೆ ಹಾನಿ ಉಂಟಾಯಿತು.

'ಶಿಕ್ಷಣ ವಿರೋಧಿ ಕಾಂಗ್ರೆಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಣಮಟ್ಟದ ಶಿಕ್ಷಣದಲ್ಲಿ ಶಿಕ್ಷಕರ ಪಾತ್ರ ಮತ್ತು ಆಡಳಿತ ನೀತಿ ಮಹತ್ವದ ಪಾತ್ರವಹಿಸುತ್ತದೆ. ಆದರೆ, ಕಾಂಗ್ರೆಸ್ ಪಕ್ಷ ಶಿಕ್ಷಕರ ಕುರಿತು ಕಾಳಜಿ, ಗೌರವ ನೀಡದೇ ಆಡಳಿತ ನಡೆಸುತ್ತಿದೆ. ಶಿಕ್ಷಕರು ಮತ್ತು ಪದವೀಧರರ ವಿರುದ್ಧದ ನೀತಿಗಳನ್ನೂ ಹೊಂದಿದೆ ಎಂದು ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ದೂರಿದರು.

ಬಿಜೆಪಿ- ಜೆಡಿಎಸ್ ಮೈತ್ರಿ ಪಕ್ಷಗಳು ಪದವೀಧರರ ವಿಚಾರ, ಶಿಕ್ಷಕರ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿವೆ. ಹಲವು ಸುಧಾರಣೆ, ಪ್ರಗತಿ, ನೂತನ ಕಾಯ್ದೆ ಮತ್ತು ಮತ್ತು ಕಾನೂನುಗಳನ್ನು ಜಾರಿಗೆ ತಂದಿದ್ದು, ಶಿಕ್ಷಕರು ಮತ್ತು ಪದವೀಧರರ ಪರವಾಗಿ ನಿರಂತರವಾಗಿ ಶ್ರಮಿಸುತ್ತಿರುವುದರಿಂದ ಈ ಬಾರಿ ಚುನಾವಣೆಯಲ್ಲಿ ಬೆಂಬಲಿಸಬೇಕು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

ಬಿಜೆಪಿ ಶಿಕ್ಷಕರ ಪರವಾಗಿ ಹಲವಾರು ಸುಧಾರಣೆಗಳನ್ನು, ಅನುದಾನಿತ ಸಂಸ್ಥೆಗಳಲ್ಲಿ ಹುದ್ದೆ ಭರ್ತಿ ಮಾಡುವ ಕಾರ್ಯವನ್ನೂ ಮಾಡಿದೆ. ಕಾಂಗ್ರೆಸ್ ಸರ್ಕಾರದ ನೇಮಕಾತಿಯನ್ನು ಸಂಪೂರ್ಣವಾಗಿ ನಿಷೇಧಿಸಿತ್ತು ಎಂದರು.

ರಾಜ್ಯವನ್ನು ಸಾಲದ ಸುಳಿಯಲ್ಲಿ ಸಿಲುಕಿಸಿರುವ ಕಾಂಗ್ರೆಸ್ ಸರ್ಕಾರವು ಏಳನೇ ವೇತನ ಆಯೋಗದ ಶಿಫಾರಸು ಜಾರಿ ಮಾಡಲಿಲ್ಲ. ಒಪಿಎಸ್ ಕುರಿತು ಸುಳ್ಳು ಭರವಸೆ ಕೊಟ್ಟಿದ್ದಾರೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಎನ್‌ಪಿಎಸ್ ಜಾರಿಗೊಳಿಸಿತ್ತು ಎಂದರು.

'ಸಚಿವರ ಮೇಲೆ ಎಫ್‌ಐಆರ್ ಏಕಿಲ್ಲ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳನ್ನು ಕೇಳಿರುವ ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರು, ಅವುಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ಉತ್ತರ ಇದೆಯೇ ಎಂದು ಕೇಳಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬ್ಯಾಂಕ್‌ನ ಜಂಟಿ ಖಾತೆಯಿಂದ ಮಾರ್ಚ್‌ನಲ್ಲಿ ಹಣ ವರ್ಗಾವಣೆ ಆಗಿದೆ. ಮಾರ್ಚ್ 4ರಂದು ₹25 ಕೋಟಿ, ಮಾರ್ಚ್ 6ರಂದು ₹25 ಕೋಟಿ, ಮಾರ್ಚ್ 21ರಂದು ₹44 ಕೋಟಿ ವರ್ಗಾವಣೆ ಆಗಿದೆ. ರಾಜ್ಯ ಹುಜೂರ್ ಖಜಾನೆಯಿಂದ ₹43.33 ಕೋಟಿ ವರ್ಗಾವಣೆ ಆಗಿದೆ. ಮೇ 21 ರಂದು ₹50 ಕೋಟಿ ವರ್ಗಾವಣೆ ಆಗಿದೆ. ಈ ಹಣ ಯಾವ ಖಾತೆಗಳಿಗೆ ವರ್ಗಾವಣೆ ಆಗಿದೆ ಮಾಹಿತಿ ಕೊಡಿ ಎಂದು ಆಗ್ರಹಿಸಿದರು.

> **ಸಿದ್ದರಾಮಯ್ಯನವರೇ ನಿರಪರಾಧಿ ಕೆ.ಎಸ್.ಈಶ್ವರಪ್ಪ ಅವರನ್ನು ಬಲಿ ಪಡೆದಿರಿ; ಆವತ್ತು ನೀವು ಪ್ರತಿಪಕ್ಷದಲ್ಲಿ ಇದ್ದಾಗ ಯಾವ ರೀತಿ ಮಾತಾಡಿದ್ದೀರಿ ಎಂಬುದನ್ನು ನೆನಪಿಸಿಕೊಳ್ಳಿ**
> **ಗೋವಿಂದ ಕಾರಜೋಳ**
> ಮಾಜಿ ಉಪಮುಖ್ಯಮಂತ್ರಿ

ಬ್ಯಾಂಕಿನ ಪ್ರತಿ ತಿಂಗಳ ವಿವರ ಹುಜೂರ್ ಖಜಾನೆಯ ವಿವರವನ್ನು ಪುನರ್ ಪರಿಶೀಲಿಸಲಿಲ್ಲವೇಕೆ? ಮಾರ್ಚ್ 31ರಂದು ಹಣಕಾಸು ವರ್ಷ ಮುಕ್ತಾಯ ಆದ ಬಳಿಕ ವ್ಯವಸ್ಥಾಪಕ ನಿರ್ದೇಶಕ ಮತ್ತು ಇಲಾಖೆಯ ಸರ್ಕಾರದ ಮಟ್ಟದ ಅಧಿಕಾರಿಗಳು ಪರಿಶೀಲನಾ ಸಭೆ ಮಾಡಲಿಲ್ಲವೇಕೆ ಎಂದು ಕೇಳಿದರು.

ಆತ್ಮಹತ್ಯೆ ಮಾಡಿಕೊಂಡ ಚಂದ್ರಶೇಖರನ್ ಅವರು ಮಂತ್ರಿಗಳ ಮೌಖಿಕ ಆದೇಶದನ್ವಯ ಹಣ ವರ್ಗಾವಣೆ ಮಾಡಿದ್ದಾಗಿ ಬರೆದಿದ್ದಾರೆ. ಹಾಗಿದ್ದರೆ ಎಫ್‌ಐಆರ್‌ನಲ್ಲಿ ಸಚಿವರ ಹೆಸರು ಏಕೆ ಸೇರಿಸಿಲ್ಲ ಎಂದು ಪ್ರಶ್ನಿಸಿದರು.

ಬೆಂಗಳೂರು ಉತ್ತರ ಜಿಲ್ಲಾ ಅಧ್ಯಕ್ಷ ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ ಅವರು ಭಾಗವಹಿಸಿದ್ದರು.

9 ಆರೋಪಿಗಳ ಜಾಮೀನು ಅರ್ಜಿ ವಜಾ

ಪಾಂಡವಪುರ: ಇಲ್ಲಿನ ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ಈಚೆಗೆ ನಡೆದಿದ್ದ ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ 9 ಆರೋಪಿಗಳ ಜಾಮೀನು ಅರ್ಜಿಯನ್ನು ಶ್ರೀರಂಗಪಟ್ಟಣದ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಬುಧವಾರ ರದ್ದುಪಡಿಸಿದೆ.

ಆರೋಪಿಗಳಾದ ಸಿ.ಜಿ. ಗಿರಿಜಾಂಭ, ಶಿವಲಿಂಗ ನಾಯಕ್, ನವೀನ್ ಕುಮಾರ್, ಎಂ.ಕಿರಣ್ ಕುಮಾರ್, ಎಚ್.ಅಖಿಲೇಶ್, ಶೃತಿ, ಸತ್ಯಮ್ಮ, ಕುಮಾರ್, ಎಂ.ಆನಂದ ಅವರು ಜಾಮೀನು ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಟಿ.ಗೋಪಾಲಕೃಷ್ಣ ರೈ ಜಾಮೀನು ಅರ್ಜಿಯನ್ನು ತಿರಸ್ಕರಿಸಿದರು. ಸರ್ಕಾರಿ ಅಭಿಯೋಜಕಿ ಎಂ.ಕೆ.ಪ್ರಫುಲ್ಲಾ ವಾದ ಮಂಡಿಸಿದ್ದರು.



ಚಿತ್ರದುರ್ಗದ ಪತ್ರಿಕಾ ಭವನದಲ್ಲಿ ಬುಧವಾರ ಆಯೋಜಿಸಿದ್ದ ರಾಜ್ಯಮಟ್ಟದ ಪತ್ರಿಕಾ ವಿತರಕರ ಸಮ್ಮೇಳನ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಜಿಲ್ಲೆಯ ಮುಖಂಡರು

ಸೆ.8ಕ್ಕೆ ಚಿತ್ರದುರ್ಗದಲ್ಲಿ ವಿತರಕರ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ರಾಜ್ಯಮಟ್ಟದ ಪತ್ರಿಕಾ ವಿತರಕರ ಸಮ್ಮೇಳನವನ್ನು ಸೆ.8ರಂದು ಚಿತ್ರದುರ್ಗದಲ್ಲಿ ಆಯೋಜಿಸಲಾಗುತ್ತಿದೆ' ಎಂದು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಕೆ.ಶಂಭುಲಿಂಗ ತಿಳಿಸಿದರು.

'ನಾಲ್ಕನೇ ಸಮ್ಮೇಳನವನ್ನು ಚಿತ್ರದುರ್ಗದಲ್ಲಿ ನಡೆಸಲು ನಿಮ್ಮೆಲ್ಲರ ಸಹಕಾರ ಅಗತ್ಯ' ಎಂದು ಬುಧವಾರ ಆಯೋಜಿಸಿದ್ದ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಮನವಿ ಮಾಡಿದರು.

ಚಿತ್ರದುರ್ಗ, ದಾವಣಗೆರೆ, ಹಾವೇರಿ, ಧಾರವಾಡ, ಹುಬ್ಬಳ್ಳಿ, ಶಿವಮೊಗ್ಗ, ಚಾಮರಾಜನಗರ, ಚಿಕ್ಕಮಗಳೂರು, ಬೆಳಗಾವಿ, ಶಿಗ್ಗಾವಿ, ಚನ್ನರಾಯಪಟ್ಟಣ, ವಿಜಯಪುರ, ಹರಿಹರ, ತುಮಕೂರು, ಬೆಂಗಳೂರಿನ ಗಾಂಧಿನಗರ, ವಿಜಯನಗರದ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಅತಿಥಿ ಗೃಹದಿಂದ ನಾಪತ್ತೆಯಾದ ಸಾಮಗ್ರಿಗಳ ಕುರಿತು ಎಟಿಐ ಪತ್ರ

ರೋಹಿಣಿ ವೇತನದಲ್ಲಿ ಕಡಿತಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಇಲ್ಲಿನ ಆಡಳಿತ ತರಬೇತಿ ಸಂಸ್ಥೆಯ (ಎಟಿಐ) ಅತಿಥಿ ಗೃಹದಲ್ಲಿ ನಾಪತ್ತೆಯಾದ ಸಾಮಗ್ರಿಗಳಿಗೆ ತಗಲುವ ಮೊತ್ತವನ್ನು ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರ ವೇತನದಲ್ಲೇ ಕಡಿತಗೊಳಿಸಬೇಕು' ಎಂದು ಕೋರಿ ಸಂಸ್ಥೆಯ ಜಂಟಿ ನಿರ್ದೇಶಕರು (ಆಡಳಿತ) ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

'ಹೋದ ವರ್ಷ ಮೇ 9ರಂದು ಪತ್ರ ಬರೆಯಲಾಗಿದೆ. ಇದಾಗಿ ವರ್ಷವೇ ಕಳೆದಿದ್ದರೂ ಯಾವುದೇ ಕ್ರಮವಾಗಿಲ್ಲ' ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

ರೋಹಿಣಿ ಇಲ್ಲಿನ ಜಿಲ್ಲಾಧಿಕಾರಿಯಾಗಿ ಬಂದ ವೇಳೆ ಅಂದರೆ 2020ರ ಅ.2ರಿಂದ 2020ರ ನ.14ರವರೆಗೆ ಎಟಿಐ ಅತಿಥಿಗೃಹದಲ್ಲಿ ವಾಸವಿದ್ದರು. ಬಳಿಕ ಜಿಲ್ಲಾಧಿಕಾರಿ ನಿವಾಸಕ್ಕೆ ಸ್ಥಳಾಂತರದ ವೇಳೆ ಅತಿಥಿಗೃಹದ 2 ಟೆಲಿಫೋನ್ ಟೇಬಲ್, 2 ಬಟ್ಟೆ ಹ್ಯಾಂಗರ್, 2 ಬೆತ್ತದ ಕುರ್ಚಿ, 2 ಟೆಲಿಫೋನ್ ಸ್ಟೂಲ್, 2 ಟೀಪಾಯಿ, ಒಂದು ಮೈಕ್ರೋವೇವ್ ಒವನ್, ಮಂಚ, ಹಾಸಿಗೆ, 2 ಪ್ಲಾಸ್ಟಿಕ್ ಕುರ್ಚಿ, 2 ಯೋಗಾ ಮ್ಯಾಟ್, 2 ಸ್ಟೀಲ್ ಜಗ್ ಕೊಂಡೊಯ್ದಿದ್ದಾರೆ ಎಂದು ಸಂಸ್ಥೆಯು ಜಿಲ್ಲಾಧಿಕಾರಿ ಕಚೇರಿಗೆ ಪತ್ರ ಬರೆದಿತ್ತು. ಸಿಂಧೂರಿ ಅವರು ಇಲ್ಲಿಂದ ವರ್ಗವಾದ ಬಳಿಕ ಪತ್ರ ಬರೆಯಲಾಗಿತ್ತು.



ರೋಹಿಣಿ ಸಿಂಧೂರಿ

'ಅತಿಥಿ ಗೃಹದಲ್ಲಿನ 20 ವಸ್ತುಗಳನ್ನು ಜಿಲ್ಲಾಧಿಕಾರಿ ನಿವಾಸಕ್ಕೆ ಒಯ್ದಿದ್ದಾರೆ, ಅವುಗಳನ್ನು ಮರಳಿಸಬೇಕು' ಎಂದು ಸಂಸ್ಥೆಯು ಜಿಲ್ಲಾಧಿಕಾರಿ ಕಚೇರಿಯನ್ನೂ ಕೋರಿತ್ತು. ಇದಕ್ಕೆ ಪ್ರತಿಕ್ರಿಯಿಸಿದ್ದ ಜಿಲ್ಲಾಧಿಕಾರಿ ಕಚೇರಿಯು, 'ಜಿಲ್ಲಾಧಿಕಾರಿ ವಸತಿ ಗೃಹದಲ್ಲಿ ಎಟಿಐನ ಯಾವುದೇ ಸಾಮಗ್ರಿಗಳು ಇಲ್ಲ' ಎಂದು ಸ್ಪಷ್ಟಪಡಿಸಿತ್ತು.

ಇದಾದ ಬಳಿಕ, ಜಿಲ್ಲಾಧಿಕಾರಿ ಉತ್ತರ ಆಧರಿಸಿ ಸಂಸ್ಥೆಯು ರೋಹಿಣಿ ಅವರಿಗೆ ಮತ್ತೊಂದು ಪತ್ರ ಬರೆದಿತ್ತು. ಆದರೆ, ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. ಈ ಕಾರಣದಿಂದ ಮತ್ತೊಂದು ಪತ್ರ ಬರೆದಿರುವ ಸಂಸ್ಥೆಯ ಜಂಟಿ ನಿರ್ದೇಶಕರು, ಸಾಮಗ್ರಿಗಳ ಮೌಲ್ಯದ ಮೊತ್ತವನ್ನು ಆ ಅಧಿಕಾರಿಯ ವೇತನದಲ್ಲಿ ಕಟಾವು ಮಾಡಿ ಸಂಸ್ಥೆಗೆ ಜಮೆ ಮಾಡಬೇಕು' ಎಂದು ಕೋರಿದ್ದಾರೆ.

ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಲು ಸಂಸ್ಥೆಯ ಮಹಾನಿರ್ದೇಶಕಿ ವಿ. ಮಂಜುಳಾ ನಿರಾಕರಿಸಿದರು.

'ಎಟಿಐ ಪತ್ರವನ್ನು ನಾನು ನೋಡಿಲ್ಲ' ಎಂದು ರೋಹಿಣಿ ಪ್ರತಿಕ್ರಿಯಿಸಿದರು. ಪ್ರತಿಯನ್ನು ವಾಟ್ಸ್‌ಆ್ಯಪ್‌ನಲ್ಲಿ ತರಿಸಿಕೊಂಡು ವೀಕ್ಷಿಸಿದ ಬಳಿಕವೂ ಯಾವುದೇ ಪ್ರತಿಕ್ರಿಯೆಯನ್ನೂ ಅವರು ನೀಡಲಿಲ್ಲ. ಮೊಬೈಲ್ ಫೋನ್ ಕರೆಯನ್ನೂ ಸ್ವೀಕರಿಸಲಿಲ್ಲ.

'ಎಟಿಐ ವಸತಿಗೃಹದ ಸಾಮಗ್ರಿಗಳು ನಾಪತ್ತೆಯಾಗಿವೆ' ಎಂದು ಸಂಸ್ಥೆ ಹೇಳುತ್ತಿದೆ. 'ನಮ್ಮ ಬಳಿ ಇಲ್ಲ' ಎಂದು ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಪ್ರತಿಕ್ರಿಯಿಸಿದೆ. 'ವೇತನದಲ್ಲಿ ಹಣ ಕಡಿತಕ್ಕೆ ಸಂಬಂಧಿಸಿದಂತೆ ಎಟಿಐ ಪತ್ರವೇ ತಲುಪಿಲ್ಲ' ಎಂದು ರೋಹಿಣಿ ಹೇಳುತ್ತಿದ್ದಾರೆ. ಹಾಗಾದರೆ, ಸಾವಿರಾರು ರೂಪಾಯಿ ಮೌಲ್ಯದ ಸಾಮಗ್ರಿಗಳು ಏನಾದವು, ಒಯ್ದಿದ್ದು ಯಾರು ಎಂಬ ಪ್ರಶ್ನೆಗಳು ಎದುರಾಗಿವೆ. ಹಲವು ಅನುಮಾನಗಳಿಗೂ ಇದು ಕಾರಣವಾಗಿದೆ.

ಜೈಶ್ರೀರಾಮ್: ಹಿಂದೂ–ಮುಸ್ಲಿಂ ವಿದ್ಯಾರ್ಥಿಗಳ ಮಾರಾಮಾರಿ

ಕಾಲೇಜು ಫೆಸ್ಟ್ ರದ್ದು; ದೂರು–ಪ್ರತಿ ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೀದರ್: ನಗರದ ಮೈಲೂರಿನ ಗುರುನಾನಕ ದೇವ್ ಎಂಜಿನಿಯರಿಂಗ್ ಕಾಲೇಜಿನಲ್ಲಿ 'ಜೈಶ್ರೀರಾಮ್' ಹಾಡಿನ ವಿಚಾರವಾಗಿ ಹಿಂದೂ ಹಾಗೂ ಮುಸ್ಲಿಂ ವಿದ್ಯಾರ್ಥಿಗಳ ನಡುವೆ ಬುಧವಾರ ಮಾರಾಮಾರಿ ನಡೆದಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ವಿದ್ಯಾರ್ಥಿಗಳಾದ ನಟರಾಜ (22), ವೀರೇಂದ್ರ (22) ಗಾಯಗೊಂಡಿದ್ದು, ತಲೆ, ಮೂಗು ಸೇರಿದಂತೆ ಗುಪ್ತಾಂಗಗಳಲ್ಲಿ ಗಾಯಗಳಾಗಿವೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಘಟನೆ ಸಂಬಂಧ ಒಬ್ಬ ವಿದ್ಯಾರ್ಥಿಯನ್ನು ಬಂಧಿಸಿ, ಬಾಂಡ್ ಮೇಲೆ ಬಿಡುಗಡೆಗೊಳಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣಎಸ್.ಎಲ್.'ಪ್ರಜಾವಾಣಿ'ಗೆ ತಿಳಿಸಿದ್ದಾರೆ. ನಟರಾಜ ಅವರು ಕೊಟ್ಟಿರುವ ದೂರಿನ ಮೇರೆಗೆ ಮುಸ್ಲಿಂ ಸಮುದಾಯದ 17 ವಿದ್ಯಾರ್ಥಿಗಳು ಹಾಗೂ ಒಬ್ಬ ಅಪರಿಚಿತನ ವಿರುದ್ಧ ಗಾಂಧಿಗಂಜ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇನ್ನು, ಘಟನೆಯಲ್ಲಿ ಕೆಲ ಮುಸ್ಲಿಂ ವಿದ್ಯಾರ್ಥಿಗಳು ಗಾಯಗೊಂಡಿದ್ದು, ಅವರು ಕೊಟ್ಟಿರುವ ಪ್ರತಿ ದೂರು ಆಧರಿಸಿ 8 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಎಸ್ಪಿ ತಿಳಿಸಿದ್ದಾರೆ.

ಗುರುವಾರ, ಶುಕ್ರವಾರ (ಮೇ 30, 31) ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕ 'ಟೆಕ್ನೊ ಕಲ್ಚರಲ್ ಫೆಸ್ಟ್ ಇ–ಬಜ್' ಕಾರ್ಯಕ್ರಮವನ್ನು ಕಾಲೇಜು ಆಡಳಿತ ಮಂಡಳಿ ರದ್ದುಗೊಳಿಸಿದೆ. 'ಘಟನೆ ಸಂಬಂಧ ಗುರುನಾನಕ ದೇವ್ ಎಂಜಿನಿಯರಿಂಗ್ ಕಾಲೇಜಿನ ಬಳಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ವಿದ್ಯಾರ್ಥಿಗಳು, ಸಾರ್ವಜನಿಕರು ಯಾವುದೇ ರೀತಿಯ ವದಂತಿಗಳಿಗೆ ಕಿವಿಗೊಡಬಾರದು' ಎಂದು ಎಸ್ಪಿ ಮನವಿ ಮಾಡಿದ್ದಾರೆ.

ಆಗಿದ್ದೇನು?

'ಕಾಲೇಜು ಫೆಸ್ಟ್ ಅಂಗವಾಗಿ ಕಾಲೇಜಿನಲ್ಲಿ ಬುಧವಾರ ಡಿ.ಜೆ ಹಾಕಿದ ಹಾಡಿಗೆ ವಿದ್ಯಾರ್ಥಿಗಳು ಡಾನ್ಸ್ ತಾಲೀಮು ಮಾಡುತ್ತಿದ್ದರು. ಕೊನೆಯಲ್ಲಿ ಡಿ.ಜೆ 'ಜೈಶ್ರೀರಾಮ್' ಹಾಡು ಹಾಕಿದ್ದಾರೆ. ಅದಕ್ಕೆ ಮುಸ್ಲಿಂ ವಿದ್ಯಾರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕಾಲೇಜಿನಲ್ಲಿ ಈ ರೀತಿಯ ಹಾಡುಗಳನ್ನು ಹಾಕಬಾರದು. ಬೇರೆ ಹಾಡು ಹಾಕಬೇಕು ಎಂದು ಒತ್ತಾಯಿಸಿದ್ದಾರೆ. ಹಿಂದೂ ವಿದ್ಯಾರ್ಥಿಗಳು ಡಿ.ಜೆ ಬೆಂಬಲಕ್ಕೆ ಹೋಗಿ, ಅದೇ ಹಾಡು ಹಾಕಿ ಎಂದಿದ್ದಾರೆ. ಈ ವೇಳೆ ಎರಡೂ ಕಡೆಯ ವಿದ್ಯಾರ್ಥಿಗಳ ನಡುವೆ ಮಾತಿಗೆ ಮಾತು ಬೆಳೆದು ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ವಿಷಯ ತಿಳಿದು ಪೊಲೀಸರು ಅಲ್ಲಿಗೆ ತೆರಳಿ ಪರಿಸ್ಥಿತಿಯನ್ನು ನಿಯಂತ್ರಿಸಿದ್ದಾರೆ' ಎಂದು ಎಸ್ಪಿ ಚನ್ನಬಸವಣ್ಣ ತಿಳಿಸಿದ್ದಾರೆ.

ಅಪರಾಧ ಸುದ್ದಿ

ಮುಖ್ಯಾಂಶಗಳು

- ಮೈಲೂರಿನ ಗುರುನಾನಕ ದೇವ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಘಟನೆ
- ಇಬ್ಬರು ವಿದ್ಯಾರ್ಥಿಗಳಿಗೆ ಗಾಯ, 17 ವಿದ್ಯಾರ್ಥಿಗಳು, ಅಪರಿಚಿತನ ವಿರುದ್ಧ ಪ್ರಕರಣ

ಹಣ ದುರ್ಬಳಕೆ: ಬ್ಯಾಂಕ್ ಅಧಿಕಾರಿಗಳ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಗ್ರಾಹಕರಿಗೆ ಗೊತ್ತಾಗದಂತೆ ಅವರ ಖಾತೆಗಳಿಂದ ಸಾಲ ಮಂಜೂರು ಮಾಡಿಕೊಂಡು, ಸ್ವಂತಕ್ಕೆ ಬಳಸಿದ ಆರೋಪದ ಮೇಲೆ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಸಿದ್ದಮ್ಮನಹಳ್ಳಿಯ ಶಾಖೆಯ ಇಬ್ಬರು ಅಧಿಕಾರಿಗಳ ವಿರುದ್ಧ ಕುಡುತಿನಿ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ.

ಬ್ಯಾಂಕ್‌ನ ಪ್ರಾದೇಶಿಕ ವ್ಯವಸ್ಥಾಪಕ ಹನುಮಂತರಾಯ ಗಿರಿಡ್ಡಿ ಅವರು ನೀಡಿದ ದೂರು ಆಧರಿಸಿ ಪೊಲೀಸರು ಆರೋಪಿಗಳಾದ ವ್ಯವಸ್ಥಾಪಕ ಬಿ. ನವೀನ್ ಕುಮಾರ್ ಮತ್ತು ಸಹಾಯಕ ವ್ಯವಸ್ಥಾಪಕ ಕನ್ನ ಸುರೇಶ್ ಬಾಬು ಎಂಬುವರ ವಿರುದ್ಧ ನಂಬಿಕೆ ದ್ರೋಹ, ವಂಚನೆ ಪ್ರಕರಣ ದಾಖಲಿಸಿದ್ದಾರೆ.

'ಈ ಇಬ್ಬರೂ ಅಧಿಕಾರಿಗಳು 2022–2023ನೇ ಸಾಲಿನಲ್ಲಿ 11 ಗ್ರಾಹಕರ ಹೆಸರಿನಲ್ಲಿ ಒಟ್ಟು ₹16.55 ಲಕ್ಷ ಸಾಲ ಮಂಜೂರು ಮಾಡಿಕೊಂಡು, ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಕನ್ನ ಸುರೇಶ್ ಬಾಬು ಇಸಿಓಡಿ ಸಾಲದ ಖಾತೆಗೆ ಅನಧಿಕೃತವಾಗಿ ಹಣ ಜಮಾ ಮಾಡಿ, ಪತ್ನಿ ಶ್ರೀವೇಣಿ ಅವರ ಉಳಿತಾಯ ಖಾತೆಗೆ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ್ದಾರೆ' ಎಂದು ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಮುರುಘಾ ಮಠದ ಶಿವಮೂರ್ತಿ ಶ್ರೀ ವಿರುದ್ಧ ಸಾಕ್ಷ್ಯ ನುಡಿಯದಂತೆ ಬೆದರಿಕೆ

ಸಂತ್ರಸ್ತ ಬಾಲಕಿಯ ಚಿಕ್ಕಪ್ಪನ ಬಂಧನ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪೋಕ್ಸೊ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಸಾಕ್ಷ್ಯ ನುಡಿಯದಂತೆ ಸಂತ್ರಸ್ತ ಬಾಲಕಿಯನ್ನು ಬೆದರಿಸಿದ್ದ ಆಕೆಯ ಚಿಕ್ಕಪ್ಪನನ್ನು ಪೊಲೀಸರು ಬುಧವಾರ ಬಂಧಿಸಿ, ವಿಚಾರಣೆ ನಡೆಸಿದರು.

ಮಕ್ಕಳ ಕಲ್ಯಾಣ ಸಮಿತಿಯ ಶಿಫಾರಸಿನ ಮೇರೆಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪರಿವೀಕ್ಷಣಾಧಿಕಾರಿ ಮಹಿಳಾ ಠಾಣೆಯಲ್ಲಿ ಎಫ್ಐಆರ್ ದಾಖಲಿಸಿದ್ದರು. ಐಪಿಸಿ ಸೆಕ್ಷನ್ 323 (ಹಲ್ಲೆ), 324 (ಅಪಾಯಕಾರಿ ಆಯುಧ ಬಳಕೆ), 504 (ಉದ್ದೇಶಪೂರ್ವಕ ಅವಮಾನ), 506 (ಜೀವ ಬೆದರಿಕೆ) ಮತ್ತು ಬಾಲನ್ಯಾಯ ಕಾಯ್ದೆಯ ಕಲಂ 75ರ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಕಾರ್ಯಪ್ರವೃತ್ತರಾದ ಪೊಲೀಸರು ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಿದರು.

'ಸಂತ್ರಸ್ತ ಬಾಲಕಿಯ ಚಿಕ್ಕಪ್ಪನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಬಂಧಿಸಲಾಗಿತ್ತು. ಆರೋಪಿ ಪರ ವಕೀಲರು ಠಾಣಾ ಜಾಮೀನು ಹಾಜರುಪಡಿಸಿದ್ದರಿಂದ ಬಿಡುಗಡೆ ಮಾಡಲಾಯಿತು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ತಿಳಿಸಿದ್ದಾರೆ.

ತನ್ನ ತಮ್ಮನಿಗೂ ಚಿಕ್ಕಪ್ಪ ಕಿರುಕುಳ ನೀಡುತ್ತಿರುವ ಬಗ್ಗೆ ಸಂತ್ರಸ್ತ ಬಾಲಕಿ ಆರೋಪಿಸಿದ್ದಳು. ಬಾಲಕಿಯ ಹೇಳಿಕೆ ಆಧಾರದ ಮೇರೆಗೆ ಬಾಲಕನನ್ನು ಬುಧವಾರ ಮಕ್ಕಳ ಕಲ್ಯಾಣ ಸಮಿತಿ ಎದುರು ಹಾಜರುಪಡಿಸಲಾಗಿತ್ತು. ಚಿಕ್ಕಪ್ಪನ ಕುಟುಂಬ ಯಾವುದೇ ಕಿರುಕುಳ ನೀಡಿಲ್ಲ ಎಂಬುದಾಗಿ ಹೇಳಿಕೆ ನೀಡಿರುವ ಬಾಲಕ, ಬಾಲಮಂದಿರದ ಆಶ್ರಯ ನಿರಾಕರಿಸಿದ್ದಾನೆ ಎಂದು ಮೂಲಗಳು ಮಾಹಿತಿ ನೀಡಿವೆ.



ಚುಟುಕು

ಮೆಹಬೂಬಾ ವಿರುದ್ಧ ಎಫ್‌ಐಆರ್



ಶ್ರೀನಗರ (ಪಿಟಿಐ): ಮತದಾನದ ದಿನ ಪ್ರತಿಭಟನೆ ನಡೆಸಿ ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದಲ್ಲಿ ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ಸೆಕ್ಷನ್ 144 ಅಡಿಯಲ್ಲಿ ನಿಷೇಧಾಜ್ಞೆ ಜಾರಿಯಿದ್ದರೂ ಮೆಹಬೂಬಾ ಅವರು ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ ಬಿಜ್‌ಬೆಹೆರಾ ಪ್ರದೇಶದಲ್ಲಿ ಪಕ್ಷದ ಕಾರ್ಯಕರ್ತರೊಂದಿಗೆ ಧರಣಿ ಕುಳಿತಿದ್ದರು. ಇದರಿಂದ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದಿದ್ದಾರೆ.


‘ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದಲ್ಲಿ ನನ್ನ ವಿರುದ್ಧ ಎಫ್‌ಐಆರ್ ದಾಖಲಿಸಿರುವುದು ಸೋಜಿಗ ಉಂಟುಮಾಡಿದೆ. ಸತ್ಯ ಹೇಳಿದ್ದಕ್ಕೆ ಮತ್ತು ಸರ್ಕಾರದ ವಿರುದ್ಧ ಪ್ರತಿಭಟಿಸಿದ್ದಕ್ಕೆ ಪಿಡಿಪಿ ತೆತ್ತ ಬೆಲೆ ಇದು. ಮತದಾನಕ್ಕೆ ಮುನ್ನ ನಮ್ಮ ಪಕ್ಷದ ನೂರಾರು ಕಾರ್ಯಕರ್ತರನ್ನು ವಶಕ್ಕೆ ತೆಗೆದುಕೊಂಡ ಕ್ರಮವನ್ನು ಖಂಡಿಸಿ ನಾವು ಪ್ರತಿಭಟನೆ ನಡೆಸಿದ್ದೆವು’ ಎಂದು ಮೆಹಬೂಬಾ ಅವರು ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ಅನಂತನಾಗ್– ರಜೌರಿ ಲೋಕಸಭಾ ಕ್ಷೇತ್ರಕ್ಕೆ ಮೇ 25 ರಂದು ಮತದಾನ ನಡೆದಿತ್ತು. ಪಕ್ಷದ ಕಾರ್ಯಕರ್ತರು ಮತ್ತು ಏಜೆಂಟರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡದ್ದನ್ನು ವಿರೋಧಿಸಿ ಅವರು ಅನಂತನಾಗ್ ಜಿಲ್ಲೆಯ ಪೊಲೀಸ್ ಠಾಣೆ ಮುಂದೆ ಧರಣಿ ಕುಳಿತಿದ್ದರು.

‘ಬಿಜ್‌ಬೆಹೆರಾದಲ್ಲಿ ಪಿಡಿಪಿಯ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಸೇರಿ ರಸ್ತೆ ತಡೆ ನಡೆಸಿದ್ದಾರೆ. ಸುಮಾರು ಒಂದು ಗಂಟೆಗೂ ಹೆಚ್ಚು ಹೊತ್ತು ಪ್ರತಿಭಟನೆ ನಡೆಸಿ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ’ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

‘ರೈತರ ಭೂಮಿ ಕಸಿಯಲು ಬಿಜೆಪಿ ಹೊಸ ಕಾಯ್ದೆ’

ಸೋನಭದ್ರ (ಪಿಟಿಐ): ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಮರಳಿದರೆ, ರೈತರ ಭೂಮಿ ಕಸಿಯಲು ರದ್ದಾದ ಕೃಷಿ ಕಾಯ್ದೆಗಳಂತಹ ಹೊಸ ಕಾಯ್ದೆಯನ್ನು ಜಾರಿಗೆ ತರಲಿದೆ ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಬುಧವಾರ ಹೇಳಿದರು.



ರಾಬರ್ಟ್ಸ್‌ಗಂಜ್‌ನಲ್ಲಿ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, ‘ಇಂಡಿಯಾ ಕೂಟವು ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡಲಾಗುವುದು’ ಎಂದರು.

‘ರೈತರ ಭೂಮಿ ಕಸಿಯಲು ಕರಾಳ ಕಾಯ್ದೆಗಳನ್ನು ರೂಪಿಸಿದ್ದ ಬಿಜೆಪಿ ಮುಖಂಡರು ಮತ್ತೆ ಈಗ ಪಕ್ಷವನ್ನು ಅಧಿಕಾರಕ್ಕೆ ತರಲು ಮತ ಯಾಚನೆ ಮಾಡುತ್ತಿದ್ದಾರೆ. ಕೃಷಿ ಕಾಯ್ದೆಗಳ ವಿರುದ್ಧ ರೈತರು ಒಗ್ಗೂಡಿ ಪ್ರತಿಭಟನೆ ನಡೆಸಿದ ನಂತರವೇ ಅವುಗಳನ್ನು ವಾಪಸ್ ಪಡೆಯಲಾಗಿತ್ತು. ಕಾಯ್ದೆಗಳನ್ನು ಹಿಂಪಡೆದಿದ್ದರೂ ನಾವು ಎಚ್ಚರಿಕೆಯಿಂದ ಇರಬೇಕು. ಅವರು ಅಧಿಕಾರಕ್ಕೆ ಮರಳಿದರೆ ರೈತರ ಮತ್ತು ಆದಿವಾಸಿಗಳ ಭೂಮಿಯನ್ನು ಕಸಿದುಕೊಳ್ಳಲು ಮತ್ತೆ ಅಂಥದ್ದೇ ಕಾನೂನು ತರುತ್ತಾರೆ’ ಎಂದು ಅಖಿಲೇಶ್ ಆರೋಪಿಸಿದರು.

‘ಕೇಂದ್ರದ ಬಿಜೆಪಿ ಸರ್ಕಾರವು ಉದ್ದೇಶಪೂರ್ವಕವಾಗಿ ನೇಮಕಾತಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡುತ್ತಿದೆ. ದೇಶದ ಯುವಜನರು ದೂರದ ಪ್ರದೇಶಗಳಿಗೆ ಹೋಗಿ ನೇಮಕಾತಿ ಪರೀಕ್ಷೆ ಬರೆದು ಬರುತ್ತಾರೆ. ಮನೆಗೆ ಬಂದ ನಂತರ ನೋಡಿದರೆ, ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎನ್ನುವುದು ಗೊತ್ತಾಗುತ್ತದೆ’ ಎಂದು ಆರೋಪಿಸಿದರು.

‘ಬಿಜೆಪಿಯು ನಿರುದ್ಯೋಗದಲ್ಲಿ ಮತ್ತು ಉದ್ಯೋಗ ಕಸಿದುಕೊಳ್ಳುವುದರಲ್ಲಿ ದಾಖಲೆ ನಿರ್ಮಿಸಿದರೆ, ‘ಇಂಡಿಯಾ’ ಒಕ್ಕೂಟವು ಅಧಿಕಾರಕ್ಕೆ ಬಂದರೆ, ಉದ್ಯೋಗ ಸೃಷ್ಟಿಯಲ್ಲಿ ದಾಖಲೆ ನಿರ್ಮಿಸುತ್ತೇವೆ’ ಎಂದು ಭರವಸೆ ನೀಡಿದರು.

ಹಣದುಬ್ಬರದ ಹೆಚ್ಚಳದಿಂದ ಆರ್ಥಿಕ ಅಸಮಾನತೆ ಹೆಚ್ಚಾಗಿದೆ ಎಂದು ಬಿಜೆಪಿಯನ್ನು ಟೀಕಿಸಿದ ಅವರು, ‘ಆರ್ಥಿಕ ಅಸಮಾನತೆ ಬಗ್ಗೆ ಪ್ರಧಾನಿಯನ್ನು ಪ್ರಶ್ನಿಸಿದರೆ, ಎಲ್ಲ ಬಡವರನ್ನು ಶ್ರೀಮಂತರನ್ನಾಗಿ ಮಾಡಬೇಕೇ ಎಂಬುದಾಗಿ ಪ್ರಶ್ನಿಸಿದ್ದರು’ ಎಂದು ತಿಳಿಸಿದರು.

ಎಂಥಾ ಮಾತು!



ಕೇಂದ್ರದ ಬಿಜೆಪಿ ಸರ್ಕಾರವು ಹಿಮಾಚಲ ಪ್ರದೇಶದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಪ್ರವಾಸೋದ್ಯಮ ಕ್ಷೇತ್ರಕ್ಕೆ ಸಾಕಷ್ಟು ಹೊಡೆತ ನೀಡಿದೆ. ಹಿಮಾಚಲ ಪ್ರದೇಶದಲ್ಲಿರುವ ಹೆಚ್ಚಿನ ಶೈತ್ಯಾಗಾರಗಳು ಅದಾನಿ ಸಮೂಹಕ್ಕೆ ಸೇರಿದ್ದಾಗಿದ್ದು, ಸೇಬಿನ ದರ ಮತ್ತು ಸೇಬು ಬೆಳೆಗಾರರ ಭವಿಷ್ಯವನ್ನು ಅವರೇ ನಿರ್ಧರಿಸುತ್ತಿದ್ದಾರೆ. ಹಿಮಾಚಲ ಪ್ರದೇಶ ತಮ್ಮ ಎರಡನೇ ಮನೆ ಎಂದು ಮೋದಿ ಹೇಳುತ್ತಾರೆ. ಆದರೆ ರಾಜ್ಯದ ಅಭಿವೃದ್ಧಿಗಾಗಿ ಅವರು ಯಾವುದೇ ವಿಶೇಷ ಯೋಜನೆ ಘೋಷಿಸಿಲ್ಲ

ಪ್ರಿಯಾಂಕಾ ಗಾಂಧಿ, ಕಾಂಗ್ರೆಸ್ ನಾಯಕಿ



ಮುಸ್ಲಿಂ ಮೀಸಲಾತಿಯನ್ನು ಪ್ರತಿಪಾದಿಸುವ ಮೂಲಕ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳು ದೇಶ ವಿಭಜನೆಗೆ ಬೇಕಾದ ಸಿದ್ಧತೆ ನಡೆಸುತ್ತಿವೆ. ಈ ಎರಡೂ ಪಕ್ಷಗಳು ವೈಯಕ್ತಿಕ ಕಾನೂನು ಜಾರಿಗೊಳಿಸಲು ಬಯಸುತ್ತವೆ. ಆದರೆ ಭಾರತದಲ್ಲಿ ತಾಲಿಬಾನ್ ಮಾದರಿಯ ಆಡಳಿತಕ್ಕೆ ಬಿಜೆಪಿ ಅವಕಾಶ ನೀಡದು. ನಮ್ಮ ದೇಶದ ಆಡಳಿತ ಸಂವಿಧಾನದ ಪ್ರಕಾರ ನಡೆಯುತ್ತದೆಯೇ ಹೊರತು, ಷರಿಯಾ ಕಾನೂನಿನಿಂದ ಅಲ್ಲ. ಬಿಜೆಪಿಯು ಅಭಿವೃದ್ಧಿಯ ಪರವಾಗಿದೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

‘ಜೂನ್ 4ರ ನಂತರ ವಿಪಕ್ಷ ನಿರ್ನಾಮ’

ಗೋರಖಪುರ (ಪಿಟಿಐ): ಲೋಕಸಭಾ ಚುನಾವಣೆಯ ಫಲಿತಾಂಶ ಘೋಷಣೆಯಾದ ನಂತರ ಅರ್ಧ ಡಜನ್ ವಿರೋಧ ಪಕ್ಷಗಳು ನಿರ್ನಾಮವಾಗುತ್ತವೆ ಮತ್ತು ಅವುಗಳ ಅಭ್ಯರ್ಥಿಗಳು ಠೇವಣಿ ಕಳೆದುಕೊಳ್ಳುತ್ತಾರೆ ಎಂದು ಭೋಜ್‌ಪುರಿ ನಟ ಹಾಗೂ ಗೋರಖಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರವಿಕಿಶನ್ ಪ್ರತಿಪಾದಿಸಿದರು.



ಪಿಟಿಐ ಜತೆಗೆ ಸಂದರ್ಶನದಲ್ಲಿ ಮಾತನಾಡಿದ ಅವರು, ‘ಇಂಡಿಯಾ ಕೂಟವು ಅಧಿಕಾರಕ್ಕೆ ಬಂದರೆ, ದೇಶವು ಷರಿಯತ್ ಅನ್ವಯ ನಡೆಯುತ್ತದೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಿಸುವುದಿಲ್ಲ ಎಂದು ನಾನು ಭರವಸೆ ನೀಡುತ್ತೇನೆ’ ಎಂದು ಹೇಳಿದರು.


ಗೋರಖಪುರದ ಹಾಲಿ ಸಂಸದರೂ ಆಗಿರುವ ರವಿಕಿಶನ್, ‘ನಾನು ಐದು ವರ್ಷಗಳಿಂದ ಇಲ್ಲಿ ಬದುಕುತ್ತಿದ್ದೇನೆ. ಮುಂಬೈನ ಐಷಾರಾಮಿ ಜೀವನ ಬಿಟ್ಟು ಇಲ್ಲಿ ಜನರ ಸೇವೆ ಮಾಡುತ್ತಿದ್ದೇನೆ’ ಎಂದು ಹೇಳಿದರು.

ತನ್ನನ್ನು ಹೊರಗಿನವರು ಎಂದು ವಿರೋಧಿ ಅಭ್ಯರ್ಥಿಗಳು ಟೀಕಿಸಿದ್ದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ನಾನು ಇದೇ ಕ್ಷೇತ್ರದ ಹಳ್ಳಿಯಿಂದ ಬಂದವನು. ಇಲ್ಲಿನ ಮಣ್ಣಿನ ಮಗ. ನನ್ನ ಬೇರುಗಳು ಇರುವುದು ಇಲ್ಲಿಯೇ’ ಎಂದರು.

‘ಮೋದಿ–ಯೋಗಿ ಅವರ ಕಲ್ಯಾಣ ಕಾರ್ಯಕ್ರಮಗಳಿಂದ ಬಡವರಿಗೆ ಒಳಿತಾಗಿದೆ. ಆ ಋಣವನ್ನು ಅವರು ಬಿಜೆಪಿಗೆ ಮತ ಹಾಕುವ ಮೂಲಕ ತೀರಿಸುತ್ತಾರೆ. ಜನರೊಂದಿಗೆ ನಡೆಸಿದ 500 ಸಣ್ಣ ಸಭೆಗಳಲ್ಲಿ ನಾನು ಇದನ್ನು ಕಂಡುಕೊಂಡಿದ್ದೇನೆ’ ಎಂದು ತಿಳಿಸಿದರು.

‘ಇಂಡಿಯಾ ಕೂಟದಿಂದ ಸರ್ಕಾರ’

ಪಟ್ನಾ (ಪಿಟಿಐ): ತನ್ನನ್ನು ದೇವರು ಕಳಿಸಿದ್ದಾನೆ ಎನ್ನುವ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆ ಬಗ್ಗೆ ವ್ಯಂಗ್ಯ ಮಾಡಿದ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್, ಜೂನ್ 4ರ ನಂತರ ‘ಇಂಡಿಯಾ’ ಕೂಟವು ಸರ್ಕಾರ ರಚಿಸಲಿದೆ ಎಂದು ಪ್ರತಿಪಾದಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮೋದಿ ಅವರು ತಮ್ಮನ್ನು ದೇವರ ಅವತಾರ ಎಂದು ಕರೆದುಕೊಳ್ಳುತ್ತಾರೆ. ತಾವು ಜೈವಿಕವಾಗಿ ಜನಿಸಿಲ್ಲ ಎನ್ನುತ್ತಾರೆ. ಫಲಿತಾಂಶ ಶೀಘ್ರದಲ್ಲೇ ತಿಳಿಯಲಿದೆ. ಪ್ರಧಾನಿ ಮೋದಿ ಇನ್ನು ಇರುವುದಿಲ್ಲ. ‘ಇಂಡಿಯಾ’ ಕೂಟವು ಸರ್ಕಾರ ರಚಿಸಲಿದೆ’ ಎಂದು ಹೇಳಿದರು.

‘ಒಂದು ವೇಳೆ ಮೋದಿ ಮೂರನೇ ಅವಧಿಗೆ ಅಧಿಕಾರ ಹಿಡಿದರೆ, ಅವರು ಸಂವಿಧಾನವನ್ನು ಬದಲಿಸುತ್ತಾರೆ ಮತ್ತು ಮೀಸಲಾತಿ ಅಂತ್ಯಗೊಳಿಸುತ್ತಾರೆ’ ಎಂದು ನುಡಿದರು.

ಟಿಎಂಸಿಯು ಒಳನುಸುಳುವಿಕೆಗೆ ಅವಕಾಶ ನೀಡಿದ್ದೇ ಕಾರಣ: ಪ್ರಧಾನಿ ನರೇಂದ್ರ ಮೋದಿ ಟೀಕೆ

‘ಬಂಗಾಳ: ಜನಸಂಖ್ಯಾ ಸ್ವರೂಪ ಬದಲು’

ಕಾಕದ್ವೀಪ್/ ಬಾರಿಪದಾ (ಪಿಟಿಐ): ಒಳನುಸುಳುವಿಕೆಯಿಂದ ಪಶ್ಚಿಮ ಬಂಗಾಳದ ಜನಸಂಖ್ಯಾ ಸ್ವರೂಪವು ಬದಲಾಗುತ್ತಿದೆ ಎಂದು ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ, ದೇಶದೊಳಗೆ ಅಕ್ರಮವಾಗಿ ಪ್ರವೇಶ ಮಾಡಿದವರು ಸ್ಥಳೀಯ ಯುವಕರ ಅವಕಾಶಗಳನ್ನು ಕಸಿಯುತ್ತಿದ್ದಾರೆ ಎಂದು ಬುಧವಾರ ಆರೋಪಿಸಿದರು.

ಟಿಎಂಸಿ ಸರ್ಕಾರವು ನಕಲಿ ಜಾತಿ ಪ್ರಮಾಣ ಪತ್ರಗಳನ್ನು ನೀಡುವ ಮೂಲಕ ಮೂಲ ಒಬಿಸಿ ಜನರ ಹಕ್ಕುಗಳನ್ನು ಮುಸ್ಲಿಮರಿಗೆ ನೀಡುತ್ತಿದೆ ಎಂದು ಪಶ್ಚಿಮ ಬಂಗಾಳದ ಕಾಕದ್ವೀಪ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಹೇಳಿದರು.

‘ಧರ್ಮದ ಕಾರಣಕ್ಕೆ ಹೊರದೂಡಲ್ಪಟ್ಟ ಅಲ್ಪಸಂಖ್ಯಾತರಿಗೆ ಟಿಎಂಸಿ ಪೌರತ್ವ ನೀಡುತ್ತಿದೆ. ಅವರು ಸಿಎಎ ಅನ್ನು ಅಷ್ಟು ವಿರೋಧ ಮಾಡಲು ಕಾರಣವೇನು? ಸಿಎಎ ಬಗ್ಗೆ ಟಿಎಂಸಿ ಏಕೆ ಸುಳ್ಳು ಹೇಳುತ್ತಿದೆ’ ಎಂದು ಪ್ರಶ್ನಿಸಿದರು.

‘ಮತುವಾ ಸಮುದಾಯದ ಜನರಿಗೆ ಪೌರತ್ವ ಲಭಿಸಬೇಕಿದ್ದು, ಅದಕ್ಕೆ ಅವರು ಎಲ್ಲ ರೀತಿಯಲ್ಲೂ ಅರ್ಹರು’ ಎಂದು ಅಭಿಪ್ರಾಯಪಟ್ಟರು.

‘ಟಿಎಂಸಿ ಮತ್ತು ‘ಇಂಡಿಯಾ’ ಕೂಟ ಪಶ್ಚಿಮ ಬಂಗಾಳವನ್ನು ಅಭಿವೃದ್ಧಿಯ ವಿರುದ್ಧ ದಿಕ್ಕಿನಲ್ಲಿ ಕೊಂಡೊಯ್ಯುತ್ತಿವೆ’ ಎಂದ ಅವರು, ‘ವಿಕಸಿತ ಭಾರತಕ್ಕಾಗಿ ವಿಕಸಿತ ಬಂಗಾಳ ಬೇಕು’ ಎಂದು ಪ್ರತಿಪಾದಿಸಿದರು.

ನಂತರ ಒಡಿಶಾದ ಮಯೂರ್‌ಭಂಜ್ ಮತ್ತು ಬಾಲೇಶ್ವರದಲ್ಲಿ ರ‍್ಯಾಲಿ ನಡೆಸಿದ ಪ್ರಧಾನಿ, ಒಡಿಶಾದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ದಿಢೀರ್ ಅನಾರೋಗ್ಯಕ್ಕೆ ಕಾರಣ ಏನು ಎನ್ನುವುದನ್ನು ತಿಳಿಯಲು ಒಂದು ಸಮಿತಿ ರಚಿಸುವುದಾಗಿ ತಿಳಿಸಿದರು.

‘ಹದಗೆಡುತ್ತಿರುವ ಅವರ ಆರೋಗ್ಯದ ಬಗ್ಗೆ ನವೀನ್ ಬಾಬು ಅವರ ಹಿತೈಷಿಗಳು ಚಿಂತೆಗೊಳಗಾಗಿದ್ದಾರೆ. ಕಳೆದ ಒಂದು ವರ್ಷದಿಂದ ಅವರ ಆರೋಗ್ಯ ಮತ್ತಷ್ಟು ಹದಗೆಡುತ್ತಿದೆ. ಅದರ ಹಿಂದೆ ಕುತಂತ್ರ ಇದೆಯೇ? ನವೀನ್ ಅವರ ಪರವಾಗಿ ಸರ್ಕಾರ ನಡೆಸುತ್ತಿರುವ ಲಾಬಿಯು ಅದಕ್ಕೆ ಕಾರಣವೇ’ ಎಂದು ಪ್ರಶ್ನಿಸಿದರು.

ಬಿಜೆಡಿ ಮುಖಂಡ ವಿ.ಕೆ.ಪಾಂಡಿಯನ್ ಅವರ ಬಗ್ಗೆ ಪರೋಕ್ಷವಾಗಿ ಪ್ರಸ್ತಾಪಿಸಿದ ಮೋದಿ, ‘ಒಡಿಯಾ ಮೂಲದವರೇ ಮುಖ್ಯಮಂತ್ರಿ ಆಗಬೇಕೆಂದು ಇಡೀ ಒಡಿಶಾ ಬಯಸುತ್ತಿದೆ. ರಾಜ್ಯದ ಜನ 25 ವರ್ಷದ ಬಿಜೆಡಿ ಆಡಳಿತಕ್ಕೆ ಪೂರ್ಣ ವಿರಾಮ ಇಡಲು ತೀರ್ಮಾನಿಸಿದ್ದಾರೆ’ ಎಂದು ಹೇಳಿದರು.

‘ಹತ್ತು ವರ್ಷಗಳ ಹಿಂದೆ ಭಾರತದಲ್ಲಿ ಭಯೋತ್ಪಾದನೆಯನ್ನು ತಡೆಯಬಹುದು ಎಂದು ಯಾರೂ ಅಂದುಕೊಂಡಿರಲಿಲ್ಲ. ದೇಶದ ಪ್ರಮುಖ ನಗರಗಳಲ್ಲಿ ಬಾಂಬ್ ಸ್ಫೋಟಗಳನ್ನು ತಡೆಯುವ ಮೂಲಕ ಅದನ್ನು ನಾವು ಸಾಧ್ಯವಾಗಿಸಿದೆವು. ಜಮ್ಮು–ಕಾಶ್ಮೀರದಲ್ಲಿ ಶಾಂತಿ ಮರುಸ್ಥಾಪಿಸಬಹುದು ಎಂದು ಯಾರೂ ಅಂದುಕೊಂಡಿರಲಿಲ್ಲ. ಆದರೆ, ಈಗ ಅಲ್ಲಿನ ಜನ ಗಣರಾಜ್ಯೋತ್ಸವ ಆಚರಿಸುತ್ತಿದ್ದಾರೆ ಮತ್ತು ದೊಡ್ಡ ಸಂಖ್ಯೆಯಲ್ಲಿ ಬಂದು ಮತದಾನ ಮಾಡುತ್ತಿದ್ದಾರೆ’ ಎಂದರು.



ಪ್ರಧಾನಿ ನರೇಂದ್ರ ಮೋದಿ ಅವರು ಒಡಿಶಾದ ಮಯೂರ್‌ಭಂಜ್‌ನಲ್ಲಿ ಚುನಾವಣಾ ಪ್ರಚಾರ ನಡೆಸಿದರು —ಪಿಟಿಐ ಚಿತ್ರ

‘ನನ್ನ ಆರೋಗ್ಯ ಉತ್ತಮವಾಗಿದೆ’

ಭುವನೇಶ್ವರ (ಪಿಟಿಐ): ‘ನನ್ನ ಆರೋಗ್ಯ ಉತ್ತಮವಾಗಿದ್ದು, ಕಳೆದ ಒಂದು ತಿಂಗಳಿಂದ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಪ್ರಚಾರ ಮಾಡುತ್ತಿದ್ದೇನೆ’ ಎಂದು ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಬುಧವಾರ ಹೇಳಿದರು.

ತಮ್ಮ ಆರೋಗ್ಯದ ಬಗ್ಗೆ ಪ್ರಧಾನಿ ಮೋದಿ ಆಡಿದ ಮಾತಿಗೆ ಪ್ರತಿಕ್ರಿಯಿಸಿದ ಅವರು, ‘ನಾನು ಅವರ (ಪ್ರಧಾನಿ) ಒಳ್ಳೆಯ ಸ್ನೇಹಿತ ಎಂದು ಅವರು ಈ ಹಿಂದೆ ಹೇಳಿದ್ದರು. ಅವರು ನನಗೆ ಕರೆ ಮಾಡಬೇಕಿತ್ತು. ಆದರೆ, ಒಡಿಶಾ ಹಾಗೂ ದೆಹಲಿಯ ಅನೇಕ ಬಿಜೆಪಿ ಮುಖಂಡರು ನನ್ನ ಆರೋಗ್ಯದ ಬಗ್ಗೆ ವದಂತಿಗಳನ್ನು ಹಬ್ಬಿಸುತ್ತಿದ್ದಾರೆ. ನಾನು ಆರೋಗ್ಯವಾಗಿದ್ದೇನೆ ಎಂದು ಪ್ರಧಾನಿಗೆ ಖಚಿತಪಡಿಸುತ್ತಿದ್ದೇನೆ’ ಎಂದು ತಿಳಿಸಿದರು.

‘ಜಗನ್ನಾಥ ತನ್ನ ಭಕ್ತ ಎಂದು ಮೋದಿ ನಂಬುವರೇ?’

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳಕ್ಕೆ ಪಡಿತರ ಅಕ್ಕಿ ಖರೀದಿಗೆ ಎಂದು ನೀಡಬೇಕಿದ್ದ ₹7000 ಕೋಟಿ ಮೊತ್ತವನ್ನು ಪ್ರಧಾನಿ ನರೇಂದ್ರ ಮೋದಿ ಅವರು ತಡೆಹಿಡಿದಿದ್ದರೇ ಎಂದು ಕಾಂಗ್ರೆಸ್ ಬುಧವಾರ ಪ್ರಶ್ನಿಸಿದೆ.

ಮೋದಿ ಅವರು ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರಚಾರ ನಡೆಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ.



‘ಪಡಿತರ ಅಂಗಡಿಗಳ ಮುಂದೆ ಪ್ರಧಾನಿಯ ಫೋಟೊ ಪ್ರದರ್ಶಿಸುತ್ತಿಲ್ಲ ಎಂದು ರಾಷ್ಟ್ರೀಯ ಭದ್ರತಾ ಕಾಯ್ದೆ ಅಡಿ ಪಶ್ಚಿಮ ಬಂಗಾಳಕ್ಕೆ ನೀಡಬೇಕಿದ್ದ ₹7000 ಕೋಟಿಯನ್ನು ತಡೆಹಿಡಿಯಲಾಗಿತ್ತು’ ಎಂದು ಹೇಳಿದ್ದಾರೆ.

ಬಿಜೆಪಿ ಅಭ್ಯರ್ಥಿ ಸಂಬಿತ್ ಪಾತ್ರಾ ಅವರು ಇತ್ತೀಚೆಗೆ ‘ಜಗನ್ನಾಥ ದೇವರು ಮೋದಿ ಅವರ ಭಕ್ತ’ ಎಂದು ಹೇಳಿದ್ದರು. ಈ ಹಿನ್ನೆಲೆಯಲ್ಲಿ ‘ಜಗನ್ನಾಥ ತನ್ನ ಭಕ್ತ ಎಂದು ಮೋದಿ ಅವರು ನಂಬಿರುವರೇ ಎಂದು ಪ್ರಶ್ನಿಸಿದ್ದಾರೆ.

ತನ್ನ ಬಗೆಗಿನ ಪ್ರಚಾರ ಮತ್ತು ಭಾರತದ ಮಕ್ಕಳಿಗೆ ಲಸಿಕೆ ಇವುಗಳಲ್ಲಿ ಯಾವುದು ಮುಖ್ಯ ಎಂದು ಪ್ರಧಾನಿ ತಿಳಿಸುವರೇ ಎಂದು ಪ್ರಶ್ನಿಸಿದ್ದಾರೆ. ‘ಪಶ್ಚಿಮ ಬಂಗಾಳವನ್ನು ಯಾಕೆ ಅವಹೇಳನ ಮಾಡುತ್ತಿದ್ದೀರಿ, ರಾಜ್ಯಕ್ಕೆ ನೀಡಬೇಕಿರುವ ನರೇಗಾ ಅನುದಾನವನ್ನು ಮೂರು ವರ್ಷಗಳಿಂದ ಯಾಕೆ ತಡೆಹಿಡಿದಿದ್ದೀರಿ’ ಎಂದಿದ್ದಾರೆ.

‘ರೀಮಲ್ ಚಂಡಮಾರುತದಿಂದಾಗಿ ಪಶ್ಚಿಮ ಬಂಗಾಳದ ಜನರು ಸಂಕಷ್ಟಕ್ಕೆ ಒಳಗಾಗಿದ್ದು, ಮೋದಿ ಅವರು ಸೂಕ್ಷ್ಮತೆ ತೋರದೆ ಯಾಕೆ ಚುನಾವಣೆಯ ಪ್ರಚಾರ ನಡೆಸುತ್ತಿದ್ದಾರೆ’ ಎಂದು ಟೀಕಿಸಿದ್ದಾರೆ.


ರಾಜಕೀಯ ಪಕ್ಷಗಳ ಸಂಖ್ಯೆ ಹೆಚ್ಚಳ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ರಾಜಕೀಯ ಪಕ್ಷಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ. 2009ರಿಂದ 2024ರ ವರೆಗಿನ ಅವಧಿಯಲ್ಲಿ ರಾಜಕೀಯ ಪಕ್ಷಗಳ ಸಂಖ್ಯೆ ಶೇ 104ರಷ್ಟು ಹೆಚ್ಚಳವಾಗಿದೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ತಿಳಿಸಿದೆ.

ಈ ಬಾರಿಯ ಚುನಾವಣೆಯಲ್ಲಿ ಒಟ್ಟು 751 ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. 8,337 ಅಭ್ಯರ್ಥಿಗಳ ಪ್ರಮಾಣಪತ್ರವನ್ನು ಪರಿಶೀಲಿಸಿದ ಎಡಿಆರ್ ಈ ಮಾಹಿತಿ ಕಲೆಹಾಕಿದೆ. ರಾಷ್ಟ್ರೀಯ ಪಕ್ಷಗಳ 1,333 ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ. ಪ್ರಾದೇಶಿಕ ಪಕ್ಷಗಳ 532, ಇತರ ನೋಂದಾಯಿತ ಸಣ್ಣ ಪಕ್ಷಗಳ 2,580 ಅಭ್ಯರ್ಥಿಗಳು ಹಾಗೂ 3,915 ಸ್ವತಂತ್ರ ಸ್ಪರ್ಧಿಗಳು ಕಣದಲ್ಲಿದ್ದಾರೆ.

ಶೇ 9.6 ಮಹಿಳಾ ಅಭ್ಯರ್ಥಿಗಳು: ಈ ಬಾರಿಯ ಚುನಾವಣೆಯಲ್ಲಿ ಒಟ್ಟು ಅಭ್ಯರ್ಥಿಗಳಲ್ಲಿ ಮಹಿಳಾ ಸ್ಪರ್ಧಿಗಳ ಪ್ರಮಾಣ ಶೇ 9.6 ಆಗಿದೆ ಎಂದು ಎಡಿಆರ್ ವರದಿ ತಿಳಿಸಿದೆ. 8,337 ಅಭ್ಯರ್ಥಿಗಳಲ್ಲಿ 797 ಮಹಿಳೆಯರು ಇದ್ದಾರೆ. 2009ರ ಚುನಾವಣೆಯಲ್ಲಿ ಮಹಿಳಾ ಅಭ್ಯರ್ಥಿಗಳ ಪ್ರಮಾಣ ಶೇ 7 ರಷ್ಟಿತ್ತು. 2014 ರಲ್ಲಿ ಶೇ 8 ಹಾಗೂ 2019 ರಲ್ಲಿ ಶೇ 9 ರಷ್ಟು ಮಹಿಳಾ ಸ್ಪರ್ಧಿಗಳು ಇದ್ದರು.

ರಾಷ್ಟ್ರೀಯ ಪಕ್ಷಗಳ 1,333 ಅಭ್ಯರ್ಥಿಗಳಲ್ಲಿ 443 ಮಂದಿ ಅಪರಾಧ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಈ ಪೈಕಿ 295 ಮಂದಿ ವಿರುದ್ಧ ಗಂಭೀರ ಅಪರಾಧ ಪ್ರಕರಗಳು ಇವೆ. ಪ್ರಾದೇಶಿಕ ಪಕ್ಷಗಳ 532 ಅಭ್ಯರ್ಥಿಗಳಲ್ಲಿ 249 ಮಂದಿ ಮೇಲೆ ಅಪರಾಧ ಪ್ರಕರಣಗಳು ಇವೆ ಎಂದು ವರದಿ ತಿಳಿಸಿದೆ.



ಪ್ರಧಾನಿ ಭೇಟಿ: ಕನ್ಯಾಕುಮಾರಿಯಲ್ಲಿ ಭದ್ರತೆಗೆ ಎರಡು ಸಾವಿರ ಸಿಬ್ಬಂದಿ

ಕನ್ಯಾಕುಮಾರಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಎರಡು ದಿನಗಳ ವಾಸ್ತವ್ಯಕ್ಕೆ ಇಲ್ಲಿನ ವಿವೇಕಾನಂದ ಸ್ಮಾರಕವು ಸಕಲ ರೀತಿಯಲ್ಲಿ ಸಜ್ಜಾಗಿದೆ. ಸ್ಮಾರಕದ ಸುತ್ತ ಬಿಗಿ ಭದ್ರತೆ ಇರಲಿದೆ. ಇದಕ್ಕಾಗಿ ಕನ್ಯಾಕುಮಾರಿಯಲ್ಲಿ ಎರಡು ಸಾವಿರ ಮಂದಿ ಪೊಲೀಸ್ ಸಿಬ್ಬಂದಿ, ವಿವಿಧ ಭದ್ರತಾ ಸಂಸ್ಥೆಗಳ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ.

ಮೋದಿ ಅವರು ಇಲ್ಲಿ ಧ್ಯಾನಕ್ಕೆ ಕೂರಲಿದ್ದಾರೆ. 2019ರ ಲೋಕಸಭಾ ಚುನಾವಣೆಯ ಪ್ರಚಾರ ಕಾರ್ಯಗಳು ಕೊನೆಗೊಂಡ ನಂತರ ಮೋದಿ ಅವರು ಕೇದಾರನಾಥದ ರುದ್ರ ಗುಹೆಯಲ್ಲಿ ಧ್ಯಾನ ಮಾಡಿದ್ದರು.

ಈ ಬಾರಿ ಮೋದಿ ಅವರು ಲೋಕಸಭಾ ಚುನಾವಣೆಯ ಬಹಿರಂಗ ಪ್ರಚಾರದ ಅವಧಿ ಮುಗಿದ ನಂತರ, ಮೇ 30ರ ಸಂಜೆಯಿಂದ ಜೂನ್ 1ರ ಸಂಜೆಯವರೆಗೆ ವಿವೇಕಾನಂದ ಸ್ಮಾರಕದ ‘ಧ್ಯಾನ ಮಂಟಪ’ದಲ್ಲಿ ಧ್ಯಾನ ಮಾಡಲಿದ್ದಾರೆ ಎಂದು ಬಿಜೆಪಿ ನಾಯಕರು ತಿಳಿಸಿದ್ದಾರೆ.

ತಿರುನಲ್ವೇಲಿಯ ವಲಯ ಡಿಐಜಿ ಪ್ರವೇಶ್ ಕುಮಾರ್ ಅವರು ಎಸ್‌ಪಿ ಇ. ಸುಂದರವದನಂ ಅವರ ಜೊತೆ ಭದ್ರತಾ ವ್ಯವಸ್ಥೆಯ ಪರಿಶೀಲನೆ ನಡೆಸಿದ್ದಾರೆ. ಪ್ರಧಾನಿಯವರ ಭದ್ರತಾ ತಂಡವು ಸ್ಥಳವನ್ನು ಈಗಾಗಲೇ ತಲುಪಿದೆ.

ಕನ್ಯಾಕುಮಾರಿಯಲ್ಲಿ ಹಾಗೂ ಅದರ ಸುತ್ತಮುತ್ತ ಒಟ್ಟು 2 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ.

ತಾತ್ಕಾಲಿಕ ವೇಳಾಪಟ್ಟಿಯ ಪ್ರಕಾರ ಮೋದಿ ಅವರು ಗುರುವಾರ ಮಧ್ಯಾಹ್ನದ ನಂತರ ಕನ್ಯಾಕುಮಾರಿ ತಲುಪಲಿದ್ದಾರೆ. ನಂತರ ಅವರು ವಿವೇಕಾನಂದ ಸ್ಮಾರಕಕ್ಕೆ ತೆರಳಲಿದ್ದಾರೆ. ಅವರು ಜೂನ್ 1ರ ಮಧ್ಯಾಹ್ನ 3 ಗಂಟೆಯವರೆಗೆ ಅಲ್ಲಿಯೇ ಇರುವ ನಿರೀಕ್ಷೆ ಇದೆ. ಜೂನ್ 1ರಂದು ಲೋಕಸಭಾ ಚುನಾವಣೆಯ ಕೊನೆಯ ಹಂತದ ಮತದಾನ ನಡೆಯಲಿದೆ.

ಪ್ರಧಾನಿಯವರು ವಿವೇಕಾನಂದ ಸ್ಮಾರಕದಲ್ಲಿ 45 ಗಂಟೆಗಳ ಕಾಲ ವಾಸ್ತವ್ಯ ಹೂಡಲಿರುವ ಕಾರಣ ಕರಾವಳಿ ಕಾವಲು ಪಡೆ ಮತ್ತು ಭಾರತೀಯ ನೌಕಾದಳವು ಸಮುದ್ರ ಗಡಿಗಳಲ್ಲಿ ಕಟ್ಟೆಚ್ಚರ ವಹಿಸಲಿವೆ ಎಂದು ಮೂಲಗಳು ಹೇಳಿವೆ.



ಕನ್ಯಾಕುಮಾರಿಯ ವಿವೇಕಾನಂದ ಸ್ಮಾರಕ ಮತ್ತು ತಿರುವಳ್ಳುವರ್ ಪ್ರತಿಮೆಯ ದೃಶ್ಯ —ಸಂಗ್ರಹ ಚಿತ್ರ

ದೂರು: ಮಮತಾ ಎಚ್ಚರಿಕೆ

ಬಾರೂಇಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಕನ್ಯಾಕುಮಾರಿಯಲ್ಲಿ ಧ್ಯಾನ ಮಾಡುವುದು ಸುದ್ದಿ ವಾಹಿನಿಗಳಲ್ಲಿ ಪ್ರಸಾರಗೊಂಡಲ್ಲಿ ಆ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ನೀಡಲಾಗುತ್ತದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬುಧವಾರ ಹೇಳಿದ್ದಾರೆ.

‘ಅವರು ಧ್ಯಾನ ಮಾಡಬಹುದು. ಆದರೆ ಸುದ್ದಿ ವಾಹಿನಿಗಳು ಅದನ್ನು ಪ್ರದರ್ಶಿಸುವಂತೆ ಇಲ್ಲ’ ಎಂದು ಬ್ಯಾನರ್ಜಿ ಅವರು ಹೇಳಿದ್ದಾರೆ. ಅದನ್ನು ವಾಹಿನಿಗಳು ಪ್ರದರ್ಶಿಸುವುದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಆಗುತ್ತದೆ ಎಂದಿದ್ದಾರೆ.

‘ಧ್ಯಾನ ಮಾಡಲಿಕ್ಕೆ ಯಾರಾದರೂ ಕ್ಯಾಮೆರಾಗಳನ್ನು ಒಯ್ಯುವ ಅಗತ್ಯ ಇದೆಯೇ’ ಎಂದು ಮಮತಾ ಪ್ರಶ್ನಿಸಿದ್ದಾರೆ. ಇದು ಬಹಿರಂಗ ಪ್ರಚಾರ ಕೊನೆಗೊಂಡ ನಂತರ, ಮತದಾನ ಆರಂಭವಾಗುವವರೆಗಿನ ಅವಧಿಯಲ್ಲಿಯೂ ಪ್ರಚಾರ ನಡೆಸುವ ಒಂದು ಬಗೆ ಎಂದು ದೂರಿದ್ದಾರೆ.

ಮೋದಿ ಪ್ರಾಯಶ್ಚಿತ್ತ ಒಳ್ಳೆಯದು: ಸಿಬಲ್

ಚಂಡೀಗಢ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಧ್ಯಾನಕ್ಕೆ ಕೂರುವ ಬಗ್ಗೆ ಪ್ರತಿಕ್ರಿಯಿಸಿರುವ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್, ‘ಅವರು ಪ್ರಾಯಶ್ಚಿತ್ತ ಮಾಡಿಕೊಳ್ಳಲು ಕನ್ಯಾಕುಮಾರಿಗೆ ಹೋಗುವುದಾದರೆ ಒಳ್ಳೆಯದು ಅಥವಾ ವಿವೇಕಾನಂದರ ಬರಹ ಮತ್ತು ಭಾಷಣಗಳಿಂದ ಸ್ಫೂರ್ತಿ ಪಡೆಯುವ ಸಲುವಾಗಿ ಹೋಗುವುದಾದರೆ, ಅದು ಇನ್ನೂ ಒಳ್ಳೆಯದು’ ಎಂದು ಬುಧವಾರ ಹೇಳಿದರು.

‘ವಿವೇಕ’ ಎಂದರೆ ಏನು ಎಂಬುದನ್ನು ಅರ್ಥ ಮಾಡಿಕೊಳ್ಳದ ವ್ಯಕ್ತಿ ಏನು ತಾನೇ ‘ಧ್ಯಾನ’ ಮಾಡಬಲ್ಲರು’ ಎಂದಿದ್ದಾರೆ.

ಕಾಂಗ್ರೆಸ್ ದೂರು: ‘ಪ್ರಧಾನಿ ನರೇಂದ್ರ ಮೋದಿ ಅವರು, ಮೇ 30ರಿಂದ ಕನ್ಯಾಕುಮಾರಿಯ ಧ್ಯಾನಮಂಟಪದಲ್ಲಿ ಧ್ಯಾನಕ್ಕೆ ಹೊರಡುತ್ತೇನೆ ಎನ್ನುವ ಮೂಲಕ ‘ಮೌನ ಅವಧಿ’ಯ ನಿರ್ಬಂಧಗಳನ್ನು ಉಲ್ಲಂಘಿಸಿದ್ದು, ಇದು ಚುನಾವಣಾ ನೀತಿ ಸಂಹಿತೆಗೆ ವಿರುದ್ಧವಾಗಿದೆ. ಅದರ ಬಗ್ಗೆ ಮಾಧ್ಯಮಗಳು ವರದಿ ಮಾಡದಂತೆ ಚುನಾವಣಾ ಆಯೋಗವು ಕ್ರಮ ವಹಿಸಬೇಕು ಎಂದು ಕಾಂಗ್ರೆಸ್ ಬುಧವಾರ ಒತ್ತಾಯಿಸಿದೆ.

ಕಾಂಗ್ರೆಸ್‌ನ ರಣದೀಪ್ ಸುರ್ಜೇವಾಲಾ, ಅಭಿಷೇಕ್ ಸಿಂಘ್ವಿ ಮತ್ತು ಸೈಯದ್ ನಾಸಿರ್ ಹುಸೇನ್ ಅವರ ನಿಯೋಗವು ಚುನಾವಣಾ ಆಯೋಗಕ್ಕೆ ಭೇಟಿ ನೀಡಿ, ಈ ಬಗ್ಗೆ ದೂರು ಸಲ್ಲಿಸಿತು.

ದಕ್ಷಿಣ ಶಿಕ್ಷಕರ ಕ್ಷೇತ್ರ: ಕಾಂಗ್ರೆಸ್–ಮೈತ್ರಿ ಅಭ್ಯರ್ಥಿ ನಡುವೆ ನೇರ ಹಣಾಹಣಿಗೆ ಅಖಾಡ ಸಜ್ಜು

ಅನುಭವಿ ಎದುರು ರಿಯಲ್ ಎಸ್ಟೇಟ್ ಉದ್ಯಮಿ

• ಎಂ. ಮಹೇಶ

ಮೈಸೂರು: ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಅನುಭವಿ, ಕಾಂಗ್ರೆಸ್‌ನ ಮರಿತಿಬ್ಬೇಗೌಡ ಮತ್ತು ಜೆಡಿಎಸ್-ಬಿಜೆಪಿ ಮೈತ್ರಿಕೂಟದಿಂದ ಕಣಕ್ಕಿಳಿದಿರುವ ರಿಯಲ್ ಎಸ್ಟೇಟ್ ಉದ್ಯಮಿ ಕೆ.ವಿವೇಕಾನಂದ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಜೂನ್ 3ರಂದು ಮತದಾನ ನಡೆಯಲಿದ್ದು, ಮಾಜಿ ಶಾಸಕ, ಕನ್ನಡ ಪರ ಹೋರಾಟಗಾರ ವಾಟಾಳ್ ನಾಗರಾಜ್, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಸಿ. ಪುಟ್ಟಸಿದ್ದಶೆಟ್ಟಿ, ನಿವೃತ್ತ ಡಿಡಿಪಿಯು ನಾಗಮಲ್ಲೇಶ್ ಸೇರಿದಂತೆ ಒಟ್ಟು 11 ಮಂದಿ ಕಣದಲ್ಲಿದ್ದಾರೆ. ಆದರೆ, ಪ್ರಮುಖ ಪಕ್ಷಗಳ ಅಭ್ಯರ್ಥಿಗಳ ನಡುವೆಯಷ್ಟೇ ಪೈಪೋಟಿ ಕಂಡುಬಂದಿದೆ. ‘ಹಳೇ ಹುಲಿ’ ಮರಿತಿಬ್ಬೇಗೌಡ ಅವರ ಗೆಲುವಿನ ಓಟಕ್ಕೆ ತಡೆಯೊಡ್ಡಲು ಎನ್‌ಡಿಎ ಮೈತ್ರಿಕೂಟ ಪ್ರಬಲ ಅಸ್ತ್ರಗಳನ್ನು ಪ್ರಯೋಗಿಸುತ್ತಿದೆ.

ಕಾಂಗ್ರೆಸ್–ಜೆಡಿಎಸ್ ಅಭ್ಯರ್ಥಿಗಳಿಗಿಂತಲೂ ಮುಖ್ಯಮಂತ್ರಿ ಸಿದ್ದರಾಮಯ್ಯ–ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ನಡುವಿನ ಹೋರಾಟವೆಂದೇ ಬಿಂಬಿತವಾಗುತ್ತಿದೆ. ಇಬ್ಬರು ನಾಯಕರೂ ಚುನಾವಣೆಯನ್ನು ಪ್ರತಿಷ್ಠೆಯಾಗಿ ಪರಿಗಣಿಸಿರುವುದೇ ಇದಕ್ಕೆ ಕಾರಣ.

ಸತತ 5ನೇ ಬಾರಿಗೆ ಸ್ಪರ್ಧೆ: ಮರಿತಿಬ್ಬೇಗೌಡ ಅವರು ಇಲ್ಲಿ ಸತತ ನಾಲ್ಕು ಬಾರಿಗೆ ಗೆದ್ದಿದ್ದಾರೆ. 5ನೇ ಬಾರಿಗೆ ಆಯ್ಕೆ ಬಯಸಿದ್ದಾರೆ. ಮೊದಲಿಗೆ ಅಂದರೆ 2000ದಲ್ಲಿ ಅವರು ಕಾಂಗ್ರೆಸ್‌ನಿಂದ ವಿಜೇತರಾಗಿದ್ದರು. 2006ರಲ್ಲಿ ಕುಮಾರಸ್ವಾಮಿ ಜೊತೆ ಗುರುತಿಸಿಕೊಂಡಿದ್ದ ಅವರಿಗೆ, ಆ ಪಕ್ಷದ ಟಿಕೆಟ್ ಸಿಗದಿದ್ದಕ್ಕೆ ಬೇಸರಗೊಂಡು ಪಕ್ಷೇತರಾಗಿ ಸ್ಪರ್ಧಿಸಿ ಗೆದ್ದಿದ್ದರು. ನಂತರ 2012 ಹಾಗೂ 2018ರ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಜಯಿಸಿದ್ದರು. ವಿಧಾನಪರಿಷತ್ ಉಪಸಭಾಪತಿಯೂ ಆಗಿದ್ದರು.

ಕ್ರಮೇಣ ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡಿದ್ದ ಅವರು, ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ ಕಾಲಕ್ಕೆ ಕಾಂಗ್ರೆಸ್ ಅಭ್ಯರ್ಥಿ ಮಧು ಮಾದೇಗೌಡ ಅವರಿಗೆ ಬೆಂಬಲ ನೀಡಿದ್ದರು. ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ಮಾಡಿದ್ದರು. ಇದೇ ಮಾರ್ಚ್‌ನಲ್ಲಿ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ, ಬಳಿಕ ಕಾಂಗ್ರೆಸ್ ಸೇರ್ಪಡೆಯಾದರು. ಅವರಿಗೆ ಕೊಟ್ಟಿದ್ದ ಭರವಸೆಯಂತೆ ‘ಕೈ’ ಮುಖಂಡರು ಟಿಕೆಟ್ ನೀಡಿದ್ದಾರೆ.

ಕ್ಷೇತ್ರದಲ್ಲಿ ಸತತ 24 ವರ್ಷಗಳಿಂದಲೂ ಏಕವ್ಯಕ್ತಿಯದ್ದೇ (ಮರಿತಿಬ್ಬೇಗೌಡ) ಹಿಡಿತ. ಒಕ್ಕಲಿಗ ಸಮಾಜದ ಪ್ರಭಾವಿ ನಾಯಕರಾಗಿ ಬೆಳೆದಿರುವ ಅವರನ್ನು ಮತದಾರರು ಗೆಲ್ಲಿಸುತ್ತಾ ಬಂದಿದ್ದಾರೆ. ‘ಮರಿತಿಬ್ಬೇಗೌಡ ಕೋಟೆ’ ವಶಪಡಿಸಿಕೊಳ್ಳಲು ಜೆಡಿಎಸ್ ನಾಯಕ ಕುಮಾರಸ್ವಾಮಿ ಬಿಜೆಪಿ ಬೆಂಬಲದೊಂದಿಗೆ ಒಕ್ಕಲಿಗ ಸಮಾಜದವರೇ ಆದ ತಮ್ಮ ಆಪ್ತ ವಿವೇಕಾನಂದ ಅವರನ್ನು ಕಣಕ್ಕಿಳಿಸಿದ್ದಾರೆ. ಇಬ್ಬರೂ ವ್ಯಾಪಕ ಪ್ರಚಾರ ನಡೆಸುತ್ತಿದ್ದಾರೆ.

ಸೇಡು ತೀರಿಸಿಕೊಳ್ಳಲು ತಂತ್ರ: ಮೂರು ಚುನಾವಣೆಗಳಿಂದೀಚೆಗೆ ಇಲ್ಲಿ ಕಾಂಗ್ರೆಸ್ ಗೆಲುವು ಕಂಡಿಲ್ಲ. ಇದೀಗ, ಮರಿತಿಬ್ಬೇಗೌಡ ಮೂಲಕ ಪಕ್ಷದ ಸೋಲಿನ ಸರಪಳಿ ಕಳಚಿಕೊಳ್ಳಲು ಬಯಸಿದೆ. ತಮ್ಮಲ್ಲಿದ್ದ ನಾಯಕನನ್ನು ಸೆಳೆದುಕೊಂಡ ಕಾಂಗ್ರೆಸ್ ವಿರುದ್ಧ ಸೇಡು ತೀರಿಸಿಕೊಳ್ಳಲು ಜೆಡಿಎಸ್ ನಾಯಕರು ತಂತ್ರ ರೂಪಿಸಿದ್ದಾರೆ. ಇದಕ್ಕೆ ಬಿಜೆಪಿ ನಾಯಕರ ನೆರವು ಪಡೆದಿದ್ದಾರೆ. ಆದರೆ, ಮೂರ್ನಾಲ್ಕು ಬಾರಿ ‘ಸಮನ್ವಯ ಸಭೆ’ ನಡೆಸಿದರೂ ಕಾರ್ಯಕರ್ತರಿಂದ ನಿರೀಕ್ಷಿತ ಪ್ರತಿಕ್ರಿಯೆ ಕಂಡು ಬಾರದಿರುವುದು ಉಭಯ ಪಕ್ಷಗಳ ನಾಯಕರ ತಲೆನೋವಿಗೆ ಕಾರಣವಾಗಿದೆ!

ಕ್ಷೇತ್ರದಲ್ಲಿ ಇದೇ ಮೊದಲ ಬಾರಿಗೆ ನೇರ ಪೈಪೋಟಿ ಕಂಡುಬಂದಿದೆ. ‘ಪ್ರಥಮ ಪ್ರಾಶಸ್ತ್ಯ’ದ ಮತಗಳಲ್ಲಿ ಭಾರಿ ಅಂತರ ಪಡೆದವರು ಗೆಲುವಿನ ದಡವನ್ನು ಸಲೀಸಾಗಿ ತಲುಪಬಹುದು.

ನಿಕಟಪೂರ್ವ ಪ್ರತಿನಿಧಿ

- ಮರಿತಿಬ್ಬೇಗೌಡ (ಜೆಡಿಎಸ್)
- ಪಡೆದ ಮತ: 6,003
- ಸಮೀಪದ ಸ್ಪರ್ಧಿ: ಎಂ.ಲಕ್ಷ್ಮಣ (ಕಾಂಗ್ರೆಸ್) (5,514 ಮತಗಳು)

ದಕ್ಷಿಣ ಶಿಕ್ಷಕರ ಕ್ಷೇತ್ರ

ಕ್ಷೇತ್ರದ ವ್ಯಾಪ್ತಿಯಲ್ಲಿರುವ ಜಿಲ್ಲೆಗಳು

- ಮೈಸೂರು
- ಮಂಡ್ಯ
- ಚಾಮರಾಜನಗರ
- ಹಾಸನ



ಕಣದಲ್ಲಿರುವ ಇತರರು

ನಾಗೇಂದ್ರ ಬಾಬು (ಕೆಜೆಪಿ), ವಾಟಾಳ್ ನಾಗರಾಜ್ (ಕನ್ನಡ ಚಳವಳಿ ವಾಟಾಳ್ ಪಕ್ಷ), ಅನಿಲ್ ಕುಮಾರ್, ಅಂಬರೀಷ್, ನಾಗಮಲ್ಲೇಶ್, ನಿಂಗರಾಜು ಎಸ್., ಕೆ.ಸಿ. ಪುಟ್ಟಸಿದ್ದಶೆಟ್ಟಿ, ಆರ್. ಮಹೇಶ್ ಹಾಗೂ ರಾಜು ಕೆ. (ಎಲ್ಲರೂ ಪಕ್ಷೇತರರು)

ಮತದಾರರ ವಿವರ ಮತಗಟ್ಟೆಗಳು 44

- 11,998 ಪುರುಷರು
- 9,550 ಮಹಿಳೆಯರು
- 1 ಲಿಂಗತ್ವ ಅಲ್ಪಸಂಖ್ಯಾತರು
- 21,549 ಒಟ್ಟು

ಕಣದಲ್ಲಿನ ವಿಶೇಷ

- ಮಾಜಿ ಶಾಸಕರು, ಕೃಷಿಕರು, ಸಾಮಾಜಿಕ ಕಾರ್ಯಕರ್ತರು, ನಿವೃತ್ತ ಡಿಡಿಪಿಯು ಸ್ಪರ್ಧೆ
- ಶಿಕ್ಷಕರ ಕ್ಷೇತ್ರವಾದರೂ ಶಿಕ್ಷಕರಾರೂ ಸ್ಪರ್ಧಿಸಿಲ್ಲ
- ಹಾಸನದ ಯಾರೊಬ್ಬರೂ ಕಣದಲ್ಲಿಲ್ಲ
- ಮಹಿಳೆಯರ‍್ಯಾರೂ ಸ್ಪರ್ಧಿಸಿಲ್ಲ
- ಸ್ಪರ್ಧೆಗಷ್ಟೆ ಸೀಮಿತವಾಗಿರುವ ವಾಟಾಳ್ ನಾಗರಾಜ್ ಪ್ರಚಾರದಲ್ಲಿ ಕಾಣಿಸಿಕೊಂಡಿಲ್ಲ
- 29 ವಿಧಾನಸಭಾ ಕ್ಷೇತ್ರಗಳು, 26 ತಾಲ್ಲೂಕುಗಳ ವ್ಯಾಪ್ತಿ ಹೊಂದಿದೆ
- ಇಲ್ಲಿ ಬಿಜೆಪಿ ಒಮ್ಮೆಯೂ ಗೆದ್ದಿಲ್ಲ
- ಮಂಡ್ಯದ ಒಕ್ಕಲಿಗರ ನಡುವೆ ಪೈಪೋಟಿ
- ಮುಖ್ಯಮಂತ್ರಿ ಸಿದ್ದರಾಮಯ್ಯ–ಎಚ್.ಡಿ.ಕುಮಾರಸ್ವಾಮಿಗೆ ಪ್ರತಿಷ್ಠೆ



24 ವರ್ಷಗಳಲ್ಲಿ 20 ವರ್ಷಗಳವರೆಗೆ ವಿರೋಧ ಪಕ್ಷದಲ್ಲೇ ಇದ್ದೆ. ಆದರೂ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿದ್ದೇನೆ. ಈ ಬಾರಿ ನಮ್ಮದೇ ಸರ್ಕಾರ ಇರುವುದು ಕೈಹಿಡಿಯಲಿದೆ

ಮರಿತಿಬ್ಬೇಗೌಡ, ಕಾಂಗ್ರೆಸ್ ಅಭ್ಯರ್ಥಿ



ಶಿಕ್ಷಕರ ಸೇವೆಗಾಗಿ ರಾಜಕಾರಣಕ್ಕೆ ಬಂದಿರುವೆ. ಗೆದ್ದರೆ ಸರ್ಕಾರದಿಂದ ದೊರೆಯುವ ಗೌರವಧನದಿಂದ ಶಿಕ್ಷಕರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಿ ಸಂಕಷ್ಟದಲ್ಲಿರುವವರಿಗೆ ನೆರವಾಗುವೆ

ಕೆ.ವಿವೇಕಾನಂದ, ಜೆಡಿಎಸ್ ಅಭ್ಯರ್ಥಿ

ಪೆನ್‌ಡ್ರೈವ್ ಪ್ರಕರಣ ಪರಿಣಾಮ?

ಒಮ್ಮತದ ಅಭ್ಯರ್ಥಿ ಘೋಷಣೆ ವಿಷಯದಲ್ಲಿ ಎನ್‌ಡಿಎ ಮೈತ್ರಿಕೂಟದಲ್ಲಿ ಉಂಟಾದ ಗೊಂದಲ ಪರಿಣಾಮ ಬೀರಬಹುದು.

ಮೊದಲಿಗೆ ಬಿಜೆಪಿ ತನ್ನ ಅಭ್ಯರ್ಥಿಯಾಗಿ ಮೈಸೂರು ವಿ.ವಿ. ಸಿಂಡಿಕೇಟ್ ಮಾಜಿ ಸದಸ್ಯ ಈ.ಸಿ.ನಿಂಗರಾಜ್ ಹೆಸರು ಘೋಷಿಸಿತ್ತು. ನಂತರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟು ಕೊಟ್ಟಿತು. ಜೆಡಿಎಸ್ ಅಭ್ಯರ್ಥಿ ನಾಮಪತ್ರ ಸಲ್ಲಿಕೆಗೂ ಮುನ್ನವೇ ನಿಂಗರಾಜ್ ನಾಮಪತ್ರ ಸಲ್ಲಿಸಿದ್ದರು. ಆದರೆ, ವರಿಷ್ಠರ ಮನವೊಲಿಕೆ ಬಳಿಕ ವಾಪಸ್ ಪಡೆದು, ವಿವೇಕಾನಂದ ಅವರನ್ನು ಬೆಂಬಲಿಸುವುದಾಗಿ ತಿಳಿಸಿದ್ದಾರೆ.

ಈ ನಡುವೆ, ಜೆಡಿಎಸ್ ಟಿಕೆಟ್ ಆಕಾಂಕ್ಷಿ ಆಗಿದ್ದ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಅವರಿಗೆ ಅವಕಾಶ ಸಿಗಲಿಲ್ಲ. ಅವರು ಪಕ್ಷೇತರರಾಗಿ ಸ್ಪರ್ಧಿಸದಂತೆಯೂ ‘ನೋಡಿಕೊಳ್ಳಲಾಯಿತು’. ಅವರೂ ಪಕ್ಷದ ಪರ ಪ್ರಚಾರ ನಡೆಸುತ್ತಿದ್ದಾರೆ. ಆದರೆ, ಬೆಂಬಲಿಗರ ಅಸಮಾಧಾನ ತಣಿದಿಲ್ಲ. ಹೀಗಾಗಿ, ಎನ್‌ಡಿಎ ಮೈತ್ರಿಕೂಟಕ್ಕೆ ಒಳೇಟಿನ ಭೀತಿ ಇದೆ.

‘ಕ್ಷೇತ್ರದವರೇ ಆಗಿರುವ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣ’ ಕೂಡ ಸದ್ದು ಮಾಡುತ್ತಿದೆ. ಇದಕ್ಕೆ, ಪ್ರಬುದ್ಧ ಮತದಾರರಾದ ಶಿಕ್ಷಕರು, ಉಪನ್ಯಾಸಕರು ಹಾಗೂ ವಿಶ್ವವಿದ್ಯಾಲಯಗಳಲ್ಲಿನ ಬೋಧಕರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬ ಕುತೂಹಲವೂ ಜನರಲ್ಲಿದೆ.

ಅಕ್ರಮವಾಗಿ ಬಿಟ್‌ಕಾಯಿನ್ ವರ್ಗಾವಣೆ ಆರೋಪ • ಎಸ್‌ಐಟಿ ತನಿಖೆ ಚುರುಕು

ಮತ್ತೊಬ್ಬ ಇನ್‌ಸ್ಪೆಕ್ಟರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಅಕ್ರಮದ ತನಿಖೆ ಚುರುಕುಗೊಳಿಸಿರುವ ಸಿಐಡಿ ವಿಶೇಷ ತನಿಖಾ ದಳದ (ಎಸ್‌ಐಟಿ) ಪೊಲೀಸರು, ಈ ಪ್ರಕರಣದಲ್ಲಿ ಭಾಗಿಯಾದ ಆರೋಪದ ಮೇಲೆ ಮತ್ತೊಬ್ಬ ಇನ್‌ಸ್ಪೆಕ್ಟರ್ ಚಂದ್ರಾಧರ್ ಅವರನ್ನು ಬಂಧಿಸಿದ್ದಾರೆ.

ಚಂದ್ರಾಧರ್ ಅವರನ್ನು ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಐದು ದಿನಗಳ ಕಾಲ ಕಸ್ಟಡಿಗೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಂದ್ರಾಧರ್ ಅವರು ಈ ಹಿಂದೆ ಯಲಹಂಕದ ಪೊಲೀಸ್ ತರಬೇತಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಪ್ರಕರಣದಲ್ಲಿ ಇವರ ಪಾತ್ರವೂ ಕಂಡುಬಂದ ಮೇಲೆ ಕರ್ತವ್ಯದಿಂದ ಅಮಾನತು ಮಾಡಲಾಗಿತ್ತು. ಬಂಧನದ ಭೀತಿಯಿಂದ ಅವರು ತಲೆಮರೆಸಿಕೊಂಡಿದ್ದರು. ನಗರದಲ್ಲಿರುವ ಅವರ ನಿವಾಸಕ್ಕೆ ಬುಧವಾರ ಬಂದಿದ್ದ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಬಂಧಿಸಲಾಯಿತು ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಬಿಟ್‌ಕಾಯಿನ್ ಅಕ್ರಮ ಪ್ರಕರಣದಲ್ಲಿ 'ಇದುವರೆಗೂ ಎಚ್‌ಎನ್‌ಆರ್ ಲೇಬರ್ಸ್ ಜಿಸಿಐಡಿ ಟೆಕ್ನಾಲಜೀಸ್ ಸಂಸ್ಥೆಯ ಸಿಇಒ ಸಂತೋಷ್, ಪಶ್ಚಿಮ ಬಂಗಾಳದ ರಾಬಿನ್ ಖಂಡೇನ್‌ವಾಲ್, ಪ್ರಮುಖ ಆರೋಪಿ ಶ್ರೀಕಿ ಅಲಿಯಾಸ್ ಶ್ರೀಕೃಷ್ಣ, ಇನ್‌ಸ್ಪೆಕ್ಟರ್‌ಗಳಾದ ಪ್ರಶಾಂತ್ ಬಾಬು, ಲಕ್ಷ್ಮೀಕಾಂತಯ್ಯ ಅವರನ್ನು ಬಂಧಿಸಲಾಗಿದೆ.

ಅಕ್ರಮಕ್ಕೆ ಸಹಕಾರ: 2020ರಲ್ಲಿ ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಸಿಐಡಿ ಅಂದಿನ ತನಿಖಾಧಿಕಾರಿಗಳಾಗಿದ್ದ ಲಕ್ಷ್ಮೀಕಾಂತಯ್ಯ, ಶ್ರೀಧರ್ ಪೂಜಾರ್, ಪ್ರಶಾಂತ್ ಬಾಬು ಹಾಗೂ ಸೈಬರ್ ಕ್ರೈಂ ಠಾಣೆಯ ಇನ್‌ಸ್ಪೆಕ್ಟರ್ ಚಂದ್ರಾಧರ್ ಅವರು ಶ್ರೀಕಿ ಹಾಗೂ ರಾಬಿನ್ ಖಂಡೇನ್‌ವಾಲ್, ಸಂತೋಷ್‌ನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದರು.

ಆರೋಪಿಗಳು ಪೊಲೀಸ್ ವಶದಲ್ಲಿದ್ದಾಗಲೇ ಅಕ್ರಮವಾಗಿ ವಿಚಾರಣೆ ನಡೆಸಿದ್ದರು. ಸಂತೋಷ್ ಮಾಲೀಕತ್ವದ ಜಿಸಿಐಡಿ ಟೆಕ್ನಾಲಜೀಸ್‌ಗೆ ಕರೆದೊಯ್ದು ಕ್ರಿಪ್ಟೊ ವ್ಯಾಲೆಟ್‌ಗಳನ್ನು ಅನಧಿಕೃತವಾಗಿ ಬಳಸಿಕೊಂಡು ಲಕ್ಷಾಂತರ ಮೌಲ್ಯದ ಬಿಟ್‌ಕಾಯಿನ್‌ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಸಿಕೊಂಡಿದ್ದರು. ಈ ಕೃತ್ಯಕ್ಕೆ ಚಂದ್ರಾಧರ್ ಹಾಗೂ ಈ ಹಿಂದೆ ಬಂಧನಕ್ಕೆ ಒಳಗಾಗಿದ್ದ ಇನ್‌ಸ್ಪೆಕ್ಟರ್ ಲಕ್ಷ್ಮೀಕಾಂತಯ್ಯ ಅವರು ಸಹಕರಿಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿತ್ತು.

ಪ್ರಮುಖ ಆರೋಪಿ ಶ್ರೀಕಿಗೆ ಲ್ಯಾಪ್‌ಟಾಪ್ ಕೊಡಿಸಿ ಆತನಿಂದ ವಿವಿಧ ಕಂಪನಿಗಳ ವೆಬ್‌ಸೈಟ್ ಹ್ಯಾಕ್ ಮಾಡಿಸಿ ಬಿಟ್‌ಕಾಯಿನ್‌ಗಳನ್ನು ವರ್ಗಾವಣೆ ಮಾಡಿಸಿಕೊಂಡಿದ್ದರು ಎಂಬ ಆರೋಪವಿದೆ. ಇದೇ ಪ್ರಕರಣದಲ್ಲಿ ಕೆಲವರು ತಲೆಮರೆಸಿಕೊಂಡಿದ್ದಾರೆ. ಕೆಲವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಬಂಧಿತ ಇನ್‌ಸ್ಪೆಕ್ಟರ್ ಚಂದ್ರಾಧರ್ ಐದು ದಿನ ಪೊಲೀಸ್ ಕಸ್ಟಡಿಗೆ
- ಆರೋಪಿ ಶ್ರೀಕಿ ಮೂಲಕ ವೆಬ್‌ಸೈಟ್‌ಗಳ ಹ್ಯಾಕ್ ಮಾಡಿಸಿ ಕೃತ್ಯ: ಆರೋಪ
- ಈ ಪ್ರಕರಣದ ಇನ್ನೂ ಕೆಲವರು ತಲೆಮರೆಸಿ ಕೊಂಡಿದ್ದಾರೆ





ಮಳೆ ತಂದ ಸಂಭ್ರಮ

ಯಾದಗಿರಿ ನಗರದ ಹೊಸಳ್ಳಿ ಕ್ರಾಸ್ ಬಳಿ ಇರುವ, ಮಳೆ ನೀರು ತುಂಬಿದ ಉದ್ಯಾನದಲ್ಲಿ ಬುಧವಾರ ಪುಟ್ಟ ಬಾಲಕಿ ಜೋಕಾಲಿ ಆಡಿದಳು

ಪ್ರಜಾವಾಣಿ ಚಿತ್ರ

ಅಜೀಂ ವಜಾ: ಸರ್ಕಾರದ ಕ್ರಮಕ್ಕೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಸ್ಥಾನದಿಂದ ವಿಧಾನ ಪರಿಷತ್‌ನ ಮಾಜಿ ಸದಸ್ಯ ಅಬ್ದುಲ್ ಅಜೀಂ ಅವರ ನಾಮ ನಿರ್ದೇಶನವನ್ನು ಹಿಂಪಡೆದಿದ್ದ ರಾಜ್ಯ ಸರ್ಕಾರದ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಅಬ್ದುಲ್ ಅಜೀಂ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಆಯೋಗಗಳಿಗೆ ಅಧ್ಯಕ್ಷ ಸ್ಥಾನಕ್ಕೆ ನಾಮ ನಿರ್ದೇಶನ ಮಾಡುವುದು ಮತ್ತು ಹಿಂಪಡೆಯುವುದು ಸರ್ಕಾರದ ವಿವೇಚನೆಗೆ ಒಳಪಟ್ಟಿರುತ್ತದೆ. ಈ ಪ್ರಕ್ರಿಯೆಯಲ್ಲಿ ನೋಟಿಸ್ ನೀಡದೆ ಏಕಪಕ್ಷೀಯವಾಗಿ ನಾಮ ನಿರ್ದೇಶನ ಹಿಂಪಡೆಯಲಾಗಿದೆ ಎಂಬ ಅರ್ಜಿದಾರರ ವಾದವನ್ನು ಒಪ್ಪಲು ಆಗದು. ಅಂತೆಯೇ, ಇಂತಹ ವಿಷಯಗಳಲ್ಲಿನ ಸರ್ಕಾರದ ಕ್ರಮವನ್ನು ಪ್ರಶ್ನಿಸಲು ಅವಕಾಶವಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಹೆಚ್ಚುವರಿ ಅಡ್ವೊಕೇಟ್ ಜನರಲ್ ಇಸ್ಮಾಯಿಲ್ ಜಬೀವುಲ್ಲಾ ವಾದ ಮಂಡಿಸಿದ್ದರು.

ಪ್ರಕರಣವೇನು?: ನಿವೃತ್ತ ಪೊಲೀಸ್ ಅಧಿಕಾರಿ ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಅಜೀಂ ಅವರನ್ನು ರಾಜ್ಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಸ್ಥಾನಕ್ಕೆ 2019ರಿಂದ ನೇಮಕ ಮಾಡಲಾಗಿತ್ತು. ಈ ಅಧಿಕಾರಾವಧಿ 2022ಕ್ಕೆ ಪೂರ್ಣಗೊಂಡಿತ್ತು. ನಂತರ ಎರಡನೇ ಅವಧಿಗೂ ನೇಮಕ ಮಾಡಲಾಗಿತ್ತು.

ಏತನ್ಮಧ್ಯೆ, ರಾಜ್ಯ ಸರ್ಕಾರ ಬದಲಾದದ್ದರಿಂದ ಹಿಂದಿನ ಸರ್ಕಾರದ ಎಲ್ಲ ನಾಮ ನಿರ್ದೇಶನಗಳನ್ನು ಅನೂರ್ಜಿತಗೊಳಿಸಲಾಗಿತ್ತು. ಹೀಗಾಗಿ, ಅಬ್ದುಲ್ ಅಜೀಂ ಅವರ ಆಯೋಗದ ಅಧ್ಯಕ್ಷ ಸ್ಥಾನದ ನೇಮಕವನ್ನೂ ರದ್ದುಗೊಳಿಸಲಾಗಿತ್ತು. ಆದರೆ, ಅಜೀಂ ಅವರ ಮನವಿಯಂತೆ ನಾಮನಿರ್ದೇಶನ ರದ್ದುಪಡಿಸಿದ್ದ ಅಧಿಸೂಚನೆಯನ್ನು ಸರ್ಕಾರ ಹಿಂಪಡೆದಿತ್ತು. ಪುನಃ ಅಜೀಂ ಅವರು 'ಇನ್ನೂ 2 ವರ್ಷ 5 ತಿಂಗಳ ಕಾಲ ಅಧಿಕಾರವಧಿ ಮುಂದುವರಿಸಬೇಕು' ಎಂದು ಮನವಿ ಸಲ್ಲಿಸಿದ್ದರು.

ಆದರೆ, ಸರ್ಕಾರ ಈ ಮನವಿಯನ್ನು ಪರಿಗಣಿಸಲಿಲ್ಲ. ಇದರ ವಿರುದ್ಧ ಅಜೀಂ ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣಾ ಹಂತದಲ್ಲಿಯೇ ಅವರನ್ನು ಆಯೋಗದ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲಾಗಿತ್ತು.

ಬಂದ ತಕ್ಷಣವೇ ಪ್ರಜ್ವಲ್ ವಶಕ್ಕೆ–ಸಾಧ್ಯತೆ

ಒಂದನೇ ಪುಟದಿಂದ....

'ಎಸ್‌ಐಟಿ (ವಿಶೇಷ ತನಿಖಾ ತಂಡ) ಅಧಿಕಾರಿಗಳ ಎದುರು ಮೇ 31ರಂದು ವಿಚಾರಣೆಗೆ ಹಾಜರಾಗುತ್ತೇನೆ' ಎಂದು ವಿದೇಶದಿಂದ ವಿಡಿಯೊ ಸಂದೇಶ ಕಳುಹಿಸಿದ್ದಾರೆ. ಹೀಗಾಗಿ ಎಸ್‌ಐಟಿ ನಿಗಾ ವಹಿಸಿದೆ.

'ವಿಚಾರಣೆಗೆ ಹಾಜರಾಗುವುದಾಗಿ ಪ್ರಜ್ವಲ್ ಕಳುಹಿಸಿರುವ ವಿಡಿಯೊ ಪರಿಶೀಲಿಸಲಾಗುತ್ತಿದೆ. ಒಂದು ತಂಡ ವಿಮಾನ ನಿಲ್ದಾಣದಲ್ಲಿದೆ. ನ್ಯಾಯಾಲಯದಿಂದ ಬಂಧನ ವಾರಂಟ್ ಜಾರಿ ಆಗಿದ್ದು ಪ್ರಜ್ವಲ್ ಬಂದ ತಕ್ಷಣವೇ ವಶಕ್ಕೆ ಪಡೆದು ಬಂಧಿಸಲಾಗುವುದು. ಬ್ಲೂ ಕಾರ್ನರ್ ನೋಟಿಸ್ ಜಾರಿ ಮಾಡಿದ್ದರಿಂದ ವಿಮಾನ ನಿಲ್ದಾಣದ ಇಮಿಗ್ರೇಷನ್ ಅಧಿಕಾರಿಗಳು, ಪ್ರಜ್ವಲ್ ಅವರನ್ನು ವಶಕ್ಕೆ ಪಡೆದು ನಮಗೆ ಹಸ್ತಾಂತರಿಸಲಿದ್ದಾರೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ವೈದ್ಯಕೀಯ ಪರೀಕ್ಷೆ ನಡೆಸಿದ ನಂತರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು. ಕೋರ್ಟ್ ಅನುಮತಿ ಪಡೆದು ಕಸ್ಟಡಿಗೆ ಪಡೆಯಲಾಗುವುದು. ಬಳಿಕ ಅಶ್ಲೀಲ ವಿಡಿಯೊಗಳಲ್ಲಿ ಕೇಳಿಬರುವ ಧ್ವನಿ ಹಾಗೂ ಪ್ರಜ್ವಲ್ ಅವರ ಧ್ವನಿಯ ಹೋಲಿಕೆ ಪರೀಕ್ಷೆ ನಡೆಸಲಾಗುವುದು. ಅಶ್ಲೀಲ ವಿಡಿಯೊಗಳಲ್ಲಿ ಪುರುಷನ ಧ್ವನಿ ಕೇಳಿಸುತ್ತದೆ. ಕೆಲವು ವಿಡಿಯೊಗಳಲ್ಲಿ ಸಂತ್ರಸ್ತೆಯರ ಜೊತೆಗಿನ ಸಂಭಾಷಣೆ ನಡೆಸುವುದೂ ದಾಖಲಾಗಿದೆ. ವಿಡಿಯೊಗಳಲ್ಲಿ ಪುರುಷನ ಮುಖ ಚಹರೆ ಕಾಣಿಸಿಕೊಳ್ಳುವುದಿಲ್ಲ. ಆದ್ದರಿಂದ ಧ್ವನಿ ಪರೀಕ್ಷೆ ಈ ಪ್ರಕರಣದಲ್ಲಿ ಮಹತ್ವದ ಪಾತ್ರ ವಹಿಸಲಿದೆ' ಎಂದು ಮೂಲಗಳು ಹೇಳುತ್ತವೆ.

ಬುಡಾಪೆಸ್ಟ್‌ನಿಂದ ವಿಡಿಯೊ ಬಿಡುಗಡೆ

ಮೇ 31ರಂದು ಬೆಳಿಗ್ಗೆ 10ಕ್ಕೆ ತನಿಖಾ ತಂಡದ ಎದುರು ವಿಚಾರಣೆಗೆ ಹಾಜರಾಗುವುದಾಗಿ ಪ್ರಜ್ವಲ್ ರೇವಣ್ಣ ಅವರು ರವಾನೆ ಮಾಡಿದ್ದ ವಿಡಿಯೊ ವಿಳಾಸವನ್ನು ಎಸ್‌ಐಟಿ ಪತ್ತೆ ಹಚ್ಚಿದೆ. ಹಂಗೇರಿಯ ಬುಡಾಪೆಸ್ಟ್‌ನಿಂದ ಈ ವಿಡಿಯೊ ಬಿಡುಗಡೆ ಆಗಿದೆ ಎಂದು ಎಸ್‌ಐಟಿ ಅಧಿಕಾರಿಗಳು ತಿಳಿಸಿದ್ದಾರೆ.

ಅಜ್ಞಾತ ಸ್ಥಳದಿಂದ ವಿಡಿಯೊ ರೆಕಾರ್ಡ್ ಮಾಡಿ ಬಿಡುಗಡೆ ಮಾಡಲಾಗಿತ್ತು. ತಾವಿರುವ ಸ್ಥಳದ ಮಾಹಿತಿಯನ್ನು ವಿಡಿಯೊದಲ್ಲಿ ಹೇಳಿರಲಿಲ್ಲ. ವಿಡಿಯೊ ಬಿಡುಗಡೆಯಾದ ಮೇಲೆ ಎಸ್‌ಐಟಿ ತಂಡವು ಐಪಿ ವಿಳಾಸದ ಜಾಡು ಹಿಡಿದು ಪರಿಶೀಲನೆ ನಡೆಸಿದಾಗ ವಿಳಾಸ ಪತ್ತೆಯಾಗಿದೆ.

ಪ್ರಜ್ವಲ್ ಅವರೇ ವಿಡಿಯೊ ಕಳುಹಿಸಿದ್ದಾರೆಯೇ ಅಥವಾ ಅವರ ಸ್ನೇಹಿತರು ರವಾನೆ ಮಾಡಿದರೆ ಎಂಬುದು ತಿಳಿದುಬಂದಿಲ್ಲ ಎಂದು ಮೂಲಗಳು ಹೇಳಿವೆ.

ರಾಜ್ಯದ ಹಲವೆಡೆಯಿಂದ ಸಂಘಟನೆಗಳ ಪ್ರತಿನಿಧಿಗಳು ಭಾಗಿ

ಹಾಸನ ಚಲೋ ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ

ಹಾಸನ: 'ಲೈಂಗಿಕ ದೌರ್ಜನ್ಯ ನಡೆಸಿರುವ ಸಂಸದ ಪ್ರಜ್ವಲ್ ರೇವಣ್ಣ ಬಂಧನ ಆಗಬೇಕು. ಪೆನ್‌ಡ್ರೈವ್ ಹಂಚುವ ಮೂಲಕ ಮಹಿಳೆಯ ಮಾನ ಹರಾಜು ಮಾಡಿದ ಆರೋಪಿಗಳಿಗೆ ಶಿಕ್ಷೆ ಆಗಬೇಕು' ಎಂದು ಆಗ್ರಹಿಸಿ ಕರ್ನಾಟಕ ಜನಪರ ಚಳವಳಿಗಳ ಒಕ್ಕೂಟದಿಂದ ಮೇ 30ರಂದು ನಗರದಲ್ಲಿ ಹಾಸನ ಚಲೋ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ.

ರಾಜ್ಯದ ಹಲವೆಡೆಗಳಿಂದ 113 ಸಂಘಟನೆಗಳ ಸುಮಾರು 10 ಸಾವಿರ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ. ಹಾಸನದ ಹೇಮಾವತಿ ಪ್ರತಿಮೆಯ ಬಳಿಯಿಂದ ಮೆರವಣಿಗೆ ಆರಂಭವಾಗಲಿದ್ದು, ಜಿಲ್ಲಾಧಿಕಾರಿ ಕಚೇರಿ ಬಳಿಯ ಹೊಸ ಬಸ್‌ನಿಲ್ದಾಣ ರಸ್ತೆಯಲ್ಲಿ ಬಹಿರಂಗ ಸಭೆ ನಡೆಯಲಿದೆ.

ಸಿಪಿಎಂ ನಾಯಕಿ ಸುಭಾಷಿಣಿ ಅಲಿ, ಜನವಾದಿ ಮಹಿಳಾ ಸಂಘಟನೆ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಲೇಖಕಿಯರಾದ ಬಾನು ಮುಷ್ತಾಕ್, ರೂಪ ಹಾಸನ ಸೇರಿದಂತೆ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಹಲವು ಮುಖಂಡರು ಬುಧವಾರವೇ ನಗರಕ್ಕೆ ಬಂದರು.

'ಕೆಲವು ಸಂಘಟನೆಗಳು ಸಂಸದ ಪ್ರಜ್ವಲ್ ಬಂಧನಕ್ಕೆ ಆಗ್ರಹಿಸಲು ಮುಂದಾಗಿದ್ದು, ಅದಕ್ಕೆ ಆಕ್ಷೇಪ ವ್ಯಕ್ತವಾಗಿತ್ತು. ಪೆನ್‌ಡ್ರೈವ್ ಹಂಚಿ ಮಹಿಳೆಯರ ಮಾನ ಹರಾಜು ಮಾಡಿದವರನ್ನೂ ಬಂಧಿಸುವಂತೆ ಆಗ್ರಹಿಸಬೇಕು ಎನ್ನುವ ಚರ್ಚೆಯಾಗಿದ್ದರಿಂದ ಪ್ರಜ್ವಲ್ ಬಂಧನ ಹಾಗೂ ಪೆನ್‌ಡ್ರೈವ್ ಹಂಚಿದವರ ಮೇಲೆ ಕ್ರಮಕ್ಕೆ ಆಗ್ರಹಿಸಿ ಹಾಸನ ಚಲೋ ನಡೆಸಲು ನಿರ್ಧರಿಸಲಾಗಿದೆ' ಎಂದು ಸಂಘಟನೆಗಳ ಪ್ರಮುಖರು ತಿಳಿಸಿದ್ದಾರೆ.

ಸಂಘಟನೆಗಳಿಗೆ ತಮ್ಮದೇ ಬ್ಯಾನರ್, ಬಾವುಟ ತರದಂತೆ ಸೂಚಿಸಲಾಗಿದೆ. ಒಕ್ಕೂಟವೇ ಬಾವುಟ, ಕರಪತ್ರ ಪತ್ರ ಸಿದ್ಧಪಡಿಸಿದೆ. ಸಾಮಾಜಿಕ ಮಾಧ್ಯಮಗಳಲ್ಲೂ ಪೋಸ್ಟರ್ ಅಭಿಯಾನವೂ ನಡೆದಿದೆ.

ಪ್ರಜ್ವಲ್ ಹಾಸಿಗೆ, ದಿಂಬು ಎಸ್‌ಐಟಿ ವಶಕ್ಕೆ

ಹಾಸನ: ಸಂಸದ ಪ್ರಜ್ವಲ್ ರೇವಣ್ಣ ಬೆಂಗಳೂರಿಗೆ ವಾಪಸಾಗುವ ದಿನ ಸಮೀಪಿಸುತ್ತಿದ್ದಂತೆ, ಎಸ್‌ಐಟಿ ತಂಡ ಸಾಕ್ಷ್ಯ ಸಂಗ್ರಹ ಕಾರ್ಯವನ್ನು ತೀವ್ರಗೊಳಿಸಿದೆ.

ನಗರದ ಆರ್.ಸಿ. ರಸ್ತೆಯಲ್ಲಿರುವ ಸಂಸದರ ಸರ್ಕಾರಿ ನಿವಾಸದಲ್ಲಿ ಪ್ರಜ್ವಲ್ ಮಲಗುತ್ತಿದ್ದ ಕೊಠಡಿಯಲ್ಲಿದ್ದ ಹಾಸಿಗೆ, ದಿಂಬು, ಹೊದಿಕೆ ಹಾಗೂ ಇತರೆ ವಸ್ತುಗಳನ್ನು ವಶಕ್ಕೆ ಪಡೆದಿದೆ. ನಿವಾಸದಲ್ಲಿ ಮಂಗಳವಾರ ಮಧ್ಯಾಹ್ನ ಎಸ್‌ಐಟಿ ಹಾಗೂ ಎಫ್‌ಎಸ್‌ಎಲ್ ತಂಡ ಆರಂಭಿಸಿದ್ದ ಪರಿಶೀಲನೆ ಹಾಗೂ ಸಾಕ್ಷ್ಯ ಸಂಗ್ರಹ ಕಾರ್ಯ ಬುಧವಾರ ಬೆಳಗಿನ ಜಾವ 4 ಗಂಟೆಗೆ ಪೂರ್ಣಗೊಂಡಿತು. ಸತತ ಹತ್ತು ಗಂಟೆಗಳ ಕಾಲ ಪರಿಶೀಲನೆ ನಡೆಯಿತು.

ಸ್ಥಳ ಮಹಜರು: ಅಶ್ಲೀಲ ವಿಡಿಯೊಗಳ ಪೆನ್‌ಡ್ರೈವ್ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿ, ಬೆಂಗಳೂರಿನಲ್ಲಿ ಬಂಧಿಸಿರುವ ನವೀನ್‌ಗೌಡ ಹಾಗೂ ಚೇತನ್ ಗೌಡ ಅವರನ್ನು ನಗರಕ್ಕೆ ಕರೆತಂದ ಎಸ್‌ಐಟಿ ಅಧಿಕಾರಿಗಳು ಸ್ಥಳ ಮಹಜರು ನಡೆಸಿದರು.

ಹಿಮ್ಸ್ ಆಸ್ಪತ್ರೆಯಲ್ಲಿ ಇಬ್ಬರ ಆರೋಗ್ಯ ತಪಾಸಣೆ ನಡೆಸಲಾಯಿತು. ನಂತರ ಇಲ್ಲಿನ ಸೈಬರ್ ಅಪರಾಧ ಠಾಣೆಯಲ್ಲಿ ಎಎಸ್ಪಿ ಎಂ.ಕೆ. ತಮ್ಮಯ್ಯ, ಇನ್‌ಸ್ಪೆಕ್ಟರ್ ಜಗದೀಶ್ ನೇತೃತ್ವದಲ್ಲಿ ವಿಚಾರಣೆ ನಡೆಸಲಾಯಿತು. ಇಬ್ಬರನ್ನೂ ಅವರ ಮನೆಗಳಿಗೆ ಕರೆದೊಯ್ದು ಸ್ಥಳ ಮಹಜರು ನಡೆಸಲಾಯಿತು.

ನಂತರ ಇಲ್ಲಿನ 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಆರೋಪಿಗಳನ್ನು ಹಾಜರುಪಡಿಸಿದ್ದು, ಜೂನ್ 1 ರ ಸಂಜೆಯವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಭವಾನಿ ರೇವಣ್ಣ ಜಾಮೀನು: 31ಕ್ಕೆ ಆದೇಶ

ಬೆಂಗಳೂರು: 'ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣದಲ್ಲಿ ಅವರ ತಾಯಿ ಭವಾನಿ ಅವರನ್ನು ವಿಚಾರಣೆ ನಡೆಸಲು ಮುಂದಾಗಿರುವ ಎಸ್‌ಐಟಿ ನಡೆಯಲ್ಲಿ ದುರುದ್ದೇಶವಿದ್ದು, ಪಾರದರ್ಶಕವಾಗಿ ತನಿಖೆ ನಡೆಸುತ್ತಿಲ್ಲ' ಎಂದು ಭವಾನಿ ರೇವಣ್ಣ ಪರ ಹಿರಿಯ ವಕೀಲರು ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಪ್ರಕರಣದ ಸಂತ್ರಸ್ತೆಯೊಬ್ಬರ ಅಪಹರಣದ ಆರೋಪದಡಿ ಬಂಧನ ಭೀತಿಯಿಂದ ಭವಾನಿ ರೇವಣ್ಣ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯನ್ನು, 'ಶಾಸಕರು– ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ (ಸಿಸಿಎಚ್–82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಬುಧವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಭವಾನಿ ರೇವಣ್ಣ ಪರ ಹೈಕೋರ್ಟ್‌ನ ಹಿರಿಯ ವಕೀಲ ಸಂದೇಶ್ ಜೆ.ಚೌಟ ವಾದ ಮಂಡಿಸಿ, 'ಭವಾನಿ ವಿರುದ್ಧದ ಆರೋಪಗಳು ರಾಜಕೀಯ ಷಡ್ಯಂತ್ರದಿಂದ ಕೂಡಿವೆ. ಅವರ ವಿರುದ್ಧ ಯಾವುದೇ ಸಾಕ್ಷ್ಯಾಧಾರ ಇಲ್ಲ. ಆರೋಪಿಯು ತನಿಖೆಗೆ ಸಂಪೂರ್ಣ ಸಹಕಾರ ನೀಡಲಿದ್ದಾರೆ. ಆದ್ದರಿಂದ, ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ಪ್ರಾಸಿಕ್ಯೂಷನ್ ಪರ ಹಾಜರಿದ್ದ ವಿಶೇಷ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಪ್ರಕರಣದ ಅನೇಕ ಆರೋಪಿಗಳ ಜೊತೆ ಭವಾನಿ ಫೋನ್ ಸಂಭಾಷಣೆ ನಡೆಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ಈ ಸಂಭಾಷಣೆಯಲ್ಲಿ ಭವಾನಿಯವರ ಪಾತ್ರವನ್ನು ನಿರೂಪಿಸುವ ಹಲವು ಸ್ವಾರಸ್ಯಕರ ಅಂಶಗಳಿವೆ' ಎಂದರು.

ಇದನ್ನು ಅಲ್ಲಗಳೆದ ಸಂದೇಶ್ ಚೌಟ ಅವರು, 'ಅಪಹರಣಕ್ಕೆ ಒಳಗಾಗಿದ್ದಾರೆ ಎನ್ನಲಾದ ಮಹಿಳೆ ಭವಾನಿ ರೇವಣ್ಣ ಅವರ ಮನೆಯ ಹಳೆಯ ಕೆಲಸದಾಕೆ. ಆಕೆ ಮೂರು ವರ್ಷಗಳ ಹಿಂದೆ ಕೆಲಸ ಬಿಟ್ಟಿದ್ದರು. ಆಕೆಯನ್ನು ಪುನಃ ಮನೆಗೆ ಕರೆಸಿಕೊಳ್ಳಲಾಗಿತ್ತು ಮತ್ತು 26ರಂದು ವಾಪಸು ಕಳುಹಿಸಲಾಗಿದೆ. ಆಕೆ ಮನೆಯಿಂದ ಹೋಗುವಾಗ ಬೈಕ್ ಹತ್ತಿ ಹೋಗಿದ್ದಾರೆ. ಇಲ್ಲಿ ಯಾರ ಒತ್ತಡವಿಲ್ಲ, ಬಲವಂತವಿಲ್ಲ. ಹೀಗಿರುವಾಗ ಅಪಹರಣ ಆರೋಪ ಉದ್ಭವಿಸಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದರು.

ಸುದೀರ್ಘ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಆದೇಶವನ್ನು ಇದೇ 31ರಂದು ಪ್ರಕಟಿಸುವುದಾಗಿ ತಿಳಿಸಿತು.

ಸಚಿವ ನಾಗೇಂದ್ರ ರಾಜೀನಾಮೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಚಂದ್ರಶೇಖರನ್ ಪಿ. ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ಕೂಡಲೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಬಳ್ಳಾರಿ ಬಿಜೆಪಿ ಘಟಕದ ವತಿಯಿಂದ ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಕನಕದುರ್ಗೆ ದೇವಾಲಯದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ಕೈಗೊಂಡ ಬಿಜೆಪಿ ನಾಯಕರು, ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಗಡಿಗಿ ಚನ್ನಪ್ಪ (ರಾಯಲ್) ವೃತ್ತದ ಬಳಿ ಮಾನವ ಸರಪಳಿ ರಚಿಸಿದ ಕಾರ್ಯಕರ್ತರು, ನಾಗೇಂದ್ರ ಪ್ರತಿಕೃತಿಗೆ ಬೆಂಕಿ ಹಚ್ಚಲು ಯತ್ನಿಸಿದರು. ಅದಕ್ಕೆ ಪೊಲೀಸರು ಅಡ್ಡಿಪಡಿಸಿದಾಗ, ಟಯರ್‌ಗೆ ಬೆಂಕಿ ಹಚ್ಚಿದರು. ನಂತರ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಮಾತನಾಡಿ, 'ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡು ಮೂರು ದಿನಗಳಾದರೂ ಸಚಿವ ಬಿ. ನಾಗೇಂದ್ರ ಅವರು ರಾಜೀನಾಮೆ ಏಕೆ ನೀಡಿಲ್ಲ? ದೆಹಲಿಯಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ರಾಜೀನಾಮೆ ಯಾಕೆ ಪಡೆದಿಲ್ಲ' ಎಂದು ಪ್ರಶ್ನಿಸಿದರು.



ಬಳ್ಳಾರಿಯಲ್ಲಿ ಬುಧವಾರ ಸಚಿವ ಬಿ. ನಾಗೇಂದ್ರ ಪ್ರತಿಕೃತಿ ದಹಿಸಲು ಮುಂದಾದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ತಡೆದರು

ನಿರೀಕ್ಷಣಾ ಜಾಮೀನು ಕೋರಿ ಅರ್ಜಿ

ಶಿವಮೊಗ್ಗ: ಚಂದ್ರಶೇಖರನ್ ಆತ್ಮಹತ್ಯೆ ಪ್ರಕರಣದ ಆರೋಪಿಗಳಾಗಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ.ಪದ್ಮನಾಭ ಮತ್ತು ಲೆಕ್ಕಾಧಿಕಾರಿ ಪರಶುರಾಮ ದುರುಗಣ್ಣವರ ಅವರು ನಿರೀಕ್ಷಣಾ ಜಾಮೀನು ಕೋರಿ ಶಿವಮೊಗ್ಗ ಜಿಲ್ಲಾ ಸೆಷನ್ಸ್ ನ್ಯಾಯಾಲಯಕ್ಕೆ ಬುಧವಾರ ಅರ್ಜಿ ಸಲ್ಲಿಸಿದ್ದಾರೆ.

ಗುರುವಾರ ಇದರ ವಿಚಾರಣೆ ನಡೆಯಲಿದೆ. ಚಂದ್ರಶೇಖರನ್ ಅವರ ಪತ್ನಿ ಸರ್ಕಾರಿ ವಕೀಲರ ಮೂಲಕ ಪದ್ಮನಾಭ ಮತ್ತು ದುರುಗಣ್ಣವರ ಜಾಮೀನಿಗೆ ತಕರಾರು ಅರ್ಜಿ ಸಲ್ಲಿಸಲಿದ್ದಾರೆ ಎಂದು ತಿಳಿದು ಬಂದಿದೆ.

'ತಪ್ಪು ಮಾಡಿಲ್ಲ'

ಬಳ್ಳಾರಿ: 'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ವರ್ಗಾವಣೆ ಮಾಡಲು ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ಸಚಿವ ಬಿ. ನಾಗೇಂದ್ರ ಮೌಖಿಕವಾಗಿ ಹೇಳಿದ ಬಗ್ಗೆ ಯಾವುದೇ ದಾಖಲೆ ಇಲ್ಲ. ಈ ಪ್ರಕರಣದಲ್ಲಿ ನಾಗೇಂದ್ರ ಅವರ ಪಾತ್ರವಿರದ ಕಾರಣ ಅವರು ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ' ಎಂದು ಕಾಂಗ್ರೆಸ್ ಮುಖಂಡ, ಬಾಬು ಜಗಜೀವನ್ ರಾಮ್ ಚರ್ಮಾ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ್ ಸಮರ್ಥಿಸಿಕೊಂಡರು.

'ಬಿಜೆಪಿಯವರು ಆರೋಪಿಸುತ್ತಿರುವಂತೆ ನಿಗಮದಲ್ಲಿ ₹187 ಕೋಟಿ ಅವ್ಯವಹಾರ ಆಗಿಲ್ಲ. ₹88.62 ಕೋಟಿ ಮಾತ್ರ ಅಕ್ರಮವಾಗಿ ವರ್ಗಾವಣೆಯಾಗಿದೆ' ಎಂದು ತಿಳಿಸಿದರು.

'ಸಂತೋಷ್ ಪಾಟೀಲ ಅವರು ಡೆತ್‌ನೋಟ್‌ನಲ್ಲಿ ಈಶ್ವರಪ್ಪ ಹೆಸರನ್ನು ಬರೆದಿಟ್ಟಿದ್ದರು. ಅದಕ್ಕೆ ಅವರು ರಾಜೀನಾಮೆ ನೀಡಬೇಕಾಯಿತು. ಈ ಪ್ರಕರಣದಲ್ಲಿ ಸಚಿವರ ಹೆಸರನ್ನೇ ಉಲ್ಲೇಖಿಸಿಲ್ಲ' ಎಂದರು.

ಜಾಮೀನು ಕೋರಿ ಪ್ರಜ್ವಲ್ ಅರ್ಜಿ

ಬೆಂಗಳೂರು: ಮಹಿಳೆಯರ ಮೇಲಿನ ಅತ್ಯಾಚಾರದ ಆರೋಪ ಎದುರಿಸುತ್ತಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಹೊಳೆನರಸೀಪುರ ಟೌನ್ ಪೊಲೀಸ್ ಠಾಣೆ ಹಾಗೂ ಬೆಂಗಳೂರಿನ ಸಿಐಡಿ ದಾಖಲಿಸಿರುವ ಮೂರು ಪ್ರತ್ಯೇಕ ಎಫ್‌ಐಆರ್‌ಗಳಲ್ಲಿ ನಿರೀಕ್ಷಣಾ ಜಾಮೀನು ಕೋರಿದ ಅರ್ಜಿಗಳನ್ನು ಪ್ರಜ್ವಲ್ ಪರ ವಕೀಲರು ಬುಧವಾರ, 'ಶಾಸಕರು– ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದಲ್ಲಿ ಸಲ್ಲಿಸಿ ತುರ್ತಾಗಿ ವಿಚಾರಣೆ ನಡೆಸುವಂತೆ ಕೋರಿದರು.

ಆದರೆ, ಈ ಮನವಿ ತಿರಸ್ಕರಿಸಿದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು, ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದರು. ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರಿಗೆ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಇದೇ 31ಕ್ಕೆ ಮುಂದೂಡಿದರು.

'ಬ್ಯಾಂಕ್‌ನಿಂದ ₹94 ಕೋಟಿ ದುರ್ಬಳಕೆ'

ಒಂದನೇ ಪುಟದಿಂದ..

'ಅದಾದ ಮೇಲೆ ಮಾರ್ಚ್ 4ರಂದು ₹25 ಕೋಟಿ, ಮಾರ್ಚ್ 6ರಂದು ₹25 ಕೋಟಿ, ಮಾರ್ಚ್ 21ರಂದು ₹44 ಕೋಟಿ, ಮೇ 21ರಂದು ₹50 ಕೋಟಿ ಹಾಗೂ ಮೇ 22ರಂದು ₹33 ಕೋಟಿ ಸೇರಿ ಒಟ್ಟು ನಿಗಮದ ಬ್ಯಾಂಕ್ ಖಾತೆಯಿಂದ ₹187.33 ಕೋಟಿ ಹಣ ವರ್ಗಾವಣೆ ಮಾಡಲಾಗಿತ್ತು. ಈ ನಡುವೆ ಚುನಾವಣಾ ನೀತಿ ಸಂಹಿತೆ ಜಾರಿ ಆಗಿದ್ದರಿಂದ ಬ್ಯಾಂಕ್ ಜೊತೆ ನಿಗಮ ಯಾವುದೇ ಪತ್ರ ವ್ಯವಹಾರ ನಡೆಸಿರಲಿಲ್ಲ. ನಿಗಮದ ಅಧಿಕೃತ ವಿಳಾಸಕ್ಕೆ ಪಾಸ್‌ಬುಕ್, ಚೆಕ್‌ಬುಕ್ ಸೇರಿ ಯಾವುದೇ ದಾಖಲೆಗಳು ಬ್ಯಾಂಕ್‌ನಿಂದ ಬಂದಿರಲಿಲ್ಲ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ನಿಗಮದ ಯಾವುದೇ ಸಿಬ್ಬಂದಿ ಹಣವನ್ನು ವಿದ್‌ಡ್ರಾ ಮಾಡಿಲ್ಲ. ಆದರೆ, ನಕಲಿ ದಾಖಲೆ ಸೃಷ್ಟಿಸಿ ₹94.73 ಕೋಟಿಯನ್ನು ಅನಧಿಕೃತವಾಗಿ ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ. ಮೇ 23ಕ್ಕೆ ಅಧಿಕಾರಿಗಳು ₹5 ಕೋಟಿ ಮಾತ್ರ ವಾಪಸ್ ಹಾಕಿದ್ದಾರೆ. ಹಣ ವರ್ಗಾವಣೆ ಆಗಿರುವ ಸಂಬಂಧ ಮಾಹಿತಿ ಕೇಳಿದರೂ ಅವರು ಪ್ರತಿಕ್ರಿಯಿಸಿಲ್ಲ. ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಾವಳಿ ಒದಗಿಸಿಲ್ಲ. ನಿಗಮದ ಇ–ಮೇಲ್‌ಗೆ ಸಂದೇಶ ಕಳುಹಿಸಿಲ್ಲ. ಹಣ ಎಲ್ಲಿಗೆ ವರ್ಗಾವಣೆ ಆಗಿದೆ ಎಂಬುದಕ್ಕೆ ಮೊಬೈಲ್ ಸಂಖ್ಯೆ ದಾಖಲಿಸಿಲ್ಲ' ಎಂದು ನಿಗಮದ ಪ್ರಧಾನ ವ್ಯವಸ್ಥಾಪಕರು ದೂರಿನಲ್ಲಿ ತಿಳಿಸಿದ್ದಾರೆ.

'ದೂರು ಆಧರಿಸಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಹಣ ವರ್ಗಾವಣೆ ಆಗಿರುವುದಕ್ಕೆ ಸಂಬಂಧಿಸಿದಂತೆ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಂ.ಡಿ ಕರ್ತವ್ಯಲೋಪ

ಒಂದನೇ ಪುಟದಿಂದ...

ಯೂನಿಯನ್ ಬ್ಯಾಂಕ್ ಖಾತೆಯಲ್ಲಿದ್ದ ನಿಗಮದ ₹88.62 ಕೋಟಿ ಅನುದಾನ 14 ಅನಾಮಧೇಯ ಖಾತೆಗಳಿಗೆ ವರ್ಗಾವಣೆಯಾಗಲು ಪರೋಕ್ಷವಾಗಿ ಕಾರಣರಾಗುವ ಜೊತೆಗೆ, ಆ ಹಣ ಡ್ರಾ ಮಾಡಿಕೊಂಡಿದ್ದರೂ ಗಮನಿಸದೆ ಇರುವುದು, ಬ್ಯಾಂಕ್ ಸ್ಟೇಟ್‌ಮೆಂಟ್ ಸಲ್ಲಿಸದೇ ಇರುವುದು ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭ ಅವರ ಕರ್ತವ್ಯಲೋಪವಾಗಿದೆ ಎಂದು ಅಮಾನತು ಆದೇಶದಲ್ಲಿ ವಿವರಿಸಲಾಗಿದೆ.

> ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ ಬಳಿ ಇದ್ದ ಪೆನ್‌ಡ್ರೈವ್, ಲ್ಯಾಪ್‌ಟಾಪ್‌ನಲ್ಲಿದ್ದ ಮಾಹಿತಿಯನ್ನು ಬಹಿರಂಗಪಡಿಸಬೇಕು. ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಲು ಮುಂದಾಗಬೇಕು
>
> **ಗೋವಿಂದ ಕಾರಜೋಳ**
> ಮಾಜಿ ಉಪಮುಖ್ಯಮಂತ್ರಿ

ಅಲ್ಲದೆ, ಹಣ ವರ್ಗಾವಣೆ ಆಗಿರುವುದು ಮೇ 22ರಂದೇ ಗಮನಕ್ಕೆ ಬಂದಿದ್ದರೂ, ಈ ವಿಷಯ ಮೇ 27ರಂದು ಮಾಧ್ಯಮಗಳಲ್ಲಿ ಬಹಿರಂಗವಾದ ಬಳಿಕ ತಡವಾಗಿ ಪದ್ಮನಾಭ ಅವರು ವರದಿ ನೀಡುವ ಮೂಲಕ ಆರ್ಥಿಕ ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಅನಾಮಧೇಯ ಖಾತೆಗಳ ವ್ಯಕ್ತಿಗಳ ಹೆಸರನ್ನು ವರದಿಯಲ್ಲಿ ಉಲ್ಲೇಖಿಸಿಲ್ಲ. ಅಕ್ರಮವಾಗಿ ಹಣ ಡ್ರಾ ಮಾಡಿಕೊಂಡಿರುವ ವ್ಯಕ್ತಿಗಳು ₹5 ಕೋಟಿಯನ್ನು ನಿಗಮದ ಖಾತೆಗೆ ಹಿಂದಿರುಗಿಸಿದ್ದಾರೆಂದು ವರದಿಯಲ್ಲಿ ತಿಳಿಸಿದ್ದರೂ ಯಾವ ವ್ಯಕ್ತಿ, ಯಾವ ಖಾತೆಯಿಂದ ಹಿಂದಿರುಗಿಸಿದ್ದಾರೆಂಬ ಮಾಹಿತಿ ನೀಡಿಲ್ಲ. ಖಾತೆಗೆ ಸಂಬಂಧಿಸಿದ ವಿವರಗಳು, ಸ್ಟೇಟ್‌ಮೆಂಟ್‌ಗಳು, ಚೆಕ್ ಪುಸ್ತಕಗಳನ್ನು ತಮ್ಮ ಗಮನಕ್ಕೆ ಬಾರದಂತೆ ಲೆಕ್ಕವಿಭಾಗದ ಸಿಬ್ಬಂದಿ ತಡೆಹಿಡಿದಿದ್ದಾರೆಂದು ತಿಳಿಸಿದ್ದರೂ, ಆ ಸಿಬ್ಬಂದಿಗೆ ಯಾವುದೇ ನೋಟಿಸ್ ನೀಡಿಲ್ಲ. ಈ ಎಲ್ಲ ಕರ್ತವ್ಯಲೋಪಗಳ ಕಾರಣ ಮತ್ತು ಆರೋಪಗಳ ಸತ್ಯಾಸತ್ಯತೆ ತಿಳಿಯಲು ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತುಗೊಳಿಸಲಾಗಿದೆ ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಕರ್ತವ್ಯಲೋಪ ಎಸಗಿದ ಆರೋಪದಲ್ಲಿ ಪರುಶುರಾಮ್ ಜಿ. ದುರ್ಗಣ್ಣನವರ್ ಅವರನ್ನೂ ಇಲಾಖಾ ವಿಚಾರಣೆಗೆ ಕಾಯ್ದಿರಿಸಿ ಅಮಾನತುಗೊಳಿಸಲಾಗಿದೆ ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಶಿವಮೊಗ್ಗದಲ್ಲಿ ಆತ್ಮಹತ್ಯೆ ಮಾಡಿಕೊಂಡ ನಿಗಮದ ಲೆಕ್ಕ ವಿಭಾಗದ ಅಧೀಕ್ಷಕ ಪಿ.ಚಂದ್ರಶೇಖರನ್ ಅವರಿಗೆ ನಿಗಮದ ಬ್ಯಾಂಕ್ ಖಾತೆಯ ದೃಢೀಕರಣದ ಚೆಕ್, ಆರ್‌ಟಿಜಿಎಸ್, ಬ್ಯಾಂಕ್ ದಾಖಲೆಗಳ ಸಮನ್ವಯದ ಹೊಣೆ ವಹಿಸಲಾಗಿತ್ತು. ದಾಖಲೆಗಳ ಪರಿಶೀಲನೆ ವೇಳೆ ನಿಗಮದ ಬ್ಯಾಂಕ್ ಖಾತೆಯಿಂದ ₹94 ಕೋಟಿ ಹಣ ದುರ್ಬಳಕೆ ಆಗಿರುವುದು ಕಂಡುಬಂದಿತ್ತು' ಎಂದು ಮೂಲಗಳು ಹೇಳಿವೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ನಿಮ್ಮ ದನಿಯನ್ನು ಎತ್ತರಿಸಬೇಡಿ, ವಾದದ ವೈಖರಿಯನ್ನು ಸುಧಾರಿಸಿಕೊಳ್ಳಿ.

-ಡೆಸ್ಮಂಡ್ ಟುಟು

ಆರ್‌ಬಿಐನಿಂದ ಹೆಚ್ಚಿನ ಡಿವಿಡೆಂಡ್ ಕೇಂದ್ರ ಸರ್ಕಾರಕ್ಕೆ ಅನಿರೀಕ್ಷಿತ ನೆರವು

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕೇಂದ್ರ ಸರ್ಕಾರಕ್ಕೆ ಡಿವಿಡೆಂಡ್ ರೂಪದಲ್ಲಿ ಭಾರಿ ಮೊತ್ತವನ್ನು ವರ್ಗಾವಣೆ ಮಾಡಲು ತೀರ್ಮಾನಿಸಿದೆ. ಕೇಂದ್ರೀಯ ಬ್ಯಾಂಕ್ ಈ ಬಾರಿ ₹ 2.11 ಲಕ್ಷ ಕೋಟಿಯನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಲಿದೆ. ಇಷ್ಟು ಮೊತ್ತವನ್ನು ಆರ್‌ಬಿಐ ಹಿಂದೆಂದೂ ಡಿವಿಡೆಂಡ್ ರೂಪದಲ್ಲಿ ನೀಡಿದ್ದ ನಿದರ್ಶನ ಇಲ್ಲ. ಇಷ್ಟು ದೊಡ್ಡ ಮೊತ್ತವು ಕೇಂದ್ರ ಸರ್ಕಾರದ ಪಾಲಿಗೆ ಅನಿರೀಕ್ಷಿತವೇ ಹೌದು. ಕೇಂದ್ರಕ್ಕೆ ಹಣದ ಅಗತ್ಯವಿರುವ ಹೊತ್ತಿನಲ್ಲಿ ಸಿಕ್ಕಿರುವ ದೊಡ್ಡ ಇಡುಗಂಟು ಇದು. ಚುನಾವಣೆ ಮುಗಿದ ನಂತರ ರಚನೆಯಾಗಲಿರುವ ಸರ್ಕಾರವು ಈ ಮೊತ್ತದ ಪ್ರಯೋಜನ ಪಡೆದುಕೊಳ್ಳಲಿದೆ. ಕಳೆದ ವರ್ಷ ಕೇಂದ್ರ ಸರ್ಕಾರಕ್ಕೆ ಆರ್‌ಬಿಐ ಕಡೆಯಿಂದ ಡಿವಿಡೆಂಡ್ ರೂಪದಲ್ಲಿ ಸಿಕ್ಕ ಹಣ ₹ 87,416 ಕೋಟಿ ಮಾತ್ರ. 2024–25ನೇ ಹಣಕಾಸು ವರ್ಷಕ್ಕೆ ಮಂಡಿಸಿರುವ ಮಧ್ಯಂತರ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ತನಗೆ ಆರ್‌ಬಿಐ, ರಾಷ್ಟ್ರೀಕೃತ ಬ್ಯಾಂಕ್‌ಗಳು ಹಾಗೂ ಇತರ ಹಣಕಾಸು ಸಂಸ್ಥೆಗಳಿಂದ ಸಿಗುವ ಮೊತ್ತ ₹1.02 ಲಕ್ಷ ಕೋಟಿ ಎಂದಷ್ಟೇ ಅಂದಾಜು ಮಾಡಿದೆ. ಈಗ ಕೇಂದ್ರವು ತನ್ನದೇ ಅಂದಾಜಿನ ಎರಡು ಪಟ್ಟು ಹೆಚ್ಚಿನ ಮೊತ್ತವನ್ನು ಆರ್‌ಬಿಐನಿಂದಲೇ ಪಡೆಯಲಿದೆ. ಸರ್ಕಾರದ ಹಣಕಾಸಿನ ಚಿಂತೆಯನ್ನು ಈ ಮೊತ್ತವು ಒಂದಿಷ್ಟುಮಟ್ಟಿಗೆ ತಗ್ಗಿಸಲಿದೆ.



ಆರ್‌ಬಿಐ ಕಡೆಯಿಂದ ಸಿಕ್ಕಿರುವ ಹೆಚ್ಚಿನ ಮೊತ್ತವು ಮುಂದೆ ರಚನೆ ಆಗಲಿರುವ ಸರ್ಕಾರಕ್ಕೆ ಹಣಕಾಸಿನ ದೃಷ್ಟಿಯಿಂದ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡಲಿದೆ

ಕೇಂದ್ರೀಯ ಬ್ಯಾಂಕ್‌ನ ದೇಶಿ ಹಾಗೂ ವಿದೇಶಿ ಆಸ್ತಿಗಳಿಂದ ಸಿಗುವ ಬಡ್ಡಿ ವರಮಾನದಲ್ಲಿ ಏರಿಕೆ ಹಾಗೂ ವಿದೇಶಿ ವಿನಿಮಯ ವಹಿವಾಟಿನಲ್ಲಿ ಆದ ಏರಿಕೆಯು ವರ್ಗಾವಣೆ ಮಾಡಬಹುದಾದ ಮಿಗತೆ ಹಣವು ಹೆಚ್ಚಳ ಕಂಡಿದ್ದಕ್ಕೆ ಕಾರಣ. ಅನಿರೀಕ್ಷಿತವಾಗಿ ಎದುರಾಗಬಹುದಾದ ಹಣಕಾಸಿನ ತುರ್ತು ಸಂದರ್ಭಗಳನ್ನು ನಿಭಾಯಿಸಲು, ಅರ್ಥ ವ್ಯವಸ್ಥೆಗೆ ಎದುರಾಗಬಹುದಾದ ಅಪಾಯಗಳನ್ನು ಎದುರಿಸಲು ಆರ್‌ಬಿಐ ತೆಗೆದಿರಿಸುವ ಮೊತ್ತದಲ್ಲಿ (ಸಿಆರ್‌ಬಿ) ಹೆಚ್ಚಳ ಆಗಿರುವುದು ಕೇಂದ್ರೀಯ ಬ್ಯಾಂಕ್ ಹಣಕಾಸಿನ ನಿರ್ವಹಣೆಯಲ್ಲಿ ಬಹಳ ಶಿಸ್ತಿನ ನಡೆ ಇರಿಸುತ್ತಿದೆ ಎಂಬುದನ್ನು ತೋರಿಸುತ್ತದೆ. ಈ ಹಿಂದೆ ಆರ್‌ಬಿಐನ ಒಟ್ಟು ಜಮಾಖರ್ಚು ಪಟ್ಟಿಯ (ಬ್ಯಾಲನ್ಸ್ ಷೀಟ್) ಶೇಕಡ 6ರಷ್ಟು ಮೊತ್ತವನ್ನು ಸಿಆರ್‌ಬಿ ಉದ್ದೇಶಕ್ಕೆ ಮೀಸಲು ಇಡಲಾಗುತ್ತಿತ್ತು. 2024–25ಕ್ಕೆ ಅದನ್ನು ಶೇ 6.5ಕ್ಕೆ ಹೆಚ್ಚಿಸಲಾಗಿದೆ. ಇದು ಅರ್ಥ ವ್ಯವಸ್ಥೆಯಲ್ಲಿ ಆರ್‌ಬಿಐ ಹೊಂದಿರುವ ವಿಶ್ವಾಸವನ್ನು ತೋರಿಸುತ್ತದೆ. ಸಿಆರ್‌ಬಿ ಮೊತ್ತವನ್ನು ಹೆಚ್ಚಿಸುವ ಮೂಲಕ ಆರ್‌ಬಿಐ ಯಾವುದೇ ಕೆಟ್ಟ ಪರಿಸ್ಥಿತಿಯನ್ನು, ಅದರಲ್ಲೂ ಮುಖ್ಯವಾಗಿ ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿನ ಸಮಸ್ಯೆಗಳ ಕಾರಣದಿಂದಾಗಿ ಸೃಷ್ಟಿಯಾಗುವ ಅಪಾಯಗಳನ್ನು ನಿಭಾಯಿಸಲು ದೇಶದ ಅರ್ಥ ವ್ಯವಸ್ಥೆಗೆ ಹೆಚ್ಚಿನ ಶಕ್ತಿಯನ್ನು ನೀಡಿದಂತೆ ಆಗಿದೆ. ಆರ್‌ಬಿಐ ಗವರ್ನರ್ ಆಗಿದ್ದ ಬಿಮಲ್ ಜಲನ್ ನೇತೃತ್ವದ ಸಮಿತಿಯು ರೂಪಿಸಿದ್ದ ಸೂತ್ರಕ್ಕೆ ಅನುಗುಣವಾಗಿ ಸಿಆರ್‌ಬಿ ಮೊತ್ತವನ್ನು ಲೆಕ್ಕಹಾಕಲಾಗಿದೆ.

ಆರ್‌ಬಿಐ ಕಡೆಯಿಂದ ಸಿಕ್ಕಿರುವ ಹೆಚ್ಚಿನ ಮೊತ್ತವು ಮುಂದೆ ರಚನೆ ಆಗಲಿರುವ ಸರ್ಕಾರಕ್ಕೆ ಹಣಕಾಸಿನ ದೃಷ್ಟಿಯಿಂದ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಡಲಿದೆ. ಇದು ಬಜೆಟ್ ಮಂಡನೆಯ ಸಂದರ್ಭದಲ್ಲಿ ಅರಿವಿಗೆ ಬರಲಿದೆ. ಹೆಚ್ಚಿನ ಡಿವಿಡೆಂಡ್ ವರಮಾನವನ್ನು ನೆಚ್ಚಿಕೊಂಡು ವಿತ್ತೀಯ ಕೊರತೆಯನ್ನು ಕಡಿಮೆ ಮಾಡಲು ಅವಕಾಶ ಇದೆ. ವಿತ್ತೀಯ ಕೊರತೆಯು 2023–24ನೇ ಆರ್ಥಿಕ ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಶೇ 5.8ರಷ್ಟು ಇದ್ದಿದ್ದನ್ನು, 2024–25ನೇ ಆರ್ಥಿಕ ವರ್ಷಕ್ಕೆ ಶೇ 5.1ಕ್ಕೆ ತಗ್ಗಿಸಲಾಗುವುದು ಎಂದು ಕೇಂದ್ರವು ಈಗಾಗಲೇ ಭರವಸೆ ನೀಡಿದೆ. ಅಲ್ಲದೆ, ಅಭ್ಯುದಯ ಕಾರ್ಯಕ್ರಮಗಳಿಗೆ ಅಥವಾ ಬಂಡವಾಳ ವೆಚ್ಚಕ್ಕೆ ಕೂಡ ಈ ಹಣವನ್ನು ಬಳಸಿಕೊಳ್ಳಲು ಕೇಂದ್ರಕ್ಕೆ ಅವಕಾಶ ಇದೆ. ನಿರೀಕ್ಷಿತ ಇತರ ವರಮಾನಗಳಲ್ಲಿ ಆಗಬಹುದಾದ ಯಾವುದೇ ಕೊರತೆಯನ್ನು ಭರ್ತಿ ಮಾಡಿಕೊಳ್ಳಲು ಅಥವಾ ಬಂಡವಾಳ ಹಿಂತೆಗೆತದ ಗುರಿಯನ್ನು ತಲುಪಲು ಆಗದೇ ಇದ್ದುದರಿಂದ ಉಂಟಾಗುವ ವರಮಾನದ ಕೊರತೆಯನ್ನು ಒಂದಿಷ್ಟು ನೀಗಿಸಿಕೊಳ್ಳಲು ಈ ಡಿವಿಡೆಂಡ್ ನೆರವಾಗಬಹುದು. ವಿತ್ತೀಯ ಕೊರತೆಯ ಮೇಲೆ ಹಿಡಿತ ಸಾಧಿಸಿದಾಗ ಕೇಂದ್ರಕ್ಕೆ ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸಲಿಕ್ಕೂ ಸಾಧ್ಯವಾಗಲಿದೆ.

ದಿನದ ಟ್ವೀಟ್

ಎಚ್ಚರಿಕೆಯ ಗಂಟೆ



ಭಾರತದ ಸಿಎಂಐಇಯ (ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ) ಇತ್ತೀಚಿನ ಅಂಕಿ–ಅಂಶದ ಪ್ರಕಾರ, ದೇಶದ ಯುವಜನರ ನಿರುದ್ಯೋಗದ ಪ್ರಮಾಣವು ಭೀತಿ ಸೃಷ್ಟಿಸುವ ಮಟ್ಟವಾದ ಶೇ 45.4ರಷ್ಟನ್ನು ಮುಟ್ಟಿದೆ– ವಿಶ್ವದಲ್ಲಿನ ಅತಿಹೆಚ್ಚಿನ ನಿರುದ್ಯೋಗ ಪ್ರಮಾಣಗಳಲ್ಲಿ ಇದೂ ಒಂದು. ಇದು ತೀರಾ ಆಳವಾದ ಹಾನಿ ಉಂಟುಮಾಡುತ್ತಿದೆ. ದೇಶದ ಹಿತಕ್ಕಾಗಿ ನಾವು ಈ ಅಂಕಿ–ಅಂಶವನ್ನು ಘೋಷಣೆಗಳ ನಡುವೆ ಮರೆಮಾಚಬಾರದು, ರಾಜಕೀಯವನ್ನು ಬದಿಗೊತ್ತಬೇಕು ಮತ್ತು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

ಕಿಡಿನುಡಿ



ಹೆಚ್ಚಿನ ಬೆಳವಣಿಗೆ ಸಾಧಿಸುವೆಡೆಗಿನ ಹುಚ್ಚು ಓಟವು ನಮ್ಮನ್ನು ಇಲ್ಲಿಗೆ ತಂದು ನಿಲ್ಲಿಸಿದೆ. ದೆಹಲಿಯಲ್ಲಿ 52 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿದೆ. ಇದು ಚಂಡೀಗಢದಲ್ಲಿ ಇರುವ ಉಷ್ಣಾಂಶಕ್ಕಿಂತ 10 ಡಿಗ್ರಿಯಷ್ಟು ಹೆಚ್ಚು. ಸಾಮಾನ್ಯವಾಗಿ ಈ ಎರಡೂ ನಗರಗಳ ನಡುವಿನ ಉಷ್ಣಾಂಶದ ವ್ಯತ್ಯಾಸ 1ರಿಂದ 2 ಡಿಗ್ರಿಯವರೆಗೆ ಇರುತ್ತದೆ.

ದೇವಿಂದರ್ ಶರ್ಮಾ, ಲೇಖಕ, ಸಂಶೋಧಕ

25 ವರ್ಷಗಳ ಹಿಂದೆ

ಭಾನುವಾರ, 30-5-1999

● ಭಾರತದ ಸೇನೆ ಮುನ್ನಡೆ ಉಗ್ರರ ಪಡೆಗೆ ಹಿನ್ನಡೆ

ನವದೆಹಲಿ, ಮೇ 29 (ಪಿಟಿಐ): ಕಾರ್ಗಿಲ್ ಪ್ರದೇಶದಲ್ಲಿ ಭಾರತದ ಗಡಿಯೊಳಕ್ಕೆ ನುಸುಳಿರುವ ಅತಿಕ್ರಮಣಕಾರರನ್ನು ಸತತ ನಾಲ್ಕು ದಿನಗಳ ದಾಳಿಯಿಂದ ಹಿಮ್ಮೆಟ್ಟಿಸುವಲ್ಲಿ ಭಾರತದ ಸೇನೆ ಸಫಲವಾಗಿದೆ.

ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆ ನಡೆಸಿರುವ ಭಾರತದ ಸೇನೆ ದ್ರಾಸ್ ಪ್ರದೇಶದಲ್ಲಿ ವಾಸ್ತವ ನಿಯಂತ್ರಣ ರೇಖೆ ತಲುಪಿದೆ. ಅಲ್ಲದೆ ಇತರ ಪ್ರದೇಶಗಳಲ್ಲಿಯೂ ಅತಿಕ್ರಮಣಕಾರರನ್ನು ಹಿಮ್ಮೆಟ್ಟಿಸಿದೆ ಎಂದು ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದ್ದು, ಭಾರತದ ಸೇನೆ ಮತ್ತು ವಾಯುಪಡೆಯ ಜಂಟಿ ಕಾರ್ಯಾಚರಣೆಯಲ್ಲಿ ಕನಿಷ್ಠ 400 ಅತಿಕ್ರಮಣಕಾರರು ಮೃತಪಟ್ಟಿದ್ದಾರೆ ಎಂದರು.

ಕಾರ್ಗಿಲ್ ಪ್ರದೇಶದ ಬಯಲು ಪ್ರದೇಶದಿಂದ ಅತಿಕ್ರಮಣಕಾರರನ್ನು ಓಡಿಸಲಾಗಿದೆ ಎಂದರು.

● ಈ ವರ್ಷ ಸಾಮಾನ್ಯ ವರ್ಗಾವಣೆ ಇಲ್ಲ

ಬೆಂಗಳೂರು, ಮೇ 29– ರಾಜ್ಯ ಸರ್ಕಾರದ ಸಿಬ್ಬಂದಿಯ ಸಾಮಾನ್ಯ ವರ್ಗಾವಣೆಯನ್ನು ಈ ವರ್ಷ ಮಾಡದಿರಲು ಇಂದು ಸೇರಿದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಇದು ಚುನಾವಣೆ ವರ್ಷವಾಗಿರುವುದರಿಂದ ಸಿಬ್ಬಂದಿಯ ಸಾಮಾನ್ಯ ವರ್ಗಾವಣೆ ಮಾಡುವುದಿಲ್ಲವೆಂದು ಮುಖ್ಯಮಂತ್ರಿಗಳು ಈಗಾಗಲೇ ಸಾರ್ವಜನಿಕವಾಗಿ ಹೇಳಿಕೆ ನೀಡಿರುವುದನ್ನು ಸಭೆ ಅನುಮೋದಿಸಿತು ಎಂದು ಕಾನೂನು ಸಚಿವ ಎಂ.ಸಿ. ನಾಣಯ್ಯ ಹೇಳಿದರು.

50 ವರ್ಷಗಳ ಹಿಂದೆ

ಗುರುವಾರ, 30-5-1974

● ಹೆಚ್ಚುವರಿ ಜಮೀನು ಲೆಕ್ಕ ಮಾತ್ರ ಅವಶ್ಯ: ಸದ್ಯಕ್ಕೆ ವರ್ಗೀಕರಣ ಅನಗತ್ಯ

ಬೆಂಗಳೂರು, ಮೇ 29– ಕರ್ನಾಟಕ ಭೂಸುಧಾರಣಾ ಶಾಸನಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಇಂದು ಹೊರಡಿಸಿದ ಸುಗ್ರೀವಾಜ್ಞೆಯು, ರೈತರು ತಮ್ಮ ಹೆಚ್ಚುವರಿ ಜಮೀನಿನ ಪ್ರಮಾಣ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸುವಾಗ, ಜಮೀನು ವರ್ಗೀಕರಣ ವಿವರಗಳನ್ನು ಸಲ್ಲಿಸಬೇಕಾದ ಅಗತ್ಯವಿಲ್ಲ ಎಂದು ತಿಳಿಸಿದೆ.

ಶಾಸನ ನಿಗದಿಪಡಿಸಿದ ಪರಿಮಿತಿಗಿಂತ ಹೆಚ್ಚಿರುವ ಜಮೀನನ್ನು ಸರ್ಕಾರಕ್ಕೆ ಘೋಷಿಸಲು ನೀಡಲಾಗಿದ್ದ ಅವಧಿಯು ನಾಳೆಗೆ ಮುಗಿಯಲಿದ್ದು, ಈ ಅವಧಿಯನ್ನು ಮತ್ತೆ ಮೂರು ತಿಂಗಳುಗಳ ಕಾಲ ಸುಗ್ರೀವಾಜ್ಞೆಯು ವಿಸ್ತರಿಸಿದೆ.

● ಗೋಲನ್ ದಿಬ್ಬದಲ್ಲಿ ಕದನವಿರಾಮಕ್ಕೆ ಇಸ್ರೇಲ್- ಸಿರಿಯಾ ಒಪ್ಪಿಗೆ

ವಾಷಿಂಗ್ಟನ್, ಮೇ 29– ಗೋಲನ್ ದಿಬ್ಬದಲ್ಲಿ ಕದನವಿರಾಮಕ್ಕೆ ಇಸ್ರೇಲ್ ಮತ್ತು ಸಿರಿಯಾ ಒಪ್ಪಿಕೊಂಡಿವೆ ಎಂದು ಅಮೆರಿಕದ ಅಧ್ಯಕ್ಷ ನಿಕ್ಸನ್ ಇಂದು ಪ್ರಕಟಿಸಿದರು.

ಕದನವಿರಾಮಕ್ಕೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಹೆನ್ರಿ ಕಿಸಿಂಜರ್ ಸಂಧಾನ ನಡೆಸಿದರು. ಕದನವಿರಾಮ ಒಪ್ಪಂದಕ್ಕೆ ಶುಕ್ರವಾರ ಉಭಯ ರಾಷ್ಟ್ರಗಳು ಸಹಿ ಹಾಕುವುವು ಎಂದು ತಿಳಿಸಿದ ನಿಕ್ಸನ್ ಅವರು, ಈ ಒಪ್ಪಂದವನ್ನು 'ಪ್ರಮುಖ ರಾಜತಾಂತ್ರಿಕ ಸಾಧನೆ' ಎಂದು ಕರೆದರು.

ಕಿಸಿಂಜರ್ ಅವರ ಮೂವತ್ತೂರು ದಿನಗಳ ಸಂಧಾನ ಯತ್ನದ ನಂತರ ಉಭಯ ರಾಷ್ಟ್ರಗಳೂ ಕದನವಿರಾಮಕ್ಕೆ ಒಪ್ಪಿಕೊಂಡವು.

ಮೇಲ್ಮನೆ ಬರೀ ಮೇಲ್ವರ್ಗದವರ ಮನೆಯಾಗದಂತೆ ನೋಡಿಕೊಳ್ಳಬೇಕಾಗಿದೆ

ಮೇಲ್ಮನೆಯ ಘನತೆ ಮೇಲೇರುತ್ತಿರಲಿ!



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಇಡೀ ದೇಶ ಲೋಕಸಭಾ ಚುನಾವಣೆಯಲ್ಲಿ ಮುಳುಗಿರುವ ಕಾಲದಲ್ಲಿ, ಇದೇ ಜೂನ್ ಮೂರರಂದು ಕರ್ನಾಟಕದ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆಗಳು ನಡೆಯುತ್ತಿವೆ. ಈ ಕ್ಷೇತ್ರಗಳ 'ಸುಶಿಕ್ಷಿತ' ಮತದಾರರು ಈ ಚುನಾವಣೆಯ ಮಹತ್ವದ ಬಗ್ಗೆ ತಲೆಕೆಡಿಸಿಕೊಂಡಂತಿಲ್ಲ. ಕೊಂಚ ಯೋಚಿಸಬಲ್ಲವರು ಕೂಡ 'ವೋಟಿಗೆ ಎಷ್ಟು ರೇಟು' ಥರದ ಒಣಹರಟೆಗಳಲ್ಲಿ ಮುಳುಗಿರುವಂತಿದೆ. ಲೋಕಸಭಾ ಚುನಾವಣೆಯಲ್ಲಿ ಸಾಮಾನ್ಯ ಮತದಾರರು ತೋರುತ್ತಿರುವ ಪ್ರಬುದ್ಧ ಪ್ರತಿಕ್ರಿಯೆಗಳು, ಗಂಭೀರ ಸಮಸ್ಯೆಗಳ ಬಗೆಗಿನ ಚರ್ಚೆಗಳು ಈ ಕ್ಷೇತ್ರಗಳಲ್ಲಿ ಕಾಣುತ್ತಿಲ್ಲ. ಇದು ಅಧಿಕೃತ ಶಿಕ್ಷಣಕ್ಕೂ ಮತದಾರರ ರಾಜಕೀಯ ಎಚ್ಚರಕ್ಕೂ ಸಂಬಂಧವಿಲ್ಲ ಎಂಬುದನ್ನು ಮತ್ತೆ ಸಾಬೀತು ಮಾಡುವಂತಿದೆ!

ಪದವೀಧರ ಕ್ಷೇತ್ರಗಳಲ್ಲಿ, ಶಿಕ್ಷಕರ ಕ್ಷೇತ್ರಗಳಲ್ಲಿ ಮತದಾನ ಮಾಡುವವರು ಪದವೀಧರರಾಗಿರಬೇಕು. ಆದರೆ ಈ ಕ್ಷೇತ್ರಗಳ ಅಭ್ಯರ್ಥಿಗಳು ಪದವೀಧರರೇ ಆಗಿರಬೇಕು ಎಂದೇನಿಲ್ಲ! ಕಾಲೇಜು ಶಿಕ್ಷಣವೊಂದೇ ಶಿಕ್ಷಣವಲ್ಲ ಎನ್ನುವುದು ನಿಜ. ಆದರೂ ಮತ ಹಾಕುವವರಿಗೆ ನಿಗದಿಯಾದ ಶಿಕ್ಷಣದ ಮಟ್ಟ ಅವರನ್ನು ಪ್ರತಿನಿಧಿಸುವವರಿಗೆ ಇರಬೇಕಾಗಿಲ್ಲ ಎಂಬುದು ವಿಚಿತ್ರವಾಗಿದೆ. ಈ ಸಲ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸಿರುವ ವಿವೇಕಾನಂದ ಎಸ್‌ಎಸ್‌ಎಲ್‌ಸಿ ಮುಗಿಸಿದ್ದಾರೆ. ಸ್ಪರ್ಧೆಯಲ್ಲಿರುವ ಮತ್ತೊಬ್ಬ ಅಭ್ಯರ್ಥಿ ಮರಿತಿಬ್ಬೇಗೌಡ ಸ್ನಾತಕೋತ್ತರ ಪದವೀಧರರು. ನೈರುತ್ಯ ಕ್ಷೇತ್ರದಿಂದ ಸ್ಪರ್ಧಿಸಿರುವ ಮಂಜುನಾಥ ಕುಮಾರ್, ಆಗ್ನೇಯ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ವೈ.ಎ. ನಾರಾಯಣಸ್ವಾಮಿ ಉಪನ್ಯಾಸಕರಾಗಿದ್ದವರು. ಈ ಬಗೆಯ ವೈವಿಧ್ಯಗಳ ಹಿನ್ನೆಲೆಯಲ್ಲಿ ಶಿಕ್ಷಕರ ಕ್ಷೇತ್ರಗಳಲ್ಲಿ ಅರ್ಹ ಅಭ್ಯರ್ಥಿಗಳನ್ನು ಆರಿಸಲು ಪದವೀಧರರು ಯಾವ ಮಾನದಂಡಗಳನ್ನು ಅನುಸರಿಸುತ್ತಾರೆ ಎಂಬುದು ಸುಶಿಕ್ಷಿತ ವಲಯದ ರಾಜಕೀಯ ಆಯ್ಕೆಯ ರೀತಿಗಳನ್ನು ಅಳೆಯುವ ಮಾನದಂಡವಾಗಬಲ್ಲದು.

ಹಿಂದೊಮ್ಮೆ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ದಕ್ಷಿಣ ಪದವೀಧರ ಕ್ಷೇತ್ರದಿಂದ ಇಂಗ್ಲಿಷ್ ಪ್ರೊಫೆಸರ್ ಕೆ.ಎಸ್.ಭಗವಾನ್ ಅವರು ಸ್ಪರ್ಧಿಸಿದ್ದು ನೆನಪಾಗುತ್ತದೆ. ಪಕ್ಷೇತರರಾಗಿ ಸ್ಪರ್ಧಿಸಿದ್ದ ಭಗವಾನ್ ಗಳಿಸಿದ 2,500ಕ್ಕೂ ಹೆಚ್ಚು ಮತಗಳು ಪದವೀಧರ ಕ್ಷೇತ್ರದ ಮತದಾರರು ಪಕ್ಷಗಳನ್ನು ಮೀರಿ ಸ್ವತಂತ್ರವಾಗಿ ಮತ ಹಾಕಿದ ರೀತಿಯನ್ನೂ ಸೂಚಿಸುತ್ತವೆ. ಇಂಥ ಪ್ರಯೋಗಗಳು ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳಲ್ಲಾದರೂ ನಡೆಯದಿದ್ದರೆ ಇನ್ನೆಲ್ಲಿ ನಡೆಯಬಲ್ಲವು?

ಇಂಥ ಪ್ರಯೋಗಗಳು ಹೆಚ್ಚದಿರಲು ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರದ ಮತದಾರರ ಬೌದ್ಧಿಕ ಜಡತೆಯೂ ಕಾರಣ. ಪ್ರಿನ್ಸಿಪಾಲರೊಬ್ಬರು ಹೇಳುವಂತೆ, 'ಶಿಕ್ಷಕ ಕ್ಷೇತ್ರದ ಮತದಾರರು ತಮ್ಮ ಶಾಸಕರ ಜೊತೆಗೆ ಶಿಕ್ಷಣದ ಸಮಸ್ಯೆಗಳ ಬಗೆಗೆ ಚರ್ಚಿಸದೆ, ಟ್ರಾನ್ಸ್‌ಫರ್, ಅಪ್ರೂವಲ್‌ಗಳಿಗೆ ಅವರನ್ನು ಆಶ್ರಯಿಸುವುದೇ ಹೆಚ್ಚು'. ವಿದ್ಯಾರ್ಥಿಗಳ ಬದುಕನ್ನು ರೂಪಿಸಬಲ್ಲ ಬೋಧನಾ ಮಾಧ್ಯಮದಂಥ ಪ್ರಶ್ನೆಗಳನ್ನು ಪರಿಷತ್ತಿನಲ್ಲಿ ಚರ್ಚಿಸಬೇಕೆಂದು ಶಾಸಕರನ್ನು ಈ ಮತದಾರ ವಲಯಗಳು ಒತ್ತಾಯಿಸಿದ ಉದಾಹರಣೆಗಳಿಲ್ಲ. ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಕೆಳಮನೆಯಲ್ಲಾಗಲೀ ಮೇಲ್ಮನೆಯಲ್ಲಾಗಲೀ ವ್ಯಾಪಕ ಚರ್ಚೆಗೆ ಬರಲಿಲ್ಲ. ಕೇಂದ್ರ ಸರ್ಕಾರವನ್ನು ಮೆಚ್ಚಿಸುವ ಸರ್ಕಾರದ ಆತುರ, ಸಂತೆ ಹೊತ್ತಿಗೆ ಮೂರು ಮೊಳ ನೇಯುವ 'ಶಿಕ್ಷಣ ತಜ್ಞರು'ಗಳ 'ಸರ್ಕಾರಿ ಸೇವೆ' ಎರಡೂ ಸೇರಿ ರಾಜ್ಯದ ಒಂದು ತಲೆಮಾರಿನ ಭವಿಷ್ಯ ತರಾತುರಿಯಲ್ಲಿ ನಿರ್ಧಾರವಾದ ದುರಂತ ನಡೆಯಿತು.

ಮೇಲ್ಮನೆ ಇರುವುದೇ ಸಮಸ್ಯೆಗಳ ಆಳ, ಅಗಲವನ್ನು ಅಧ್ಯಯನ ಮಾಡಿ ಚರ್ಚೆಗಳಿಗೆ ಹೊಸ ದಿಕ್ಕು ಕೊಡುವ ಉದ್ದೇಶದಿಂದ. ಕೆಲವೇ ವರ್ಷಗಳ ಕೆಳಗೆ ಮೇಲ್ಮನೆಯ ಶಾಸಕರ ಬೌದ್ಧಿಕ ಸಿದ್ಧತೆ, ನಿಲುವು ಹಾಗೂ ಸ್ಪಷ್ಟತೆ ಹೊಸ ಚರ್ಚೆಗಳಿಗೆ ಕಾರಣವಾಗುತ್ತಿದ್ದವು. ಪತ್ರಿಕೆಗಳಲ್ಲಿ ಮೇಲ್ಮನೆಯ ಚರ್ಚೆಗಳೇ ಹೆಚ್ಚು ಪ್ರಚಾರ ಪಡೆದ ಉದಾಹರಣೆಗಳಿದ್ದವು. ದಿಟ್ಟ ರಾಜಕಾರಣಿಗಳಾದ ಎ.ಕೆ.ಸುಬ್ಬಯ್ಯ, ಎಂ.ಸಿ.ನಾಣಯ್ಯ ಪರಿಷತ್ತಿನಲ್ಲಿ ಒಂದು ಕಾಲಕ್ಕೆ ಎತ್ತುತ್ತಿದ್ದ ಗಂಭೀರ ಪ್ರಶ್ನೆಗಳು ಸರ್ಕಾರಗಳನ್ನು ತುದಿಗಾಲಲ್ಲಿ ನಿಲ್ಲಿಸುತ್ತಿದ್ದವು.

ಸಾಮಾಜಿಕ ನ್ಯಾಯದ ದಿಕ್ಕನ್ನೇ ಬದಲಿಸಿದ ಹಿಂದುಳಿದ ವರ್ಗಗಳ ಆಯೋಗದ ವರದಿ ಕೊಟ್ಟ ಎಲ್.ಜಿ. ಹಾವನೂರ್ ಪರಿಷತ್ತಿನಲ್ಲಿ ಇದ್ದರು. ವಿಶಿಷ್ಟ ಸಂಸದೀಯ ಪಟು ರಾಮಕೃಷ್ಣ ಹೆಗಡೆ ವಿಧಾನ ಪರಿಷತ್ತಿನಲ್ಲಿ 50 ವರ್ಷಗಳ ಕೆಳಗೆ ವಿರೋಧ ಪಕ್ಷದ ನಾಯಕರಾಗಿದ್ದರು. ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರಾಗಿದ್ದ ಕವಿ ಸಿದ್ಧಲಿಂಗಯ್ಯ 'ಅಜಲು ಪದ್ಧತಿ'ಯಂಥ ಶೋಷಣೆಯನ್ನು ಪರಿಷತ್ತಿನಲ್ಲಿ ಚರ್ಚಿಸಿ, ಅದು ನಿಷೇಧವಾಗಲು ಕಾರಣರಾದರು. ಮುಂದೆ ಅಂತರ್ಜಾತಿ ವಿವಾಹಿತರಿಗೆ ಮೀಸಲಾತಿಗಾಗಿ ಸಿದ್ಧಲಿಂಗಯ್ಯ ಮಂಡಿಸಿದ ಖಾಸಗಿ ಮಸೂದೆಯು ಸದನದ ಒಳಹೊರಗೆ ವ್ಯಾಪಕವಾಗಿ ಚರ್ಚೆಗೊಳಗಾಯಿತು. ಬಂಗಾರಪ್ಪ ನೇತೃತ್ವದ ಸರ್ಕಾರ ಇಕ್ಕಟ್ಟಿಗೆ ಸಿಕ್ಕಿಕೊಂಡಿತು. ಮಸೂದೆಯನ್ನು ತಿರಸ್ಕರಿಸಿದರೆ ಸರ್ಕಾರ ಪ್ರಗತಿ ವಿರೋಧಿಯಾಗುತ್ತದೆ, ಒಪ್ಪಿಕೊಂಡರೆ ಸರ್ಕಾರಕ್ಕೆ ಹಿನ್ನಡೆ. ಆಗ ಸರ್ಕಾರವೇ ಆ ಮಸೂದೆ ಮಂಡಿಸುವುದಾಗಿ ಭರವಸೆ ಕೊಟ್ಟಿತು. ಸಿದ್ಧಲಿಂಗಯ್ಯ ತಮ್ಮ ಖಾಸಗಿ ಮಸೂದೆಯನ್ನು ಹಿಂತೆಗೆದುಕೊಂಡರು. ಕೊನೆಗೂ ಮಸೂದೆ ಜಾರಿಗೆ ಬರಲಿಲ್ಲ. ಬದಲಿಗೆ ಸರ್ಕಾರವು ದಲಿತ, ದಲಿತೇತರರ ನಡುವಣ ವಿವಾಹಗಳಿಗೆ ಪ್ರೋತ್ಸಾಹಧನ ಜಾರಿ ಮಾಡಿತು. ನಂತರದಲ್ಲಿ ಅಂತರ್ಜಾತಿ ವಿವಾಹಿತರಿಗೆ ಶೇಕಡ 1ರಷ್ಟು ಮೀಸಲಾತಿಯನ್ನು ಶಿಫಾರಸು ಮಾಡಿದ ರವಿವರ್ಮ ಕುಮಾರ್ ವರದಿ ಜಾರಿಯಾಗದೇ ಉಳಿದಿದೆ.



ಮೇಲ್ಮನೆಯ ಚರ್ಚೆಯ ಮಟ್ಟವನ್ನು ಮೇಲೇರಿಸುತ್ತಿದ್ದ ಹಲವರು ನೆನಪಾಗುತ್ತಾರೆ: ಟಿ.ಎನ್.ನರಸಿಂಹಮೂರ್ತಿ, ಎಂ.ಆರ್.ತಂಗಾ, ಡಿ.ಎಚ್. ಶಂಕರಮೂರ್ತಿ, ಬಿ.ಎಲ್. ಶಂಕರ್, ವಿ.ಆರ್.ಸುದರ್ಶನ್, ಎಚ್.ಕೆ. ಪಾಟೀಲ, ಎಲ್.ಹನುಮಂತಯ್ಯ, ವೈ.ಎಸ್.ವಿ.ದತ್ತ, ಬಿ.ಕೆ. ಚಂದ್ರಶೇಖರ್, ಬಿ.ಟಿ. ಲಲಿತಾನಾಯಕ್, ಮೋಟಮ್ಮ, ಉಗ್ರಪ್ಪ... ಹೀಗೆ ಮೊನ್ನೆ ಮೊನ್ನೆಯವರೆಗೂ ಪ್ರಖರ ಚರ್ಚೆಗಳನ್ನು ಹುಟ್ಟುಹಾಕಿದವರು ಇಲ್ಲಿದ್ದರು. ಬಿ.ಕೆ. ಹರಿಪ್ರಸಾದ್ ಕೂಡ ಈ ಪರಂಪರೆ ಮುಂದುವರಿಸಿದ್ದಾರೆ.


ಬಹುತೇಕ ರಾಜ್ಯಗಳು ವಿಧಾನಪರಿಷತ್ತನ್ನೇ ರದ್ದು ಮಾಡಿವೆ. ವಿಧಾನಪರಿಷತ್ತನ್ನು ಉಳಿಸಿಕೊಂಡಿರುವ ಏಳು ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಇಂಥ ಹಿರಿಮೆಯಿರುವ ಕರ್ನಾಟಕದಲ್ಲಿ ಮೇಲ್ಮನೆ ರಿಯಲ್ ಎಸ್ಟೇಟಿನವರ, ದುಡ್ಡುಳ್ಳವರ ಮನೆಯಾಗಬಾರದು. ಅದೇ ರೀತಿ, ಮೇಲ್ಮನೆ ಬರೀ 'male' ಮನೆಯಾಗದಂತೆ ಅಥವಾ ಮೇಲ್ವರ್ಗಗಳ ಮನೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಕೂಡ ರಾಜಕೀಯ ಪಕ್ಷಗಳ ಮೇಲಿದೆ.

ಜೂನ್ ಮೂರರಂದು ನಡೆಯಲಿರುವ ವಿಧಾನ ಪರಿಷತ್ ಚುನಾವಣೆಯನ್ನು ಗಮನಿಸಿ: ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ರಾಜಕೀಯ ಮೀಸಲಾತಿ ಕಲ್ಪಿಸಲು ತಾತ್ವಿಕವಾಗಿ ಒಪ್ಪಿರುವ ರಾಜ್ಯದ ಪ್ರಮುಖ ಮೂರು ಪಕ್ಷಗಳ ಪೈಕಿ ಯಾವ ಪಕ್ಷವೂ ಒಬ್ಬ ಮಹಿಳೆಗೂ ಪದವೀಧರ ಅಥವಾ ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಟಿಕೆಟ್ ಕೊಟ್ಟಿಲ್ಲ! ಸಾಮಾನ್ಯವಾಗಿ ಎಲ್ಲ ರಾಜಕೀಯ ಪಕ್ಷಗಳೂ ಅಭ್ಯರ್ಥಿಗಳು ಗೆಲ್ಲುವ ಸಾಧ್ಯತೆಯನ್ನು ಆಧರಿಸಿ ಟಿಕೆಟ್ ಕೊಡುವುದು ಸಹಜ. ಆದರೆ ಸುಶಿಕ್ಷಿತ ಮತದಾರರ ಕ್ಷೇತ್ರಗಳಲ್ಲಾದರೂ ಸಾಮಾಜಿಕ ನ್ಯಾಯದ ಆಧಾರದ ಮೇಲೆ ಅಭ್ಯರ್ಥಿಗಳಿಗೆ ಅವಕಾಶ ಕೊಡುವಂತೆ ಒತ್ತಡ ತರುವ ಜವಾಬ್ದಾರಿ ಮತದಾರರ ಮೇಲೂ ಇರುತ್ತದೆ.

ಇಂಥ ಒತ್ತಾಯಗಳು ಈ ಚುನಾವಣೆಗಳ ಕಾಲದಲ್ಲಾದರೂ ಹುಟ್ಟಿದರೆ, ವಿಧಾನಸಭೆಯಿಂದ ಮೇಲ್ಮನೆಗೆ 'ಶಾಸಕ'ರನ್ನು ಆಯ್ಕೆ ಮಾಡುವಾಗ ಹೆಚ್ಚಿನ ಸಂಖ್ಯೆಯ 'ಶಾಸಕಿ'ಯರನ್ನು, ದನಿಯಿಲ್ಲದ ಜಾತಿಗಳ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕೆಂಬ ಒತ್ತಡ ಪಕ್ಷಗಳಲ್ಲಿ ಹುಟ್ಟಬಹುದು. ವೋಟು ಹಾಕಲು ಬೇಕಾದ ಈ ವರ್ಗಗಳು ಪ್ರಾತಿನಿಧ್ಯಕ್ಕೆ ಅಗತ್ಯವಿಲ್ಲ ಎಂಬ ಧೋರಣೆ ಅಮಾನವೀಯ. ವಿಧಾನಸಭೆಯಲ್ಲಿ ಪ್ರಾತಿನಿಧ್ಯವಿಲ್ಲದ ವಲಯಗಳಿಗೆ ಪರಿಷತ್ತಿನಲ್ಲಾದರೂ ಸ್ಥಾನ ಸಿಗುವಂತಾಗಬೇಕು. ಈ ವರ್ಗಗಳನ್ನು ಸಮರ್ಥವಾಗಿ ಪ್ರತಿನಿಧಿಸಬಲ್ಲ ಅರ್ಹರನ್ನು ಈ ವಲಯಗಳಿಂದಲೇ ಆಯ್ಕೆ ಮಾಡಬೇಕು.

ಜೂನ್ 13ರಂದು ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ನಡೆಯಲಿರುವ ಚುನಾವಣೆಯಲ್ಲಿ ಅವಕಾಶ ಬಯಸಿದ ಕೆಲವರು ಮೊನ್ನೆ ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು. ಆಗ ಸಿದ್ದರಾಮಯ್ಯ ಅವರು, 'ಎಷ್ಟು ಜನಕ್ಕೆ ಅವಕಾಶ ಕೊಡೋದು? ನಮ್ಮ ಕಷ್ಟ ನಿಮಗೆ ಅರ್ಥವಾಗಲ್ಲ' ಅಂದರು. ಅವರ ಈ 'ಕಷ್ಟ'ಗಳ ಜೊತೆಗೆ ಸಾಮಾಜಿಕ ಪ್ರಾತಿನಿಧ್ಯದ ಹೊಸ ಕಷ್ಟವೂ ಸೇರಿಕೊಳ್ಳಲಿ, ಕೆಳಮನೆಯಲ್ಲಿ ಪ್ರಾತಿನಿಧ್ಯವಿರದ ಜಾತಿ, ವರ್ಗಗಳ ದನಿ ಮೇಲ್ಮನೆಯಲ್ಲಾದರೂ ಕೇಳುವಂತಾಗಲಿ.

ಚುರುಮುರಿ



ಜಾರಿಬಿದ್ದ ಅನು

● ಸಿ.ಎನ್.ರಾಜು

ಅಂಗಡಿಯಿಂದ ತರಕಾರಿ ತರುವಾಗ ಅನು ಜಾರಿಬಿದ್ದಳು. ತರಕಾರಿಗಿಂತ ಹೆಂಡತಿ ಮುಖ್ಯ ಎಂದುಕೊಂಡು ಗಿರಿ, ಕೊಚ್ಚೆಯಲ್ಲಿ ಬಿದ್ದಿದ್ದ ತರಕಾರಿಯನ್ನು ಅಲ್ಲೇ ಬಿಟ್ಟು ಹೆಂಡತಿಯನ್ನು ಆಸ್ಪತ್ರೆಗೆ ಕರೆದೊಯ್ದ. ಇಂಜೆಕ್ಷನ್, ಮಾತ್ರೆ ಕೊಟ್ಟ ಡಾಕ್ಟರ್ ಬೆಡ್‌ರೆಸ್ಟ್‌ಗೆ ಸೂಚಿಸಿದರು. ಅಕ್ಕಪಕ್ಕದವರು ಬಂದು ಸುಮ್ಮಗೆ ಸಾಂತ್ವನ ಹೇಳಿದರು.

'ಗಂಡಂದಿರು ಕಡ್ಡಾಯವಾಗಿ ಅಡುಗೆ ಕಲಿಯಬೇಕು. ಹೆಂಡ್ತಿಗೆ ಕಾಯಿಲೆ, ಕೋಪ ಬಂದಾಗ ಅಡುಗೆ ಮಾಡಿ ಉಣ್ಣಲು ಅನುಕೂಲ' ಎಂದು ನೆರೆಹೊರೆ ಹೆಂಗಸರು ಸಾಂಬಾರ್ ತಂದುಕೊಟ್ಟು ಗಿರಿಗೆ ಸಮಾಧಾನ ಹೇಳಿ ಹೋದರು.

ಮಾರನೇ ದಿನದಿಂದ ನೆಂಟರು-ಇಷ್ಟರು ಹಣ್ಣು, ಬನ್ನು ಹಿಡಿದು ಅನುವಿನ ಆರೋಗ್ಯ ವಿಚಾರಿಸಲು ಸಾಲುಗಟ್ಟಿ ಬಂದರು.

'ಬ್ರೆಡ್ಡು, ಬಾಳೆಹಣ್ಣು ತರುವಷ್ಟು ದೊಡ್ಡ ಕಾಯಿಲೆ ಅಲ್ಲ, ಸೊಂಟ ಉಳುಕಿದೆ ಅಷ್ಟೇ' ಅಂದಳು ಅನು.

ತಾನು ಎಲ್ಲಿ ಜಾರಿದೆ, ಹೇಗೆ ಜಾರಿದೆ, ಜಾರಿದ ಮೇಲೆ ಏನೇನಾಯಿತು ಅಂತ ಬಂದವರಿಗೆಲ್ಲಾ ಕಥೆ ಹೇಳೀಹೇಳಿ ಅನು ಆಯಾಸಗೊಂಡಳು.

ಮನೆಗೆ ಬಂದವರಿಗೆ ಹೋಟೆಲ್‌ನಿಂದ ಗಿರಿ ಊಟ, ತಿಂಡಿ ತರಿಸಿ ಅತಿಥಿ ಸತ್ಕಾರ ಮಾಡಿದ. 'ಆಸ್ಪತ್ರೆ ಖರ್ಚಿಗಿಂತ, ನಿನ್ನ ಆರೋಗ್ಯ ವಿಚಾರಿಸಲು ಬಂದವರಿಗೆ ಮಾಡುವ ಆತಿಥ್ಯದ ಖರ್ಚೇ ಜಾಸ್ತಿಯಾಗ್ತಿದೆ' ಅಂದ.

'ಮಾಡಲೇಬೇಕೂರೀ...ಸಂಜೆ ನಮ್ಮ ಮಹಿಳಾ ಸಂಘದ 20-30 ಫ್ರೆಂಡ್ಸ್ ನನ್ನ ನೋಡಲು ಬರ್ತಿದ್ದಾರೆ, ಅವರಿಗೆಲ್ಲಾ ಮಸಾಲೆ ದೋಸೆ ಆರ್ಡರ್ ಮಾಡಿರಿ' ಎಂದಳು.

'ಸೊಂಟ ರಿಪೇರಿಯಾಗಿದೆ, ಆರೋಗ್ಯವಾಗಿದ್ದೇನೆ ಅಂತ ವಾಟ್ಸ್‌ಆ್ಯಪ್, ಫೇಸ್‌ಬುಕ್‌ಗೆ ಮಾಹಿತಿ ಹಂಚಿಬಿಡು. ಇನ್ಯಾರೂ ಬರೋದು ಬೇಡ...'

'ಯಾಕ್ರೀ?'

'ಮದ್ವೆ, ಗೃಹ ಪ್ರವೇಶದಲ್ಲಿ ಮುಯ್ಯಿ ಕೊಡುವಂತೆ, ಪೇಷಂಟ್ ನೋಡಲು ಬರುವವರು ಕವರ್‌ನಲ್ಲಿ ಕ್ಯಾಷ್ ಇಟ್ಟು ಮುಯ್ಯಿ ಕೊಡುವ ಪದ್ಧತಿ ನಮ್ಮಲ್ಲಿ ಇಲ್ಲವಲ್ಲಾ...!' ಅಂದ ಗಿರಿ.

ಸಂಗತ

ಅಲೆಲೆ... ಆಲೂಗೂ ಒಂದು ದಿನ!

ಹಲವು ಜೀವಸತ್ವಗಳನ್ನು ಒಳಗೊಂಡಿರುವ ಆಲೂಗೆಡ್ಡೆಗೆ ಮಾನ್ಯತೆ ನೀಡಿರುವ ವಿಶ್ವಸಂಸ್ಥೆ, ಈ ತರಕಾರಿಯ ಮಹತ್ವವನ್ನು ಸಾರುವಂತೆ ಕರೆ ನೀಡಿದೆ

● ಶಿಶಿರ ವಸಿಷ್ಠ


ಪರಿಸರ ಸಂರಕ್ಷಣೆಗಾಗಿ ವಿಶ್ವ ಪರಿಸರ ದಿನ, ಮಣ್ಣಿಗಾಗಿ ಪ್ರತ್ಯೇಕ ವಿಶ್ವ ಮಣ್ಣು ದಿನ, ಪುಟಾಣಿ ಗುಬ್ಬಚ್ಚಿಗಾಗಿ ವಿಶ್ವ ಗುಬ್ಬಚ್ಚಿ ದಿನ, ನದಿಗಳಿಗಾಗಿ ವಿಶ್ವ ನದಿ ದಿನ, ಸ್ವಚ್ಛತೆಗಾಗಿ ಶೌಚ ದಿನ... ಹೀಗೆ ಅನೇಕ ಬಗೆಯ ದಿನಗಳನ್ನು ನಿಗದಿಪಡಿಸಿಕೊಂಡು ಆಚರಿಸುತ್ತಲೇ ಇರುತ್ತೇವೆ. ಇಂದು (ಮೇ 30), ನಮ್ಮೆಲ್ಲರ ದಿನಬಳಕೆಯ ತರಕಾರಿಗಳಲ್ಲಿ ಒಂದಾದ ಆಲೂಗೆಡ್ಡೆಯ ದಿನಾಚರಣೆ ವಿಶ್ವದಾದ್ಯಂತ ನಡೆಯುತ್ತಿದೆ. ಇದೇ ಮೊದಲ ಬಾರಿಗೆ ಜರುಗುತ್ತಿರುವ ಈ ದಿನಾಚರಣೆಯ ಧ್ಯೇಯವಾಕ್ಯ 'ವೈವಿಧ್ಯವನ್ನು ಬೆಳೆಸೋಣ, ಭರವಸೆಯನ್ನು ಉಣಿಸೋಣ' ಎಂಬುದಾಗಿದೆ.

ದೂರದ ದಕ್ಷಿಣ ಅಮೆರಿಕದ ಎಂಡೀಸ್ ಪರ್ವತಶ್ರೇಣಿಯಲ್ಲಿ 10,000 ವರ್ಷಗಳ ಹಿಂದೆ ಅಂಕುರಿಸಿದ ಆಲೂಗೆಡ್ಡೆ, ಈಗಿನ ದಿನೋಪಯೋಗಿ ತರಕಾರಿಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಹಲವು ಜೀವಸತ್ವಗಳನ್ನು ಒಳಗೊಂಡಿರುವ ಆಲೂಗೆಡ್ಡೆಯಿಂದ ಪಲ್ಯ, ಸಾಂಬಾರ್, ಸಾಲಡ್, ಸಾಗುದಂತಹ ಸಾಮಾನ್ಯ ಖಾದ್ಯಗಳಿಂದ ಹಿಡಿದು ಬಾಯಲ್ಲಿ ನೀರೂರಿಸುವ ಕರಿದ ಚಿಪ್ಸ್, ಬೋಂಡ, ಸಮೋಸ, ಕಟ್ಲೆಟ್, ಫಿಂಗರ್ ಚಿಪ್ಸ್, ಪರೋಟದಂತಹ ಪದಾರ್ಥಗಳವರೆಗೆ ತಯಾರಿಸಬಹುದಾದ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಮಸಾಲೆ ದೋಸೆಯ ಜೊತೆಗೆ ಆಲೂಗೆಡ್ಡೆಯ ಪಲ್ಯ ಇಲ್ಲದಿರುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ.

ನಮ್ಮ ನಿತ್ಯ ಬಳಕೆಯ ಆಲೂಗೆಡ್ಡೆಗೆ ಸಾಕ್ಷಾತ್ ವಿಶ್ವಸಂಸ್ಥೆಯೇ ಮಾನ್ಯತೆ ನೀಡಿ ಅದಕ್ಕೊಂದು ದಿನವನ್ನೂ ನಿಗದಿ ಮಾಡಿ 'ಆಲೂಗೆಡ್ಡೆಯ ಮಹತ್ವವನ್ನು ಸಾರಿರಿ' ಎಂದು ಕರೆ ನೀಡಿದೆ. ವಿಶ್ವದಲ್ಲಿ 5,000 ಬಗೆಯ ಆಲೂಗೆಡ್ಡೆ ತಳಿಗಳಿವೆ. ಬೇರೆ ತರಕಾರಿಗಳಿಗೆ ಹೋಲಿಸಿದರೆ 'ಬಡಜನರ ಸ್ನೇಹಿತ' ಎಂಬ ಖ್ಯಾತಿಯುಳ್ಳ ಆಲೂಗೆಡ್ಡೆಯ ಬೆಲೆ ಕಡಿಮೆಯಾದ್ದರಿಂದ ಸಾಮಾನ್ಯರಿಂದ ಹಿಡಿದು ಶ್ರೀಮಂತರ ಅಡುಗೆ ಮನೆಗಳಲ್ಲಿಯೂ ಆಲೂಗೆಡ್ಡೆ ಇರುತ್ತದೆ.

ನಮ್ಮ ದೇಶದಲ್ಲಿ 69 ಬಗೆಯ ಆಲೂಗೆಡ್ಡೆಗಳನ್ನು ಹಿಂದಿನ ಮೂರು ಶತಮಾನಗಳಿಂದ ಬೆಳೆಯಲಾಗುತ್ತಿದೆ. ಪ್ರತಿ ತಿಂಗಳು ಹಲವು ಲಕ್ಷ ಟನ್‌ಗಳಷ್ಟು ಹೊರದೇಶಗಳಿಗೆ ರಫ್ತಾಗುತ್ತದೆ. ಆಲೂಗೆಡ್ಡೆಯು ಪೆರು ದೇಶದ ರಾಷ್ಟ್ರೀಯ ಬೆಳೆಯಾಗಿದೆ. ಈ ಉತ್ಪನ್ನದ ಪ್ರಾಮುಖ್ಯದ ಅರಿವು ಮೂಡಿಸಲು ಪ್ರತಿ ವರ್ಷದ ಮೇ 30ರಂದು ಅಲ್ಲಿ ಆಲೂಗೆಡ್ಡೆ ರಾಷ್ಟ್ರೀಯ ದಿನಾಚರಣೆ ನಡೆಯುತ್ತದೆ. ಆಲೂಗೆಡ್ಡೆಯ ಮಹತ್ವವನ್ನು ವಿಶ್ವಕ್ಕೆ ಪರಿಚಯಿಸಲು ವಿಶ್ವಸಂಸ್ಥೆಯ ಮುಂದೆ ವಿಚಾರ ಪ್ರಸ್ತಾಪಿಸಿದ ಪೆರು, ವಿಶ್ವಮಟ್ಟದ ಆಚರಣೆಗೆ ದಿನವೊಂದನ್ನು ನಿಗದಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಪೆರುವಿನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಆಲೂಗೆಡ್ಡೆ ತಳಿಗಳಿವೆ. ವಿಶ್ವಸಂಸ್ಥೆಯ ಮುಂದಾಳತ್ವದಲ್ಲಿ ಫುಡ್ ಆ್ಯಂಡ್ ಅಗ್ರಿಕಲ್ಚರ್ ಆರ್ಗನೈಜೇಷನ್ (ಎಫ್‌ಎಒ) ಆಲೂಗೆಡ್ಡೆ ದಿನಾಚರಣೆ ನಡೆಸುವ ನೆವದಲ್ಲಿ ಅದರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮಹತ್ವಗಳನ್ನು ಸಾರುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ವಿಶ್ವದ ಬಹುತೇಕ ವಾಯುಗುಣಗಳಲ್ಲಿ ಬೆಳೆಯುವ ಸಾಮರ್ಥ್ಯವಿರುವ ಆಲೂಗೆಡ್ಡೆಯು ಹಲವು ದೇಶಗಳ ಮುಖ್ಯ ಬೆಳೆಯಾಗಿದೆ. ಹಸಿವು, ಅಪೌಷ್ಟಿಕತೆ ಮತ್ತು ಬಡತನ ನಿವಾರಣೆಯಲ್ಲಿ ಮುಖ್ಯ ಪಾತ್ರ ವಹಿಸಿದೆ. ಆಹಾರ ಭದ್ರತೆಯ ವಿಷಯದಲ್ಲಿಯೂ ಪ್ರಮುಖ ಪಾತ್ರ ನಿರ್ವಹಿಸುತ್ತಿರುವ ಆಲೂಗೆಡ್ಡೆಯು ಪರಿಸರಸ್ನೇಹಿ ಬೆಳೆಯಾಗಿದ್ದು, ಕಡಿಮೆ ಶಾಖವರ್ಧಕ ಅನಿಲಗಳನ್ನು ವಾತಾವರಣಕ್ಕೆ ಬಿಡುಗಡೆ ಮಾಡುತ್ತದೆ ಎಂಬುದು ಪತ್ತೆಯಾಗಿದೆ. ವಿಶ್ವ ಆರ್ಥಿಕತೆಗೆ ತನ್ನದೇ ಮಹತ್ವದ ಕೊಡುಗೆ ನೀಡುತ್ತಿರುವ ಆಲೂಗೆಡ್ಡೆ ಬೆಳೆಯು ಜಾಗತಿಕ ವ್ಯವಸಾಯ, ಆರ್ಥಿಕ ಅಭಿವೃದ್ಧಿಗೆ ಗಟ್ಟಿ ನೆಲೆ ಒದಗಿಸುವುದಲ್ಲದೆ, ಆಹಾರ ಅಭದ್ರತೆ ಮತ್ತು ಅಪೌಷ್ಟಿಕತೆ ಕಡಿಮೆ ಮಾಡುವಲ್ಲಿ ನಾವು ಯಾರೂ ಊಹಿಸದಂತಹ ಕೆಲಸ ಮಾಡಿದೆ ಎಂದು ವಿಶ್ವಸಂಸ್ಥೆ ಹೇಳಿದೆ.



ವಿಶ್ವದ ಎಲ್ಲ ಭಾಗಗಳಲ್ಲಿಯೂ ಆಲೂಗೆಡ್ಡೆಯನ್ನು ಬೆಳೆಯಲಾಗುತ್ತಿದೆಯಾದರೂ ಚೀನಾ ಮತ್ತು ಭಾರತವು ವಿಶ್ವದ ಒಟ್ಟು ಬೆಳೆಯ ಮೂರನೇ ಒಂದು ಭಾಗದಷ್ಟು ಉತ್ಪಾದನೆ ಮಾಡುತ್ತಿವೆ. ವಾರ್ಷಿಕ 9.5 ಕೋಟಿ ಟನ್ ಉತ್ಪಾದನೆ ಮಾಡುತ್ತಿರುವ ಚೀನಾ ಪ್ರಥಮ ಸ್ಥಾನದಲ್ಲಿದ್ದರೆ, 5.4 ಕೋಟಿ ಟನ್ ಉತ್ಪಾದನೆ ಮಾಡುತ್ತಿರುವ ನಾವು ಎರಡನೇ ಸ್ಥಾನದಲ್ಲಿದ್ದೇವೆ ಮತ್ತು 20 ಲಕ್ಷ ಟನ್ ಬೆಳೆಯುವ ಉಕ್ರೇನ್ ಮೂರನೇ ಸ್ಥಾನದಲ್ಲಿದೆ.

ಅಚ್ಚರಿಯ ವಿಷಯವೆಂದರೆ, ಆಲೂಗೆಡ್ಡೆ ಬೆಳೆಯುವ ವಿಷಯದಲ್ಲಿ ಹತ್ತನೇ ಸ್ಥಾನದಲ್ಲಿರುವ ನೆದರ್‌ಲ್ಯಾಂಡ್ಸ್, ಬೆಳೆಯನ್ನು ರಫ್ತು ಮಾಡುವ ದೇಶಗಳ ಪೈಕಿ ಪ್ರಥಮ ಸ್ಥಾನದಲ್ಲಿದೆ. ನಮ್ಮ ಉತ್ತರಪ್ರದೇಶವು ದೇಶದಲ್ಲಿ ಅತಿ ಹೆಚ್ಚು ಆಲೂಗೆಡ್ಡೆ ಬೆಳೆಯುವ ರಾಜ್ಯವೆನಿಸಿದೆ. ವರ್ಷದುದ್ದಕ್ಕೂ ಬೆಳೆಯಬಹುದಾದ ಬೆಳೆಗೆ ವರ್ಷದ ಋತುಗಳಿಗೆ ಅನುಸಾರವಾಗಿ ಕನಿಷ್ಠ 80ರಿಂದ ಗರಿಷ್ಠ 130 ದಿನಗಳು ಬೇಕಾಗುತ್ತವೆ.

ವಿಟಮಿನ್ 'ಸಿ' ಜೊತೆಗೆ ಪೊಟ್ಯಾಶಿಯಂ, ಪಿಷ್ಟ ಪದಾರ್ಥ, ವಿಟಮಿನ್ 'ಬಿ6' ಮತ್ತು ಖನಿಜಾಂಶಗಳು ಹೇರಳವಾಗಿರುವ ಆಲೂಗೆಡ್ಡೆಯು ಹೃದಯದ ಆರೋಗ್ಯ, ಮಾಂಸಖಂಡಗಳು ಮತ್ತು ನರಮಂಡಲದ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ನೆರವಾಗುತ್ತದೆ. ಹೊಳೆಯುವ ಬಿಳಿ ಬಣ್ಣದ ಆಲೂಗೆಡ್ಡೆಗಿಂತ ಮಾಸಲು ಬಣ್ಣದ ಆಲೂಗೆಡ್ಡೆಯಲ್ಲಿ ಹೆಚ್ಚಿನ ಉತ್ಕರ್ಷಣ ನಿರೋಧಕಗಳು (ಆ್ಯಂಟಿ ಆಕ್ಸಿಡೆಂಟ್) ಇರುತ್ತವೆ. ಕಬ್ಬಿಣ, ರಂಜಕ, ಕ್ಯಾಲ್ಸಿಯಂ, ಮ್ಯಾಗ್ನೀಷಿಯಂ ಮತ್ತು ಸತುವಿನ ಅಂಶಗಳು ನಮ್ಮ ದೇಹದ ಮೂಳೆಗಳ ಆರೋಗ್ಯವನ್ನು ಕಾಪಾಡುತ್ತವೆ. ರಕ್ತದೊತ್ತಡ, ಉರಿಯೂತ, ಕ್ಯಾನ್ಸರ್ ನಿಯಂತ್ರಣಕ್ಕೆ ಬೇಕಾದ ಪೊಟ್ಯಾಶಿಯಂ ಮತ್ತು ಫೋಲೇಟ್‌ಗಳು ಆಲೂಗೆಡ್ಡೆಯಲ್ಲಿ ಹೇರಳವಾಗಿವೆ.

ವಾಚಕರ ವಾಣಿ

ಕೋರ್ಟ್ ಆದೇಶ: ಎಲ್ಲ ರಾಜ್ಯಗಳಿಗೂ ಎಚ್ಚರಿಕೆಯಾಗಲಿ

ಗುಜರಾತ್‌ನ ರಾಜ್‌ಕೋಟ್‌ನಲ್ಲಿರುವ ಟಿಆರ್‌ಪಿ ಗೇಮ್ ಜೋನ್‌ನಲ್ಲಿ ಇತ್ತೀಚೆಗೆ 27 ಜನರನ್ನು ಬಲಿ ತೆಗೆದುಕೊಂಡ ಬೆಂಕಿ ದುರಂತಕ್ಕೆ ಸಂಬಂಧಿಸಿದಂತೆ, ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಿದ ಅಲ್ಲಿನ ಹೈಕೋರ್ಟ್ ನಡೆ ಸ್ವಾಗತಾರ್ಹ. ರಾಜ್‌ಕೋಟ್ ಮಹಾನಗರಪಾಲಿಕೆಯು ತನ್ನ ವ್ಯಾಪ್ತಿಯಲ್ಲಿ ಪರವಾನಗಿ ಪಡೆಯದೆ ಅಷ್ಟು ದೊಡ್ಡ ಕಟ್ಟಡವನ್ನು ನಿರ್ಮಿಸಲಾಗಿದ್ದರೂ ತನಗೆ ಏನೂ ಸಂಬಂಧ ಇಲ್ಲ ಎಂಬಂತೆ ಕಣ್ಣು ಮುಚ್ಚಿ ಕುಳಿತಿದ್ದುದೇ ಇಂತಹ ದುರಂತಕ್ಕೆ ಕಾರಣ ಎಂದು ಕೋರ್ಟ್ ಹೇಳಿರುವ ಮಾತು ಗುಜರಾತ್‌ಗೆ ಮಾತ್ರವಲ್ಲ ದೇಶದ ಎಲ್ಲ ರಾಜ್ಯಗಳಿಗೂ ಅನ್ವಯವಾಗುವಂತಿದೆ. ಅಕ್ರಮವಾಗಿ ಕಟ್ಟಡಗಳನ್ನು ಕಟ್ಟುವುದರ ಜತೆಗೆ ಪರವಾನಗಿ ಪಡೆದುಕೊಂಡಿದ್ದಕ್ಕಿಂತಲೂ ಹೆಚ್ಚು ಮಹಡಿಗಳನ್ನು ನಿರ್ಮಿಸಲಾಗುತ್ತದೆ. ಪ್ರತಿ ಬಹುಮಹಡಿ ಕಟ್ಟಡದಲ್ಲೂ ಬೆಂಕಿನಿರೋಧಕವನ್ನು ಅಳವಡಿಸಬೇಕೆಂಬ ನಿಯಮವಿದೆ. ಆದರೆ ಅದನ್ನು ಎಷ್ಟರ ಮಟ್ಟಿಗೆ ಪಾಲಿಸಲಾಗುತ್ತಿದೆ ಎಂಬುದೇ ಪ್ರಶ್ನೆ. ಇಂತಹ ಸಂಗತಿಗಳ ಬಗ್ಗೆ ಆಯಾ ರಾಜ್ಯ ಸರ್ಕಾರಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಅದುಬಿಟ್ಟು, ಮೊದಲು ನಿರ್ಲಕ್ಷ್ಯ ವಹಿಸಿ, ದುರ್ಘಟನೆ ಸಂಭವಿಸಿದ ಬಳಿಕ ಮೃತರ ಕುಟುಂಬಗಳಿಗೆ ಪರಿಹಾರ ನೀಡಿ ಕೈತೊಳೆದುಕೊಳ್ಳುವುದು ಒಪ್ಪತಕ್ಕದ್ದಲ್ಲ.

ಸುರೇಂದ್ರ ಪೈ, ಭಟ್ಕಳ

ಹಗರಣವೋ ನಿಯಮ ಉಲ್ಲಂಘನೆಯೋ?

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದಿಂದಾಗಿ ನಿಗಮದ ಅಧಿಕಾರಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವುದು ದುರದೃಷ್ಟಕರ. ಮಾಧ್ಯಮಗಳಲ್ಲಿ ವರದಿಯಾಗಿರುವ ಮಾಹಿತಿಯನ್ನು ಗಮನಿಸಿದಾಗ ಕಂಡುಬರುವ ವಿಷಯವೆಂದರೆ, ನಿಗಮದ ಮುಖ್ಯ ಖಾತೆಯಲ್ಲಿದ್ದ ₹ 187 ಕೋಟಿ ಮೊತ್ತದಲ್ಲಿ ₹ 87 ಕೋಟಿಯನ್ನು ಯೂನಿಯನ್ ಬ್ಯಾಂಕ್‌ನ ಬೆಂಗಳೂರಿನ ಎಂ.ಜಿ. ರಸ್ತೆಯ ಶಾಖೆಯ ಖಾತೆಯೊಂದಕ್ಕೆ ವರ್ಗಾವಣೆ ಮಾಡಲಾಗಿದೆ. ಅದೂ ಮಾರ್ಚ್ ತಿಂಗಳಲ್ಲಿ.

ನಿವೃತ್ತ ಬ್ಯಾಂಕ್ ಅಧಿಕಾರಿಯಾದ ನಾನು ಇದನ್ನು ಬೇರೆ ದೃಷ್ಟಿಕೋನದಿಂದ ನೋಡುತ್ತೇನೆ. ಇದು, ಬ್ಯಾಂಕುಗಳು ವರ್ಷಾಂತ್ಯದಲ್ಲಿ ತಮ್ಮ ಗುರಿ ಸಾಧನೆಗಾಗಿ ಕೈಗೊಳ್ಳುವ ಒಂದು ಕ್ರಮ ಅಥವಾ ಅಕ್ರಮ. ಇಂತಹ ಭಾರಿ ಮೊತ್ತದ ಹಣ ಒಂದು ಶಾಖೆಯಲ್ಲಿ ಇರುವುದಕ್ಕಿಂತ ಬೇರೆ ಬೇರೆ ಚಿಕ್ಕ ಚಿಕ್ಕ ಶಾಖೆಗಳಲ್ಲಿದ್ದರೆ, ಹಲವಾರು ಶಾಖೆಗಳು ಗುರಿ ಸಾಧಿಸಿದ ಶಾಖೆಗಳ ಪಟ್ಟಿಯಲ್ಲಿ ಬಂದು, ಮೇಲಧಿಕಾರಿಗಳಿಂದ ಶಹಭಾಸ್‌ಗಿರಿ ಪಡೆಯುವ ಉದ್ದೇಶ ಇರುತ್ತದೆ. ಯಾವ ಖಾತೆಯಲ್ಲಿದ್ದರೂ ಆ ಹಣಕ್ಕೆ ಬಡ್ಡಿ ಅಂತೂ ಸಿಕ್ಕೇ ಸಿಗುತ್ತದೆ. ಈ ಉದ್ದೇಶಗಳಿಗಾಗಿ ಡಮ್ಮಿ ಖಾತೆಗಳನ್ನು ಸಹ ತೆರೆಯಲಾಗುತ್ತದೆ. ಆದ್ದರಿಂದ ಇದನ್ನು ಹಣಕಾಸಿನ ದುರುಪಯೋಗದ ಪ್ರಕರಣ ಎನ್ನುವುದಕ್ಕಿಂತಲೂ ನಿಯಮಾವಳಿಗಳ ಉಲ್ಲಂಘನೆ ಎಂದು ಹೇಳಬಹುದು. ಇಂತಹ ಸಂದರ್ಭಗಳಲ್ಲಿ ಹಣದ ದುರುಪಯೋಗ ಆಗಿರುವುದಿಲ್ಲ ಮತ್ತು ಆ ಹಣವನ್ನು ಹಿಂಪಡೆಯಲು ಯಾವುದೇ ಅಡಚಣೆ ಇರುವುದಿಲ್ಲ. ಇಲ್ಲಿ ಉಲ್ಲೇಖಿಸಿರುವ ಐ.ಟಿ ಕಂಪನಿಯ ಖಾತೆಯೂ ಡಮ್ಮಿ ಖಾತೆ ಆಗಿರಬಹುದು. ಆದ್ದರಿಂದ ಕೂಲಂಕಷ ಪರಿಶೀಲನೆಯಿಂದ ಸತ್ಯವನ್ನು ಹೊರತರಬೇಕಾದುದು ಅವಶ್ಯ. ಬ್ಯಾಂಕುಗಳೂ ಗುರಿ ಸಾಧನೆಗಾಗಿ ಯಾವುದೇ ರೀತಿಯಲ್ಲಿ ಅಡ್ಡದಾರಿ ಹಿಡಿಯುವುದು ಖಂಡನಾರ್ಹ.

ಟಿ.ವಿ.ಬಿ. ರಾಜನ್, ಬೆಂಗಳೂರು

ಇಬ್ಬರ ಜಗಳದಲ್ಲಿ ಮಕ್ಕಳಿಗೆ ಅನ್ಯಾಯ!

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು 2016ರಿಂದ 'ಪ್ರಾಥಮಿಕ ಶಾಲಾ ಶಿಕ್ಷಕರು' (ಪಿಎಸ್‌ಟಿ- ಪ್ರೈಮರಿ ಸ್ಕೂಲ್ ಟೀಚರ್) ಮತ್ತು 'ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು' (ಜಿಪಿಟಿ- ಗ್ರ್ಯಾಜುಯೇಟ್ ಪ್ರೈಮರಿ ಟೀಚರ್) ಎಂದು ವಿಭಜಿಸಲಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರೆಂದರೆ 1ರಿಂದ 5ನೇ ತರಗತಿವರೆಗೆ ಬೋಧಿಸುವವರು ಮತ್ತು ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರೆಂದರೆ 6ರಿಂದ 8ನೇ ತರಗತಿವರೆಗೆ ಬೋಧಿಸುವವರು. ಇವರ ವಿದ್ಯಾರ್ಹತೆ ಮತ್ತು ವೇತನ ಶ್ರೇಣಿ ಬೇರೆ ಬೇರೆಯಾಗಿರುತ್ತದೆ. ಆದರೆ ಶಾಲಾ ಆಡಳಿತ (1ರಿಂದ 5 ಮತ್ತು 6ರಿಂದ 8) ಬೇರೆ ಬೇರೆಯಾಗಿಲ್ಲ. ಒಬ್ಬರೇ ಮುಖ್ಯ ಶಿಕ್ಷಕರಿರುವ ಪ್ರಾಥಮಿಕ ಶಾಲೆಯಲ್ಲಿಯೇ ಎರಡೂ ಬಗೆಯ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದಾರೆ. ಶಾಲೆಗಳಲ್ಲಿ ಅಗತ್ಯಕ್ಕೆ ತಕ್ಕಷ್ಟು ಶಿಕ್ಷಕರ ಸಂಖ್ಯೆ ಇಲ್ಲದ ಸಂದರ್ಭದಲ್ಲಿ, ಪ್ರಾಥಮಿಕ ಶಾಲಾ ಶಿಕ್ಷಕರು ತಾವು 1ರಿಂದ 5ನೇ ತರಗತಿವರೆಗೆ ಮಾತ್ರ ಪಾಠ ಹೇಳುವುದಾಗಿಯೂ 6ರಿಂದ 8ನೇ ತರಗತಿಗಳಿಗೆ ತಾವು ಜವಾಬ್ದಾರರಲ್ಲವೆಂದೂ ಅಧಿಕಾರಿಗಳಿಗೆ, ಮುಖ್ಯ ಶಿಕ್ಷಕರಿಗೆ ಪತ್ರ ಬರೆಯುತ್ತಾರೆ. ಅದೇ ರೀತಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು, ನಿಯಮದ ಪ್ರಕಾರ ತಾವು 6ರಿಂದ 8ನೇ ತರಗತಿವರೆಗೆ ಮಾತ್ರ ಬೋಧಿಸುವುದಾಗಿಯೂ ಹೇಳುತ್ತಾರೆ.

ಶಿಕ್ಷಕರ ಕೊರತೆ ಇರುವಾಗ ಇವರಿಬ್ಬರ ನಡುವಿನ ಮುಸುಕಿನ ಗುದ್ದಾಟದಲ್ಲಿ ಮಕ್ಕಳು ಪಾಠವಿಲ್ಲದೇ ತೊಂದರೆ ಅನುಭವಿಸುವಂತೆ ಆಗಿರುವುದು ಕಟುಸತ್ಯ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸಬೇಕು. ಏಕೆಂದರೆ, ಮಕ್ಕಳು ಬಲಿಪಶುಗಳಾಗಿ ಬೋರ್ಡ್ ಪರೀಕ್ಷೆಗಳ ಫಲಿತಾಂಶ ಕುಸಿತಕ್ಕೆ ಇದೂ ಒಂದು ಕಾರಣವಾಗಿದೆ. ಶಾಲೆಗಳ ಆಡಳಿತ ಬೇರೆ ಬೇರೆಯಾಗುವುದು ಸಮಸ್ಯೆಗೆ ಪರಿಹಾರವಾಗಬಹುದೇ?

ಶಿವಕುಮಾರ ಬಂಡೋಳಿ, ಹುಣಸಗಿ, ಯಾದಗಿರಿ

ರಾಜೀನಾಮೆ ಅನಗತ್ಯ: ಸಮಗ್ರ ತನಿಖೆ ಅಗತ್ಯ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ಅವ್ಯವಹಾರ ನಡೆದಿರುವುದನ್ನು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ ಒಪ್ಪಿಕೊಂಡಿದ್ದಾರೆ. 'ಈ ಹಗರಣದಲ್ಲಿ ನನ್ನ ಪಾತ್ರ ಇಲ್ಲ. ಹಾಗಾಗಿ ನಾನು ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ' ಎಂದು ಸಚಿವರು ಹೇಳಿದ್ದಾರೆ. ಬಹಳ ವರ್ಷಗಳ ಹಿಂದೆ, ಒಂದೆಡೆ ರೈಲು ಅಪಘಾತವಾದಾಗ, ರೈಲ್ವೆ ಸಚಿವರಾಗಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿ ಅವರು ಅದರ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದುದು ಇಲ್ಲಿ ನೆನಪಾಗುತ್ತದೆ. ಆದರೆ ಈ ಕಾಲದಲ್ಲಿ, ಕೆಳ ಹಂತದ ಯಾರೋ ಒಬ್ಬರ ತಪ್ಪಿಗಾಗಿ ಸಚಿವರಿಂದ ರಾಜೀನಾಮೆಯನ್ನು ನಿರೀಕ್ಷಿಸುವುದು ತರವಲ್ಲ. ಯಾರೋ ಮಾಡಿದ ತಪ್ಪಿಗೆ ರಾಜೀನಾಮೆ ಕೊಡುತ್ತಾ ಹೋದರೆ ಸಚಿವ ಸಂಪುಟದಲ್ಲಿ ಯಾರೂ ಇರಲು ಸಾಧ್ಯವಿಲ್ಲ.

ಆದರೆ, ಸಂಬಂಧಿಸಿದ ಸಚಿವರು ಇದರಲ್ಲಿ ತಮ್ಮ ತಪ್ಪಿಲ್ಲ ಎಂದು ಸುಮ್ಮನೆ ಕೂರದೇ ಪ್ರಕರಣದ ಸಮಗ್ರ ತನಿಖೆಗೆ ಆದೇಶ ನೀಡಬೇಕು. ತಪ್ಪಿತಸ್ಥರಿಗೆ ತ್ವರಿತವಾಗಿ ಶಿಕ್ಷೆ ಆಗುವಂತೆ ಮಾಡಬೇಕು. ಆಗ ಮಿಕ್ಕವರು ಎಚ್ಚೆತ್ತುಕೊಳ್ಳುತ್ತಾರೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ

ಆರೋಪಿಗಳಿಗೆ ಎಲ್ಲ ಪಕ್ಷಗಳಲ್ಲೂ ಮಣೆ


ಈ ಬಾರಿಯ ಲೋಕಸಭಾ ಚುನಾವಣೆಯ ಕಣದಲ್ಲಿ ಇರುವವರಲ್ಲಿ 180 ಮಂದಿಯ ವಿರುದ್ಧ ಲೈಂಗಿಕ ದೌರ್ಜನ್ಯ, ಮಹಿಳೆಯರ ಗೌರವಕ್ಕೆ ಧಕ್ಕೆ ತಂದ ಆರೋಪಗಳಿವೆ. 14 ಮಂದಿಯ ವಿರುದ್ಧ ಅತ್ಯಾಚಾರದ ಆರೋಪಗಳಿವೆ. ಅಭ್ಯರ್ಥಿಗಳೇ ತಮ್ಮ ನಾಮಪತ್ರದಲ್ಲಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಇಂತಹ ಪ್ರಕರಣಗಳಿಗೆ ಸಂಬಂಧಿಸಿದ ವಿವರಗಳನ್ನು ನಮೂದಿಸಿದ್ದಾರೆ. ಇಂತಹ ಆರೋಪ ಎದುರಿಸುತ್ತಿರುವವರಲ್ಲಿ ಮಹಿಳಾ ಅಭ್ಯರ್ಥಿಗಳೂ ಇದ್ದಾರೆ

● ಸುಕೃತ ಎಸ್.


ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ವಿಚಾರಗಳು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ದೊಡ್ಡಮಟ್ಟದಲ್ಲಿ ಚರ್ಚೆಯಾಗುತ್ತಿರುವ ವಿಷಯಗಳು. ಬಿಜೆಪಿ ಸಂಸದ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಇದ್ದ ಕಾರಣಕ್ಕೇ ಅವರಿಗೆ ಟಿಕೆಟ್ ನಿರಾಕರಿಸಿ, ಅವರ ಮಗನಿಗೆ ಟಿಕೆಟ್ ನೀಡಲಾಯಿತು. ಇನ್ನು ಕರ್ನಾಟಕದಲ್ಲಿ ಜೆಡಿಎಸ್‌ನ ಅಭ್ಯರ್ಥಿ (ಬಿಜೆಪಿ ಬೆಂಬಲಿತ) ಪ್ರಜ್ವಲ್ ರೇವಣ್ಣ ಅವರದ್ದು ಎಂದು ಹೇಳಲಾದ ಆಕ್ಷೇಪಾರ್ಹ ಲೈಂಗಿಕ ವಿಡಿಯೊಗಳು ಮತದಾನಕ್ಕೆ ಒಂದೆರಡು ದಿನಗಳು ಇರುವ ಹೊತ್ತಿನಲ್ಲಿ ಬಹಿರಂಗವಾದವು. ದೇಶದಾದ್ಯಂತ ಚುನಾವಣಾ ಪ್ರಚಾರದಲ್ಲಿ ಈ ಪ್ರಕರಣವನ್ನು ಬಳಸಿಕೊಳ್ಳಲಾಯಿತು.

ಹೀಗೆ ದೊಡ್ಡಮಟ್ಟದಲ್ಲಿ ಸುದ್ದಿಯಾದ ಪ್ರಕರಣಗಳಲ್ಲಿ ಮಾತ್ರ ಪಕ್ಷಗಳು ಅಂತಹ ಅಭ್ಯರ್ಥಿ ಅಥವಾ ಟಿಕೆಟ್ ಆಕಾಂಕ್ಷಿಗಳ ಜತೆಗೆ ಅಂತರ ಕಾಯ್ದುಕೊಂಡವು. ಆದರೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಮತ್ತು ಮಹಿಳೆಯ ಗೌರವಕ್ಕೆ ಧಕ್ಕೆ ತಂದಂತಹ ಗಂಭೀರ ಅಪರಾಧ ಪ್ರಕರಣಗಳಲ್ಲಿ ಪ್ರಮುಖ ಆರೋಪಿಯಾಗಿದ್ದೂ, ಸುದ್ದಿಯಾಗದೇ ಇರುವ ನೂರಾರು ಜನರಿಗೆ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಟಿಕೆಟ್ ನೀಡಿವೆ. ಅಂತಹ ಅಭ್ಯರ್ಥಿಗಳು ಕಣಕ್ಕೆ ಇಳಿದಿರುವ ಕ್ಷೇತ್ರಗಳ ಪೈಕಿ, ಹಲವು ಕ್ಷೇತ್ರಗಳಲ್ಲಿ ಈಗಾಗಲೇ ಮತದಾನ ನಡೆದಾಗಿದೆ. ಏಳನೇ ಸುತ್ತಿನಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿರುವ ಅಭ್ಯರ್ಥಿಗಳ ಪೈಕಿ, ಹಲವರ ವಿರುದ್ಧವೂ ಇಂತಹ ಪ್ರಕರಣಗಳು ಇವೆ.


ಆದರೆ ಈ ಬಾರಿ ಕಣದಲ್ಲಿ ಇರುವವರಲ್ಲಿ ಇಂತಹ ಆರೋಪ ಎದುರಿಸುತ್ತಿರುವವರಲ್ಲಿ ಬಹುತೇಕ ಮಂದಿ ಪ್ರಾದೇಶಿಕ ಪಕ್ಷಗಳ ಅಭ್ಯರ್ಥಿಗಳಾಗಿದ್ದಾರೆ. ನಂತರದ ಸ್ಥಾನ ಪಕ್ಷೇತರ ಅಭ್ಯರ್ಥಿಗಳದ್ದು. ಇನ್ನು ಎರಡು ಪ್ರಮುಖ ರಾಷ್ಟ್ರೀಯ ಪಕ್ಷಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ವಿರುದ್ಧವೇ ಇಂತಹ ಹೆಚ್ಚಿನ ಆರೋಪಗಳಿವೆ. ನಂತರದ ಸ್ಥಾನದಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿಗಳಿದ್ದಾರೆ. ಅಂದರೆ ಎಲ್ಲಾ ರಾಜಕೀಯ ಪಕ್ಷಗಳು ಇಂತಹ ಗಂಭೀರ ಅಪರಾಧಗಳ ಆರೋಪ ಎದುರಿಸುತ್ತಿರುವ ವ್ಯಕ್ತಿಗಳಿಗೆ ಚುನಾವಣೆಯಲ್ಲಿ ಮಣೆಹಾಕಿವೆ.



ಲೈಂಗಿಕ ದೌರ್ಜನ್ಯ ಪ್ರಕರಣಗಳು ಪಕ್ಷವಾರು ಆರೋಪಿಗಳ ಸಂಖ್ಯೆ




ಅತ್ಯಾಚಾರ ಪ್ರಕರಣಗಳು ಪಕ್ಷವಾರು ಆರೋಪಿಗಳ ಸಂಖ್ಯೆ



9 ಮಹಿಳಾ ಅಭ್ಯರ್ಥಿಗಳ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ

ಈ ಬಾರಿ ಕಣದಲ್ಲಿ ಇರುವ ಅಭ್ಯರ್ಥಿಗಳಲ್ಲಿ 9 ಮಹಿಳೆಯರ ವಿರುದ್ಧವೂ ಲೈಂಗಿಕ ದೌರ್ಜನ್ಯ ಮತ್ತು ಮಹಿಳೆಯ ಗೌರವಕ್ಕೆ ಧಕ್ಕೆ ತಂದ ಆರೋಪಗಳು ಇವೆ. ಈ ಸಂಬಂಧ ಅವರ ವಿರುದ್ಧ ಎಫ್‌ಐಆರ್ ಸಹ ದಾಖಲಾಗಿವೆ. ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆಸಲು ಕುಮ್ಮಕ್ಕು ನೀಡಿದ ಆರೋಪವೂ ಮಹಿಳಾ ಅಭ್ಯರ್ಥಿಯೊಬ್ಬರ ಮೇಲೆ ಇದೆ. ಕರ್ನಾಟಕದಿಂದ ಕಣಕ್ಕೆ ಇಳಿದಿರುವವರಲ್ಲಿ ಇಬ್ಬರು ಮಹಿಳಾ ಅಭ್ಯರ್ಥಿಗಳ ವಿರುದ್ಧವೂ ಲೈಂಗಿಕ ದೌರ್ಜನ್ಯ ಮತ್ತು ಮಹಿಳೆಯ ಗೌರವಕ್ಕೆ ಧಕ್ಕೆ ತಂದ ಆರೋಪಗಳ ಅಡಿ ಪ್ರಕರಣಗಳು ದಾಖಲಾಗಿವೆ.

ರಾಜ್ಯವಾರು ಆರೋಪಿ ಅಭ್ಯರ್ಥಿಗಳು



ಸಂತ್ರಸ್ತೆಯ ವಿರುದ್ಧವೂ ಆರೋಪ

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಹೆಚ್ಚು ಸದ್ದು ಮಾಡಿದ್ದು ಸಂದೇಶ್‌ಖಾಲಿ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳು. ಟಿಎಂಸಿ ಮುಖಂಡ ಮತ್ತು ಆತನ ಸಹಚರರ ವಿರುದ್ಧ ಮಾಡಲಾದ ಆರೋಪಗಳು ಮತ್ತು ದಾಖಲಾದ ದೂರುಗಳನ್ನು ಮೊದಲಿಗೆ ರಾಜ್ಯದ ಪೊಲೀಸರೇ ನಿರ್ವಹಣೆ ಮಾಡುತ್ತಿದ್ದರು. ಬಿಜೆಪಿಯ ಪ್ರತಿಭಟನೆಯ ಕಾರಣಕ್ಕೆ ಈ ಪ್ರಕರಣಗಳು ದೇಶದಾದ್ಯಂತ ದೊಡ್ಡಮಟ್ಟದಲ್ಲಿ ಸದ್ದು ಮಾಡಿದವು. ನಂತರದಲ್ಲಿ ಪ್ರಕರಣಗಳ ತನಿಖೆಯನ್ನು ಸಿಬಿಐಗೆ ವಹಿಸಲಾಯಿತು. ರಾಜ್ಯದಲ್ಲಿ ಇದು ಟಿಎಂಸಿಗೆ ತುಸು ಹಿನ್ನಡೆಗೆ ಕಾರಣವಾಯಿತು ಮತ್ತು ಬಿಜೆಪಿಗೆ ಅನುಕೂಲ ಮಾಡಿಕೊಟ್ಟಿತು ಎಂದು ವಿಶ್ಲೇಷಿಸಲಾಗಿತ್ತು.

ಆದರೆ ಸಂದೇಶ್‌ಖಾಲಿ ಈಗ ಮತ್ತೆ ಬೇರೆಯದ್ದೇ ಕಾರಣಕ್ಕೆ ಸುದ್ದಿಯಲ್ಲಿದೆ. ಸಂದೇಶ್‌ಖಾಲಿ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳ ಸಂತ್ರಸ್ತೆಯರಲ್ಲಿ ಒಬ್ಬರಾದ ರೇಖಾ ಪಾತ್ರಾ ಅವರನ್ನು ಬಿಜೆಪಿ ತನ್ನ ಅಭ್ಯರ್ಥಿಯನ್ನಾಗಿ ಕಣಕ್ಕೆ ಇಳಿಸಿತ್ತು. ರೇಖಾ ಪಾತ್ರಾ ಅವರು, 'ಇಲ್ಲಿನ ದೌರ್ಜನ್ಯದ ವಿರುದ್ಧ ನಾನು ಹೋರಾಡುತ್ತಿದ್ದೇನೆ. ಅದಕ್ಕೆ ಈಗ ರಾಜಕೀಯ ಬೆಂಬಲವೂ ದೊರೆತಿದೆ. ಈ ಹೋರಾಟವನ್ನು ದಡಮುಟ್ಟಿಸುತ್ತೇನೆ. ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ನಮ್ಮ ಪಕ್ಷ ಕೆಲಸ ಮಾಡಲಿದೆ' ಎಂದು ಚುನಾವಣಾ ಪ್ರಚಾರದ ವೇಳೆ ಹೇಳುತ್ತಿದ್ದರು. ಆದರೆ ಅವರು ನಾಮಪತ್ರ ಸಲ್ಲಿಸಿದ ನಂತರ ಪರಿಸ್ಥಿತಿ ಬದಲಾಯಿತು.

ಏಕೆಂದರೆ ರೇಖಾ ಪಾತ್ರಾ ವಿರುದ್ಧವೇ ಮಹಿಳೆಯ ಗೌರವಕ್ಕೆ ಧಕ್ಕೆ ತಂದ, ಮಹಿಳೆಯ ಗೌರವಕ್ಕೆ ಧಕ್ಕೆ ತರುವ ಉದ್ದೇಶದಿಂದ ಹಲ್ಲೆ ನಡೆಸಿದ ಆರೋಪಗಳ ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ತನ್ನ ವಿರುದ್ಧ ಈ ಪ್ರಕರಣಗಳು ದಾಖಲಾಗಿವೆ ಎಂದು ರೇಖಾ ಅವರೇ ಚುನಾವಣಾ ಆಯೋಗಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದಕ್ಕೆ ಸಂಬಂಧಿಸಿದ ಎರಡು ಆರೋಪಗಳೂ ಸೇರಿ ಒಟ್ಟು 30 ಸೆಕ್ಷನ್‌ಗಳ ಅಡಿಯಲ್ಲಿ ಅವರ ವಿರುದ್ಧ ನಾಲ್ಕು ಪ್ರಕರಣಗಳು ದಾಖಲಾಗಿವೆ.

ಮಹಿಳೆಯರ ಗೌರವಕ್ಕೆ ಧಕ್ಕೆ ತಂದ ಹಾಗೂ ಅತ್ಯಾಚಾರ ಪ್ರಕರಣಗಳಿರುವ 16 ಅಭ್ಯರ್ಥಿಗಳನ್ನು ಬಿಜೆಪಿ ರಾಜ್ಯದಲ್ಲಿ ಕಣಕ್ಕಿಳಿಸಿದೆ.

ಆಧಾರ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್‌ನ ವರದಿಗಳು, ಪಿಟಿಐ



ಶಿವರಾಜ್‌ಕುಮಾರ್

'ಘೋಸ್ಟ್' ಚಿತ್ರದಲ್ಲಿನ ನಟನೆಗಾಗಿ ಶಿವರಾಜ್‌ಕುಮಾರ್ ನಾಮನಿರ್ದೇಶನಗೊಂಡಿದ್ದಾರೆ. 1986ರಲ್ಲಿ 'ಆನಂದ್' ಚಿತ್ರದ ಮುಖಾಂತರ ಬೆಳ್ಳಿತೆರೆಗೆ ಕಾಲಿಟ್ಟ ಶಿವರಾಜ್‌ಕುಮಾರ್, ಸದ್ಯ ಚಂದನವನದಲ್ಲಿ 38 ವರ್ಷ ಪೂರೈಸಿ ಮುನ್ನಡೆಯುತ್ತಿದ್ದಾರೆ. 'ಆನಂದ್' ಬಳಿಕ 'ರಥಸಪ್ತಮಿ', 'ಮನಮೆಚ್ಚಿದ ಹುಡುಗಿ' ಚಿತ್ರಗಳೂ ಹಿಟ್ ಆಗಿ 'ಹ್ಯಾಟ್ರಿಕ್ ಹೀರೊ' ಎನಿಸಿಕೊಂಡ 'ಶಿವಣ್ಣ', 'ಸೆಂಚುರಿ ಸ್ಟಾರ್' ಕೂಡಾ. 125ನೇ ಸಿನಿಮಾ ಪೂರೈಸಿದ ಸಂಭ್ರಮದಲ್ಲಿರುವ ಅವರ ಕೈಯಲ್ಲಿರುವ ಸಿನಿಮಾಗಳ ಸಂಖ್ಯೆ ನೋಡಿದರೆ ಅವರ ವಯಸ್ಸು ಮರೆಯಾಗುತ್ತದೆ. 'ಓಂ', 'ಜೋಗಿ', 'ಟಗರು' ಹೀಗೆ ಮಾಸ್ ಕಥಾವಸ್ತುಗಳನ್ನೊಳಗೊಂಡ ಸಿನಿಮಾಗಳಲ್ಲೂ ಮಿಂಚಿದ್ದಾರೆ. 2023ರಲ್ಲಿ ರಜನಿಕಾಂತ್ ನಟನೆಯ 'ಜೈಲರ್' ಸಿನಿಮಾ ಮೂಲಕ ತಮಿಳು ಚಿತ್ರರಂಗಕ್ಕೂ ಕಾಲಿಟ್ಟಿದ್ದಾರೆ. ಸದ್ಯ ಗೀತಾ ಪಿಕ್ಚರ್ಸ್‌ನಿಂದ ನಿರ್ಮಾಣವಾಗುತ್ತಿರುವ 'ಭೈರತಿ ರಣಗಲ್', ಅರ್ಜುನ್ ಜನ್ಯ ನಿರ್ದೇಶನದ '45', ರೋಹಿತ್ ಪದಕಿ ನಿರ್ದೇಶನದ 'ಉತ್ತರಕಾಂಡ' ಸಿನಿಮಾದಲ್ಲಿ ತೊಡಗಿಸಿಕೊಂಡಿದ್ದಾರೆ.




ದರ್ಶನ್


'ಕಾಟೇರ' ಚಿತ್ರದ ನಟನೆಗಾಗಿ ದರ್ಶನ್ ನಾಮನಿರ್ದೇಶನಗೊಂಡಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಮೂರು ದಶಕಗಳನ್ನು ಪೂರೈಸಿರುವ ನಟ ದರ್ಶನ್ ಉದ್ಯಮದ ಮುಂಚೂಣಿ ನಾಯಕರಲ್ಲೊಬ್ಬರು. ಖಳನಟ ತೂಗುದೀಪ ಶ್ರೀನಿವಾಸ್ ಅವರ ಪುತ್ರ ದರ್ಶನ್ 1990ರ ದಶಕದಲ್ಲಿ ಚಿತ್ರರಂಗಕ್ಕೆ ಕಾಲಿಟ್ಟರು. 2001 ರಲ್ಲಿ ಬಿಡುಗಡೆಯಾದ 'ಮೆಜೆಸ್ಟಿಕ್' ಚಿತ್ರದ ಮೂಲಕ ನಾಯಕ ನಟನಾಗಿ ಪದಾರ್ಪಣೆ ಮಾಡಿದರು. 'ಕರಿಯ', 'ನಮ್ಮ ಪ್ರೀತಿಯ ರಾಮು', 'ಕಲಾಸಿಪಾಳ್ಯ', 'ಗಜ', 'ಸಾರಥಿ' ಮೊದಲಾದ ಹಿಟ್ ಚಿತ್ರಗಳ ಮೂಲಕ ಮನೆ ಮಾತಾದರು. 'ಸಂಗೊಳ್ಳಿ ರಾಯಣ್ಣ' ಚಿತ್ರದ ಅಭಿನಯಕ್ಕಾಗಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಸೇರಿದಂತೆ ಸಾಕಷ್ಟು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಚಲನಚಿತ್ರ ನಿರ್ಮಾಣ ಮತ್ತು ವಿತರಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕಳೆದ ವರ್ಷ ಬಿಡುಗಡೆಗೊಂಡ 'ಕಾಟೇರ' ಚಿತ್ರ ಸಾಕಷ್ಟು ಜನಮನ್ನಣೆಗೆ ಪಾತ್ರವಾಯಿತು. ಸದ್ಯ 'ಡೆವಿಲ್' ಚಿತ್ರದಲ್ಲಿ ಮಗ್ನರಾಗಿದ್ದಾರೆ.

'ಟೋಬಿ' ಮತ್ತು **'ಸ್ವಾತಿ ಮುತ್ತಿನ ಮಳೆ ಹನಿಯೇ'** ಚಿತ್ರಗಳಲ್ಲಿನ ನಟನೆಗಾಗಿ ರಾಜ್ ಬಿ.ಶೆಟ್ಟಿ ನಾಮನಿರ್ದೇಶನಗೊಂಡಿದ್ದಾರೆ. 'ಒಂದು ಮೊಟ್ಟೆಯ ಕಥೆ' ಸಿನಿಮಾದ ಮುಖಾಂತರ ಕನ್ನಡದ ಪ್ರೇಕ್ಷಕರ ಮುಂದೆ ನಟನಾಗಿ, ನಿರ್ದೇಶಕನಾಗಿ ಬಂದ ರಾಜ್, ನಂತರದಲ್ಲಿ 'ಗರುಡ ಗಮನ ವೃಷಭ ವಾಹನ' ಸಿನಿಮಾ ಮೂಲಕ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಗುರುತಿಸಿಕೊಂಡರು. ನಾಯಿಗಳನ್ನು ಇಷ್ಟಪಡುವ ರಾಜ್, ಇವುಗಳನ್ನೇ ರೂಪಕವನ್ನಾಗಿ ತಮ್ಮ ಸಿನಿಮಾಗಳಲ್ಲಿ ಬಳಸಿಕೊಂಡಿರುವುದು ವಿಶೇಷ. ರಾಜ್ ಯಾವುದೇ ಪಾತ್ರದ ಪರಕಾಯ ಪ್ರವೇಶ ಮಾಡುವ ಸಾಮರ್ಥ್ಯವುಳ್ಳ ನಟ. 'ಗರುಡ ಗಮನ ವೃಷಭ ವಾಹನ' ಸಿನಿಮಾದಲ್ಲಿ 'ಶಿವ'ನಾಗಿ ತೆರೆಯ ಮೇಲೆ ತನ್ನೊಳಗಿನ ನಟ ಹಾಗೂ ನಿರ್ದೇಶಕನ ಸಾಮರ್ಥ್ಯವನ್ನು ತೋರಿಸಿದ್ದಾರೆ. 'ಟೋಬಿ' ಸಿನಿಮಾದ ಕ್ಲೈಮ್ಯಾಕ್ಸ್ ದೃಶ್ಯದ ಚಿತ್ರೀಕರಣಕ್ಕಾಗಿ ಮೂಗು ಚುಚ್ಚಿಸಿಕೊಂಡರು. 'ಟೋಬಿ'ಯಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ, ಪರಿಸ್ಥಿತಿಗೆ ಮಿಕವಾಗುತ್ತಲೇ ಹೋಗುವ ಅಮಾಯಕನೊಬ್ಬ ಮಾರಿಯಾಗಿ ಮಾರ್ಪಡುವ ಪಾತ್ರವನ್ನು ನಿಭಾಯಿಸಿದ ರೀತಿಗೆ ಮೆಚ್ಚುಗೆ ವ್ಯಕ್ತವಾಗಿತ್ತು. ಈ ಸಿನಿಮಾದ ಚಿತ್ರಕಥಾ ಬರವಣಿಗೆಯಲ್ಲಿ ರಾಜ್ ಕಸುಬುದಾರಿಕೆ ಕಂಡುಬಂದಿತ್ತು. ಕನ್ನಡಕ್ಕಿಂತಲೂ ಮಲಯಾಳದಲ್ಲಿ ಈ ಸಿನಿಮಾ ಸದ್ದು ಮಾಡಿತು.

'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾದಲ್ಲಿ ರಾಜ್ 'ಟೋಬಿ'ಯ ತದ್ವಿರುದ್ಧ ಪಾತ್ರದಲ್ಲಿ ಕಾಣಿಸಿಕೊಂಡರು. ಇವರು ನಿಭಾಯಿಸಿದ 'ಅನಿಕೇತ್' ನಂದಿ ಬಟ್ಟಲು ಹೂವನ್ನು ಇಷ್ಟ ಪಡುವ ನಾಯಕ. ಆತ ಬದುಕನ್ನು ನೋಡುವುದೂ ಈ ಹೂವಿನ ಮೂಲಕವೇ. ಈ ಸಣ್ಣ ವಿಷಯವನ್ನಿಟ್ಟುಕೊಂಡು ಒಂದು ಪ್ರಬುದ್ಧ ಪಯಣವನ್ನು ಇಲ್ಲಿ ರಾಜ್ ಕಟ್ಟಿದ್ದಾರೆ. ಪಾತ್ರಗಳ ಬರವಣಿಗೆ, ಹೆಣಿಗೆಯಲ್ಲಿ ರಾಜ್ ಇಲ್ಲಿ ಗೆದ್ದಿದ್ದರು. ರಾಜ್ ಪ್ರಯತ್ನಕ್ಕೆ ಮೆಚ್ಚುಗೆ ದೊರೆಯಿತು. ಸದ್ಯ 'ಟರ್ಬೊ' ಸಿನಿಮಾ ಮೂಲಕ ಮಲಯಾಳ ಸಿನಿಮಾ ಇಂಡಸ್ಟ್ರಿಗೂ ಹೆಜ್ಜೆ ಇಟ್ಟಿರುವ ರಾಜ್, ಅರ್ಜುನ್ ಜನ್ಯ ನಿರ್ದೇಶನದ ಕನ್ನಡ ಚಿತ್ರ '45'ನಲ್ಲಿ ನಟಿಸುತ್ತಿದ್ದಾರೆ.



ರಾಜ್ ಬಿ.ಶೆಟ್ಟಿ



ಶಿಶಿರ್ ಬೈಕಾಡಿ

'ಡೇರ್ ಡೆವಿಲ್ ಮುಸ್ತಾಫಾ' ಚಿತ್ರದಲ್ಲಿನ ನಟನೆಗಾಗಿ ಶಿಶಿರ್ ಬೈಕಾಡಿ ನಾಮನಿರ್ದೇಶನಗೊಂಡಿದ್ದಾರೆ. ಮೈಸೂರಿನವರಾದ ಇವರು 'ನಟನ' ರಂಗಶಾಲೆಯ ವಿದ್ಯಾರ್ಥಿ. ಆರನೇ ವರ್ಷದಿಂದಲೇ ನಟನೆ ಪ್ರಾರಂಭಿಸಿ, ಪಿಯುಸಿ ಮುಗಿಯುತ್ತಿದ್ದಂತೆ ರಂಗಭೂಮಿಯನ್ನು ಗಂಭೀರವಾಗಿ ಪರಿಗಣಿಸಿ, ಅದರಲ್ಲಿಯೇ ಬದುಕು ಕಟ್ಟಿಕೊಳ್ಳಬೇಕು ಎಂದು ನಿರ್ಧರಿಸಿದರು. ಇವರು ಈ ಚಿತ್ರದಲ್ಲಿ 'ಮುಸ್ತಾಫಾ'ನ ಪಾತ್ರ ನಿರ್ವಹಿಸಿದ್ದು, ಈ ಪಾತ್ರಕ್ಕಾಗಿ ಸಾಕಷ್ಟು ಶ್ರಮವಹಿಸಿದರು. ಮೈಸೂರಿನ ಮಸೀದಿಗೆ ಭೇಟಿ ತಿಂಗಳ ಕಾಲ ಅಲ್ಲಿನ ಪರಿಸರವನ್ನು ಗಮನಿಸಿ, ತಮ್ಮ ಚೊಚ್ಚಲ ಚಿತ್ರದಲ್ಲಿಯೇ ಪ್ರೇಕ್ಷಕರ ಗಮನ ಸೆಳೆದರು. ಸದ್ಯ ಜಡೇಶ್ ಹಂಪಿ ನಿರ್ದೇಶನದಲ್ಲಿ, ದುನಿಯಾ ವಿಜಯ್ ನಟಿಸುತ್ತಿರುವ ಚಿತ್ರದಲ್ಲಿ ಪ್ರಮುಖ ಪಾತ್ರ ಮಾಡುತ್ತಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಎಎಪಿ ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಮತ್ತು ಯೂಟ್ಯೂಬರ್ ಧ್ರುವ್ ರಾಠಿ ನಡುವೆ ನಡೆದಿದೆ ಎನ್ನಲಾದ ಫೋನ್ ಕರೆ ಸಂಭಾಷಣೆಯ ಧ್ವನಿಮುದ್ರಿಕೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆ ಮುದ್ರಿಕೆಯಲ್ಲಿ ಸ್ವಾತಿ ಅವರು, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ನಿವಾಸದಲ್ಲಿ ತಮ್ಮ ಮೇಲೆ ನಡೆದ ಹಲ್ಲೆಯ ಬಗ್ಗೆ ವಿವರಿಸಿದ್ದಾರೆ. ಮತ್ತು ಧ್ರುವ್ ರಾಠಿ ಅವರಿಗೆ ಕಾಲಕಾಲಕ್ಕೆ 'ಪೇಮೆಂಟ್' ಬರುತ್ತಿದೆಯೇ ಎಂಬುದರ ಬಗ್ಗೆ ಇಬ್ಬರೂ ಮಾತನಾಡಿದ್ದಾರೆ. ಧ್ರುವ್ ರಾಠಿ ಅವರು ಹಣ ಪಡೆದುಕೊಂಡು ಯುಟ್ಯೂಬ್‌ನಲ್ಲಿ ವಿಡಿಯೊಗಳನ್ನು ಹರಿಬಿಡುತ್ತಿದ್ದಾರೆ ಎಂಬ ಸಂದೇಶದೊಂದಿಗೆ ಈ ಧ್ವನಿಮುದ್ರಿಕೆಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ ಇದು ಸುಳ್ಳು ಸುದ್ದಿ.

ಈ ಧ್ವನಿಮುದ್ರಿಕೆಯು ಕೃತಕ ಬುದ್ಧಿಮತ್ತೆ ಬಳಸಿಕೊಂಡು ಸೃಷ್ಟಿಸಲಾದ ಸಂಭಾಷಣೆಯದ್ದು ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಈ ಧ್ವನಿಮುದ್ರಿಕೆಯಲ್ಲಿ ಸ್ವಾತಿ ಅವರು ಅರವಿಂದ ಕೇಜ್ರಿವಾಲ್ ಅವರ ಸಮ್ಮುಖದಲ್ಲಿ ತಮ್ಮ ಮೇಲೆ ಹಲ್ಲೆ ನಡೆಯಿತು ಎಂದು ಹೇಳಿದ್ದಾರೆ. ಆದರೆ ಬೇರೆ ಬೇರೆ ಧ್ವನಿಮುದ್ರಿಕೆಗಳನ್ನು ಬಳಸಿಕೊಂಡು ಸೃಷ್ಟಿಸಿದ ವಿಡಿಯೊ ಇದಾಗಿದೆ. ಜೋಧಪುರ ಐಐಟಿ ಅಭಿವೃದ್ಧಿಪಡಿಸಿರುವ ಎಐ ಟೂಲ್ 'ಇತಿಸಾರ್' ಬಳಸಿಕೊಂಡು ಪರೀಕ್ಷಿಸಿದಾಗ ಈ ಸಂಭಾಷಣೆಯ ಧ್ವನಿಮುದ್ರಿಕೆಯು ಎಐ ಬಳಸಿಕೊಂಡು ಸೃಷ್ಟಿಸಿದ್ದು ಎಂಬುದು ದೃಢಪಟ್ಟಿತು ಎಂದು ಬೂಮ್‌ಲೈವ್ ವಿವರಿಸಿದೆ.

ಗುಂಡಣ್ಣ



ಟೀಕೆಗಳನ್ನು ಮೀರಿ ಸಾಧಿಸಿದಾಕೆ

ನುಡಿ ಬೆಳಗು





ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಇತ್ತೀಚೆಗೆ ನಡೆದ 77ನೇ ಕ್ಯಾನ್ ಚಲನಚಿತ್ರೋತ್ಸವದಲ್ಲಿ ರೆಡ್ ಕಾರ್ಪೆಟ್ ಮೇಲೆ ನಡೆದ ಭಾರತದ ನ್ಯಾನ್ಸಿ ತ್ಯಾಗಿ ಗಮನ ಸೆಳೆದರು. ಕಾರಣ ಚಿತ್ರೋತ್ಸವದ ಇತಿಹಾಸದಲ್ಲೇ ಮೊದಲ ಬಾರಿ ಭಾರತೀಯರೊಬ್ಬರು ತಾವೇ ತಯಾರಿಸಿದ ಉಡುಗೆಯಲ್ಲಿ ಕಾಣಿಸಿಕೊಂಡಿದ್ದರು. ಸಾವಿರ ಮೀಟರ್ ಬಟ್ಟೆಯ, ಇಪ್ಪತ್ತು ಕೆಜಿ ತೂಕದ, ಒಂದು ತಿಂಗಳಲ್ಲಿ ನಿರ್ಮಿಸಿದ ತಮ್ಮದೇ ವಿನ್ಯಾಸದ ಉಡುಗೆಯಲ್ಲಿ ನೋಡುಗರ, ಛಾಯಾಚಿತ್ರಕಾರರ ಕಣ್ಮನ ಸೆಳೆದು ನ್ಯಾನ್ಸಿ ಇತಿಹಾಸ ನಿರ್ಮಿಸಿದರು.

ನ್ಯಾನ್ಸಿ ತ್ಯಾಗಿ ಸಾಮಾಜಿಕ ಜಾಲತಾಣದ ಓರ್ವ ಇನ್‌ಫ್ಲುಯೆನ್ಸರ್. ಉತ್ತರಪ್ರದೇಶದ ಬರಾನ್ವಾದ ಈ ಹುಡುಗಿ ಯುಪಿಎಸ್‌ಸಿ ತಯಾರಿಗೆಂದು ದೆಹಲಿಗೆ ಬಂದಿದ್ದರೂ ಕೋವಿಡ್ ಲಾಕ್‌ಡೌನ್ ಆದಾಗ ಹಣ ಸಂಪಾದಿಸಲು ಸಾಮಾಜಿಕ ಜಾಲತಾಣದಲ್ಲಿ ವಿಡಿಯೊಗಳನ್ನು ಮಾಡಲು ಶುರು ಮಾಡಿದರು. ತೆಳ್ಳಗಿದ್ದೀ, ಹಂಚಿಕಡ್ಡಿಯ ಹಾಗಿದ್ದೀ ಎಂದೆಲ್ಲ ಕಮೆಂಟಿಸುವ ಜನರಿಂದ ಬೇಸತ್ತರೂ ನ್ಯಾನ್ಸಿ ಎದೆಗುಂದಲಿಲ್ಲ.

ಸೆಲೆಬ್ರಿಟಿಗಳು ದೊಡ್ಡ ದೊಡ್ಡ ಕಾರ್ಯಕ್ರಮಗಳಲ್ಲಿ ಧರಿಸಿದ ದುಬಾರಿ ಡಿಸೈನರ್ ಉಡುಗೆಯನ್ನು ಅತಿ ಕಡಿಮೆ ಬೆಲೆಯ ಬಟ್ಟೆ,ವಸ್ತುಗಳಿಂದ ಮರುನಿರ್ಮಾಣ ಮಾಡಿ ಅದನ್ನು ತಮ್ಮ ಸಾಮಾಜಿಕ ಜಾಲತಾಣದಲ್ಲಿ ನ್ಯಾನ್ಸಿ ಹಂಚಿಕೊಳ್ಳುತ್ತಾರೆ. ವಿಡಿಯೊಗಳಲ್ಲಿ ಮೊದಲು ಸೆಲೆಬ್ರಿಟಿಗಳು ಧರಿಸಿದ ಬಟ್ಟೆಯ ಮೂಲ ಡಿಸೈನನ್ನು ತೋರಿಸುತ್ತಾರೆ. ನಂತರ ಅದಕ್ಕೆ ಬೇಕಾದ ಬಟ್ಟೆ ಇತ್ಯಾದಿಗಳನ್ನು ದೆಹಲಿಯ ಬೀದಿಗಳಲ್ಲಿ ತಾವು ಹುಡುಕುವುದನ್ನು, ತಂದ ಮೇಲೆ ಅವನ್ನು ಕತ್ತರಿಸಿ ಹೊಲಿಯುವುದನ್ನು ತೋರಿಸಿ ಕೊನೆಗೆ ಥೇಟ್ ಮೂಲ ವಿನ್ಯಾಸದಂತೆಯೇ ಕಾಣುವ ಉಡುಗೆಯನ್ನು ಪ್ರದರ್ಶಿಸುತ್ತಾರೆ. ಯೂಟ್ಯೂಬ್ ಮತ್ತು ಇನ್‌ಸ್ಟಾಗ್ರಾಮ್ ಎರಡರಲ್ಲೂ ಅಪಾರ ಅಭಿಮಾನಿಗಳನ್ನು ಹೊಂದಿರುವ ಆಕೆ ಇದೀಗ ಬ್ರುಟ್ ಇಂಡಿಯಾದ ತಂಡದ ಭಾಗವಾಗಿ ಕ್ಯಾನ್ ಚಲನಚಿತ್ರೋತ್ಸವದಲ್ಲಿ ಭಾಗವಹಿಸಿ ಜಗತ್ತಿನ ಗಮನ ಸೆಳೆದಿದ್ದಾರೆ.

ನೈಜ ಪ್ರತಿಭೆ ಜನರನ್ನು ಆಕರ್ಷಿಸುತ್ತದೆ ಎಂಬುದಕ್ಕೆ ನ್ಯಾನ್ಸಿ ಒಂದು ಉದಾಹರಣೆ ಮಾತ್ರ. ನಿಜ, ಪ್ರತಿಭೆ ಯಾರ ಆಸ್ತಿಯೂ ಅಲ್ಲ. ಅದು ಶ್ರಮ ಪಡುವವರಿಗೆ, ಏಕಾಗ್ರತೆಯಿಂದ ಹಿಡಿದ ಕೆಲಸವನ್ನು ಬಿಡದೇ ಮುನ್ನಡೆಯುವವರಿಗೆ ಒಲಿಯುತ್ತದೆ. ಆದರೆ ಹಳ್ಳಿಯ ಬಡ ಹುಡುಗಿಯ ಈ ಸಾಧನೆಯನ್ನು ಶ್ಲಾಘಿಸುವುದನ್ನು ಬಿಟ್ಟು ಕೆಲವರು ಆಕೆಗೆ ಇಂಗ್ಲಿಷ್‌ನಲ್ಲಿ ಮಾತಾಡಲು ಬರುವುದಿಲ್ಲ ಎಂಬುದನ್ನೇ ಟ್ರೋಲ್ ಮಾಡುತ್ತಿದ್ದಾರೆ. ಅಷ್ಟಕ್ಕೂ ಆಕೆ ಇಂಗ್ಲಿಷ್‌ನಲ್ಲಿ ಕೇಳಿದ ಪ್ರಶ್ನೆಗಳನ್ನು ದುಭಾಷಿಯ ಸಹಾಯದಿಂದ ಕೇಳಿಕೊಂಡು ಹಿಂದಿಯಲ್ಲಿಯೇ ನಿರರ್ಗಳವಾಗಿ ಉತ್ತರಿಸುತ್ತಿದ್ದರು. ಟೀಕಿಸುವವರು ಇದ್ದಲ್ಲಿಯೇ ಇರುತ್ತಾರೆ, ಸಾಧಕರು ಮೌನವಾಗಿ ಮತ್ತೊಂದು ಸಾಧನೆಗೆ ತಯಾರಿ ನಡೆಸುತ್ತಿರುತ್ತಾರೆ. ಟೀಕೆಗೆ ಕುಗ್ಗದೇ ಪರಿಶ್ರಮದಿಂದ ವಿಶ್ವಮಟ್ಟದಲ್ಲಿ ಗುರುತಿಸಿಕೊಂಡ ನ್ಯಾನ್ಸಿಯ ಆತ್ಮವಿಶ್ವಾಸ ಹೆಣ್ಣುಮಕ್ಕಳಿಗೆ ಮಾದರಿಯಾಗಲಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಮೇ 30, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಸಪ್ತಮಿ ಗಂ. 11-44 ನಕ್ಷತ್ರ: ಧನಿಷ್ಠ ಗಂ. 7-31 ಯೋಗ: ವೈಧೃತಿ ಗಂ. 20-53 ಕರಣ : ಬವ ಗಂ. 11-44, ವೃಷಭ ಮಾಸದ ನೇ 16 ದಿನ, ಮಳೆನಕ್ಷತ್ರ: ರೋಹಿಣಿ 2.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-06 ಸೂರ್ಯಾಸ್ತ : 06-50
ಮುಸ್ಲಿಂ ದಿನಾಂಕ : 21 ಜುಲ್ಕಾಯಿದ್
ಅದೃಷ್ಟ ಸಂಖ್ಯೆ : 7, 12

ಮೇಷ: ಶತ್ರುಗಳ ಪ್ರಾಬಲ್ಯವನ್ನು ಬುದ್ಧಿಯಿಂದ ಮಟ್ಟ ಹಾಕುವ ಸಮಯ ಇದಾಗಲಿದೆ. ರಹಸ್ಯವಾಗಿ ಸಿಗುವ ಬೆಂಬಲದಿಂದ ಕನಸುಗಳು ನನಸಾಗಲಿವೆ. ಹವ್ಯಾಸಿ ಉಪನ್ಯಾಸಕರಿಗೆ ಹೇರಳ ಅವಕಾಶ ಲಭ್ಯವಾಗುತ್ತದೆ.

ವೃಷಭ: ಯೋಜಿತ ಕೆಲಸ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಲು ಪರಿಶ್ರಮ ಅಗತ್ಯವಿದೆ. ಸಾಧಿಸಲೇಬೇಕೆಂದಿರುವ ನಿಮಗೆ ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ.

ಮಿಥುನ: ಉದ್ಯೋಗ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿಯೂ ಕಾರ್ಯವೈಖರಿಯಿಂದ ಅನುಭವಕ್ಕೆ ಬರುತ್ತದೆ. ಅಡುಗೆಯಲ್ಲಿ ಉಂಟಾದ ವ್ಯತ್ಯಾಸದಿಂದ ಅಸಮಾಧಾನ ಉಂಟಾಗಬಹುದು. ಸೇವಾ ಸಂಸ್ಥೆಯವರಿಗೆ ಅನುಕೂಲ.

ಕರ್ಕಾಟಕ: ರಾಜಕೀಯ ವರ್ಗದವರು ಸಾರ್ವಜನಿಕರ ಮನ್ನಣೆ ಪಡೆದುಕೊಂಡು ಉತ್ತಮ ಶುಭ ಫಲಗಳನ್ನು ಅನುಭವಿಸುವ ನಿರೀಕ್ಷೆ ಮಾಡಬಹುದು. ಸಿದ್ಧ ಉಡುಪಗಳ ರಫ್ತು ವ್ಯಾಪಾರದಿಂದ ಲಾಭ ಸಿಗುತ್ತದೆ.

ಸಿಂಹ: ಮನೆ ಕೊಳ್ಳುವ ವಿಷಯದ ಬಗ್ಗೆ ಮನೆಯವರಿಂದ ಹೆಚ್ಚಿನ ಮಾಹಿತಿ ಪಡೆಯುವಿರಿ. ಕುಟುಂಬದ ಸದಸ್ಯರ ಸಹಕಾರ ಸಂತಸ ಉಂಟುಮಾಡುತ್ತದೆ. ಬರವಣಿಗೆಯ ಹವ್ಯಾಸಗಳಿಂದ ವರಮಾನ ಹೆಚ್ಚಲಿದೆ.

ಕನ್ಯಾ: ಅಭಿರುಚಿಗೆ ಹೊಂದುವಂಥ ಜನರೊಂದಿಗೆ ಒಡನಾಟ ಬೆಳೆಸಿಕೊಳ್ಳುವಿರಿ. ಎದುರಾದ ವ್ಯಕ್ತಿಗಳನ್ನು ಸರಿಯಾಗಿ ಮಾತನಾಡಿಸುವ ಪ್ರವೃತ್ತಿ ಬೆಳೆಸಿಕೊಳ್ಳುವುದು ಉತ್ತಮ. ಕೋರ್ಟು ವ್ಯವಹಾರಗಳಿಗೆ ಓಡಾಟ ತಪ್ಪಲಿದೆ.

ತುಲಾ: ಮಸಾಲೆ ಪದಾರ್ಥ ಅಥವಾ ಖಾದ್ಯ ವಸ್ತುಗಳ ಮಾರಾಟ ಮಾಡುವವರು ನೆಮ್ಮದಿ ಕಾಣಬಹುದು. ವಿದ್ಯಾರ್ಥಿಗಳ ವಿದ್ಯಾಭ್ಯಾಸದಲ್ಲಿನ ಆಸಕ್ತಿಗೆ ಇತರ ಜವಾಬ್ದಾರಿಗಳ ಮೋಡ ಮುಸುಕಿ ಗ್ರಹಣ ಬಂದಂತಾಗುವುದು.

ವೃಶ್ಚಿಕ: ಶೈಕ್ಷಣಿಕ ರಂಗದಲ್ಲಿ ವೃತ್ತಿ ನಿರ್ವಹಿಸುವವರಿಗೆ ಪರಸ್ಪರ ವರ್ಗಾವಣೆ ಮಾಡಿಕೊಳ್ಳುವ ಅವಕಾಶ ಸಿಗುವುದು. ದೇಹಾರೋಗ್ಯದ ಬಗ್ಗೆ ಅದರಲ್ಲೂ ಉದರ ವ್ಯಾಧಿಯ ಬಗ್ಗೆ ಕಾಳಜಿ ವಹಿಸಬೇಕು. ಓದುವ ಹವ್ಯಾಸ ಬೆಳೆಸಿಕೊಳ್ಳಿ.

ಧನು: ಈ ದಿನ ಮಗಳ ಮದುವೆಯ ವಿಚಾರದಲ್ಲಿ ಇಡುವ ಹೆಜ್ಜೆ ಬಹಳ ಪ್ರಮುಖವಾದುದು. ಶಿಕ್ಷಕ ವೃತ್ತಿಯನ್ನು ಆರಂಭಿಸುವ ಬಗ್ಗೆ ಆಲೋಚಿಸಿದವರಿಗೆ ಶುಭ ದಿನ. ಆರೋಗ್ಯದಲ್ಲಿ ಸುಧಾರಣೆ ಕಂಡು ಬರುತ್ತದೆ.

ಮಕರ: ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವಂಥ ಕಾಲವನ್ನು ನಿರೀಕ್ಷಿಸಬಹುದು. ವಿವಾಹ ಪ್ರಸ್ತಾಪಗಳು ಬಲಗೊಂಡು ಕಂಕಣ ಭಾಗ್ಯದ ಸಾಧ್ಯತೆ ಇದೆ. ಹೊಸ ವಸ್ತುಗಳ ಖರೀದಿ ಇಂದು ಬೇಡ.

ಕುಂಭ: ಆತ್ಮವಿಶ್ವಾಸದಿಂದ ಕೆಲಸಕಾರ್ಯಗಳಲ್ಲಿ ಅತಿ ಯಶಸ್ಸು ಹೊಂದುವಿರಿ. ಹಿರಿಯರ ಆರೋಗ್ಯ ಸುಧಾರಿಸುವುದರಿಂದ ಹೆಚ್ಚಿನ ಸಂತಸವಿರುವುದು. ಈ ದಿನ ನೀವು ಎಲ್ಲರೊಂದಿಗೆ ಮುಕ್ತವಾಗಿ ಬೆರೆಯಬೇಕು.


ಮೀನ: ಬೇರೆಯ ವ್ಯಕ್ತಿಯ ಕೆಲವು ವಸ್ತುಗಳು ಅರಿವಿಲ್ಲದಂತೆ ಮನೆಯನ್ನು ಸೇರುವ ಸಾಧ್ಯತೆ ಇದೆ. ಅಚಾತುರ್ಯದಿಂದ ಬಳಸಿದ ಔಷಧವು ದೇಹದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡುತ್ತದೆ.

ಪದಬಂಧ 5696

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಮೊದಲ ಸಲ ನೋಡಿದ ಮಾತ್ರದಿಂದಲೇ ಉಂಟಾಗುವ ಪ್ರೀತಿ (4)
3.ಅಡುಗೆಗೆ ಬೇಕಾದ ಸಾಮಗ್ರಿ (4)
5.ಹೆಂಡತಿಯನ್ನು ಕಳೆದು ಕೊಂಡವನು (3)
6.ಅಡಗಿಕೊಳ್ಳಲು ಸೂಕ್ತವಾದ ಕಾಡು (3)
7.ಜನುಮದಲ್ಲೇ ರಾಕ್ಷಸನನ್ನು ಹುಡುಕಿ (3)
9.ಮನ ಕೊನೆಗಿದ್ದಾಗಿನ ಹತೋಟಿ (3)
11.ಕಲಹವಾಡುವ ಸ್ವಭಾವದವಳು (3)
12.ಆ ಪಾತ್ರ ಮಾಡುತ್ತಿರುವವ ಅಯೋಗ್ಯ! (3)
13.ಕೃಷ್ಣನ ಮೊಮ್ಮಗ (4)
15.ಅಂತರಂಗವಲ್ಲದ ಪ್ರಕಟನೆ (4)

ಮೇಲಿಂದ ಕೆಳಕ್ಕೆ
1. ಚರ್ಮದ ಕೆಲಸಗಾರನಿವನು (3)
2.ತಿರುಮಲದಲ್ಲಿ ಖರೀದಿಸಿದ ಎಳ್ಳು (2)
4.ಈತ ಮಾತಿನಲ್ಲಿ ನಿಪುಣ (4)
5.ದುಃಖವು ಈ ರೀತಿ ಬಂದಿದೆ (3)
8.ಲೋಕಕ್ಕೆಲ್ಲಾ ಪೂಜ್ಯನಾದವನು (4)
10.ಕ್ಷತ್ರಿಯನು ನೋಡುತ್ತಿರುವ ತಾರೆ (3)
12.ಮನ್ಮಥನ ಇನ್ನೊಂದು ಹೆಸರು (3)
14. ನಿಯಮಕ್ಕೆ ಒಳಪಟ್ಟವ ತಿರುಗಿ ನಿಂತಿದ್ದಾನಲ್ಲಾ? (2)



5695ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ವಲಸೆ 4.ಕಮಠ
5.ಏಮಾರು 6.ಕದನ
8.ವ್ಯವಕಲನ 10.ಗುಲಾಬಿ
12.ಮರಣ 13.ಜರಡಿ
15.ಹೊನಲು

ಮೇಲಿಂದ ಕೆಳಕ್ಕೆ:
1.ಬಿಲ 2.ಭೀಮ
3.ವರ್ತಕ 4.ಕರು
5.ಏಕೀಕರಣ 7.ನವ್ಯ
9.ನಗು 11.ಬಿಸಿಲು
12.ಮಡಿ 14.ರತ್ನ
16.ನಳ್ಳಿ

ಸುಡೊಕು 6081

			4		3	9	6	
7		8						5
4			5		8	7		1
		9						7
	3	7	1		6	4	5	
8						2	1	
6		5		2			3	4
3						5		2
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6080 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಕೇಜ್ರಿವಾಲ್ ಅರ್ಜಿ ತುರ್ತು ವಿಚಾರಣೆಗೆ ರಿಜಿಸ್ಟ್ರಿ ನಕಾರ



ನವದೆಹಲಿ (ಪಿಟಿಐ): ಮಧ್ಯಂತರ ಜಾಮೀನಿನ ಅವಧಿಯನ್ನು ವೈದ್ಯಕೀಯ ಕಾರಣಕ್ಕೆ ಏಳು ದಿನಗಳವರೆಗೆ ವಿಸ್ತರಿಸಬೇಕು ಎಂದು ಕೋರಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯನ್ನು ತುರ್ತು ವಿಚಾರಣೆಗೆ ನಿಗದಿ ಮಾಡಲು ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಿ ಬುಧವಾರ ನಿರಾಕರಿಸಿದೆ.

ರೆಗ್ಯುಲರ್ ಜಾಮೀನು ಕೋರಿ ವಿಚಾರಣಾ ನ್ಯಾಯಾಲಯದ ಮೊರೆ ಹೋಗಲು ಕೇಜ್ರಿವಾಲ್ ಅವರಿಗೆ ಅನುಮತಿ ನೀಡಲಾಗಿರುವ ಕಾರಣಕ್ಕೆ ಈ ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಎತ್ತಿಕೊಳ್ಳಲು ಆಗುವುದಿಲ್ಲ ಎಂದು ರಿಜಿಸ್ಟ್ರಿ ಹೇಳಿದೆ. ಕೇಜ್ರಿವಾಲ್ ಸಲ್ಲಿಸಿರುವ ಮುಖ್ಯ ಅರ್ಜಿ ಕುರಿತ ತೀರ್ಪನ್ನು ವಿಭಾಗೀಯ ಪೀಠವೊಂದು ಕಾಯ್ದಿರಿಸಿರುವ ಕಾರಣ, ಮಧ್ಯಂತರ ಜಾಮೀನು ವಿಸ್ತರಣೆಗೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ತುರ್ತು ವಿಚಾರಣೆಗೆ ಎತ್ತಿಕೊಳ್ಳಬೇಕೇ ಎಂಬ ಬಗ್ಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ತೀರ್ಮಾನಿಸುತ್ತಾರೆ ಎಂದು ರಜಾಕಾಲದ ಪೀಠವು ಮಂಗಳವಾರ ಹೇಳಿತ್ತು.

ಪಿಇಟಿ–ಸಿಟಿ ಪರೀಕ್ಷೆ ಸೇರಿದಂತೆ ಕೆಲವು ವೈದ್ಯಕೀಯ ತಪಾಸಣೆಗಳಿಗೆ ಒಳಗಾಗಬೇಕಿರುವ ಕಾರಣ ತಮಗೆ ನೀಡಿರುವ ಮಧ್ಯಂತರ ಜಾಮೀನಿನ ಅವಧಿಯನ್ನು ಏಳು ದಿನಗಳ ಮಟ್ಟಿಗೆ ವಿಸ್ತರಿಸಬೇಕು ಎಂದು ಕೇಜ್ರಿವಾಲ್ ಕೋರಿದ್ದರು.

ಬಂಧನ ಪ್ರಶ್ನಿಸಿ ಕೇಜ್ರಿವಾಲ್ ಆಪ್ತ ಸಲ್ಲಿಸಿದ ಅರ್ಜಿ ವಿಚಾರಣೆ ನಾಳೆ



ನವದೆಹಲಿ (ಪಿಟಿಐ): ಎಎಪಿಯ ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಮೇಲಿನ ಹಲ್ಲೆ ಪ್ರಕರಣದಲ್ಲಿ ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆಪ್ತ ಬಿಭವ್ ಕುಮಾರ್ ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದು,ಅರ್ಜಿ ವಿಚಾರಣೆ ಶುಕ್ರವಾರ ನಡೆಯಲಿದೆ.

ಇದನ್ನು ತ್ವರಿತ ವಿಚಾರಣೆಗೆ ಪರಿಗಣಿಸಬೇಕು ಎಂದು ಬಿಭವ್ ಕೋರಿದ್ದರು. ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಹಾಗೂ ನ್ಯಾಯಮೂರ್ತಿ ಮನ್ಮೀತ್ ಪಿ.ಎಸ್ ಅರೋರಾ ಅವರಿದ್ದ ಪೀಠವು, ಮೇ 31ರಂದು ವಿಚಾರಣೆ ನಡೆಸಲು ಸಮ್ಮತಿಸಿತು.

ತಮ್ಮ ಬಂಧನ ಕಾನೂನುಬಾಹಿರವೆಂದು ಘೋಷಿಸಲು ನಿರ್ದೇಶಿಸಬೇಕು ಎಂದು ಅರ್ಜಿಯಲ್ಲಿ ಕೋರಿದ್ದಾರೆ. ಅಲ್ಲದೆ ‘ಕಾನೂನುಬಾಹಿರವಾಗಿ ಬಂಧಿಸಿದ್ದಕ್ಕಾಗಿ ‘ಸೂಕ್ತ ಪರಿಹಾರ’ ಕಲ್ಪಿಸಿಕೊಡಬೇಕು. ಬಂಧನದಲ್ಲಿ ಭಾಗಿಯಾದ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದೂ ಹೇಳಿದ್ದಾರೆ. ಬಿಭವ್ ಜಾಮೀನು ಅರ್ಜಿಯನ್ನು ಸೆಷನ್ಸ್ ಕೋರ್ಟ್ ನ್ಯಾಯಾಲಯ ತಿರಸ್ಕರಿಸಿತ್ತು.

ಕುಟುಂಬದ ಎಂಟು ಮಂದಿ ಕೊಂದವ ಆತ್ಮಹತ್ಯೆಗೆ ಶರಣು

ಪ್ರಜಾವಾಣಿ ವಾರ್ತೆ

ಭೋಪಾಲ್: ತನ್ನ ಕುಟುಂಬದ ಎಂಟು ಸದಸ್ಯರನ್ನು ಕೊಡಲಿಯಿಂದ ಕೊಂದಿರುವ ವ್ಯಕ್ತಿ, ಬಳಿಕ ತಾನೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಧ್ಯ ಪ್ರದೇಶದ ಚಿಂದ್ವಾರಾ ಜಿಲ್ಲೆಯ ಬೋದಲ್ ಕಚಾರ್ ಗ್ರಾಮದಲ್ಲಿ ನಡೆದಿದೆ.

ನೇಣು ಬಿಗಿದುಕೊಂಡು ಮೃತಪಟ್ಟಿರುವ ಆರೋಪಿಯನ್ನು ದಿನೇಶ್ ಸುಯ್ಯಮ್ ಅಲಿಯಾಸ್ ಭೂರಾ (23) ಎಂದು ಗುರುತಿಸಲಾಗಿದೆ. ಈತ ತಾನು ಸಾಯುವುದಕ್ಕೂ ಮುನ್ನ ತನ್ನ ಪತ್ನಿ ವರ್ಷ (23), ತಾಯಿ ಸಿಯಾಬಾಯಿ (55), ತಂಗಿ ಪಾರ್ವತಿ (16), ಅಣ್ಣ ಶ್ರವಣ್ (35), ಅತ್ತಿಗೆ ಬಾರಾತೋಬಾಯಿ (30), ಸೋದರಳಿಯ ಕೃಷ್ಣ (5), ಸೊಸೆಯರಾದ ಸೇವಂತಿ (4), ದೀಪಾ (2) ಅವರನ್ನು ಕೊಂದಿದ್ದಾನೆ.

ಇಷ್ಟು ಜನರನ್ನು ಕೊಂದ ಬಳಿಕ ದಿನೇಶ್, ಇನ್ನೊಬ್ಬ ಸೋದರಳಿಯ ಇಶುನನ್ನೂ(10) ಬೆನ್ನಟ್ಟಿ ಕೊಲ್ಲಲು ಪ್ರಯತ್ನಿಸಿದ್ದಾನೆ. ಆದರೆ ಅದೃಷ್ಟವಶಾತ್ ಇಶು ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಆದರೆ ಕೊಡಲಿಯ ಹೊಡೆತವು ದವಡೆಗೆ ಬಿದ್ದಿರುವುದರಿಂದ ಗಂಭೀರ ಗಾಯ ಆಗಿದ್ದು, ಚಿಕಿತ್ಸೆಗಾಗಿ ನಾಗ್ಪುರದ ಆಸ್ಪತ್ರೆಗೆ ದಾಖಲಿಸಲಾಗಿದೆ. ಪೊಲೀಸರು ಸ್ಥಳಕ್ಕೆ ಬಂದು ಮಾಹಿತಿ ಪಡೆದಿದ್ದಾರೆ. ಮೃತರ ದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ.

ಭೂರಾ ಇತ್ತೀಚೆಗೆ ಹಟಕಪುರ ಗ್ರಾಮದಲ್ಲಿ ವಿವಾಹವಾಗಿದ್ದ. ಈಚೆಗೆ ಬೋದಲ್ ಕಚಾರ್ ಗ್ರಾಮದಲ್ಲಿ ಬಂದು ನೆಲೆಸಿದ್ದ ಎಂಬ ಮಾಹಿತಿ ಇದೆ. ಸ್ಥಳೀಯರ ಮಾಹಿತಿ ಪ್ರಕಾರ, ಮಧ್ಯರಾತ್ರಿ 2.30 ಗಂಟೆಗೆ ಈ ಮನೆಯ ಸಂಬಂಧಿಕರ ಕಿರುಚಾಟದ ಧ್ವನಿ ಕೇಳಿಸಿತು. ಆಗ ಭೂರಾ ಮನೆಗೆ ಹೋದಾಗ ರಕ್ತದ ಮಡುವಿನಲ್ಲಿ ದೇಹಗಳು ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

ಉತ್ತರ ಪ್ರದೇಶದ ಕೈಸರ್‌ಗಂಜ್‌ನಲ್ಲಿ ಘಟನೆ: ಸ್ಥಳೀಯರ ಆಕ್ರೋಶ

‘ಬ್ರಿಜ್’ ಪುತ್ರನ ಬೆಂಗಾವಲು ವಾಹನ ಗುದ್ದಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ/ಗೊಂಡಾ: ಕೈಸರ್‌ಗಂಜ್ ಲೋಕಸಭಾ ಕ್ಷೇತ್ರದ ಚತ್ರೈಪುರ ಗ್ರಾಮದ ಬಳಿ ಬುಧವಾರ ಬೆಳಿಗ್ಗೆ ಭಾರತೀಯ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ಮಗ ಕರಣ್ ಭೂಷಣ್ ಸಿಂಗ್ ಅವರ ಬೆಂಗಾವಲು ಪಡೆ ವಾಹನವು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ, ಇಬ್ಬರು ಯುವಕರು ಮೃತಪಟ್ಟಿದ್ದಾರೆ.

ಕೈಸರ್‌ಗಂಜ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಕರಣ್ ಭೂಷಣ್ ಸಿಂಗ್ ಅವರು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಹೋಗುತ್ತಿದ್ದಾಗ, ಅವರ ಬೆಂಗಾವಲು ವಾಹನದಿಂದ ಈ ಅಪಘಾತ ಸಂಭವಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೃತರನ್ನು ರೆಹಾನ್ ಖಾನ್ ಮತ್ತು ಶೆಹಜಾದ್ ಖಾನ್ (ಇಬ್ಬರೂ ಸೋದರ ಸಂಬಂಧಿಗಳು) ಎಂದು ಗುರುತಿಸಲಾಗಿದೆ. ಅವರು ಮೋಟಾರು ಬೈಕ್ ಚಲಾಯಿಸುತ್ತಿದ್ದಾಗ, ವೇಗವಾಗಿ ಬಂದ ಎಸ್‌ಯುವಿ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಬಳಿಕ ಅದು ನಿಯಂತ್ರಣ ತಪ್ಪಿ, ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಸೀತಾದೇವಿ (60) ಎಂಬುವರಿಗೂ ಗುದ್ದಿದೆ. ಮಹಿಳೆಗೆ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಎಸ್‌ಯುವಿ
- ಇಬ್ಬರು ಯುವಕರು ಸ್ಥಳದಲ್ಲೇ ಸಾವು
- ಆಕ್ರೋಶದಿಂದ ಎಸ್‌ಯುವಿಗೆ ಬೆಂಕಿ ಹಚ್ಚಲು ಮುಂದಾಗಿದ್ದ ಸ್ಥಳೀಯರು

ಕೂಡಲೇ ಮೂವರನ್ನೂ ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಇಬ್ಬರು ಯುವಕರು ಸ್ಥಳದಲ್ಲಿಯೇ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು. ಗಲ್ಫ್‌ನಲ್ಲಿ ಕೆಲಸ ಮಾಡುತ್ತಿದ್ದ ಶೆಹಜಾದ್ ಎರಡು ದಿನಗಳ ಹಿಂದಷ್ಟೇ ಮನೆಗೆ ಮರಳಿದ್ದರು.

ಸ್ಥಳೀಯರ ಆಕ್ರೋಶ: ಆಕ್ರೋಶಗೊಂಡ ಸ್ಥಳೀಯ ಗ್ರಾಮಸ್ಥರು ಕರ್ನೈಲ್‌ಗಂಜ್–ಹುಜೂರ್‌ಪುರ ರಸ್ತೆಯನ್ನು ತಡೆದು ಪ್ರತಿಭಟಿಸಿದರು. ಅಪಘಾತಕ್ಕೆ ಕಾರಣರಾದವರನ್ನು ಬಂಧಿಸುವಂತೆ ಆಗ್ರಹಿಸಿದರು. ಅಲ್ಲದೆ ಪ್ರತಿಭಟನಕಾರರ ಗುಂಪು ವಾಹನಕ್ಕೆ ಬೆಂಕಿ ಹಚ್ಚಲೂ ಯತ್ನಿಸಿತು ಎಂದು ಪೊಲೀಸರು ತಿಳಿಸಿದರು. ರಸ್ತೆಯಲ್ಲಿ ಸಂಚಾರ ತಡೆದಿದ್ದ ಪ್ರತಿಭಟನಕಾರರ ಮನವೊಲಿಸಲು ಪೊಲೀಸರು ಹರಸಾಹಸ ಮಾಡಬೇಕಾಯಿತು.



ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಕಾರು

ಬಿಜೆಪಿ ವೈಖರಿ: ಟಿಎಂಸಿ ಟೀಕೆ

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ವಿರುದ್ಧ ಟೀಕೆ ಮಾಡಿರುವ ಟಿಎಂಸಿ ಸಂಸದೆ ಸಾಗರಿಕಾ ಘೋಷ್, ಬಿಜೆಪಿಯು ನಾಗರಿಕರನ್ನು ಹೇಗೆಲ್ಲ ನಡೆಸಿಕೊಳ್ಳುತ್ತಿದೆ ಎಂಬುದಕ್ಕೆ ಇದು ಮತ್ತೊಂದು ನಿದರ್ಶನ ಎಂದಿದ್ದಾರೆ.

‘ಇದು 2021ರಲ್ಲಿ ಲಖೀಂಪುರ ಖೀರಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಬಿಜೆಪಿಯ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ವಾಹನ ಹರಿಸಿದ್ದನ್ನು ನೆನಪಿಸುತ್ತದೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ‘ಬಿಜೆಪಿ ತೊಲಗಿಸಿ, ಜೀವ ಉಳಿಸಿ’ ಎಂದು ಅವರು ಹ್ಯಾಷ್‌ಟ್ಯಾಗ್ ಬಳಸಿದ್ದಾರೆ.

ಅಪಘಾತ ಸಂಬಂಧ ಕರ್ನೈಲ್‌ಗಂಜ್ ಕೊಟ್ವಾಲಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಘಟನೆಯ ಬಳಿಕ ಪರಾರಿಯಾಗಿದ್ದ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕರಣ್ ಭೂಷಣ್ ಸಿಂಗ್ ಅಭ್ಯರ್ಥಿಯಾಗಿರುವ ಕೈಸರ್‌ಗಂಜ್ ಕ್ಷೇತ್ರದಲ್ಲಿ ಮೇ 20ರಂದು ಚುನಾವಣೆ ನಡೆದಿತ್ತು.

ರಾಜ್‌ಕೋಟ್ ಅಗ್ನಿ ದುರಂತ • ಸಭೆ ನಡೆಸಿದ ಗೃಹ ಸಚಿವ

ಅಧಿಕಾರಿಗಳ ವಿಚಾರಣೆಗೆ ಸೂಚನೆ

ಅಹಮದಾಬಾದ್ (ಪಿಟಿಐ): ರಾಜ್‌ಕೋಟ್‌ನ ಟಿಆರ್‌ಪಿ ಗೇಮ್ ಜೋನ್‌ನಲ್ಲಿ ನಡೆದ ಅಗ್ನಿ ಅನಾಹುತದ ತನಿಖೆಗೆ ನೇಮಿಸಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಹಿರಿಯ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳನ್ನು ಕೂಡ ವಿಚಾರಣೆಗೆ ಗುರಿಪಡಿಸುವ ಅಧಿಕಾರ ನೀಡಲಾಗಿದೆ.

ಈ ನಡುವೆ, ದುರಂತದಲ್ಲಿ ಮೃತಪಟ್ಟ ಎಲ್ಲರ ಡಿಎನ್‌ಎ ಮಾದರಿಗಳು ಅವರ ಸಂಬಂಧಿಕರ ಡಿಎನ್‌ಎ ಮಾದರಿಗಳೊಂದಿಗೆ ಹೊಂದಿಕೆ ಆಗುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಜರಾತ್ ಗೃಹ ಸಚಿವ ಹರ್ಷ ಸಂಘವಿ ಅವರು ಎಸ್‌ಐಟಿ ಸದಸ್ಯರ ಜೊತೆ ಬುಧವಾರ ಸಭೆ ನಡೆಸಿದ ನಂತರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಎಸ್‌ಐಟಿ ಮುಖ್ಯಸ್ಥ ಸುಭಾಷ್ ತ್ರಿವೇದಿ, ‘ರಾಜ್‌ಕೋಟ್ ಮಹಾನಗರ ಪಾಲಿಕೆಯ ಅಧಿಕಾರಿಗಳು, ಅಗ್ನಿಶಾಮಕ ಇಲಾಖೆ, ಪೊಲೀಸ್ ಇಲಾಖೆ, ವಿದ್ಯುತ್ ಕಂಪನಿಯ ಅಧಿಕಾರಿಗಳನ್ನು ಕೂಡ ತನಿಖೆಗೆ ಒಳಪಡಿಸುವಂತೆ ನಮಗೆ ಸೂಚನೆ ಸಿಕ್ಕಿದೆ. ಅವರು ತಪ್ಪು ಮಾಡಿದ್ದಾರೆ ಎಂದಾದರೆ ಕಠಿಣ ಕ್ರಮ ಜರುಗಿಸಲು ನಮಗೆ ಸೂಚನೆ ಬಂದಿದೆ’ ಎಂದು ತಿಳಿಸಿದ್ದಾರೆ.

ಟಿಆರ್‌ಪಿ ಗೇಮ್ ಜೋನ್ ದುರಂತದ ಬಗ್ಗೆ ತನಿಖೆಗೆ ರಾಜ್ಯ ಸರ್ಕಾರವು ಎಸ್‌ಐಟಿ ರಚಿಸಿದೆ. ‘ಮುಂದಿನ ದಿನಗಳಲ್ಲಿ ಹಿರಿಯ ಅಧಿಕಾರಿಗಳನ್ನು ಕೂಡ ವಿಚಾರಣೆಗೆ ಕರೆಸಲಾಗುತ್ತದೆ’ ಎಂದು ತ್ರಿವೇದಿ ಹೇಳಿದ್ದಾರೆ.

ಗೇಮ್ ಜೋನ್ ನಿರ್ವಾಹಕರು ಅನುಮತಿ ಇದ್ದ ಮಿತಿಗಿಂತ ಹೆಚ್ಚಾಗಿ, 30 ಲೀಟರ್‌ಗೂ ಹೆಚ್ಚು ಪೆಟ್ರೋಲನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದರು. ಹೀಗಾಗಿ ಪೆಟ್ರೋಲಿಯಂ ಕಾಯ್ದೆಯಲ್ಲಿ ಇರುವ ಕೆಲವು ಸೆಕ್ಷನ್ನುಗಳನ್ನು ಕೂಡ ಎಫ್‌ಐಆರ್‌ನಲ್ಲಿ ಸೇರಿಸಲಾಗುತ್ತದೆ ಎಂದಿದ್ದಾರೆ.

18 ಗೇಮ್ ಜೋನ್‌ಗಳ ವಿರುದ್ಧ ಪ್ರಕರಣ

ಅಹಮದಾಬಾದ್ (ಪಿಟಿಐ): ಟಿಆರ್‌ಪಿ ಗೇಮ್ ಜೋನ್ ದುರಂತದ ನಂತರ, ಸರಿಯಾದ ಪರವಾನಗಿ ಇಲ್ಲದೆ ಕಾರ್ಯಾಚರಿಸುತ್ತಿರುವ 18 ಗೇಮ್ ಜೋನ್‌ಗಳ ವಿರುದ್ಧ ಗುಜರಾತ್ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಕ್ರಮವಾಗಿ ಕಾರ್ಯಾಚರಣೆ ನಡೆಸುತ್ತಿರುವ ಗೇಮ್ ಜೋನ್‌ಗಳ ವಿರುದ್ಧ ಪ್ರಕರಣ ದಾಖಲಿಸುವಂತೆ ಗುಜರಾತ್ ಗೃಹ ಸಚಿವ ಹರ್ಷ ಸಂಘವಿ ಅವರು ಪೊಲೀಸ್ ಆಯುಕ್ತರಿಗೆ ಹಾಗೂ ಎಸ್‌ಪಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಜ್‌ಕೋಟ್‌ನಲ್ಲಿ ಪೊಲೀಸರು ಎಂಟು ಗೇಮ್ ಜೋನ್‌ಗಳಿಗೆ ಬೀಗ ಜಡಿದಿದ್ದಾರೆ. ಇವುಗಳಲ್ಲಿ ಒಂದು ವಾಟರ್ ಪಾರ್ಕ್ ಕೂಡ ಸೇರಿದೆ. ಅವುಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಅಹಮದಾಬಾದ್‌ನಲ್ಲಿ ನಾಲ್ಕು ಗೇಮ್ ಜೋನ್‌ಗಳ ಬಾಗಿಲು ಮುಚ್ಚಲಾಗಿದೆ. ಅವುಗಳ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸೂರತ್‌ನಲ್ಲಿ ಆರು ಗೇಮ್ ಜೋನ್‌ಗಳನ್ನು ಮುಚ್ಚಲಾಗಿದೆ.



ಮಳೆಯಿಂದ ಪ್ರವಾಹ

ಕೇರಳದಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಬುಧವಾರ ಕೊಚ್ಚಿ ನಗರದ ಅನೇಕ ರಸ್ತೆಗಳು ಜಲಾವೃತಗೊಂಡಿದ್ದವು. ನಾಗರಿಕರು ಪ್ರವಾಹದ ನೀರಿನಲ್ಲಿಯೇ ಸಾಗಿದರು

‘ರುದ್ರ ಎಂ–2’ ಕ್ಷಿಪಣಿ ಪರೀಕ್ಷೆ ಯಶಸ್ವಿ



ನವದೆಹಲಿ(ಪಿಟಿಐ): ಒಡಿಶಾ ಕರಾವಳಿಯಲ್ಲಿ ವಾಯುಪಡೆಯ ಯುದ್ಧವಿಮಾನ ಸುಖೋಯ್–30ಎಂಕೆ–1 ಬಳಸಿ ‘ರುದ್ರ ಎಂ–2’ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಬುಧವಾರ ಯಶಸ್ವಿಯಾಗಿ ನೆರವೇರಿಸಲಾಯಿತು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಆಕಾಶದಿಂದ ಚಿಮ್ಮಿ ನೆಲದ ಮೇಲಿನ ಗುರಿಯನ್ನು ನಿಖರವಾಗಿ ನಾಶ ಮಾಡುವ ಕ್ಷಿಪಣಿಯ ಸಾಮರ್ಥ್ಯವನ್ನು ಈ ಪರೀಕ್ಷೆ ದೃಢಪಡಿಸಿತು ಎಂದೂ ಸಚಿವಾಲಯ ತಿಳಿಸಿದೆ. ಈ ಕ್ಷಿಪಣಿಯನ್ನುದೇಶೀಯವಾಗಿಯೇ ಅಭಿವೃದ್ಧಿಪಡಿಸಲಾಗಿದೆ. ಯುದ್ಧವಿಮಾನಗಳಿಂದ ಉಡ್ಡಯನ ಮಾಡಬಹುದಾದ ಈ ಕ್ಷಿಪಣಿ ವ್ಯವಸ್ಥೆಯನ್ನು, ಭೂಮಿ ಮೇಲಿರುವ ಶತ್ರು ಪಾಳಯದ ಹಲವು ಬಗೆಯ ಸ್ವತ್ತುಗಳನ್ನು ನಾಶ ಮಾಡುವ ಉದ್ದೇಶದಿಂದಲೇ ಅಭಿವೃದ್ಧಿಪಡಿಸಲಾಗಿದೆ. ಡಿಆರ್‌ಡಿಒ ಪ್ರಯೋಗಾಲಯಗಳಲ್ಲಿ ಅಭಿವೃದ್ಧಿಪಡಿಸಲಾಗಿರುವ , ಅತ್ಯಾಧುನಿಕ ತಂತ್ರಜ್ಞಾನ ಆಧರಿತ ಹಲವು ಸಾಧನಗಳನ್ನು ಈ ಕ್ಷಿಪಣಿ ವ್ಯವಸ್ಥೆಯಲ್ಲಿ ಅಳವಡಿಸಲಾಗಿದೆ.ಪರೀಕ್ಷೆ ಯಶಸ್ವಿಯಾಗಿರುವುದಕ್ಕಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಆರ್‌ಡಿಒ, ವಾಯುಪಡೆ ಹಾಗೂ ಸಂಬಂಧಿತ ಉದ್ಯಮಗಳನ್ನು ಅಭಿನಂದಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪಕ್ಷಾಂತರಿ ಬಮ್‌ಗೆ ಜಾಮೀನು

ಇಂದೋರ್ (ಪಿಟಿಐ): ಕಾಂಗ್ರೆಸ್ ತೊರೆದು ಬಿಜೆಪಿ ಸೇರಿರುವ ಅಕ್ಷಯ್ ಕಾಂತಿ ಬಮ್ ಮತ್ತು ಅವರ ತಂದೆ ಕಾಂತಿಲಾಲ್ ಅವರಿಗೆ ಕೊಲೆ ಯತ್ನ ಪ್ರಕರಣವೊಂದರಲ್ಲಿ ಮಧ್ಯಪ್ರದೇಶ ಹೈಕೋರ್ಟ್ ಬುಧವಾರ ಜಾಮೀನು ಮಂಜೂರು ಮಾಡಿದೆ.

ಇಂದೋರ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಬಮ್ ಅವರು, ನಾಮಪತ್ರ ಹಿಂಪಡೆಯುವ ಕಡೆಯ ದಿನ ಕಣದಿಂದ ಹಿಂದೆ ಸರಿದಿದ್ದರು. ನಂತರ ಅವರು ಬಿಜೆಪಿ ಸೇರಿದ್ದರು.

ಎಲ್ಲ ಕಡೆಯವರ ವಾದ–ಪ್ರತಿವಾದ ಆಲಿಸಿದ, ಮಧ್ಯಪ್ರದೇಶ ಹೈಕೋರ್ಟ್‌ನ ಇಂದೋರ್ ಪೀಠದ ನ್ಯಾಯಮೂರ್ತಿ ಪ್ರೇಮ್ ನಾರಾಯಣ ಸಿಂಗ್ ಅವರು ಬಮ್ ಮತ್ತು ಕಾಂತಿಲಾಲ್ ಅವರಿಗೆ ಜಾಮೀನು ಮಂಜೂರು ಮಾಡಿದರು.

ಆರೋಪಿಗಳಾದ ಬಮ್ ಮತ್ತು ಕಾಂತಿಲಾಲ್ ಪರವಾಗಿ ವಾದಿಸಿದ್ದ ವಕೀಲ ಅಜಯ್ ಮಿಶ್ರಾ ಅವರು, ‘ಪ್ರಕರಣದಲ್ಲಿ ಆಗಿರುವ 17 ವರ್ಷಗಳ ವಿಳಂಬವನ್ನು ನಾನು ಕೋರ್ಟ್ ಗಮನಕ್ಕೆ ತಂದೆ. ಆರೋಪಿಗಳು ನಗರದಲ್ಲಿ ಹಲವು ಆಸ್ತಿಗಳನ್ನು ಹೊಂದಿದ್ದಾರೆ. ಅವರು ತಲೆಮರೆಸಿಕೊಳ್ಳುವುದಿಲ್ಲ ಎಂದು ವಿವರಿಸಿದೆ’ ಎಂದು ತಿಳಿಸಿದರು.

ಜಮೀನು ವ್ಯಾಜ್ಯವೊಂದಕ್ಕೆ ಸಂಬಂಧಿಸಿದಂತೆ ಯೂಸುಫ್ ಪಟೇಲ್ ಎನ್ನುವವರ ಮೇಲೆ ಬಮ್ ಮತ್ತು ಕಾಂತಿಲಾಲ್ ಅವರು 2007ರ ಅಕ್ಟೋಬರ್‌ನಲ್ಲಿ ದಾಳಿ ನಡೆಸಿದ್ದರು ಎಂದು ಪೊಲೀಸ್ ದೂರಿನಲ್ಲಿ ಹೇಳಲಾಗಿದೆ.

ಮಾಜಿ ಮೇಯರ್ ಮೇಲೆ ದಾಳಿ: ಇಬ್ಬರ ಬಂಧನ

ನಾಸಿಕ್ (ಪಿಟಿಐ) ಮಹಾರಾಷ್ಟ್ರ ದ ಮಾಲೆಗಾಂವ್‌ನ ಮಾಜಿ ಮೇಯರ್, ಎಐಎಂಐಎಂ ನಾಯಕ ಅಬ್ದುಲ್ ಮಲಿಕ್ ಯೂನುಸ್ ಶೇಕ್ ಅವರ ಮೇಲೆ ಗುಂಡಿನ ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮ್ಹಾಲ್ದೆ ಶಿವಾರ್‌ನಲ್ಲಿ ನಡೆದ ಭೂ ವ್ಯವಹಾರಗಳಿಗೆ ಸಂಬಂಧಿಸಿದ ವ್ಯಾಜ್ಯದಿಂದಾಗಿ ಶೇಕ್ ಅವರ ಮೇಲೆ ದಾಳಿ ನಡೆಸಿರುವುದಾಗಿ ಬಂಧಿತ ಆರೋಪಿಗಳು ವಿಚಾರಣೆ ವೇಳೆ ಬಾಯಿಬಿಟ್ಟಿದ್ದಾರೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅನಿಕೇತ್ ಭಾರ್ತಿ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸೋಮವಾರ ಮುಂಜಾನೆ ಮಾಲೆಗಾಂವ್‌ನ ಹಳೆಯ ಆಗ್ರಾ ರಸ್ತೆಯಲ್ಲಿರುವ ಕಟ್ಟಡ ಸಾಮಗ್ರಿಗಳ ಅಂಗಡಿಯೊಂದರ ಮುಂದೆ ಶೇಕ್ ಅವರು ನಿಂತಿದ್ದ ವೇಳೆ, ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತ ವ್ಯಕ್ತಿಗಳು 3 ಸುತ್ತು ಗುಂಡಿನ ದಾಳಿ ನಡೆಸಿದ್ದರು.

ಘಟನೆಯಲ್ಲಿ ಶೇಕ್ ಅವರ ಎದೆ ಮತ್ತು ಕಾಲಿನ ಭಾಗಕ್ಕೆ ಗುಂಡು ತಗುಲಿ ಗಂಭೀರವಾಗಿ ಗಾಯಗೊಂಡಿದ್ದರು. ಬಳಿಕ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಯಿತು.

ಸ್ಥಳದಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಈ ಘಟನೆಯು ಸೆರೆಯಾಗಿದೆ. ಅದರ ಆಧಾರದ ಮೇಲೆ ಗುಂಡಿನ ದಾಳಿ ನಡೆಸಿದ ಆರೋಪದಡಿ ಫಾರೂಕ್ ಪಟೇಲ್ ಮತ್ತು ಆಪ್ತನನ್ನು ಬಂಧಿಸಿ, ಪ್ರಕರಣ ದಾಖಲಿಸಲಾಗಿದೆ.

ಬಂಧಿತರಿಂದ ಒಂದು ಪಿಸ್ತೂಲ್, ದಾಳಿಗೆ ಬಳಸಿದ ದ್ವಿಚಕ್ರ ವಾಹನ ಹಾಗೂ ಎರಡು ಸಿಡಿಮದ್ದುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಇಬ್ಬರು ನಕ್ಸಲರ ಹತ್ಯೆ

ಬಿಜಾಪುರ (ಛತ್ತೀಸಗಢ, ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿ ಹಾಗೂ ನಕ್ಸಲರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ನಕ್ಸಲರು ಮೃತಪಟ್ಟಿದ್ದಾರೆ.

‘ಬಿಜಾಪುರದ ಮಡ್ಡೆಡ್ ಪೊಲೀಸ್ ಠಾಣಾ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಗುಂಡಿನ ಚಕಮಕಿ ನಡೆದಿದೆ.

ಸುದ್ದಿ 2 ನಿಮಿಷ

ದೇಶದ್ರೋಹ ಪ್ರಕರಣ: ಶಾರ್ಜೀಲ್ ಇಮಾಮ್‌ಗೆ ಜಾಮೀನು

ನವದೆಹಲಿ(ಪಿಟಿಐ): ದೇಶದ್ರೋಹ ಮತ್ತು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿದ ಆರೋಪಗಳಿಗೆ ಗುರಿಯಾಗಿದ್ದ ಜೆಎನ್‌ಯು ಮಾಜಿ ವಿದ್ಯಾರ್ಥಿ ಶಾರ್ಜೀಲ್ ಇಮಾಮ್‌ಗೆ ದೆಹಲಿ ಹೈಕೋರ್ಟ್ ಬುಧವಾರ ಜಾಮೀನು ನೀಡಿದೆ.

ಈ ಕುರಿತು ಇಮಾಮ್ ಪರ ವಕೀಲ ಮತ್ತು ದೆಹಲಿ ಪೊಲೀಸರ ವಾದವನ್ನು ಆಲಿಸಿದ ನ್ಯಾಯಮೂರ್ತಿಗಳಾದ ಸುರೇಶ್ ಕುಮಾರ್ ಕೈತ್ ಮತ್ತು ಮನೋಜ್ ಜೈನ್ ಅವರಿದ್ದ ಪೀಠವು, ಜಾಮೀನು ಅರ್ಜಿಯನ್ನು ಪುರಸ್ಕರಿಸಿತು.

2020ರಲ್ಲಿ ಸಂಭವಿಸಿದ ಕೋಮುಗಲಭೆಗಳ ಹಿಂದೆ ಅತಿದೊಡ್ಡ ಪಿತೂರಿ ನಡೆದಿದೆ ಎಂಬ ಆರೋಪ ಸೇರಿದಂತೆ ಹಲವು ಪ್ರಕರಣಗಳಲ್ಲಿ ಇಮಾಮ್ ಆರೋಪಿಯಾಗಿದ್ದು ನ್ಯಾಯಾಂಗ ಬಂಧನದಲ್ಲಿದ್ದಾರೆ.

2019ರ ಡಿಸೆಂಬರ್ 13 ಮತ್ತು 16ರಂದು ಕ್ರಮವಾಗಿ ಜಾಮಿಯಾ ಮಿಲಿಯಾ ಇಸ್ಲಾಮಿಯಾ ಮತ್ತು ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಭಾಷಣದ ಮೂಲಕ ಗಲಭೆಗೆ ಪ್ರಚೋದನೆ ನೀಡಿದ್ದಾರೆ ಎಂದು ಪ್ರಾಸಿಕ್ಯೂಷನ್ ಆರೋಪಿಸಿತ್ತು. ಈ ಸಂಬಂಧ ದೆಹಲಿ ಪೊಲೀಸರ ವಿಶೇಷ ಘಟಕವು ಇಮಾಮ್ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಿಕೊಂಡಿತ್ತು.



ರೈಲ್ವೆ ನೇಮಕಾತಿ ಹಗರಣ ಸಿಬಿಐಗೆ ಕೋರ್ಟ್ ತರಾಟೆ

ನವದೆಹಲಿ (ಪಿಟಿಐ): ರೈಲ್ವೆ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ನಿರ್ಣಾಯಕವಾದ ದೋಷಾರೋಪ ಪಟ್ಟಿಯನ್ನು ಸಲ್ಲಿಸುವಲ್ಲಿನ ವಿಳಂಬಕ್ಕೆ ದೆಹಲಿಯ ನ್ಯಾಯಾಲಯವೊಂದು ಸಿಬಿಐ ಅಧಿಕಾರಿಗಳನ್ನು ಬುಧವಾರ ತರಾಟೆಗೆ ತೆಗೆದುಕೊಂಡಿದೆ.

ಈ ಹಗರಣದಲ್ಲಿ ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಮತ್ತು ಅವರ ಕುಟುಂಬದ ಕೆಲವು ಸದಸ್ಯರು ಕೂಡ ಆರೋಪಿಗಳಾಗಿದ್ದಾರೆ. ದೋಷಾರೋಪ ಪಟ್ಟಿಯನ್ನು ಸಲ್ಲಿಸಲು ಸಿಬಿಐ ಅಧಿಕಾರಿಗಳು ಪ್ರತಿಬಾರಿಯೂ ಹೆಚ್ಚುವರಿ ಕಾಲಾವಕಾಶ ಕೋರುತ್ತಿರುವುದಕ್ಕೆ ನ್ಯಾಯಾಲಯವು ಅಸಮಾಧಾನ ವ್ಯಕ್ತಪಡಿಸಿತು.

ಅಂತಿಮ ವರದಿಯನ್ನು ಜೂನ್ 7ಕ್ಕೆ ಮೊದಲು ಸಲ್ಲಿಸಬೇಕು ಎಂದು ಸಿಬಿಐಗೆ ತಾಕೀತು ಮಾಡಿದೆ.

ರೈಲ್ವೆ ಇಲಾಖೆಯ ವಿವಿಧ ವಲಯಗಳಲ್ಲಿ 2004ರಿಂದ 2009ರ ನಡುವಿನ ಅವಧಿಯಲ್ಲಿ ನಡೆದ ನೇಮಕಾತಿಯಲ್ಲಿ ಹಲವರು ಜಮೀನನ್ನು ಲಾಲು ಅವರ ಕುಟುಂಬದ ಸದಸ್ಯರಿಗೆ ತೀರಾ ಕಡಿಮೆ ದರಕ್ಕೆ ಮಾಡಿದ್ದಕ್ಕೆ ‘ಡಿ’ ದರ್ಜೆ ನೌಕರಿ ಗಿಟ್ಟಿಸಿಕೊಂಡರು ಎಂದು ಸಿಬಿಐ ಆರೋಪಿಸಿದೆ. ಆ ಅವಧಿಯಲ್ಲಿ ಲಾಲು ಅವರು ರೈಲ್ವೆ ಸಚಿವರಾಗಿದ್ದರು.

ಮಾಧ್ಯಮ ಸಂಸ್ಥೆಗಳಿಂದ ಕರಡು ಮಸೂದೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾರ್ಯಾಂಗದ ನಿಯಂತ್ರಣದಿಂದ ಮಾಧ್ಯಮ ಕ್ಷೇತ್ರವನ್ನು ಮುಕ್ತಗೊಳಿಸುವುದು ಹಾಗೂ ಹೆಚ್ಚು ಪಾರದರ್ಶಕತೆ ಖಾತ್ರಿಪಡಿಸುವ ಉದ್ದೇಶದ ಕರಡು ಮಸೂದೆಯೊಂದನ್ನು ದೇಶದ ಮಾಧ್ಯಮ ಸಂಸ್ಥೆಗಳು ಸಿದ್ಧಪಡಿಸಿವೆ.

ಭಾರತೀಯ ಪ್ರೆಸ್ ಕ್ಲಬ್, ‘ಮಾಧ್ಯಮ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಮಸೂದೆ, 2024’ ಎಂಬ ಕರಡನ್ನು ಸಿದ್ಧಪಡಿಸಿದೆ. 26 ಮಾಧ್ಯಮ ಸಂಸ್ಥೆಗಳು ಈ ಕಾರ್ಯಕ್ಕೆ ಕೈಜೋಡಿಸಿದ್ದು, ಈ ಕರಡು ಮಸೂದೆಯನ್ನು ಬುಧವಾರ ಬಿಡುಗಡೆ ಮಾಡಲಾಗಿದೆ.

‘ದಿ ಕ್ಯಾರವಾನ್’ ನಿಯತಕಾಲಿಕದ ಕಾರ್ಯನಿರ್ವಾಹಕ ಸಂಪಾದಕ ಹರ್ತೋಷ್ ಸಿಂಗ್ ಬಾಲ್ ನೇತೃತ್ವದ 7 ಸದಸ್ಯರ ಸಮಿತಿಯು ಈ ಕರಡು ಮಸೂದೆಯನ್ನು ಸಿದ್ಧಪಡಿಸಿದೆ. ಜೂನ್ 30ರ ವರೆಗೆ ಈ ಕರಡು ಮಸೂದೆ ಸಾರ್ವಜನಿಕರಿಗೆ ಲಭ್ಯವಿರಲಿದ್ದು, ಜನರು ತಮ್ಮ ಸಲಹೆ–ಸೂಚನೆಗಳನ್ನು ನೀಡಬಹುದು. ನಂತರ, ಅಂತಿಮಗೊಂಡ ಕರಡು ಮಸೂದೆಯನ್ನು ಸರ್ಕಾರಕ್ಕೆ ಸಲ್ಲಿಸುವುದಾಗಿ ಸಮಿತಿ ಹೇಳಿದೆ.

‘ಸರ್ಕಾರದ ಬಿಗಿ ಹಿಡಿತದ ಪರಿಣಾಮವಾಗಿ ಮಾಧ್ಯಮ ಸ್ವಾತಂತ್ರ್ಯ ಇಲ್ಲವಾಗಿದೆ. ಹಣಕಾಸು ಹಾಗೂ ಮಾಲೀಕತ್ವ ವಿಧಾನಗಳಲ್ಲಿ ಆಗಿರುವ ಬದಲಾವಣೆಗಳ ಪರಿಣಾಮ ಸರ್ಕಾರವು ಮಾಧ್ಯಮಗಳ ಮೇಲೆ ನಿಯಂತ್ರಣ ಸಾಧಿಸಿದೆ’ ಎಂದೂ ಅವರು ಹೇಳಿದ್ದಾರೆ.

‘ಮುಖ್ಯವಾಗಿ ಎರಡು ವಿಚಾರಗಳಿಗೆ ಈ ಕರಡುವಿನಲ್ಲಿ ಒತ್ತು ನೀಡಲಾಗಿದೆ. ಮೊದಲನೆಯದಾಗಿ, ಮಾಧ್ಯಮ ಸಂಸ್ಥೆ ಯೊಂದರ ಮಾಲೀಕರ ವಿವರಗಳು, ಅದರ ಹಣಕಾಸಿನ ವಿಧಾನ ಹಾಗೂ ಸರ್ಕಾರ ನೀಡುವ ಜಾಹೀರಾತುಗಳಿಂದ ಲಭಿಸುವ ಆದಾಯದ ಪಾಲಿನ ಬಗ್ಗೆ ಒತ್ತು ನೀಡಲಾಗಿದೆ. ಎರಡನೆಯದಾಗಿ, ಸ್ವಯಂ ಆಗಿ ಪಾರದರ್ಶಕತೆ ಅಳವಡಿಸಿಕೊಳ್ಳುವ ಮೂಲಕ ಮಾಧ್ಯಮ ಸಂಸ್ಥೆಯನ್ನು ಉತ್ತರದಾಯಿಯನ್ನಾಗಿ ಮಾಡುವುದು. ಈ ವಿಷಯದಲ್ಲಿ ಯಾವುದೇ ನಿಯಂತ್ರಣ ಇರಬಾರದು ಎಂಬುದಾಗಿದೆ’ ಎಂದು ಬಾಲ್ ಹೇಳಿದ್ದಾರೆ.

ಕರಡು ಮಸೂದೆಯಲ್ಲಿನ ಪ್ರಮುಖ ಅಂಶಗಳು

- ಮಾಧ್ಯಮ ಸಂಸ್ಥೆಗಳು ನ್ಯಾಯಸಮ್ಮತವಲ್ಲದ ಕಾರ್ಯವಿಧಾನ ಅನುಸರಿಸುವುದನ್ನು ತಡೆಯುವುದಕ್ಕಾಗಿ ಹಾಗೂ ಮಾಧ್ಯಮಗಳ ಮೇಲೆ ಸರ್ಕಾರದ ನಿಯಂತ್ರಣ ತಪ್ಪಿಸಲು ರಾಷ್ಟ್ರೀಯ ಮಾಧ್ಯಮ ಪರಿಷತ್ತು ಸ್ಥಾಪಿಸಬೇಕು
- ಮಾಧ್ಯಮ ಕ್ಷೇತ್ರದ ನವೋದ್ಯಮಗಳಿಗೆ ಆರಂಭಿಕ ಹಣಕಾಸು ನೆರವು ನೀಡಲು ರಾಷ್ಟ್ರೀಯ ಮಾಧ್ಯಮ ನಿಧಿ ಸ್ಥಾಪಿಸಬೇಕು
- ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಥವಾ ಹೈಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ, ಪ್ರತಿ ಮಾಧ್ಯಮ ಸಂಸ್ಥೆಯಿಂದ 25 ವರ್ಷ ವೃತ್ತಿ ಅನುಭವ ಇರುವ ಪತ್ರಕರ್ತ, ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ, ಡಿಜಿಪಬ್‌ನ ಒಬ್ಬ ಪ್ರತಿನಿಧಿ, ದೆಹಲಿ, ಮುಂಬೈ, ಚಂಡೀಗಢ, ಬೆಂಗಳೂರು, ಕೋಲ್ಕತ್ತ ಪ್ರೆಸ್ ಕ್ಲಬ್‌ನಿಂದ ಸೇರಿ ಒಬ್ಬ ಪ್ರತಿನಿಧಿ, ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಅಂಡ್ ಡಿಜಿಟಲ್ ಅಸೋಸಿಯೇಶನ್‌ನ ಪ್ರತಿನಿಧಿ ಹಾಗೂ ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿಯ ಒಬ್ಬ ಪ್ರತಿನಿಧಿ ಈ ಪರಿಷತ್ತಿನ ಸದಸ್ಯರಾಗಿರಬೇಕು
- ಪ್ರತಿಯೊಂದು ರಾಷ್ಟ್ರೀಯ ಪಕ್ಷದ ಒಬ್ಬ ಸಂಸದ, ರಾಜ್ಯ ಮಟ್ಟದ ಐದು ಪ್ರಮುಖ ರಾಜಕೀಯ ಪಕ್ಷಗಳ ಸಂಸದರು ಸಹ ಈ ಪರಿಷತ್ತಿನ ಸದಸ್ಯರಾಗಿರಬೇಕು

ಮಧ್ಯಪ್ರದೇಶದ ಮಹಿಳೆಯ ಜೀವ ರಕ್ಷಣೆ

ರಕ್ತದಾನ ಮಾಡಲು 440 ಕಿ.ಮೀ. ಪ್ರಯಾಣ



ಇಂದೋರ್ (ಪಿಟಿಐ): ಆರೋಗ್ಯ ಸ್ಥಿತಿ ಗಂಭೀರವಾಗಿದ್ದ ಮಹಿಳೆಯೊಬ್ಬರ ಜೀವ ಉಳಿಸುವುದಕ್ಕಾಗಿ, ಅಪರೂಪದ ‘ಬಾಂಬೆ’ ರಕ್ತ ಗುಂಪು ಹೊಂದಿರುವ ವ್ಯಕ್ತಿಯೊಬ್ಬರು ಮಹಾರಾಷ್ಟ್ರದ ಶಿರಡಿ ಯಿಂದ ಮಧ್ಯಪ್ರದೇಶದ ಇಂದೋರ್‌ಗೆ ಪ್ರಯಾಣಿಸಿ ಗಮನ ಸೆಳೆದಿದ್ದಾರೆ.

36 ವರ್ಷದ ರವೀಂದ್ರ ಅಷ್ಟೇಕರ್ ಎಂಬುವವರು 440 ಕಿ.ಮೀ. ದೂರ ಕ್ರಮಿಸಿ, ರಕ್ತದಾನ ಮಾಡುವ ಮೂಲಕ ಮಹಿಳೆಗೆ ನೆರವಾಗಿದ್ದಾರೆ. ಅವರು ಶಿರಡಿಯಲ್ಲಿ ಹೂವುಗಳ ಸಗಟು ಮಾರಾಟಗಾರರಾಗಿದ್ದಾರೆ.

ನಗರದಲ್ಲಿರುವ ಸರ್ಕಾರಿ ಒಡೆತನದ ಮಹಾರಾಜ ಯಶವಂತರಾವ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 30 ವರ್ಷದ ಮಹಿಳೆಗೆ, ‘ಬಾಂಬೆ’ ಗುಂಪಿನ ರಕ್ತ ನೀಡಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಆಸ್ಪತ್ರೆಯ ವೈದ್ಯ ಡಾ.ಅಶೋಕ ಯಾದವ್ ತಿಳಿಸಿದ್ದಾರೆ.

‘ಇಂದೋರ್‌ನ ಆಸ್ಪತ್ರೆಗೆ ದಾಖಲಾಗಿದ್ದ ಮಹಿಳೆಯ ಆರೋಗ್ಯ ಗಂಭೀರವಾಗಿರುವ ಕುರಿತು ವಾಟ್ಸ್‌ಆ್ಯಪ್‌ನಲ್ಲಿನ ರಕ್ತದಾನಿಗಳ ಗುಂಪಿನ ಮೂಲಕ ನನಗೆ ಮಾಹಿತಿ ದೊರೆಯಿತು. ನನ್ನ ಸ್ನೇಹಿತರೊಬ್ಬರ ಕಾರಿನಲ್ಲಿ ಮೇ 25ರಂದು ಇಂದೋರ್‌ಗೆ ಪ್ರಯಾಣಿಸಿದೆ. ‘ಬಾಂಬೆ’ ರಕ್ತ ಗುಂಪಿನ ರಕ್ತ ನೀಡಿದ ಬಳಿಕ ಮಹಿಳೆಯ ಆರೋಗ್ಯದಲ್ಲಿ ಸುಧಾರಣೆ ಕಂಡುಬಂದಿದೆ ಎಂಬುದನ್ನು ತಿಳಿದು ಖುಷಿಯಾಗಿದೆ’ ಎಂದು ರವೀಂದ್ರ ಹೇಳಿದ್ದಾರೆ.

‘ಕಳೆದ 10 ವರ್ಷಗಳ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ 8 ಬಾರಿ ರಕ್ತದಾನ ಮಾಡಿರುವೆ. ಗುಜರಾತ್, ಉತ್ತರ ಪ್ರದೇಶ ಹಾಗೂ ಮಧ್ಯಪ್ರದೇಶಗಳಲ್ಲಿ ಸಹ ರಕ್ತದಾನ ಮಾಡಿ, ರೋಗಿಗಳಿಗೆ ನೆರವಾಗಿದ್ದೇನೆ’ ಎಂದು ಹೇಳಿದ್ದಾರೆ.

‘ಪ್ರಸೂತಿಗೆ ಸಂಬಂಧಿಸಿದ ಚಿಕಿತ್ಸೆಗಾಗಿ ಬೇರೊಂದು ಆಸ್ಪತ್ರೆಗೆ ದಾಖಲಾಗಿದ್ದ ಮಹಿಳೆಗೆ ಶಸ್ತ್ರಚಿಕಿತ್ಸೆ ವೇಳೆ, ಆಕಸ್ಮಿಕವಾಗಿ ‘ಒ’ ಪಾಸಿಟಿವ್ ಗುಂಪಿನ ರಕ್ತ ನೀಡಲಾಗಿತ್ತು. ಇದರಿಂದ ಆಕೆಯ ಆರೋಗ್ಯದಲ್ಲಿ ಏರುಪೇರಾಗಿತ್ತಲ್ಲದೇ, ಮೂತ್ರಪಿಂಡಗಳ ಮೇಲೂ ದುಷ್ಪರಿಣಾಮವಾಗಿತ್ತು’ ಎಂದು ಡಾ.ಅಶೋಕ ಯಾದವ್ ತಿಳಿಸಿದ್ದಾರೆ.

‘ಆರೋಗ್ಯ ಮತ್ತಷ್ಟು ಹದಗೆಟ್ಟ ಹಿನ್ನೆಲೆಯಲ್ಲಿ ಮಹಿಳೆಯನ್ನು ನಗರದ ರಾಬರ್ಟ್ಸ್ ನರ್ಸಿಂಗ್ ಹೋಮ್‌ಗೆ ಸ್ಥಳಾಂತರಿಸಲಾಯಿತು. ಹಿಮೊಗ್ಲೋಬಿನ್ ಪ್ರಮಾಣ ಗಣನೀಯವಾಗಿ ಕುಸಿದಿತ್ತು. ‘ಬಾಂಬೆ’ ರಕ್ತ ಗುಂಪಿನ ರಕ್ತವನ್ನು ನೀಡಿದ ನಂತರ ಮಹಿಳೆಯ ಆರೋಗ್ಯ ಸುಧಾರಿಸಿದೆ’ ಎಂದು ಹೇಳಿದ್ದಾರೆ.



‘ಒಂದು ವೇಳೆ ಈ ಅಪರೂಪದ ಗುಂಪಿನ ರಕ್ತವನ್ನು ನೀಡದೇ ಹೋಗಿದ್ದಲ್ಲಿ, ಮಹಿಳೆಯ ಜೀವಕ್ಕೆ ಅಪಾಯ ವಿತ್ತು’ ಎಂದೂ ಡಾ.ಯಾದವ್ ಹೇಳಿದ್ದಾರೆ. ಇಂದೋರ್‌ನ ದಾಮೋದರ ಯುವ ಸಂಘಟನೆ ಎಂಬ ಸಾಮಾಜಿಕ ಸಂಸ್ಥೆಯ ಮುಖ್ಯಸ್ಥ ಅಶೋಕ ನಾಯಕ ಎಂಬುವವರು ಕೂಡ ಎರಡು ಯುನಿಟ್‌ನಷ್ಟು ‘ಬಾಂಬೆ’ ರಕ್ತ ಗುಂಪಿನ ರಕ್ತ ಸಂಗ್ರಹಕ್ಕೆ ವ್ಯವಸ್ಥೆ ಮಾಡಿದ್ದರು.

‘ಈ ಎರಡು ಯೂನಿಟ್ ರಕ್ತವನ್ನು ನಾಗ್ಪುರದಿಂದ ವಿಮಾನದಲ್ಲಿ ತರಿಸಿಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಇಂದೋರ್‌ನಲ್ಲಿದ್ದ ಮಹಿಳೆಯ ಸಹೋದರಿಯೊಬ್ಬರು ಒಂದು ಯುನಿಟ್ ರಕ್ತ ದಾನ ಮಾಡಿದರು’ ಎಂದೂ ನಾಯಕ ಹೇಳಿದ್ದಾರೆ.

ಏನಿದು ‘ಬಾಂಬೆ’ ರಕ್ತ ಗುಂಪು

ಅಪರೂಪದ ‘ಬಾಂಬೆ’ ರಕ್ತ ಗುಂಪನ್ನು 1952ರಲ್ಲಿ ಪತ್ತೆ ಮಾಡಲಾಯಿತು. ಈ ಗುಂಪಿಗೆ ಸೇರಿದ ರಕ್ತದಲ್ಲಿ ‘ಎಚ್ ಆ್ಯಂಟಿಜೆನ್’ ಇರುವುದಿಲ್ಲ. ಆದರೆ, ‘ಆ್ಯಂಟಿ ಎಚ್’ ಪ್ರತಿಕಾಯಗಳು ಇರುತ್ತವೆ. ಹೀಗಾಗಿ, ಈ ಗುಂಪಿನ ರಕ್ತ ಹೊಂದಿರುವ ರೋಗಿಗಳಿಗೆ ಅದೇ ಗುಂಪಿನ ರಕ್ತ ನೀಡಬೇಕಾಗುತ್ತದೆ.

ಜೆಜೆಬಿ ಸದಸ್ಯರ ನಡವಳಿಕೆ ತನಿಖೆಗಾಗಿ ಸಮಿತಿ ರಚನೆ

ಪುಣೆ(ಪಿಟಿಐ): ಪೋಶೆ ಕಾರು ಅಪಘಾತ ಪ್ರಕರಣ ಕುರಿತು ಬಾಲ ನ್ಯಾಯ ಮಂಡಳಿ (ಜೆಜೆಬಿ) ಸದಸ್ಯರ ನಡವಳಿಕೆ ಕುರಿತು ತನಿಖೆ ನಡೆಸಲು ತೀರ್ಮಾನಿಸಿರುವ ಮಹಾರಾಷ್ಟ್ರ ಸರ್ಕಾರ ಈ ಸಂಬಂಧ ಸಮಿತಿಯೊಂದನ್ನು ರಚಿಸಿದೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

‘ಪೋಶೆ ಕಾರು ಅಪಘಾತ ಪ್ರಕರಣಕ್ಕೆ ಸಂಬಂಧಿಸಿ ಆದೇಶಗಳನ್ನು ನೀಡುವ ವೇಳೆ ಮಂಡಳಿಯಿಂದ ನಿಯಮಗಳ ಪಾಲನೆ ಆಗಿದೆಯೇ ಎಂಬ ಬಗ್ಗೆ ಸಮಿತಿ ಪರಿಶೀಲನೆ ನಡೆಸುವುದು’ ಎಂದು ತಿಳಿಸಿದ್ದಾರೆ.

ಐದು ಸದಸ್ಯರು ಇರುವ ಸಮಿತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಚಿಸಿದೆ. ಇಲಾಖೆಯಲ್ಲಿನ ಜಿಲ್ಲಾಧಿಕಾರಿ ಶ್ರೇಣಿ ಅಧಿಕಾರಿಯೊಬ್ಬರು ಅಧ್ಯಕ್ಷರಾಗಿರುವ ಸಮಿತಿಯು ಮುಂದಿನ ವಾರ ತನ್ನ ವರದಿ ಸಲ್ಲಿಸುವ ನಿರೀಕ್ಷೆ ಇದೆ ಎಂದೂ ಅಧಿಕಾರಿ ತಿಳಿಸಿದ್ದಾರೆ.

ಮೇ 19ರ ನಸುಕಿನಲ್ಲಿ ಇಲ್ಲಿನ ಕಲ್ಯಾಣ ನಗರ ಪ್ರದೇಶದಲ್ಲಿ 17 ವರ್ಷದ ಬಾಲಕನೊಬ್ಬ ಪೋಶೆ ಕಾರನ್ನು ಅತಿವೇಗದಿಂದ ಚಲಾಯಿಸುತ್ತಿದ್ದಾಗ ನಡೆದ ಅಪಘಾತದಲ್ಲಿ ಇಬ್ಬರು ಐಟಿ ಉದ್ಯೋಗಿಗಳು ಮೃತಪಟ್ಟಿದ್ದರು. ಅಪಘಾತ ನಡೆದ ಸಂದರ್ಭದಲ್ಲಿ, ಬಾಲಕ ಮದ್ಯಪಾನ ಮಾಡಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಅಪಘಾತ ನಡೆದ ಕೆಲವೇ ಗಂಟೆಗಳಲ್ಲಿ ಬಾಲನ್ಯಾಯ ಮಂಡಳಿಯು ಬಾಲಕನಿಗೆ ಜಾಮೀನು ನೀಡಿತ್ತು. ಅಲ್ಲದೇ, ರಸ್ತೆ ಅಪಘಾತಗಳ ಕುರಿತು 300 ಪದಗಳ ಪ್ರಬಂಧ ಬರೆಯುವಂತೆಯೂ ಸೂಚಿಸಿತ್ತು.

ವೈದ್ಯರ ಅಮಾನತು

ಮುಂಬೈ (ಪಿಟಿಐ): ಪೋಶೆ ಕಾರು ಅಪಘಾತದಲ್ಲಿ ಬಂಧಿತನಾಗಿರುವ ಬಾಲಕನ ರಕ್ತದ ಮಾದರಿಯನ್ನು ಬದಲಾಯಿಸಿದ ಆರೋಪದ ಅಡಿ ಬಂಧಿತರಾಗಿರುವ ಡಾ. ಅಜಯ್ ತವಾರೆ ಅವರು ಮತ್ತು ಡಾ. ಶ್ರೀಹರಿ ಹಲ್ನೋರ್ ಅವರನ್ನು ಮಹಾರಾಷ್ಟ್ರ ಸರ್ಕಾರವು ಬುಧವಾರ ಅಮಾನತು ಮಾಡಿದೆ.

ಅಲ್ಲದೆ, ಬಿ.ಜೆ. ವೈದ್ಯಕೀಯ ಕಾಲೇಜು ಮತ್ತು ಸಸ್ಸೂನ್ ಆಸ್ಪತ್ರೆಯ ಡೀನ್ ಡಾ. ವಿನಾಯಕ ಕಾಳೆ ಅವರನ್ನು ಕಡ್ಡಾಯ ರಜೆ ಮೇಲೆ ಕಳುಹಿಸಲಾಗಿದೆ.

'ಇಂಡಿಯಾ' ಅಧಿಕಾರಕ್ಕೆ ಬಂದರೆ ₹8,500 ಜಮಾ ಆಗಲಿದೆ ಎಂಬ ವದಂತಿ

ಐಪಿಪಿಬಿ ಖಾತೆ: ಮಹಿಳೆಯರ ಲಗ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ 'ಇಂಡಿಯಾ' ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಪ್ರತಿ ತಿಂಗಳು ಅಂಚೆ ಕಚೇರಿಯಲ್ಲಿರುವ ಮಹಿಳೆಯರ ಖಾತೆಗೆ ₹8,500 ಜಮಾ ಆಗಲಿದೆ' ಎಂಬ ವದಂತಿ ಹರಡಿದ್ದರಿಂದಾಗಿ, ಬೆಂಗಳೂರಿನ ಪ್ರಧಾನ ಅಂಚೆ ಕಚೇರಿಯಲ್ಲಿ (ಜಿಪಿಒ) 'ಇಂಡಿಯನ್ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (ಐಪಿಪಿಬಿ) ಡಿಜಿಟಲ್ ಖಾತೆ' ತೆರೆಯಲು ಸಾವಿರಾರು ಮಹಿಳೆಯರು ಬುಧವಾರ ಜಮಾಯಿಸಿದ್ದರು.

'ಐಪಿಪಿಬಿ ಖಾತೆ ತೆರೆದರೆ ಈ ಖಾತೆಗೆ ಹಣ ಹಾಕಲಾಗುತ್ತದೆ ಎಂಬ ವದಂತಿ ಹಬ್ಬಿರುವುದರಿಂದ ಗುಂಪು ಗುಂಪಾಗಿ ಗ್ರಾಹಕರು ಐಪಿಪಿಬಿ ಖಾತೆ ತೆರೆಯಲು ಜಿಪಿಒ ಅಂಚೆ ಕಚೇರಿಗೆ ಬರುತ್ತಿದ್ದಾರೆ. ಇದು ಸತ್ಯಕ್ಕೆ ದೂರವಾದ ವಿಚಾರವಾಗಿದ್ದು, ಅಂಚೆ ಇಲಾಖೆಯಿಂದ ಈ ಖಾತೆಗೆ ಯಾವುದೇ ರೀತಿಯ ಹಣ ಜಮೆ ಆಗುವುದಿಲ್ಲ' ಎಂಬ ಫಲಕಗಳನ್ನು ಜಿಪಿಒ ಕಚೇರಿಯ ಆವರಣದಲ್ಲಿ ಹಾಕಲಾಗಿದೆ. ಜಿಪಿಒ ಮುಂಭಾಗದಲ್ಲಿ ಸಾವಿರಾರು ಮಹಿಳೆಯರು ಬಂದ ಕಾರಣ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು.

'ಮೇ 31ರವರೆಗೆ ಮಾತ್ರ ಐಪಿಪಿಬಿ ಖಾತೆ ತೆರೆಯಲು ಅವಕಾಶ ಇದೆಯಂತೆ. ಆದಷ್ಟು ಬೇಗ ಖಾತೆ ತೆರೆಯಲು ಪ್ರಧಾನ ಅಂಚೆ ಕಚೇರಿಗೆ ಬಂದಿರುವೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಇದೇ ಖಾತೆಗೆ ₹8,500 ಜಮೆ ಆಗಲಿದೆಯಂತೆ' ಎಂದು ಚಲ್ಲಘಟ್ಟದ ಫಾತಿಮಾ ಲಿಯಾಖತ್ ಅಲಿ ತಿಳಿಸಿದರು.

'ಪ್ರತಿದಿನ ಮುಂಜಾನೆಯೇ ಕಚೇರಿ ಮುಂಭಾಗದಲ್ಲಿ ಬಂದು ಸರತಿಯಲ್ಲಿ ನಿಂತು, ಟೋಕನ್‌ಗಳನ್ನು ಪಡೆದು ಐಪಿಪಿಬಿ ಖಾತೆಗಳನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಯಾರೋ ಹಬ್ಬಿಸಿರುವ ವದಂತಿ ನಂಬಿದ ಮಹಿಳೆಯರು ಅಂಚೆ ಕಚೇರಿಗಳ ಎದುರು ಜಮಾಯಿಸಿದ್ದಾರೆ. 'ಇದು ಸುಳ್ಳು ಸುದ್ದಿ, ನಂಬಬೇಡಿ' ಎಂದು ತಿಳಿಸಿ, ಕಚೇರಿಯ ಆವರಣದಲ್ಲಿ ಜಾಗೃತಿ ಫಲಕವನ್ನೂ ಹಾಕಿದ್ದೇವೆ. ಆದರೂ ಮಹಿಳೆಯರು ನಮ್ಮ ಮಾತು ಕೇಳುತ್ತಿಲ್ಲ' ಎಂದು ಅಂಚೆ ಇಲಾಖೆಯ ಅಧಿಕಾರಿಗಳು ತಿಳಿಸಿದರು.

'ಎರಡು ವರ್ಷಗಳ ಹಿಂದೆಯೇ ಐಪಿಪಿಬಿ ಯೋಜನೆ ಪರಿಚಯಿಸಿದ್ದೇವೆ. ಇದು ಉಳಿತಾಯ ಖಾತೆಯಾಗಿದ್ದು, ₹200 ಪಾವತಿಸಿ ಯಾರು ಬೇಕಾದರೂ ಖಾತೆ ತೆರೆಯಬಹುದು' ಎಂದು ಅವರು ವಿವರಿಸಿದರು.

'ಮೇ 6ರಿಂದ ಮೇ 29ರವರೆಗೆ ಬೆಂಗಳೂರಿನ ಜಿಪಿಒದಲ್ಲಿ 8,604 ಖಾತೆಗಳನ್ನು ತೆರೆಯಲಾಗಿದೆ. ಇದಕ್ಕಾಗಿ ವಿಶೇಷವಾಗಿ 15 ಕೌಂಟರ್‌ಗಳನ್ನು ತೆರೆಯಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ನಗರದ ಯಾವುದೇ ಅಂಚೆ ಕಚೇರಿಗೆ ಹೋದರು ಐಪಿಪಿಬಿ ಖಾತೆಯನ್ನು ತೆರೆಯುವ ಅವಕಾಶವಿದೆ. ಆದ್ದರಿಂದ, ಮಹಿಳೆಯರು ತಮ್ಮ ಅಕ್ಕ-ಪಕ್ಕದ ಅಂಚೆ ಕಚೇರಿಗಳಲ್ಲೇ ಈ ಖಾತೆಗಳನ್ನು ಮಾಡಿಸಿಕೊಳ್ಳಬೇಕು' ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ.



ಬೆಂಗಳೂರಿನ ಪ್ರಧಾನ ಅಂಚೆ ಕಚೇರಿಯಲ್ಲಿ ಐಪಿಪಿಬಿ ಖಾತೆ ತೆರೆಯಲು ಬಂದಿದ್ದ ಮಹಿಳೆಯರು. – ಪ್ರಜಾವಾಣಿ ಚಿತ್ರ

'ಲವ್ ಜಿಹಾದ್' ತಡೆಗೆ ಶ್ರೀರಾಮ ಸೇನೆಯಿಂದ ಸಹಾಯವಾಣಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಲವ್ ಜಿಹಾದ್ ಪ್ರಕರಣಗಳಿಂದ ಹಿಂದೂ ಯುವತಿಯರು, ಮಹಿಳೆಯರ ರಕ್ಷಣೆಗೆ ಶ್ರೀರಾಮಸೇನೆ ಸಂಘಟನೆಯು ಸಹಾಯವಾಣಿ ಆರಂಭಿಸಿದ್ದು, 24 ಗಂಟೆಯೂ ಸೇವೆ ಲಭ್ಯವಿರಲಿದೆ' ಎಂದು ಸಂಘಟನೆಯ ರಾಷ್ಟ್ರೀಯ ಘಟಕದ ಅಧ್ಯಕ್ಷ ಪ್ರಮೋದ ಮುತಾಲಿಕ್ ಹೇಳಿದರು.

ನಗರದಲ್ಲಿ ಬುಧವಾರ ಸಹಾಯವಾಣಿ ಸೇವೆಗೆ ಚಾಲನೆ ನೀಡಿ ಮಾತನಾಡಿದ ಅವರು, 'ವಕೀಲರು, ಮಹಿಳಾ ಆಪ್ತ ಸಮಾಲೋಚಕರನ್ನು ಒಳಗೊಂಡ ಐವರ ತಂಡವನ್ನೂ ರಚಿಸಲಾಗಿದೆ. ಅಗತ್ಯ ನೆರವು ನೀಡುತ್ತೇವೆ' ಎಂದರು.

'ಹಿಂದೂ ಯುವತಿಯರ ರಕ್ಷಣೆಯನ್ನು ನಾವು ಗುತ್ತಿಗೆ ಪಡೆದಿಲ್ಲ. ಪೋಷಕರ ಜವಾಬ್ದಾರಿಯೂ ಇದ್ದು, ಅವರು ತಮ್ಮ ಹೆಣ್ಣುಮಕ್ಕಳನ್ನು ಹದ್ದುಬಸ್ತಿನಲ್ಲಿಡಬೇಕು. ಅವರ ಕಾಲೇಜಿಗೆ ಆಗಾಗ್ಗೆ ಭೇಟಿ ನೀಡಿ, ಪರಿಶೀಲಿಸಬೇಕು' ಎಂದರು.

ಖಾಸಗಿ ಸಹಾಯವಾಣಿ ಆರಂಭಿಸಿದ್ದು ನೈತಿಕ ಪೊಲೀಸ್‌ಗಿರಿ ಅಲ್ಲವೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಹೌದು ನಮ್ಮದು ನೈತಿಕ ಪೊಲೀಸ್‌ಗಿರಿ. ಪೊಲೀಸರು, ಸರ್ಕಾರ, ರಾಜಕಾರಣಿಗಳು ವಿಫಲರಾಗಿದ್ದಾರೆ. ಪೊಲೀಸರಿದ್ದರೂ ನೇಹಾ, ಅಂಜಲಿ ಕೊಲೆ ನಡೆಯಿತು. ಹೀಗಾಗಿ ಹಿಂದೂ ಹೆಣ್ಣುಮಕ್ಕಳ ರಕ್ಷಣೆಗೆ ಮುಂದಾಗಿದ್ದೇವೆ' ಎಂದರು.

'ಈವರೆಗೆ 2,500 ಮುಸ್ಲಿಂ ಯುವತಿಯರನ್ನು ಹಿಂದೂ ಯುವಕರ ಜತೆ ಮದುವೆ ಮಾಡಿಸಿ ರಕ್ಷಣೆ ನೀಡಿ, ಉದ್ಯೋಗ ಕೊಡಿಸಿದ್ದೇವೆ' ಎಂದರು.

ಸಹಾಯವಾಣಿ ಸಂಖ್ಯೆ: 90904 43444

ಗುಂಪು ಘರ್ಷಣೆ: ಪಿಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ನಾಗಮಂಗಲ: ತಾಲ್ಲೂಕಿನ ಬೆಳ್ಳೂರಿನಲ್ಲಿ ಸೋಮವಾರ ರಾತ್ರಿ ನಡೆದ ಗುಂಪು ಘರ್ಷಣೆ ಸಂಬಂಧ ಬೆಳ್ಳೂರು ಠಾಣೆಯ ಪಿಎಸ್‌ಐ ಬಸವರಾಜು ಚಿಂಚೋಳಿ ಅವರನ್ನು ಬುಧವಾರ ಅಮಾನತು ಮಾಡಲಾಗಿದೆ.

ಮೇ 27ರಂದು ರಾತ್ರಿ 2 ಗುಂಪುಗಳಲ್ಲಿ ಗಾಯಾಳು ಅಭಿಷೇಕ್ ಕುಟುಂಬದ ಸದಸ್ಯರು ಠಾಣೆಗೆ ಬಂದಾಗ ದೂರು ಸ್ವೀಕರಿಸದೆ, ಕರ್ತವ್ಯ ಲೋಪ ತೋರಿದ ಆರೋಪದ ಮೇರೆಗೆ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಅಮಾನತು ಮಾಡಿದ್ದಾರೆ.



ಬಸವರಾಜ್ ಚಿಂಚೋಳಿ

ಮಂತ್ರಾಲಯ: ₹2.93 ಕೋಟಿ ಕಾಣಿಕೆ ಸಂಗ್ರಹ

ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ಕಾಣಿಕೆ ಹುಂಡಿಯಲ್ಲಿ 29 ದಿನಗಳ ಅವಧಿಯಲ್ಲಿ ₹2.93 ಕೋಟಿ ಸಂಗ್ರಹವಾಗಿದೆ.

₹2,85,57,126 ನಗದು, 7,54,180 ಮೌಲ್ಯದ ನಾಣ್ಯಗಳು ಸೇರಿ ಒಟ್ಟು ₹2,93,11,306 ಹಣ ಹಾಗೂ 136 ಗ್ರಾಂ ಚಿನ್ನ, 1,510 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ. ಮಂಗಳವಾರ ಆರಂಭವಾಗಿದ್ದ ಎಣಿಕೆ ಕಾರ್ಯ ಬುಧವಾರ ಪೂರ್ಣಗೊಂಡಿದೆ ಎಂದು ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ವ್ಯವಸ್ಥಾಪಕರು ತಿಳಿಸಿದ್ದಾರೆ.

'ರಸ್ತೆಯಲ್ಲಿ ನಮಾಜ್ ಮಾಡದಂತೆ ಕ್ರಮ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಇನ್ನು ಮುಂದೆ ಸಾರ್ವಜನಿಕ ರಸ್ತೆಯಲ್ಲಿ ನಮಾಜ್ ಮಾಡುವುದಕ್ಕೆ ಅವಕಾಶ ನೀಡುವುದಿಲ್ಲ. ಇಂತಹ ಘಟನೆ ಮರುಕಳಿಸುವುದನ್ನು ತಡೆಯಲು ಭದ್ರತಾ ಸಿಬ್ಬಂದಿಯನ್ನೂ ನೇಮಿಸುತ್ತೇವೆ' ಎಂದು ಇಲ್ಲಿಯ ಕಂಕನಾಡಿ ಮಸೀದಿಯ ಆಡಳಿತ ಸಮಿತಿಯ ಜಂಟಿ ಕಾರ್ಯದರ್ಶಿ ಅಬ್ದುಲ್ ಸಮದ್ ಹೇಳಿದ್ದಾರೆ.

ಕಂಕನಾಡಿ ಮಸೀದಿ ಮುಂಭಾಗ ಸಾರ್ವಜನಿಕ ರಸ್ತೆಯಲ್ಲಿ ಕೆಲವರು ನಮಾಜ್ ಮಾಡಿದ್ದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಸಂಚಾರಕ್ಕೆ ತೊಂದರೆ ಮಾಡಿದ ಆರೋಪದ ಮೇರೆಗೆ ಪೊಲೀಸರು ಅಪರಿಚಿತರ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು.

ಈ ಬಗ್ಗೆ ಮಾಧ್ಯಮಗಳಿಗೆ ಸ್ಪಷ್ಟನೆ ನೀಡಿರುವ ಅಬ್ದುಲ್ ಸಮದ್, 'ನಮಾಜ್ ಮುಗಿಯುವ ಸಮಯದಲ್ಲಿ ಬಂದ ಯಾರೋ ಹೊರಗಿನವರು, ರಸ್ತೆಯಲ್ಲೇ ಪ್ರಾರ್ಥನೆ ಸಲ್ಲಿಸಿದ್ದಾರೆ. ಅವರು ಸಮೀಪದ ಆಸ್ಪತ್ರೆಗೆ ಬಂದವರು ಅಥವಾ ಬೇರೆ ಕಡೆಯ ಕೂಲಿ ಕಾರ್ಮಿಕರು ಇರಬಹುದು. ನಾವೂ ಆಗ ನಮಾಜ್‌ನಲ್ಲಿ ತೊಡಗಿದ್ದರಿಂದ ಆಗ ಈ ವಿಚಾರ ನಮ್ಮ ಗಮನಕ್ಕೆ ಬಂದಿರಲಿಲ್ಲ'.

'ಶುಕ್ರವಾರ ಸಂಜೆ ಈ ವಿಚಾರ ನಮ್ಮ ಗಮನಕ್ಕೆ ಬಂತು. ಶನಿವಾರವೇ ಮಸೀದಿಯ ಆಡಳಿತ ಸಮಿತಿ ಈ ವಿಚಾರವನ್ನು ಚರ್ಚಿಸಿ ಕ್ರಮ ವಹಿಸಿದೆ. ಈ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗುವ ಮುನ್ನವೇ ಕದ್ರಿ ಪೊಲೀಸ್ ಠಾಣೆಯಲ್ಲಿ ನಾವು ಸ್ಪಷ್ಟನೆ ನೀಡಿದ್ದೇವೆ. ಇಂತಹ ಘಟನೆ ಮರುಕಳಿಸದಂತೆ ನೋಡಿಕೊಳ್ಳುವ ಭರವಸೆಯನ್ನೂ ನೀಡಿದ್ದೇವೆ' ಎಂದು ತಿಳಿಸಿದ್ದಾರೆ.

'ಇದರಲ್ಲಿ ವಿವಾದ ಏನೂ ಇಲ್ಲ. ನಮಾಜ್‌ನಿಂದ ಸಾರ್ವಜನಿಕರಿಗೆ ತೊಂದರೆ ಆಗದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ' ಎಂದು ಅವರು ಹೇಳಿದ್ದಾರೆ.

ಖಂಡನೆ: ರಸ್ತೆಯಲ್ಲಿ ನಮಾಜ್ ಮಾಡಿದವರ ವಿರುದ್ಧ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿದ್ದನ್ನು ದಕ್ಷಿಣ ಕನ್ನಡ ಜಿಲ್ಲಾ ವಕ್ಫ್ ಸಲಹಾ ಸಮಿತಿ ಖಂಡಿಸಿದೆ.

'ಜಿಲ್ಲೆಯಲ್ಲಿ ನಡೆಯುವ ಧಾರ್ಮಿಕ ಉತ್ಸವಗಳ ಸಂದರ್ಭದಲ್ಲಿ ಪೂರ್ತಿ ರಸ್ತೆಯನ್ನೇ ಬಂದ್ ಮಾಡಿ, ವಾಹನ ಸಂಚಾರಕ್ಕೆ ಬದಲಿ ವ್ಯವಸ್ಥೆ ಮಾಡಲಾಗುತ್ತದೆ' ಎಂದು ಸಲಹಾ ಸಮಿತಿ ಅಧ್ಯಕ್ಷ ಅಬ್ದುಲ್ ನಾಸಿರ್ ಲಕ್ಕಿಸ್ಟಾರ್ ಬೊಟ್ಟು ಮಾಡಿದ್ದಾರೆ.

'ಜಿಲ್ಲೆಯ ಸಾರ್ವಜನಿಕ ರಸ್ತೆಗಳಲ್ಲಿ ನಡೆಯುವ ಎಲ್ಲ ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿಯೂ ಪೊಲೀಸರು ಇದೇ ಕ್ರಮ ಅನುಸರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರಕರಣ ಹಿಂಪಡೆಯಲು ಒತ್ತಾಯ: ಮಸೀದಿ ಬಳಿಯ ರಸ್ತೆಯಲ್ಲಿ ನಮಾಜ್ ಮಾಡಿದ್ದಕ್ಕೆ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿರುವ ಪೊಲೀಸರ ಕ್ರಮವನ್ನು ಕಾಂಗ್ರೆಸ್‌ನ ದಕ್ಷಿಣ ಕನ್ನಡ ಜಿಲ್ಲಾ ಅಲ್ಪಸಂಖ್ಯಾತರ ಘಟಕವು ಖಂಡಿಸಿದೆ.

ಕಾಂಗ್ರೆಸ್‌ನ ದಕ್ಷಿಣ ಕನ್ನಡ ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಕೆ.ಕೆ.ಶಾಹುಲ್ ಹಮೀದ್ ನೇತೃತ್ವದ ನಿಯೋಗವು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ಅವರನ್ನು ಬುಧವಾರ ಭೇಟಿ ಮಾಡಿ ಈ ಪ್ರಕರಣವನ್ನು ವಾಪಸ್ ಪಡೆಯುವಂತೆ ಆಗ್ರಹಿಸಿದೆ.

ರಾಜ್ಯದಲ್ಲಿ 7 ದಿನ ಸಾಧಾರಣ ಮಳೆ

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರದಿಂದ ಏಳು ದಿನಗಳು ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ಎಲ್ಲ ಜಿಲ್ಲೆಗಳು, ದಕ್ಷಿಣ ಒಳನಾಡಿನ ಬಹುತೇಕ ಹಾಗೂ ಉತ್ತರ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಮಳೆಯಾಗುವ ಸಂಭವವಿದೆ. ಮುಂದಿನ ಎರಡು ದಿನ ಕೆಲ ಪ್ರದೇಶಗಳಲ್ಲಿ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಮುಂದಿನ ಏಳು ದಿನಗಳು ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಕೆಆರ್‌ಎಸ್: 83.7 ಅಡಿ ನೀರು ಸಂಗ್ರಹ


ಶ್ರೀರಂಗಪಟ್ಟಣ: ತಾಲ್ಲೂಕಿನ ಕೆಆರ್‌ಎಸ್ ಜಲಾಶಯಕ್ಕೆ ಕಳೆದ ಒಂದು ವಾರದ ಈಚೆಗೆ ತುಸು ನೀರು ಹರಿದು ಬಂದಿದ್ದು, ಜಲಾಶಯದ ನೀರಿನ ಮಟ್ಟ ಬುಧವಾರ ಸಂಜೆ ವೇಳೆಗೆ 83.7 ಅಡಿ (ಗರಿಷ್ಠ 124.80 ಅಡಿ)ಗೆ ತಲುಪಿದೆ.

ಒಂದು ವಾರದ ಹಿಂದೆ ಜಲಾಶಯದಲ್ಲಿ 79 ಅಡಿಗಳಷ್ಟು ನೀರಿತ್ತು. ಕಾವೇರಿ ಕಣಿವೆಯಲ್ಲಿ ಮುಂಗಾರು ಪೂರ್ವ ಮಳೆ ಸುರಿದಿದ್ದು, ಜಲಾಶಯಕ್ಕೆ 4.7 ಅಡಿಗಳಷ್ಟು ನೀರು ಹರಿದುಬಂದಿದೆ. ಜಲಾಶಯಕ್ಕೆ 1,798 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಕುಡಿಯುವ ಉದ್ದೇಶಕ್ಕೆ ನಾಲೆ ಮತ್ತು ನದಿಯ ಮೂಲಕ 542 ಕ್ಯೂಸೆಕ್ ನೀರನ್ನು ಹರಿಸಲಾಗುತ್ತಿದೆ.

'ಸದ್ಯ ಜಲಾಶಯದಲ್ಲಿ 12.51 ಟಿಎಂಸಿ ಅಡಿ ನೀರಿನ ಸಂಗ್ರಹವಿದೆ' ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

'ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 79.72 ಅಡಿಗಳಷ್ಟು ನೀರಿನ ಸಂಗ್ರಹವಿತ್ತು. ಅಣೆಕಟ್ಟೆಗೆ 344 ಕ್ಯೂಸೆಕ್ ಒಳ ಹರಿವು ಇದ್ದು, 2991 ಕ್ಯೂಸೆಕ್ ಹೊರ ಹರಿವು ದಾಖಲಾಗಿತ್ತು. ಒಟ್ಟು 10.66 ಟಿಎಂಸಿ ಅಡಿ ನೀರಿನ ಸಂಗ್ರಹ ಇತ್ತು' ಎಂದು ಹೇಳಿದ್ದಾರೆ.

ಷೇರುಪೇಟೆ ವಹಿವಾಟು 667



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,888
ಇಂದಿನ ಅಂತ್ಯ	22,704
▼	183
ದಿನದ ಕನಿಷ್ಠ	22,685

ವಿನಿಮಯ ದರ

$ ಡಾಲರ್	83.39
£ ಪೌಂಡ್	106.36
€ ಯುರೊ	90.46
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹570

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹950 (950)
ಸೂರ್ಯಕಾಂತಿ (ರಿಫೈನ್ಡ್)	₹957 (950)
ಪಾಮೋಲಿನ್	₹905 (902)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9000-9000
ಕೆ.ಆರ್.ಪೇಟೆ	₹9450-9450
ಮಧುಗಿರಿ	₹7400-9000
ಮಳವಳ್ಳಿ	₹6800-6800
ತಿಪಟೂರು	₹8100-10004

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹185
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹170

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹305-470
ದ್ವಿತಳಿ (ಬಿ.ವಿ)	₹340-619

ಪೇಟಿಎಂ ಷೇರು ಖರೀದಿ ತಳ್ಳಿಹಾಕಿದ ಅದಾನಿ

ನವದೆಹಲಿ (ಪಿಟಿಐ): 'ಅದಾನಿ ಸಮೂಹಕ್ಕೆ ತನ್ನ ಕಂಪನಿಯ ಷೇರುಗಳನ್ನು ಮಾರಾಟ ಮಾಡುವ ಕುರಿತಂತೆ ಯಾವುದೇ ಚರ್ಚೆ ನಡೆದಿಲ್ಲ' ಎಂದು ಪೇಟಿಎಂನ ಮಾತೃಸಂಸ್ಥೆಯಾದ ಒನ್‌97 ಕಮ್ಯುನಿಕೇಷನ್ ಬುಧವಾರ ಸ್ಪಷ್ಟಪಡಿಸಿದೆ.

ಅದಾನಿ ಸಮೂಹ ಕೂಡ ಇದಕ್ಕೆ ಪ್ರತಿಕ್ರಿಯಿಸಿದ್ದು, 'ಷೇರು ಖರೀದಿ ಕುರಿತ ಸುದ್ದಿಯು ಸತ್ಯಕ್ಕೆ ದೂರವಾದುದು' ಎಂದು ಹೇಳಿದೆ.

ಉದ್ಯಮಿ ಗೌತಮ್ ಅದಾನಿ ಅವರು ಡಿಜಿಟಲ್ ಪಾವತಿ ವಲಯಕ್ಕೆ ಪ್ರವೇಶಿಸಲು ನಿರ್ಧರಿಸಿದ್ದಾರೆ. ಹಾಗಾಗಿ, ಒನ್‌97 ಕಮ್ಯುನಿಕೇಷನ್‌ನ ಬಹುಪಾಲು ಷೇರುಗಳ ಖರೀದಿಗೆ ಮುಂದಾಗಿದ್ದಾರೆ. ಈ ಕುರಿತು ಸಿಇಒ ವಿಜಯ್‌ಶೇಖರ್ ಶರ್ಮಾ ಜೊತೆಗೆ ಚರ್ಚೆ ನಡೆಸಿದ್ದಾರೆ ಎಂದು ಹೇಳಲಾಗಿತ್ತು.

ಪೇಟಿಎಂ ಷೇರಿನ ಮೌಲ್ಯ ಏರಿಕೆ: ಅದಾನಿ ಸಮೂಹವು ಷೇರುಗಳನ್ನು ಖರೀದಿಸಲಿದೆ ಎಂಬ ವರದಿಯಿಂದಾಗಿ ಒನ್‌97 ಕಮ್ಯುನಿಕೇಷನ್ ಷೇರಿನ ಮೌಲ್ಯದಲ್ಲಿ ಶೇ 5ರಷ್ಟು ಏರಿಕೆ ಆಗಿದೆ. ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಬೆಲೆ ₹359ಕ್ಕೆ ಮುಟ್ಟಿದೆ.

ಅಡಿಕೆ ಧಾರಣೆ

ಬಂಟ್ವಾಳ		ಹಳೆಚಾಲಿ	37899-39509	ಹಳೆಚಾಲಿ	35899-35899
ಕೋಕ	18000-28500	ಹೊಸಚಾಲಿ	32009-35509	ಕೆಂಪುಗೋಟು	27089-29689
ಹೊಸತು	28500-38000	ಶಿವಮೊಗ್ಗ		ರಾಶಿ	43619-49529
ಹಳತು	38000-46500	ಬೆಟ್ಟೆ	44444-55100	ತಟ್ಟಿಬೆಟ್ಟೆ	35000-39100
ಕಾರ್ಕಳ		ಗೊರಬಲು	24099-37099	ಶಿರಸಿ	
ಹೊಸತು	25000-38000	ರಾಶಿ	33669-53599	ಬೆಟ್ಟೆ	35109-47199
ಹಳತು	30000-46500	ಸರಕು	56109-77596	ಬಿಳಿಗೋಟು	23309-30198
ಕುಮಟ		ಸಿದ್ದಾಪುರ		ಚಾಲಿ	33208-38001
ಬೆಟ್ಟೆ	33300-37109	ಬಿಳಿಗೋಟು	27319-31900	ಕೆಂಪುಗೋಟು	22348-27121
ಚಿಪ್ಪು	26509-29999	ಚಾಲಿ	34409-36749	ರಾಶಿ	45609-49999
ಕೋಕ	14069-26999	ಕೋಕ	25839-28899		
ಫ್ಯಾಕ್ಟರಿ	11509-20829				

14 ವರ್ಷದ ಬಳಿಕ ಎಸ್ ಆ್ಯಂಡ್‌ಪಿ ಯಿಂದ ರೇಟಿಂಗ್ಸ್ ಪರಿಷ್ಕರಣೆ

ಆರ್ಥಿಕ ಮುನ್ನೋಟ ಧನಾತ್ಮಕ

ಮುಂಬೈ (ಪಿಟಿಐ): ಜಾಗತಿಕ ಮಾನದಂಡ ಸಂಸ್ಥೆಯಾದ ಎಸ್ ಆ್ಯಂಡ್ ಪಿ ಗ್ಲೋಬಲ್ ರೇಟಿಂಗ್ಸ್, 14 ವರ್ಷಗಳ ಬಳಿಕ ಭಾರತದ ಆರ್ಥಿಕ ಮುನ್ನೋಟದ ರೇಟಿಂಗ್ಸ್ ಅನ್ನು ಪರಿಷ್ಕರಿಸಿದ್ದು, 'ಧನಾತ್ಮಕ' ಸ್ಥಾನ ನೀಡಿದೆ.

ಕೇಂದ್ರ ಸರ್ಕಾರದ ವಿತ್ತೀಯ ನಿರ್ವಹಣೆಗೆ ಮೆಚ್ಚುಗೆ ಸೂಚಿಸಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿನ ಆರ್ಥಿಕತೆಯ ಬೆಳವಣಿಗೆ, ಸಾರ್ವಜನಿಕ ವೆಚ್ಚದಲ್ಲಿನ ಸುಧಾರಣೆ ಹಾಗೂ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಹೊಸ ಸರ್ಕಾರವು ಹಣಕಾಸು ನೀತಿ ಮತ್ತು ಸುಧಾರಣೆ ಕಾಯ್ದುಕೊಳ್ಳಲಿದೆ ಎಂಬ ಭರವಸೆಯೊಂದಿಗೆ ರೇಟಿಂಗ್ಸ್‌ನಲ್ಲಿ ಬದಲಾವಣೆ ಮಾಡಿದೆ.

ಕೇಂದ್ರ ಸರ್ಕಾರಕ್ಕೆ ₹2.11 ಲಕ್ಷ ಕೋಟಿ ಲಾಭಾಂಶ ನೀಡಲು ಭಾರತೀಯ ರಿಸರ್ವ್ ಬ್ಯಾಂಕ್ ಒಪ್ಪಿಗೆ ನೀಡಿದ ಒಂದು ವಾರದ ಬಳಿಕ ಈ ವರದಿ ಬಿಡುಗಡೆಯಾಗಿದೆ.



'ವಿತ್ತೀಯ ಶಿಸ್ತು ಕಾಯ್ದುಕೊಳ್ಳುವಲ್ಲಿ ಭಾರತಕ್ಕೆ ದೀರ್ಘಕಾಲದಿಂದ 'ಬಿಬಿಬಿ ಮೈನಸ್' (ನಕಾರಾತ್ಮಕ) ರೇಟಿಂಗ್ಸ್ ನೀಡಲಾಗಿತ್ತು. 2010ರಲ್ಲಿ ಇದನ್ನು ಪರಿಷ್ಕರಿಸಿ 'ಎ-3' (ಸ್ಥಿರ) ರೇಟಿಂಗ್ಸ್ ನೀಡಲಾಯಿತು. ಸರ್ಕಾರದ ವೆಚ್ಚದ ಪ್ರಮಾಣದಲ್ಲಿ ಏರಿಕೆ ಹಾಗೂ ಆರ್ಥಿಕ ಸದೃಢತೆಯಿಂದಾಗಿ ಈಗ ಪರಿಷ್ಕರಿಸಲಾಗಿದೆ' ಎಂದು ಸಂಸ್ಥೆಯು ತಿಳಿಸಿದೆ.

'ಸರ್ಕಾರವು ತನ್ನ ಸಾಲದ ಪ್ರಮಾಣವನ್ನು ತಗ್ಗಿಸಿಕೊಂಡು ಬಡ್ಡಿ ಹೊರೆಯನ್ನು ಕಡಿಮೆ ಮಾಡಿಕೊಳ್ಳಬೇಕಿದೆ. ಆ ಮೂಲಕ ದೇಶದ ಆರ್ಥಿಕತೆಯ ಚೇತರಿಕೆಗೆ ಮತ್ತಷ್ಟು ಬಲ ನೀಡಬೇಕಿದೆ. ಈ ನಿಟ್ಟಿನಲ್ಲಿ ಸದೃಢವಾದ ಹಣಕಾಸು ನೀತಿಗಳನ್ನು ಅಳವಡಿಸಿಕೊಂಡರೆ ಮುಂದಿನ ಎರಡು ವರ್ಷಗಳಲ್ಲಿ ಭಾರತದ ರೇಟಿಂಗ್ಸ್ ಅನ್ನು ಮತ್ತೆ ಪರಿಷ್ಕರಿಸಲಾಗುವುದು' ಎಂದು ಅಮೆರಿಕ ಮೂಲದ ಈ ಸಂಸ್ಥೆ ಹೇಳಿದೆ.

ಭಾರತಕ್ಕೆ ಪ್ರಯೋಜನ ಏನು?

ದೇಶದ ಹೂಡಿಕೆ ವಲಯದಲ್ಲಿನ ಅಪಾಯದ ಸ್ಥಿತಿ ಅರಿಯಲು ಈ ರೇಟಿಂಗ್ಸ್ ನಿರ್ಣಾಯಕವಾಗಿದೆ. ಜೊತೆಗೆ, ದೇಶದ ಸಾಲ ಮರುಪಾವತಿ ಸಾಮರ್ಥ್ಯ ಮತ್ತು ಸಾಲದ ಅರ್ಹತೆ ನಿರ್ಧರಿಸುವ ಮಾಪಕವೂ ಆಗಿದೆ. ರೇಟಿಂಗ್ಸ್‌ನ ಸ್ಥಿತಿಗತಿ ಆಧರಿಸಿಯೇ ಹೂಡಿಕೆದಾರರು ಬಂಡವಾಳ ತೊಡಗಿಸುತ್ತಾರೆ.

ಕೋವಿಡ್ ಸಾಂಕ್ರಾಮಿಕದ ಬಳಿಕ ಭಾರತದ ಜಿಡಿಪಿ ಬೆಳವಣಿಗೆಯು ನಿರೀಕ್ಷೆ ಮೀರಿ ಬೆಳವಣಿಗೆ ಕಂಡಿದೆ. ಎಸ್‌ಆ್ಯಂಡ್‌ಪಿ ಗ್ಲೋಬಲ್ ರೇಟಿಂಗ್ಸ್ ಸಂಸ್ಥೆಯು 2024-25ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 6.8ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದೆ. ಜಾಗತಿಕ ಆರ್ಥಿಕತೆಯ ನಿಧಾನಗತಿ ನಡುವೆಯೂ ಭಾರತದ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿದೆ ಎಂದು ಹೇಳಿದೆ.

ಫಿಚ್ ರೇಟಿಂಗ್ಸ್ ಸಂಸ್ಥೆ ಹಾಗೂ ಮೂಡಿಸ್ ಇನ್ವೆಸ್ಟರ್ಸ್ ಸರ್ವಿಸಸ್ ಸಂಸ್ಥೆಯು ಭಾರತದ ಆರ್ಥಿಕ ಮುನ್ನೋಟವನ್ನು 'ಸ್ಥಿರ' ಮಟ್ಟದಲ್ಲಿಯೇ ಇರಿಸಿವೆ.

ಬೆಳ್ಳಿ ಧಾರಣೆ ಸಾರ್ವಕಾಲಿಕ ಗರಿಷ್ಠ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸತತ ಮೂರನೇ ದಿನವಾದ ಬುಧವಾರವೂ ಬೆಳ್ಳಿ ದರ ಏರಿಕೆಯಾಗಿದ್ದು, ಪ್ರತಿ ಕೆ.ಜಿ ಧಾರಣೆಯು ₹1 ಲಕ್ಷದತ್ತ ಸಮೀಪಿಸುತ್ತಿದೆ.

ಕೆ.ಜಿ ಬೆಳ್ಳಿ ದರವು ₹1,150 ಏರಿಕೆಯಾಗಿದ್ದು, ₹97,100ಕ್ಕೆ ತಲುಪಿದೆ. ಇದು ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿದೆ. ಚಿನ್ನದ ದರವು 10 ಗ್ರಾಂ ಗೆ ₹250 ಹೆಚ್ಚಳವಾಗಿ ₹73,200ಕ್ಕೆ ಮುಟ್ಟಿದೆ.

'ಕೆಂಪು ಸಮುದ್ರದ ಬಿಕ್ಕಟ್ಟು ಮುಂದುವರಿದಿದೆ. ಹಾಗಾಗಿ, ಹೂಡಿಕೆದಾರರು ಸುರಕ್ಷಿತ ಹೂಡಿಕೆಯತ್ತ ಮುಖ ಮಾಡಿದ್ದಾರೆ. ಹಾಗಾಗಿ, ಚಿನ್ನದ ದರವು ಏರಿಕೆಯಾಗುತ್ತಿದೆ' ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

₹604 ಕೋಟಿ ಕಬ್ಬಿನ ಬಿಲ್ ಬಾಕಿ

• ಸಂತೋಷ ಈ. ಚಿನಗುಡಿ

ಬೆಳಗಾವಿ: ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ರೈತರಿಗೆ ₹604.36 ಕೋಟಿ ಬಿಲ್ ಬಾಕಿ ಉಳಿಸಿಕೊಂಡಿದ್ದು, ಪೂರ್ವ ಮುಂಗಾರು ಕೃಷಿ ಚಟುವಟಿಕೆ ಕೈಗೊಳ್ಳಲು ಬೆಳೆಗಾರರಿಗೆ ತೊಂದರೆಯಾಗಿದೆ.

ಈ ಹಂಗಾಮಿನಲ್ಲಿ 76 ಕಾರ್ಖಾನೆಗಳು 586 ಲಕ್ಷ ಟನ್ ಕಬ್ಬು ನುರಿಸಿವೆ. 52.91 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿದ್ದು, 9.04 ರಿಕವರಿ ಬಂದಿದೆ. ಬೆಳೆಗಾರರಿಗೆ ಪಾವತಿಸಬೇಕಿರುವ ಒಟ್ಟು ಮೊತ್ತ ₹19,899.14 ಕೋಟಿ ಆಗಿದ್ದು, ಈ ಪೈಕಿ ಮೇ 15ರ ವರೆಗೆ ಮೊದಲ ಕಂತಿನಲ್ಲಿ ರೈತರಿಗೆ ₹19,294.78 ಕೋಟಿ ಪಾವತಿಸಲಾಗಿದೆ. ಇನ್ನೂ ಶೇ 3ರಷ್ಟು ಹಣ ಬಾಕಿ ಇದೆ.

₹2,920 ಇದ್ದ ಎಫ್‌ಆರ್‌ಪಿ ದರವನ್ನು ಈ ಬಾರಿ ₹3,150ಕ್ಕೆ ಏರಿಸಲಾಗಿದೆ. ಮಾರ್ಚ್ ಕೊನೆಯ ವಾರದಲ್ಲಿ ಎಲ್ಲ ಕಾರ್ಖಾನೆಗಳು ಹಂಗಾಮು ಮುಗಿಸಿವೆ. ಡಿಸೆಂಬರ್, ಜನವರಿಯಲ್ಲಿ ಸಾಗಿಸಿದ ಕಬ್ಬಿನ ಹಣ ಪಾವತಿಸಿವೆ. ಆದರೆ, ಫೆಬ್ರುವರಿಯಲ್ಲಿ ರೈತರು ಸಾಗಿಸಿದ ಕಬ್ಬಿನ ಬಾಕಿ ಹಣ ಸಂದಾಯವಾಗಿಲ್ಲ.



ಬೆಳಗಾವಿ ಜಿಲ್ಲೆಯಲ್ಲಿ ₹216.55 ಕೋಟಿ ಬಾಕಿ ಇದೆ. ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆ ₹86.75 ಕೋಟಿ, ಅಥಣಿ ಶುಗರ್ಸ್, ಬೆಲಗಾಮ್ ಶುಗರ್ಸ್ ಸುಮಾರು ₹13 ಕೋಟಿ, ಮಲಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ, ಸತೀಶ ಶುಗರ್ಸ್, ಸಂಗಮ ಸಕ್ಕರೆ ಕಾರ್ಖಾನೆ, ಸೋಮೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ, ವಿಶ್ವರಾಜ್ ಶುಗರ್ಸ್‌ಗಳು ತಲಾ ₹20 ಕೋಟಿ ಬಾಕಿ ಉಳಿಸಿಕೊಂಡಿವೆ.

ಉಳಿದಂತೆ ಬೀದರ್ ಜಿಲ್ಲೆಯಲ್ಲಿ ₹75 ಕೋಟಿ, ಬಾಗಲಕೋಟೆ ಜಿಲ್ಲೆಯಲ್ಲಿ ₹39 ಕೋಟಿ ಮತ್ತು ವಿಜಯಪುರ ಜಿಲ್ಲೆಯಲ್ಲಿನ ಕಾರ್ಖಾನೆಗಳು ₹16 ಕೋಟಿ ಬಾಕಿ ಉಳಿಸಿಕೊಂಡಿವೆ.

> **ಈಗಾಗಲೇ ಶೇ 97ರಷ್ಟು ಹಣ ಪಾವತಿಯಾಗಿದೆ. ಮೇ 31ರೊಳಗೆ ಉಳಿದ ಹಣ ಪಾವತಿಸಬೇಕಿದೆ. ಬಾಕಿ ಉಳಿಸಿದರೆ ಕಾರ್ಖಾನೆಗೆ ನೋಟಿಸ್ ನೀಡಲಾಗುವುದು**
> **ಎಂ.ಆರ್. ರವಿಕುಮಾರ್,** ಸಕ್ಕರೆ ಆಯುಕ್ತ, ಬೆಳಗಾವಿ

ಸೆನ್ಸೆಕ್ಸ್ 667, ನಿಫ್ಟಿ 183 ಅಂಶ ಇಳಿಕೆ


ಮುಂದುವರಿದ ಕರಡಿ ಓಟ

ಮುಂಬೈ/ ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಬುಧವಾರವೂ ಕರಡಿ ಕುಣಿತ ಜೋರಾಗಿತ್ತು.

ಲೋಕಸಭಾ ಚುನಾವಣಾ ಫಲಿತಾಂಶದ ಅನಿಶ್ಚಿತತೆಯಿಂದಾಗಿ ಹೂಡಿಕೆದಾರರು ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಷೇರುಗಳ ಮಾರಾಟಕ್ಕೆ ಮುಂದಾದರು. ಇದರಿಂದ ಸೂಚ್ಯಂಕಗಳು ಇಳಿಕೆಯ ಹಾದಿ ಹಿಡಿದವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 667 ಅಂಶ ಇಳಿಕೆ (ಶೇ 0.89ರಷ್ಟು) ಕಂಡು 74,502 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ಒಂದು ಹಂತದಲ್ಲಿ 715 ಅಂಶ ಇಳಿಕೆ ಕಂಡಿತ್ತು.

ಎರಡು ದಿನಗಳ ಹಿಂದೆ ಸಾರ್ವಕಾಲಿಕ ಗರಿಷ್ಠ ಮಟ್ಟ ದಾಖಲಿಸಿದ್ದ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 183 ಅಂಶ ಇಳಿಕೆ (ಶೇ 0.80ರಷ್ಟು) ಕಂಡು, 22,704 ಅಂಶಗಳಲ್ಲಿ ಸ್ಥಿರಗೊಂಡಿತು.



ಸೆನ್ಸೆಕ್ಸ್ ಗುಚ್ಛದಲ್ಲಿನ ಟೆಕ್ ಮಹೀಂದ್ರ, ಐಸಿಐಸಿಐ ಬ್ಯಾಂಕ್, ಬಜಾಜ್ ಫಿನ್‌ಸರ್ವ್, ಎಚ್‌ಡಿಎಫ್‌ಸಿ ಬ್ಯಾಂಕ್, ಅಲ್ಟ್ರಾ ಟೆಕ್ ಸಿಮೆಂಟ್, ಎಕ್ಸಿಸ್ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಇನ್ಫೊಸಿಸ್ ಷೇರಿನ ಮೌಲ್ಯವು ಕುಸಿತ ಕಂಡಿದೆ. ಪವರ್ ಗ್ರಿಡ್, ಸನ್ ಫಾರ್ಮಾ, ನೆಸ್ಲೆ ಇಂಡಿಯಾ, ಐಟಿಸಿ ಮತ್ತು ಭಾರ್ತಿ ಏರ್‌ಟೆಲ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಸತತ ನಾಲ್ಕು ದಿನಗಳ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ಕಂಡಿರುವುದರಿಂದ ಹೂಡಿಕೆದಾರರ ಸಂಪತ್ತು ₹5.12 ಲಕ್ಷ ಕೋಟಿಯಷ್ಟು ಕರಗಿದೆ.

'ಈ ತಿಂಗಳ ಅಂತ್ಯಕ್ಕೆ ಅಮೆರಿಕದ ಫೆಡರಲ್ ರಿಸರ್ವ್‌ನ ಆದ್ಯತೆಯ ಹಣದುಬ್ಬರ ಮಾಪಕವಾದ ವೈಯಕ್ತಿಕ ಬಳಕೆ ವೆಚ್ಚದ (ಪಿಸಿಇ) ಬೆಲೆ ಸೂಚ್ಯಂಕದ ವರದಿ ಬಿಡುಗಡೆಯಾಗಲಿದೆ. ಹೂಡಿಕೆದಾರರಿಗೆ ಈ ಸೂಚ್ಯಂಕ ಏರಿಕೆಯಾಗುವ ಸುಳಿವು ಸಿಕ್ಕಿದೆ. ಹಾಗಾಗಿ, ಷೇರುಗಳ ಮಾರಾಟಕ್ಕೆ ಮುಂದಾಗಿದ್ದಾರೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್ ತಿಳಿಸಿದೆ.

ಬಿಎಸ್‌ಇ ಮಿಡ್‌ಕ್ಯಾಪ್ ಶೇ0.38ರಷ್ಟು ಇಳಿಕೆಯಾದರೆ, ಸ್ಮಾಲ್‌ಕ್ಯಾಪ್ ಶೇ 0.23ರಷ್ಟು ಏರಿಕೆ ದಾಖಲಿಸಿದೆ.

ಬ್ಯಾಂಕಿಂಗ್ (ಶೇ 1.37), ಹಣಕಾಸು ಸೇವೆ (ಶೇ 1.32), ತೈಲ ಮತ್ತು ಅನಿಲ (ಶೇ 0.95), ರಿಯಾಲ್ಟಿ (ಶೇ 0.88) ಮತ್ತು ಸೇವೆ ಸೂಚ್ಯಂಕ (ಶೇ 0.60ರಷ್ಟು) ಇಳಿಕೆ ಕಂಡಿದೆ. ಹೆಲ್ತ್‌ಕೇರ್, ಕೈಗಾರಿಕೆ, ಟೆಲಿಕಮ್ಯುನಿಕೇಷನ್, ಬಂಡವಾಳ ಸರಕು, ಲೋಹ ಮತ್ತು ವಿದ್ಯುತ್ ಸೂಚ್ಯಂಕಗಳು ಗಳಿಕೆ ಕಂಡಿವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.88ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರಲ್‌ಗೆ 84.94 ಡಾಲರ್‌ಗೆ ಮುಟ್ಟಿದೆ.

ಮುಂಬೈ ಧಾರಣೆ

ಶೇಂಗಾ
29-5-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	920 (915)
ಪಾಮ್ ವಾರದ ಡೆಲಿವರಿ	903 (900)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (890)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹72,150 (72,200)
ಬೆಳ್ಳಿ ಕೆ.ಜಿ ₹94,100 (93,500)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎವರೆಸ್ಟ್‌ನಲ್ಲಿ ಕಸದ ರಾಶಿ: ಕಾಮಿ ರೀಟಾ ಕಳವಳ

ಕಠ್ಮಂಡು (ಎಪಿ): ವಿಶ್ವದ ಅತಿ ಎತ್ತರದ ಶಿಖರ ಮೌಂಟ್ ಎವರೆಸ್ಟ್‌ನಲ್ಲಿ ಕಸದ ರಾಶಿ ಹೆಚ್ಚಾಗುತ್ತಿದೆ ಎಂದು ಪ್ರಸಿದ್ಧ ಶೆರ್ಪಾ ಮಾರ್ಗದರ್ಶಿ ಕಾಮಿ ರೀಟಾ ಅವರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

1953ರಲ್ಲಿ ನ್ಯೂಜಿಲೆಂಡ್‌ನ ಎಡ್ಮಂಡ್ ಹಿಲರಿ ಮತ್ತು ನೇಪಾಳಿ ಶೆರ್ಪಾ ತೇನ್‌ಜಿಂಗ್ ನಾರ್ಗೆ ಅವರು ಮೊದಲ ಬಾರಿ ಮೌಂಟ್ ಎವರೆಸ್ಟ್ ಅನ್ನು ಯಶಸ್ವಿಯಾಗಿ ಆರೋಹಣ ಮಾಡಿದ ನೆನಪಿಗಾಗಿ ನೇಪಾಳ ಸರ್ಕಾರ ಬುಧವಾರ 'ಮೌಂಟ್ ಎವರೆಸ್ಟ್ ದಿನ'ವನ್ನು ಆಚರಿಸಿತು. ಈ ವೇಳೆ 30 ಬಾರಿ ಮೌಂಟ್ ಎವರೆಸ್ಟ್ ಆರೋಹಣ ಮಾಡಿ ದಾಖಲೆ ಬರೆದಿರುವ ಶೆರ್ಪಾ ಕಾಮಿ ರೀಟಾ ಅವರಿಗೆ ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ ಅವರು ಗೌರವ ಅಭಿನಂದನೆ ಸಲ್ಲಿಸಿದ್ದಾರೆ.

ಇಸ್ರೇಲ್ ಜತೆಗಿನ ಸಂಬಂಧ ಅಬಾಧಿತ: ಅಮೆರಿಕ

ವಾಷಿಂಗ್ಟನ್ (ಎಪಿ): ಗಾಜಾದ ದಕ್ಷಿಣ ಭಾಗದ ರಫಾ ನಗರವನ್ನು ಗುರಿಯಾಗಿಸಿ ಇಸ್ರೇಲ್ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ ನಾಗರಿಕರು ಮೃತಪಟ್ಟಿರುವ ಘಟನೆಯನ್ನು ಅಮೆರಿಕದ ಶ್ವೇತ ಭವನ ಖಂಡಿಸಿದೆ. ಆದರೆ, ಇಸ್ರೇಲ್ ಜೊತೆಗಿನ ತಮ್ಮ ಸಂಬಂಧದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದೆ.

ರಾಷ್ಟ್ರೀಯ ಭದ್ರತಾ ಕೌನ್ಸಿಲ್‌ನ ವಕ್ತಾರ ಜಾನ್ ಕಿರ್ಬಿ, 'ಬೈಡನ್ ಹಾಕಿದ ಕೆಂಪು ಗೆರೆಯನ್ನು ಇಸ್ರೇಲ್ ದಾಟಿಲ್ಲ.ರಫಾನಗರದಲ್ಲಿಇಸ್ರೇಲ್‌ಪೂರ್ಣಪ್ರಮಾಣದ ದಾಳಿ ನಡೆಸುವುದಿಲ್ಲ ಎಂಬಂತೆ ಅಮೆರಿಕಕ್ಕೆ ಕಂಡುಬರುತ್ತಿದೆ. ರಫಾದಲ್ಲಿರುವ ಜನನಿಬಿಡ ಕೇಂದ್ರಗಳನ್ನು ಗುರಿಯಾಗಿಸಿ ದಾಳಿ ಮಾಡಿಲ್ಲ' ಎಂದಿದ್ದಾರೆ.

'ಈ ದಾಳಿಯ ಕುರಿತು ಇಸ್ರೇಲ್ ನಡೆಸುತ್ತಿರುವ ತನಿಖೆಯ ಫಲಿತಾಂಶಗಳ ಮೇಲೆ ಅಮೆರಿಕ ನಿಗಾ ವಹಿಸಿದೆ. ದಾಳಿಯಲ್ಲಿ ಹಮಾಸ್‌ನ ಇಬ್ಬರು ಹಿರಿಯ ಮುಖ್ಯಸ್ಥರು ಹತರಾಗಿದ್ದಾರೆ. ಮುಗ್ಧ ಜನರ ರಕ್ಷಣೆ ಗಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಇಸ್ರೇಲ್‌ಗೆ ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇವೆ' ಎಂದು ತಿಳಿಸಿದರು.

ರಾಜಕೀಯದಲ್ಲಿ ಮಧ್ಯಪ್ರವೇಶಿಸಲು ಅವಕಾಶ ನೀಡಿಲ್ಲ: ಅಲ್ವಿ

'ಸೇನೆಗೆ ಎಂದಿಗೂ ಮಣೆ ಹಾಕಿಲ್ಲ'

ಕರಾಚಿ (ಪಿಟಿಐ): 'ರಾಜಕೀಯದಲ್ಲಿ ಮಧ್ಯ ಪ್ರವೇಶಿಸುವಂತೆ ನಮ್ಮ ಪಕ್ಷ ಎಂದಿಗೂ ಸೇನೆಯನ್ನು ಆಹ್ವಾನಿಸಿಲ್ಲ' ಎಂದು ಪಾಕಿಸ್ತಾನದ ಮಾಜಿ ಅಧ್ಯಕ್ಷ ಮತ್ತು ಪಾಕಿಸ್ತಾನ ತೆಹ್ರೀಕ್-ಇ-ಇನ್ಸಾಫ್ (ಪಿಟಿಐ) ಪಕ್ಷದ ನಾಯಕ ಆರಿಫ್ ಅಲ್ವಿ ಹೇಳಿದ್ದಾರೆ.



ಆರಿಫ್ ಅಲ್ವಿ

'ಅರ್ಥಪೂರ್ಣ ಮಾತುಕತೆ ನಡೆಸಲು ಸಾಧ್ಯವಿರುವ ಏಕೈಕ ಮಧ್ಯಸ್ಥಗಾರ ಸೇನೆ ಎನ್ನುವುದೇನೋ ನಿಜ' ಎಂಬುದನ್ನು ಒಪ್ಪಿಕೊಂಡಿರುವ ಅವರು, ಈ ಕುರಿತು ನಿರ್ಧರಿಸುವ ಅಧಿಕಾರ ಅದಕ್ಕಿದೆ ಎಂದಿದ್ದಾರೆ.

ಇಲ್ಲಿನ ಪ್ರೆಸ್‌ಕ್ಲಬ್‌ನ ಹೊರಗೆ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇದನ್ನು ನಿರ್ಧರಿಸುವ ಅಧಿಕಾರ ಹೊಂದಿರುವವರ ಜತೆಗೆ ಮಾತನಾಡಲು ಇಮ್ರಾನ್ ಖಾನ್ ಬಯಸುತ್ತಾರೆ' ಎಂದು ಹೇಳಿದ್ದಾರೆ.

'ಆದರೆ, ನಮೂನೆ 47 ಮೂಲಕ ಅಧಿಕಾರಕ್ಕೆ ಬಂದವರ ಕೊಡುಗೆ ಏನು? ಅವರ ಜತೆ ಮಾತುಕತೆ ನಡೆಸಿದರೆ ಪ್ರಯೋಜನ ಇದೆಯೇ?' ಎಂದೂ ಅವರು ಕೇಳಿದ್ದಾರೆ.

'ಶೆಹಬಾಜ್ ಷರೀಫ್ ನೇತೃತ್ವದ ಪಕ್ಷವು ಫೆಬ್ರುವರಿಯಲ್ಲಿ ನಡೆದ ಚುನಾವಣೆಯಲ್ಲಿ ವಾಮಮಾರ್ಗದಲ್ಲಿ ಗೆಲುವು ಸಾಧಿಸಿದೆ. ಪಾಕಿಸ್ತಾನ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ಮತ್ತು ಪಾಕಿಸ್ತಾನ ಪೀಪಲ್ಸ್ ಪಾರ್ಟಿಗೆ (ಪಿಪಿಪಿ) ಅನುಕೂಲವಾಗುವಂತೆ ಫಲಿತಾಂಶವನ್ನು ನಮೂನೆ 47 ಮೂಲಕ ಬದಲಿಸಲಾಗಿದೆ' ಎನ್ನುವುದು ಪಿಟಿಐ ಪಕ್ಷದ ಪ್ರತಿಪಾದನೆಯಾಗಿದೆ.

ಭಾರತೀಯ ಹೈಕಮಿಷನ್ ಭೇಟಿ

ಇಸ್ಲಾಮಾಬಾದ್ (ಪಿಟಿಐ): ಬೇಹುಗಾರಿಕೆ ಆರೋಪದ ಮೇಲೆ ನಾಲ್ಕು ವರ್ಷಗಳ ಹಿಂದೆ ಬಂಧಿತರಾಗಿ ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿರುವ ಇಬ್ಬರು ಭಾರತೀಯರನ್ನು ಭಾರತೀಯ ಹೈಕಮಿಷನ್‌ನ ಅಧಿಕಾರಿಗಳು ಭೇಟಿ ಮಾಡಿದ್ದಾರೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

ಜಮ್ಮು ಮತ್ತು ಕಾಶ್ಮೀರದ ಬಂಡಿಹುರಾ ಪಟ್ಟಣದ ಗೊರೆಜ್ ಪ್ರದೇಶದ ಫಿರೋಜ್ ಅಹ್ಮದ್ ಲೋನ್ (29), ನೂರ್ ಮುಹಮ್ಮದ್ ವಾನಿ (24) ಯುವಕರನ್ನು ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ) ಭಾಗವಾದ ಗಿಲ್ಗಿಟ್-ಬಾಲ್ಟಿಸ್ತಾನದಲ್ಲಿ ಬಂಧಿಸಲಾಗಿತ್ತು ಎಂದು 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ವರದಿ ಮಾಡಿದೆ.

ಕಂದಕಕ್ಕೆ ಬಸ್ ಉರುಳಿ 28 ಜನ ಸಾವು

ಕರಾಚಿ (ಪಿಟಿಐ): ಪಾಕಿಸ್ತಾನದಲ್ಲಿ ಬಸ್‌ವೊಂದು ಕಂದಕಕ್ಕೆ ಉರುಳಿ ಬಿದ್ದು, ಮಕ್ಕಳು ಸೇರಿದಂತೆ ಕನಿಷ್ಠ 28 ಜನ ಸಾವನ್ನಪ್ಪಿರುವ ಘಟನೆ ನಡೆದಿದೆ. ಅಪಘಾತದಲ್ಲಿ 22 ಮಂದಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ತುರ್ಬತ್‌ನಿಂದ ಕ್ವೆಟಾದತ್ತ ಬಸ್ ಸಂಚರಿಸುತ್ತಿತ್ತು. ಕ್ವೆಟಾದಿಂದ ಸುಮಾರು 700 ಕಿ.ಮೀ. ದೂರದಲ್ಲಿರುವ ವಾಶುಕ್ ನಗರದ ಬಳಿ ಮಾರ್ಗ ಮಧ್ಯೆ ಕಂದಕಕ್ಕೆ ಉರುಳಿ ಬಿದ್ದಿದೆ. ಅತಿಯಾದ ವೇಗವೇ ಈ ಅಪಘಾತಕ್ಕೆ ಕಾರಣ ಎಂದು ವರದಿಗಳು ಹೇಳಿವೆ.

ಸುದ್ದಿ 2 ನಿಮಿಷ

ಬಿಪಿಎಲ್: ಪಿಸಿಬಿ ಘಟಕ ವಿಸ್ತರಣೆ

ಬೆಂಗಳೂರು: ದೇಶದ ಪ್ರಮುಖ ಎಲೆಕ್ಟ್ರಾನಿಕ್ಸ್ ಕಂಪನಿಯಾದ ಬಿಪಿಎಲ್ ಲಿಮಿಟೆಡ್ ನಗರದಲ್ಲಿ ಹೊಸದಾಗಿ ಅತ್ಯಾಧುನಿಕ ಪಿಸಿಬಿ (ಪ್ರಿಂಟೆಡ್ ಸರ್ಕಿಟ್ ಬೋರ್ಡ್) ಘಟಕ ಸ್ಥಾಪಿಸಿದೆ.

'ಉದ್ಯಮದ ವಿಸ್ತರಣೆಯ ಭಾಗವಾಗಿ ಈ ಘಟಕ ಸ್ಥಾಪಿಸಲಾಗಿದೆ. ಇದರಿಂದ ದೇಶದಲ್ಲಿ ಪಿಸಿಬಿ ವ್ಯಾಪ್ತಿಯ ವಿಸ್ತರಣೆಗೂ ಸಹಕಾರಿಯಾಗಲಿದೆ. ಇದು ವಿಶೇಷ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಪೂರೈಸುವ ಗುರಿ ಹೊಂದಿದೆ' ಎಂದು ಕಂಪನಿಯ ಸಿಒಒ ಶೈಲೇಶ್ ಮುದಲಿಯಾರ್ ತಿಳಿಸಿದ್ದಾರೆ.

ಪ್ರಸ್ತುತ ದೇಶದಲ್ಲಿ ಪಿಸಿಬಿಗೆ ಬೇಡಿಕೆ ಹೆಚ್ಚುತ್ತಿದೆ. ಹಾಗಾಗಿ, ಕೇಂದ್ರ ಸರ್ಕಾರದ 'ಮೇಕ್ ಇನ್ ಇಂಡಿಯಾ' ಯೋಜನೆಯಡಿ ಘಟಕ ಸ್ಥಾಪಿಸಲಾಗಿದ್ದು, ಸುಧಾರಿತ ಮೂಲ ಸೌಕರ್ಯವನ್ನು ಒಳಗೊಂಡಿದೆ. ತ್ವರಿತಗತಿಯಲ್ಲಿ ದೇಶದ ಎಲೆಕ್ಟ್ರಾನಿಕ್ಸ್ ವಲಯದ ಬೆಳವಣಿಗೆಗೂ ನೆರವಾಗಲಿದೆ ಎಂದು ಹೇಳಿದ್ದಾರೆ.



ಕಂಪನಿಯು ಐದು ದಶಕಗಳ ಕಾಲ ನಾವೀನ್ಯ, ಗುಣಮಟ್ಟ ಮತ್ತು ಗ್ರಾಹಕರ ನಂಬಿಕೆ ಉಳಿಸಿಕೊಂಡಿದೆ. ಎಲೆಕ್ಟ್ರಾನಿಕ್ ವಲಯದಲ್ಲಿ ಭಾರತದ ಸ್ವಾವಲಂಬನೆಯನ್ನು ಜಾಗತಿಕ ಮಟ್ಟದಲ್ಲಿ ಹೆಚ್ಚಿಸುವುದೇ ಈ ಘಟಕದ ಮೂಲ ಉದ್ದೇಶವಾಗಿದೆ ಎಂದು ತಿಳಿಸಿದ್ದಾರೆ.

'ಬಿಪಿಎಲ್ ಕಂಪನಿಯು 1989ರಿಂದಲೂ ಜಪಾನ್‌ನ ಸ್ಯಾಯೊ ಕಂಪನಿಯ ತಾಂತ್ರಿಕ ನೆರವಿನಡಿ ಪಿಸಿಬಿ ಉತ್ಪಾದನೆಯಲ್ಲಿ ತೊಡಗಿದೆ. ಕಳೆದ ಆರ್ಥಿಕ ವರ್ಷದಲ್ಲಿ ಘಟಕವನ್ನು ಮೇಲ್ದರ್ಜೆಗೇರಿಸಲು ₹15 ಕೋಟಿ ವಿನಿಯೋಗಿಸಲಾಗಿದೆ. ಗ್ರಾಹಕರ ಬೇಡಿಕೆಗೆ ತಕ್ಕಂತೆ ಗುಣಮಟ್ಟದ ಸೇವೆ ಒದಗಿಸಲು ಕಂಪನಿಯು ಬದ್ಧವಾಗಿದೆ' ಎಂದು ತಿಳಿಸಿದ್ದಾರೆ.

ವಿಮಾನ ಅವಘಡ: ಗುರುತ್ವಾಕರ್ಷಣೆ ಶಕ್ತಿ ಬದಲಾವಣೆಯೇ ಕಾರಣ

ಸಿಂಗಪುರ (ಪಿಟಿಐ): ಕಳೆದ ವಾರ ಸಿಂಗಪುರ ಏರ್‌ಲೈನ್ಸ್ ವಿಮಾನವು ಕೇವಲ 4.6 ಸೆಕೆಂಡ್‌ಗಳಲ್ಲಿ 178 ಅಡಿ ಕುಸಿತ ಕಂಡಿದ್ದಕ್ಕೆ ಗುರುತ್ವಾಕರ್ಷಣಾ ಶಕ್ತಿಯಲ್ಲಿನ ತ್ವರಿತ ಬದಲಾವಣೆಯೇ ಕಾರಣ ಎಂದು ಪ್ರಾಥಮಿಕ ತನಿಖಾ ವರದಿ ಬುಧವಾರ ತಿಳಿಸಿದೆ.

ಸಾರಿಗೆ ಸುರಕ್ಷತಾ ತನಿಖಾ ಸಂಸ್ಥೆಯು (ಟಿಎಸ್‌ಐಬಿ) ಈ ಕುರಿತ ವರದಿಯನ್ನು ಬಿಡುಗಡೆ ಮಾಡಿದೆ.

ಮೇ 21ರಂದು, ಲಂಡನ್‌ನಿಂದ ಸಿಂಗಪುರಕ್ಕೆ ತೆರಳುತ್ತಿದ್ದ ಎಸ್‌ಕ್ಯೂ321 ವಿಮಾನವು ಮ್ಯಾನ್ಮಾರ್‌ನ ಐರಾವಡ್ಡಿ ಜಲಾನಯನ ಪ್ರದೇಶದಲ್ಲಿ ಟರ್ಬ್ಯುಲೆನ್ಸ್‌ನಿಂದಾಗಿ (ಗಾಳಿಯ ವೇಗದಲ್ಲಿ ಆಗುವ ಬದಲಾವಣೆಯಿಂದ ಉಂಟಾಗುವ ಕ್ಷೋಭೆ) ಹಠಾತ್ ಕುಸಿತ ಕಂಡಿತ್ತು. ಈ ವಿಮಾನದಲ್ಲಿ 211 ಪ್ರಯಾಣಿಕರು ಮತ್ತು 18 ಸಿಬ್ಬಂದಿ ಇದ್ದರು. ಘಟನೆಯ ನಂತರ ವಿಮಾನವನ್ನು ಬ್ಯಾಂಕಾಕ್‌ನ ಸುವರ್ಣಭೂಮಿ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಲಾಯಿತು.

ಎಸ್‌ಕ್ಯೂ321 ವಿಮಾನದಲ್ಲಿದ್ದ ಪ್ರಯಾಣಿಕರು ಮತ್ತು ಸಿಬ್ಬಂದಿಯ ವೈದ್ಯಕೀಯ ವೆಚ್ಚ ಮತ್ತು ಅವರಿಗೆ ಅಗತ್ಯವಿರುವ ಹೆಚ್ಚುವರಿ ಸಹಾಯವನ್ನು ಮಾಡುವುದಾಗಿ ಏರ್‌ಲೈನ್ ಸಂಸ್ಥೆಯು ತಿಳಿಸಿದೆ. ಈ ವಿಮಾನದಲ್ಲಿ ಮೂವರು ಭಾರತೀಯ ಪ್ರಜೆಗಳು ಪ್ರಯಾಣಿಸುತ್ತಿದ್ದರು.



ಬೆಲ್ಜಿಯಂ ಪ್ರಧಾನಿ ಅಲೆಕ್ಸಾಂಡರ್ ಡಿ ಕ್ರೂ, ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಜೆಲೆನ್‌ಸ್ಕಿ ಹಾಗೂ ಬೆಲ್ಜಿಯಂನ ರಕ್ಷಣಾ ಸಚಿವೆ ಲ್ಯುಡಿವೈನ್ ಡೆಡೊಂಡರ್ ಬೆಲ್ಜಿಯನ್ ಅವರು ಎಫ್-16 ಜೆಟ್ ಪೈಲಟ್ ಒಬ್ಬರು ಅದರ ಕಾರ್ಯವೈಖರಿಯ ಬಗೆಗೆ ಮಾಹಿತಿ ನೀಡಿದ್ದನ್ನು ಬುಧವಾರ ಮೆಲ್ಸ್‌ಬ್ರೋಕ್‌ನಲ್ಲಿ ಆಲಿಸಿದರು —ಎಎಫ್‌ಪಿ ಚಿತ್ರ

ಸ್ವೀಡನ್‌ನಿಂದ ಉಕ್ರೇನ್‌ಗೆ ₹10,000 ಕೋಟಿ ಸೇನಾ ನೆರವಿನ ಪ್ಯಾಕೇಜ್

ಕೋಪನ್‌ಹೆಗನ್ (ಎಪಿ): ಉಕ್ರೇನ್‌ಗೆ 123 ಕೋಟಿ ಅಮೆರಿಕನ್ ಡಾಲರ್ (ಸುಮಾರು ₹10,255 ಕೋಟಿ) ಮೊತ್ತದ ಸೇನಾ ನೆರವನ್ನು ನೀಡುವುದಾಗಿ ಸ್ವೀಡನ್ ಸರ್ಕಾರ ಬುಧವಾರ ಪ್ರಕಟಿಸಿದೆ.

ಸ್ವೀಡನ್ ಇದುವರೆಗೆ ನೀಡಿರುವ ಸೇನಾ ನೆರವಿನ ಪ್ಯಾಕೇಜ್‌ಗಳಲ್ಲಿಯೇ ಇದು ಅತಿ ದೊಡ್ಡದು ಎಂದು ಅದು ಹೇಳಿಕೊಂಡಿದೆ. ಉಕ್ರೇನ್‌ಗೆ ಸದ್ಯಕ್ಕೆ ಅತ್ಯಗತ್ಯವಾಗಿರುವ ಸೇನಾ ಸಾಧನಗಳನ್ನು ನೆರವಿನ ಪ್ಯಾಕೇಜ್ ಒಳಗೊಂಡಿದೆ. ವಾಯುಪಡೆಯ ರಕ್ಷಣಾ ಸಾಧನಗಳು, ಮದ್ದು-ಫಿರಂಗಿಗಳು, ಸಶಸ್ತ್ರ ವಾಹನಗಳನ್ನು ಉಕ್ರೇನ್‌ಗೆ ಒದಗಿಸಲಾಗುವುದು ಎಂದು ಸ್ವೀಡನ್‌ನ ಉಪ ಪ್ರಧಾನಿ ಎಬ್ಬಾ ಬುಶ್ ತಿಳಿಸಿದ್ದಾರೆ.

ಸ್ವೀಡಿಶ್ ನಿರ್ಮಿತ ಜೆಎಎಸ್ 39 ಗ್ರಿಪನ್ ಜೆಟ್‌ಗಳನ್ನು ಉಕ್ರೇನ್‌ಗೆ ಕಳುಹಿಸುವ ಸಾಧ್ಯತೆ ಇಲ್ಲ ಎನ್ನುವುದನ್ನು ಪುನರುಚ್ಚರಿಸಿದ ಸ್ವೀಡನ್ ರಕ್ಷಣಾ ಸಚಿವ ಪಾಲ್ ಜಾನ್ಸನ್, ಎಫ್-16 ಫೈಟರ್ ಜೆಟ್‌ಗಳನ್ನು ಪೂರೈಸುವ ಕುರಿತು ಆಸಕ್ತಿ ಇರುವುದಾಗಿ ಹೇಳಿದ್ದಾರೆ.

ಕೆಲವು ದೇಶಗಳು ಈಗಾಗಲೇ ಎಫ್-16 ಫೈಟರ್ ಜೆಟ್‌ಗಳನ್ನು ಉಕ್ರೇನ್‌ಗೆ ಒದಗಿಸಲು ಮುಂದೆ ಬಂದಿವೆ. 30 ಎಫ್-16 ಜೆಟ್‌ಗಳನ್ನು ಉಕ್ರೇನ್‌ಗೆ ನೀಡುವುದಾಗಿ ಮಂಗಳವಾರ ಬೆಲ್ಜಿಯಂ ವಾಗ್ದಾನ ಮಾಡಿದೆ.

ಮುಂದಿನ ಹಂತದಲ್ಲಿ ಗ್ರಿಪನ್ ಜೆಟ್‌ಗಳನ್ನು ಉಕ್ರೇನ್‌ಗೆ ಒದಗಿಸುವ ಕುರಿತು ಆಲೋಚಿಸುವುದಾಗಿ ಜಾನ್ಸನ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹೈಟಿ: ಹೊಸ ಪ್ರಧಾನಿಯಾಗಿ ಗ್ಯಾರಿ ಕೊನಿಲ್ಲೆ ಆಯ್ಕೆ

ಸ್ಯಾನ್ ಜುವಾನ್ (ಪೋರ್ಟೊ ರಿಕೊ) (ಎಪಿ): ಮಾಜಿ ಪ್ರಧಾನಿ ಗ್ಯಾರಿ ಕೊನಿಲ್ಲೆ ಅವರನ್ನು ಹೈಟಿಯ ಹೊಸ ಪ್ರಧಾನಿಯಾಗಿ ಅಲ್ಲಿನ ಪರಿವರ್ತನಾ ಪರಿಷತ್ತು ಆಯ್ಕೆ ಮಾಡಿದೆ.

ಕೊನಿಲ್ಲೆ ಅವರು ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್ ಪ್ರದೇಶಕ್ಕೆ ಯುನಿಸೆಫ್‌ನ ಪ್ರಾದೇಶಿಕ ನಿರ್ದೇಶಕರಾಗಿದ್ದಾರೆ. ಅವರು ಹಿಂದೆ, ಮೈಕೆಲ್ ಮಾರ್ಟೆಲ್ಲಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ 2011ರ ಅಕ್ಟೋಬರ್‌ನಿಂದ 2012ರ ಮೇ ತಿಂಗಳವರೆಗೆ ಹೈಟಿ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದರು.

ಏಳು ಸದಸ್ಯರ ಪರಿವರ್ತನಾ ಪರಿಷತ್ತು 6-1 ಮತಗಳಿಂದ ಗ್ಯಾರಿ ಅವರನ್ನು ಆಯ್ಕೆ ಮಾಡಿದೆ. ಒಬ್ಬ ಸದಸ್ಯರು ಹೈಟಿಯಿಂದ ಹೊರಗಿದ್ದ ಕಾರಣ ಅವರು ಮತ ಚಲಾಯಸಲಿಲ್ಲ ಎಂದು ಮಂಡಳಿ ಸದಸ್ಯ ಲೂಯಿಸ್ ಗೆರಾಲ್ಡ್ ಗಿಲ್ಲೆಸ್ ಮಾಹಿತಿ ನೀಡಿದ್ದಾರೆ.

ಸ್ಫೋಟಕ ಸಿಡಿದು ಇಸ್ರೇಲ್‌ನ ಮೂವರು ಯೋಧರ ಸಾವು

ಜೆರುಸಲೇಂ (ಎಪಿ): ಗಾಜಾದ ದಕ್ಷಿಣ ಭಾಗದ ರಫಾ ನಗರದಲ್ಲಿ ಅಡಗಿಸಿಡಲಾಗಿದ್ದ ಸ್ಫೋಟಕವು ಸಿಡಿದಿದ್ದರಿಂದ ತನ್ನ ಮೂವರು ಯೋಧರು ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಸೇನೆ ಬುಧವಾರ ತಿಳಿಸಿದೆ.

ಮಂಗಳವಾರ ಸಂಭವಿಸಿದ ಈ ಘಟನೆಯಲ್ಲಿ ಇತರ ಮೂವರು ಸೈನಿಕರು ಗಾಯಗೊಂಡಿದ್ದಾರೆ. ಈ ಮೂಲಕ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಗಾಜಾ ನಗರದಲ್ಲಿ ಹಮಾಸ್ ಬಂಡುಕೋರರ ಕಾರ್ಯಾಚರಣೆ ಆರಂಭಿಸಿದ ಬಳಿಕ ಕನಿಷ್ಠ 290 ಯೋಧರು ಬಲಿಯಾಗಿದ್ದಾರೆ ಎಂದು ಅದು ಹೇಳಿದೆ.

ಮುಂಗೇಶಪುರದಲ್ಲಿ 52.9 ಡಿಗ್ರಿ ಸೆಲ್ಸಿಯಸ್ ದಾಖಲು

ಬಿಸಿಗಾಳಿಗೆ ತತ್ತರಿಸಿದ ದೆಹಲಿ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಖ್ಯಾಂಶಗಳು

- 8,302 ಮೆಗಾವಾಟ್ ವಿದ್ಯುತ್ ಬೇಡಿಕೆ
- ದೆಹಲಿ ಇತಿಹಾಸದಲ್ಲೇ ಅತಿಹೆಚ್ಚು ಬೇಡಿಕೆ: ಡಿಸ್ಕಾಂ
- ರಾಜಸ್ಥಾನದಿಂದ ಬೀಸಿದ ಉಷ್ಣಗಾಳಿಯ ದುಷ್ಪರಿಣಾಮ



ದೆಹಲಿಯಲ್ಲಿ ಬೇಸಿಗೆಯ ಬಿಸಿಲಿನಿಂದ ಕಂಗೆಟ್ಟಿರುವ ಮಕ್ಕಳು ಬುಧವಾರ ಮಧ್ಯಾಹ್ನ ಕೆರೆಯಲ್ಲಿ ಈಜಾಡಿದರು –ಪಿಟಿಐ ಚಿತ್ರ

ನವದೆಹಲಿ: ದೆಹಲಿಯ ಮುಂಗೇಶ ಪುರದಲ್ಲಿ ಬುಧವಾರ ಗರಿಷ್ಠ 52.9 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿಯ ವಾಯವ್ಯ ಭಾಗದಲ್ಲಿರುವ ಹವಾಮಾನ ಕೇಂದ್ರದಲ್ಲಿ ಮಂಗಳವಾರ 49.9 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿತ್ತು. ಬುಧವಾರ ಸಂಜೆ ಇದೇ ಕೇಂದ್ರದಲ್ಲಿ ಗರಿಷ್ಠ 52.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು ದೆಹಲಿಯಲ್ಲಿ ದಾಖಲಾಗಿರುವ ಈವರೆಗಿನ ಗರಿಷ್ಠ ತಾಪಮಾನ ಎಂದು ಹೇಳಲಾಗುತ್ತಿದೆ.

ಬೇಸಿಗೆಯ ಕಾರಣದಿಂದಾಗಿ ದೆಹಲಿಯಲ್ಲಿ ಈಗಾಗಲೇ ಬಿಸಿ ವಾತಾವರಣವಿದೆ. ಇದರ ಜೊತೆಗೆ, ರಾಜಸ್ಥಾನದಿಂದ ಬೀಸುವ ಬಿಸಿ ಗಾಳಿಯು ಮೊದಲಿಗೆ ದೆಹಲಿ ನಗರದ ಹೊರ ವಲಯದಲ್ಲಿರುವ ಮುಂಗೇಶಪುರ, ನರೆಲಾ ಮತ್ತು ನಜಾಫಗಢ ಪ್ರದೇಶಗಳಿಗೆ ತಟ್ಟುತ್ತದೆ. ಇದರಿಂದ ಈ ಪ್ರದೇಶಗಳಲ್ಲಿ ಗರಿಷ್ಠ ಉಷ್ಣಾಂಶ ದಾಖಲಾಗಿದೆ ಎಂದು ಹವಾಮಾನ ಇಲಾಖೆಯ ಪ್ರಾದೇಶಿಕ ಮುಖ್ಯಸ್ಥ ಕುಲದೀಪ್ ಶ್ರೀವಾಸ್ತವ ವಿವರಿಸಿದ್ದಾರೆ.

ಹೆಚ್ಚಿದ ವಿದ್ಯುತ್ ಬೇಡಿಕೆ: ತಾಪಮಾನದ ಹೆಚ್ಚಳದಿಂದಾಗಿ ದೇಶದ ರಾಜಧಾನಿಯಲ್ಲಿ ವಿದ್ಯುತ್ ಬೇಡಿಕೆಯೂ ಹೆಚ್ಚಿದೆ. ಬುಧವಾರ ಸಂಜೆ ನಾಲ್ಕು ಗಂಟೆ ಸುಮಾರಿಗೆ 8,302 ಮೆಗಾವಾಟ್‌ನಷ್ಟು ವಿದ್ಯುತ್ ಬೇಡಿಕೆ ಕಂಡುಬಂದಿತು.

ಈ ಮೂಲಕ ಇದೇ ಮೊದಲ ಬಾರಿಗೆ ರಾಷ್ಟ್ರ ರಾಜಧಾನಿಯ ಇತಿಹಾಸದಲ್ಲಿ ವಿದ್ಯುತ್ ಬೇಡಿಕೆ 8,300 ಮೆಗಾವಾಟ್ ದಾಟಿದೆ ಎಂದು ಡಿಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ. ಈವರೆಗೆ ಬೇಸಿಗೆ ಅವಧಿಯಲ್ಲಿ 8,200 ಮೆಗಾವಾಟ್ ವಿದ್ಯುತ್ ಬೇಡಿಕೆ ಗರಿಷ್ಠ ಎಂದು ಡಿಸ್ಕಾಂ ಅಂದಾಜಿಸಿತ್ತು.

ಪರಿಶೀಲನೆಗೆ ತಂಡ ನಿಯೋಜನೆ: ರಾಜಧಾನಿಯ ಇತರ ಪ್ರದೇಶಗಳಿಗೆ ಹೋಲಿಸಿದರೆ ಮುಂಗೇಶಪುರದ ತಾಪಮಾನ ಅಸಹಜವಾಗಿ ಕಾಣುತ್ತಿದೆ. ಹೀಗಾಗಿ ಅಲ್ಲಿನ ದತ್ತಾಂಶವನ್ನು ಪರಿಶೀಲಿಸಲು ತಂಡವನ್ನು ಕಳುಹಿಸಲಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆಯ (ಐಎಂಡಿ) ಮುಖ್ಯಸ್ಥ ಮೃತ್ಯುಂಜಯ್ ಮಹಾಪಾತ್ರ ತಿಳಿಸಿದ್ದಾರೆ.

‘ದೆಹಲಿ ಎನ್‌ಸಿಆರ್ ವಿವಿಧ ಭಾಗಗಳಲ್ಲಿ 45.2 ಡಿಗ್ರಿಗಳಿಂದ 49.1 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ದಾಖಲಾಗಿದೆ. ಮುಂಗೇಶಪುರ ದಲ್ಲಿ 52.9 ಡಿಗ್ರಿ ದಾಖಲಾಗಿದೆ. ಇದು ಬಹುಶಃ ಸೆನ್ಸರ್ ಅಥವಾ ಇತರ ಸ್ಥಳೀಯ ದೋಷದಿಂದ ಆಗಿರಬಹುದು. ಈ ಕುರಿತು ಪರಿಶೀಲಿಸಲಾಗುತ್ತಿದೆ’ ಎಂದು ಐಎಂಡಿ ಪ್ರಕಟಣೆಯಲ್ಲಿ ತಿಳಿಸಿದೆ.

ಬಿಹಾರದ ಔರಂಗಾಬಾದ್, ಉತ್ತರ ಪ್ರದೇಶದ ಕಾನ್ಪುರ, ಪ್ರಯಾಗ್‌ರಾಜ್, ಆಗ್ರಾ, ಹರಿಯಾಣದ ರೋಹ್ಟಕ್, ನರ್ನಾಲ್, ಸಿರ್ಸಾ, ಪಂಜಾಬಿನ ಭಟಿಂಡಾದಲ್ಲಿ 48 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಿನ ತಾಪಮಾನ ದಾಖಲಾಗಿದೆ. ಹರಿಯಾಣದ ಮಹೇಂದ್ರಗಢದಲ್ಲಿ 49.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಗಾಂಧೀಜಿ ಕುರಿತು ಯಾರಿಗೂ ಅರಿವು ಇರಲಿಲ್ಲ: ಮೋದಿ ಹೇಳಿಕೆಗೆ ಆಕ್ರೋಶ

ನವದೆಹಲಿ(ಪಿಟಿಐ): ‘ರಿಚರ್ಡ್ ಅಟೆನ್‌ಬರೊ ಅವರು ‘ಗಾಂಧಿ’ ಚಲನಚಿತ್ರ ನಿರ್ಮಿಸುವವರೆಗೂ ಜಗತ್ತಿಗೆ ಮಹಾತ್ಮ ಗಾಂಧಿ ಕುರಿತು ಅರಿವು ಇರಲಿಲ್ಲ’ ಎಂದು ಹೇಳಿರುವ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ಬುಧವಾರ ಟೀಕಾಪ್ರಹಾರ ಮಾಡಿದೆ.

‘ಮಹಾತ್ಮ ಗಾಂಧಿ ಹತ್ಯೆಯಲ್ಲಿ ಪಾತ್ರ ಹೊಂದಿರುವವರ ಸೈದ್ಧಾಂತಿಕ ಪೂರ್ವಜರು ಗಾಂಧೀಜಿ ಅವರು ಹಾಕಿಕೊಟ್ಟ ಸತ್ಯದ ಮಾರ್ಗವನ್ನು ಅನುಸರಿಸುವುದೇ ಇಲ್ಲ’ ಎಂದು ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.

ಪ್ರಧಾನಿ ವಿರುದ್ಧ ಟೀಕಾಪ್ರಹಾರ ನಡೆಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಸುಳ್ಳುಗಳನ್ನು ಹೇಳುವವರು ತಮ್ಮ ಗಂಟು ಮೂಟೆಗಳನ್ನು ಕಟ್ಟಿಕೊಂಡು ನಿರ್ಗಮಿಸುವ ಸಮಯ ಬಂದಿದೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಎಂಟೈರ್ ಪೊಲಿಟಿಕಲ್ ಸೈನ್ಸ್‌ನ ವಿದ್ಯಾರ್ಥಿ ಮಾತ್ರ ಮಹಾತ್ಮ ಗಾಂಧಿ ಕುರಿತು ತಿಳಿದುಕೊಳ್ಳಲು ಗಾಂಧಿ ಚಿತ್ರವನ್ನು ನೋಡುತ್ತಾನೆ’ ಎಂದು ವ್ಯಂಗ್ಯವಾಡಿದ್ದಾರೆ.

ಎಬಿಪಿ ಸುದ್ದಿವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಮೋದಿ, ‘ಮಹಾತ್ಮ ಗಾಂಧಿ ಒಬ್ಬ ಮಹಾನ್ ವ್ಯಕ್ತಿ ಎಂದು ಇಡೀ ಜಗತ್ತು ಪರಿಗಣಿಸುತ್ತದೆ. ಈ 75 ವರ್ಷಗಳ ಅವಧಿಯಲ್ಲಿ ಮಹಾತ್ಮ ಗಾಂಧಿ ಕುರಿತು ಜಗತ್ತಿಗೆ ತಿಳಿಸುವುದು ನಮ್ಮ ಮೇಲಿನ ಜವಾಬ್ದಾರಿಯಲ್ಲವೇ’ ಎಂದು ಹೇಳಿದ್ದಾರೆ.

‘ಯಾರಿಗೂ ಅವರ ಬಗ್ಗೆ ತಿಳಿದಿಲ್ಲ ಎಂದು ಹೇಳಲು ನಾನು ವಿಷಾದಿಸುತ್ತೇನೆ. ‘ಗಾಂಧಿ’ ಚಲನ ಚಿತ್ರವನ್ನು ನಿರ್ಮಿಸಿದಾಗ ಮೊದಲ ಬಾರಿಗೆ ಇಡೀ ಜಗತ್ತಿಗೆ ಮಹಾತ್ಮ ಗಾಂಧಿ ಕುರಿತು ಕುತೂಹಲ ಮೂಡಿತು. ನಾವು ಕೇಳಿರದ ಈ ಮಹಾನ್ ವ್ಯಕ್ತಿ ಯಾರು ಎಂದು ತನ್ನನ್ನೇ ಪ್ರಶ್ನಿಸಿಕೊಂಡಿತು’ ಎಂದು ಮೋದಿ ಹೇಳಿದ್ದಾರೆ.

‘ಜಗತ್ತಿಗೆ ಮಾರ್ಟಿನ್ ಲೂಥರ್ ಕಿಂಗ್, ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ ಅವರ ಕುರಿತು ಮಾಹಿತಿ ಇದೆ. ಈ ಮಹನೀಯರಿಗಿಂತ ಮಹಾತ್ಮ ಗಾಂಧಿ ಕಡಿಮೆ ತೂಕದ ವ್ಯಕ್ತಿಯಲ್ಲ ಎಂಬುದನ್ನು ಜಗತ್ತು ಅರ್ಥ ಮಾಡಿಕೊಳ್ಳುವುದನ್ನು ಖಾತ್ರಿಪಡಿಸುವುದು ಭಾರತದ ಜವಾಬ್ದಾರಿ’ ಎಂದಿದ್ದಾರೆ.

ಯಾರು, ಏನೆಂದರು...

ಮಹಾತ್ಮ ಗಾಂಧಿ ಪ್ರತಿಪಾದಿಸಿದ ರಾಷ್ಟ್ರೀಯತೆ ಆರ್‌ಎಸ್‌ಎಸ್‌ನವರಿಗೆ ಗೊತ್ತಿಲ್ಲ. ಇದೇ ಅವರ ಅಸ್ಮಿತೆ. ದೇಶದಲ್ಲಿ ಆರ್‌ಎಸ್‌ಎಸ್‌ನವರು ನಿರ್ಮಿಸಿರುವ ವಾತಾ-ವರಣದಿಂದಾಗಿಯೇ ನಾಥೂರಾಂ ಗೋಡ್ಸೆ ಮಹಾತ್ಮ ಗಾಂಧಿಯವರನ್ನು ಹತ್ಯೆ ಮಾಡಿದ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಮಹಾತ್ಮ ಗಾಂಧಿ ಅವರು ಆಧುನಿಕ ಭಾರತದ ಇತಿಹಾಸದಲ್ಲಿಯೇ ಅತ್ಯಂತ ಪೂಜನೀಯ ವ್ಯಕ್ತಿ. ಸ್ವಾತಂತ್ರ್ಯ ಪೂರ್ವದಲ್ಲಿಯೂ ಅವರು ಮಹಾನ್ ವ್ಯಕ್ತಿ ಎನಿಸಿದ್ದರು. ಪ್ರೇರಣೆಗಾಗಿ ಆಗ ಅನೇಕ ರಾಷ್ಟ್ರಗಳು ಅವರತ್ತ ನೋಡುತ್ತಿದ್ದವು

ಕೆ.ಸಿ.ವೇಣುಗೋಪಾಲ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

‘ಗಾಂಧಿ’ ಚಿತ್ರಕ್ಕೂ ಮೊದಲು ಜಗತ್ತಿಗೆ ಮಹಾತ್ಮನ ಕುರಿತು ತಿಳಿದಿರಲಿಲ್ಲ ಎಂಬ ಮೋದಿ ಅವರ ಹೇಳಿಕೆಯಿಂದ ನನಗೆ ದಿಗ್ಭ್ರಮೆಯಾಗಿದೆ. ಮೋದಿ ಅವರಿಗೆ ಆಲ್ಬರ್ಟ್ ಐನ್‌ಸ್ಟೀನ್ ಬಗ್ಗೆ ಗೊತ್ತೆ? ಐನ್‌ಸ್ಟೀನ್ ಅವರು ಮಹಾತ್ಮ ಗಾಂಧಿ ಕುರಿತು ಏನು ಹೇಳಿದ್ದಾರೆ ಎಂಬುದು ಮೋದಿ ಅವರಿಗೆ ತಿಳಿದಿದೆಯೇ?

ಪಿ.ಚಿದಂಬರಂ, ಕಾಂಗ್ರೆಸ್‌ನ ಹಿರಿಯ ನಾಯಕ

‘ವಿಶ್ವದೆಲ್ಲೆಡೆ ಪ್ರವಾಸ ಕೈಗೊಂಡ ನಂತರ, ಮಹಾತ್ಮ ಗಾಂಧಿ ಅವರಿಂದಾಗಿಯೇ ಭಾರತ ಜಾಗತಿಕ ಮಟ್ಟದಲ್ಲಿ ಮಹತ್ವ ಪಡೆಯಬೇಕಿತ್ತು ಎಂದು ನನಗೆ ಅನಿಸಿದೆ. ಈ ಮಾತನ್ನು ಪ್ರತಿಯೊಬ್ಬರೂ ಒಪ್ಪಲೇಬೇಕು. ಜಗತ್ತಿನ ಹಲವಾರು ಸಮಸ್ಯೆಗಳಿಗೆ ಮಹಾತ್ಮ ಗಾಂಧಿ ಪ್ರತಿಪಾದಿಸಿದ ತತ್ವಗಳಲ್ಲಿ ಪರಿಹಾರ ಇದೆ. ಆದರೆ, ನಾವು ಸಾಕಷ್ಟು ಕಳೆದುಕೊಂಡಿದ್ದೇವೆ’ ಎಂದೂ ಮೋದಿ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಗರ್ಭಪಾತ: ಏಳು ಮಂದಿ ವಿರುದ್ಧ ಪ್ರಕರಣ

ಒಂದನೇ ಪುಟದಿಂದ...



ಮಾರುತಿ ಬಾಬುಸೋ ಖರಾತ್



ವಿಜಯ ಸಂಜಯ ಗೌಳಿ




ಕವಿತಾ ಬಾಡನವರ

'ಮಹಾರಾಷ್ಟ್ರದ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ವೇಳೆ ಗರ್ಭದಲ್ಲಿ ಹೆಣ್ಣುಮಗು ಇರುವುದು ಗೊತ್ತಾಗಿದೆ. ಹೀಗಾಗಿ, ಸೋಮವಾರ ರಾತ್ರಿ ಮಹಾಲಿಂಗಪುರದ ಕವಿತಾ ಬಾಡನವರ ಅವರ ಮನೆಗೆ ಬಂದು, ಗರ್ಭಪಾತ ಮಾಡಿಸಿಕೊಂಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಊರಿಗೆ ಮರಳುವಾಗ ಮಾರ್ಗಮಧ್ಯೆ ತೀವ್ರ ರಕ್ತಸ್ರಾವದಿಂದ ಸೋನಾಲಿ ಮೃತಪಟ್ಟರು. ಮಹಾರಾಷ್ಟ್ರ ಪೊಲೀಸರು ಕಾರು ತಪಾಸಣೆ ಮಾಡಿದಾಗ ಮೃತದೇಹ ಪತ್ತೆಯಾಯಿತು. ನಂತರ ಮಹಾರಾಷ್ಟ್ರ ಪೊಲೀಸರು ಭ್ರೂಣಲಿಂಗ ಪತ್ತೆ ದಂಧೆ ಕಂಡುಹಿಡಿದು, ಮಹಾಲಿಂಗಪುರದಲ್ಲಿ ಸ್ಥಳೀಯ ಪೊಲೀಸರ ನೆರವಿನಿಂದ ಕವಿತಾ ಅವರನ್ನು ಬಂಧಿಸಿದರು’ ಎಂದು ತಿಳಿಸಿದ್ದಾರೆ.

‘ಖಾಸಗಿ ಆಸ್ಪತ್ರೆಯಲ್ಲಿ ಆಯಾ ಆಗಿದ್ದ ಕವಿತಾ ಬಾಡನವರ, ಅಲ್ಲಿ ಕೆಲಸ ಬಿಟ್ಟ ಬಳಿಕ ಮನೆಯಲ್ಲೇ ಭ್ರೂಣಲಿಂಗ ಪತ್ತೆ, ಗರ್ಭಪಾತ ಮಾಡುವ ದಂಧೆಯಲ್ಲಿ ತೊಡಗಿದ್ದರು. ಯಾವುದೇ ರೀತಿಯ ಅರ್ಹತೆ ಇಲ್ಲದೆ ಗರ್ಭಪಾತ ಮಾಡುತ್ತಿದ್ದ ಆರೋಪದಡಿ 2019 ಹಾಗೂ 2022ರಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ಕವಿತಾ ಮನೆ ಮೇಲೆ ದಾಳಿ ನಡೆಸಿ, ಕಡಿವಾಣ ಹಾಕಿದ್ದರು.

ಪ್ರಕರಣ ದಾಖಲಿಸಿದ್ದರೂ ಗರ್ಭಪಾತ ಮಾಡುವ ಕೆಲಸವನ್ನು ಆಕೆ ನಿಲ್ಲಿಸಿರಲಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.



ಮಹಾಲಿಂಗಪುರದ ಕವಿತಾ ಬಾಡನವರ ಅವರ ಮನೆ ಮೇಲೆ ತಾಲ್ಲೂಕು ಆರೋಗ್ಯ ಅಧಿಕಾರಿ ದಾಳಿ ನಡೆಸಿ, ಪರಿಶೀಲಿಸಿದರು

ಸುಸಜ್ಜಿತ ಕೊಠಡಿ ಪತ್ತೆ

ಗರ್ಭಪಾತಕ್ಕೆ ಬೇಕಾದ ಸುಸಜ್ಜಿತ ಕೊಠಡಿ ದಾಳಿ ವೇಳೆ ಪತ್ತೆಯಾಗಿದೆ. ಕೊಠಡಿಯಲ್ಲಿ ಎರಡು ಹಾಸಿಗೆ, ಇಂಜೆಕ್ಷನ್, ಸಲೈನ್ ಬಾಟ್ಲಿ ಸೇರಿ ವಿವಿಧ ಔಷಧಗಳು ಸಿಕ್ಕಿವೆ.

ಈ ಹಿಂದೆ ಕವಿತಾ ಮನೆ ಮೇಲೆ ಆರೋಗ್ಯ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದರು. ಅದಕ್ಕೆ ಆ ಸ್ಥಳವನ್ನು ಬದಲಿಸಿ, ಸಮೀಪದ ಮನೆಯಲ್ಲಿ ಗರ್ಭಪಾತ ಮಾಡಲಾಗುತಿತ್ತು

ಅಕ್ರಮ ಮರಳು; ಕಾಣದ ಕಡಿವಾಣ

ಒಂದನೇ ಪುಟದಿಂದ...

ಫಿನಿಷಿಂಗ್ ಹಾಗೂ ಕಾಂಕ್ರೀಟ್‌ಗೆ ಮಾತ್ರ ನೈಸರ್ಗಿಕ ಮರಳು, ಇನ್ನುಳಿದ ಕೆಲಸಕ್ಕೆ ಎಂ–ಸ್ಯಾಂಡ್ ಬಳಕೆಯಾ-ಗುತ್ತದೆ. ರಾಜ್ಯದಲ್ಲಿ ಎಂ–ಸ್ಯಾಂಡ್ ತಯಾರಿಸುವ 648 ಕ್ರಷರ್ ಘಟಕಗಳಿವೆ. ಅವುಗಳಲ್ಲಿ ಬಹುತೇಕ ಘಟಕಗಳು ರಾಜಕೀಯ ನಾಯಕರು ಮತ್ತು ಅವರ ಹಿಂಬಾಲಕರಿಗೆ ಸೇರಿದವು. ಈ ಮರಳಿನ ಗುಣಮಟ್ಟ ಪರೀಕ್ಷಿಸುವ ಗೋಜಿಗೆ ಯಾರೂ ಹೋಗುತ್ತಿಲ್ಲ. ಹೀಗಾಗಿ ಅದರ ಗುಣಮಟ್ಟದ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಲ್ಲ.

ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ, ದಾವಣಗೆರೆಯಂತಹ ನಗರಗಳಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಎಂ–ಸ್ಯಾಂಡ್ ಬಳಕೆಯಾಗುತ್ತದೆ. ಇಷ್ಟಾಗಿಯೂ ಮರಳಿನ ಕೊರತೆ ನೀಗುತ್ತಿಲ್ಲ. ಎಂ– ಸ್ಯಾಂಡ್ ಘಟಕಗಳಿಂದ ಅಲ್ಲದೇ ಹೊರರಾಜ್ಯಗಳಿಂದ ಮರಳು ತರಿಸಿಕೊಂಡರೂ, ಅಂದಾಜು 80 ಲಕ್ಷ ಟನ್ ಮರಳಿನ ಕೊರತೆ ಇದೆ.

ಮರಳು ನೀತಿ ವಿಫಲ: ನದಿ, ಹಳ್ಳ, ಕೊಳ್ಳ, ಕೆರೆಗಳ ದಡದಲ್ಲಿ ಸಿಗುವ ಮರಳು ಸಂಗ್ರಹಣೆ ಸೇರಿ ಅದರ ಸಾಗಣೆ ಮೇಲಿರುವ ‘ಮಾಫಿಯಾ’ ಹಿಡಿತ ತಪ್ಪಿಸಲು ಮತ್ತು ಜನರಿಗೆ ಸಲೀಸಾಗಿ ಮರಳು ಸಿಗುವಂತೆ ಮಾಡಲು ರಾಜ್ಯ ಸರ್ಕಾರ 2020ರಲ್ಲಿ ಮರಳು ನೀತಿಗೆ ತಿದ್ದುಪಡಿ ಮಾಡಿತು. ಮರಳು ಗಣಿಗಾರಿಕೆಯ ಉಸ್ತುವಾರಿಯನ್ನು ಲೋಕೋಪಯೋಗಿ ಇಲಾಖೆಯಿಂದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ವರ್ಗಾವಣೆ ಮಾಡಲಾಯಿತು. ಖಾಸಗಿ ಪಟ್ಟಾ ಜಮೀನುಗಳಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಯಿತು. ಇವು ಒಂದೆರಡು ಬದಲಾವಣೆಗಳನ್ನು ಹೊರತುಪಡಿಸಿದರೆ ಬೇರೆ ಮಹತ್ತರ ಬದಲಾವಣೆಯಾಗಲಿಲ್ಲ.

ಇಲಾಖೆಯಿಂದ ಪರ್ಮಿಟ್ ಪಡೆಯುವ ಗುತ್ತಿಗೆದಾರರು, ಹತ್ತಾರು ಲಾರಿ ಮರಳು ಸಾಗಿಸುತ್ತಾರೆ. ಇದರಿಂದ ಸರ್ಕಾರಕ್ಕೆ ಬರಬೇಕಾದ ರಾಜಧನ ಸೋರಿಕೆ ಆಗುತ್ತದೆ. ಅಕ್ರಮ ಮರಳು ಗಣಿಗಾರಿಕೆಗೂ ಕಡಿವಾಣ ಬಿದ್ದಿಲ್ಲ.

ಮರಳು ನೀತಿ ಸುಧಾರಣೆಗೆ ಸಲಹೆ

- ಅಗತ್ಯಕ್ಕೆ ಬೇಕಾಗುವಷ್ಟು ಮರಳು ಬ್ಲಾಕ್ ಗುರುತಿಸಿ
- ಮರಳು ಬ್ಲಾಕ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾ, ಜಿಪಿಎಸ್ ಅಳವಡಿಸಿ
- ಮರಳು ಸಾಗಿಸುವ ಟ್ರಕ್‌ಗಳಿಗೆ ಜಿಪಿಎಸ್ ಅಳವಡಿಸಬೇಕು
- ಪರವಾನಗಿ ವಿತರಣೆಯಲ್ಲಿ ಪಾರದರ್ಶಕತೆ ತರಬೇಕು
- ಗಣಿ– ಭೂವಿಜ್ಞಾನ, ಪೊಲೀಸ್, ಕಂದಾಯ ಅಧಿಕಾರಿಗಳ ನಡುವೆ ಸಮನ್ವಯ
- ಎಂ–ಸ್ಯಾಂಡ್ ಗುಣಮಟ್ಟ ಪರಿಶೀಲನೆಗೆ ಕ್ರಮ

ಅಕ್ರಮ ತಡೆ ಸವಾಲು: ರಾಜ್ಯದ ಬಹುತೇಕ ಕಡೆ ಅಲ್ಲದೇ ರಾಯಚೂರು ಜಿಲ್ಲೆಯ ದೇವದುರ್ಗ, ಮಾನ್ವಿ, ಯಾದಗಿರಿ ಜಿಲ್ಲೆಯ ಕೃಷ್ಣಾ, ಭೀಮಾ ನದಿ ಪಾತ್ರದಲ್ಲಿ ಮರಳು ಅಕ್ರಮ ಗಣಿಗಾರಿಕೆ ಅವ್ಯಾಹತವಾಗಿ ನಡೆದಿದೆ. ಕೃಷ್ಣಾ ನದಿ ವ್ಯಾಪ್ತಿಯಲ್ಲಿ ಹುಣಸಗಿ, ಸುರಪುರ, ಶಹಾಪುರ, ವಡಗೇರಾ ತಾಲ್ಲೂಕುಗಳಲ್ಲಿ ಟನ್ ಗಟ್ಟಲೇ ಅಕ್ರಮವಾಗಿ ಮರಳು ಸಂಗ್ರಹಿಸಲಾಗುತ್ತದೆ. ಬೀದರ್ ಜಿಲ್ಲೆಯ ಔರಾದ್, ಭಾಲ್ಕಿ, ಹುಲಸೂರು ತಾಲ್ಲೂಕು ವ್ಯಾಪ್ತಿಯ ಮಾಂಜ್ರಾ ನದಿಯಲ್ಲಿ ಮರಳು ಅಕ್ರಮ ಸಾಗಣೆ ಎಗ್ಗಿಲ್ಲದೇ ನಡೆದಿದೆ ಎಂದು ಆಯಾ ಪ್ರದೇಶದಲ್ಲಿನ ಗ್ರಾಮಸ್ಥರೇ ಆರೋಪಿಸುತ್ತಾರೆ.

ತುಂಗಭದ್ರಾ ಜಲಾಶಯದ ಹಿನ್ನೀರಿನ ವ್ಯಾಪ್ತಿಯಲ್ಲಿ ಬರುವ ಕೊಪ್ಪಳ ತಾಲ್ಲೂಕಿನ ಕೇಸಲಾಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮರಳಿನ ಅಕ್ರಮ ಸಾಗಣೆ ನಿಯಂತ್ರಿಸಲಾಗಿಲ್ಲ. ಕಲಬುರಗಿ ಜಿಲ್ಲೆಯ ಭೀಮಾ ಮತ್ತು ಕಾಗಿಣಾ ನದಿ ಪಾತ್ರದಲ್ಲಿ ಮರಳು ಅಕ್ರಮ ದಂಧೆ ಅವ್ಯಾಹತವಾಗಿ ನಡೆದಿದೆ. ಇದಕ್ಕೆಲ್ಲ ರಾಜಕಾರಣಿಗಳು ಹಾಗೂ ಅಧಿಕಾರಿಗಳ ಕೃಪಾಕಟಾಕ್ಷವೇ ಕಾರಣ ಎಂದು ಗ್ರಾಮಸ್ಥರು ಬೇಸರದಿಂದ ಹೇಳುತ್ತಾರೆ.

ನೆರೆಯ ರಾಜ್ಯಗಳಿಗೆ ಸಾಗಣೆ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 25 ಮರಳು ಬ್ಲಾಕ್‌ಗಳಿದ್ದರೂ ಅಗತ್ಯ ಇರುವಷ್ಟು ಮರಳು ಸಿಗುತ್ತಿಲ್ಲ. ಮರಳು ಅಕ್ರಮ ಗಣಿಗಾರಿಕೆಗೆ ಆಸ್ಪದ ನೀಡಿದೆ. ನಿಷೇಧ ಇದ್ದರೂ ಪಕ್ಕದ ಕೇರಳ ರಾಜ್ಯಕ್ಕೆ ಇಲ್ಲಿಂದ ಮರಳು ಸಾಗಿಸಲಾಗುತ್ತದೆ. ಇದೇ ರೀತಿ ಕಾರವಾರದಿಂದ ಗೋವಾ ರಾಜ್ಯಕ್ಕೆ ಅಕ್ರಮವಾಗಿ ಮರಳು ಸಾಗಿಸಲಾಗುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಸಿಆರ್‌ಜೆಡ್ ವ್ಯಾಪ್ತಿಯಲ್ಲಿ ನದಿಗಳಲ್ಲಿ ಮರಳುಗಾರಿಕೆ ನಡೆಸುವುದನ್ನು ಜಿಲ್ಲಾಡಳಿತ ನಿರ್ಬಂಧಿಸಿದೆ. ಆದರೂ ನಿಯಮ ಉಲ್ಲಂಘಿಸಿ ಈ ಪ್ರದೇಶಗಳಲ್ಲೂ ರಾತ್ರೋ ರಾತ್ರಿ ಅಕ್ರಮವಾಗಿ ಮರಳು ತೆಗೆಯಲಾಗುತ್ತಿದೆ. ಈ ಬಗ್ಗೆ ದೂರು ನೀಡಿದರೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಕ್ರಮ ವಹಿಸುತ್ತಿಲ್ಲ ಎಂದು ಜನರು ದೂರುತ್ತಾರೆ.

ಕಠಿಣ ಕ್ರಮವಿಲ್ಲ: ಕಳೆದ ವರ್ಷ ಮರಳು ತಪಾಸಣೆ ಮತ್ತು ನಿಯಂತ್ರಣ ಮಾಡದ ಕಾರಣ ಯಾದಗಿರಿ ಜಿಲ್ಲೆಯ ಕೊಳ್ಳೂರು (ಎಂ) ಗ್ರಾಮದ ಚೆಕ್ ಪೋಸ್ಟ್ ಅಧಿಕಾರಿಗಳನ್ನು ಜಿಲ್ಲಾಧಿಕಾರಿ ಅಮಾನತು ಮಾಡಿದ್ದು ಹೊರತುಪಡಿಸಿದರೆ ಕಠಿಣ ಕ್ರಮ ಕೈಗೊಂಡ ಉದಾಹರಣೆ ಇಲ್ಲ.

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಭೀಮಾ ನದಿ ತೀರದ ಜಮೀನಿನಲ್ಲಿ ಸಂಗ್ರಹಿಸಿದ್ದ ₹7.50 ಲಕ್ಷ ಮೌಲ್ಯದ ಮರಳು ವಶಕ್ಕೆ ಪಡೆದ ಪೊಲೀಸರು, ಏಳು ಮಂದಿ ಜಮೀನು ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿದ್ದರು. ಮರಳು ಅಕ್ರಮ ದಂಧೆಯಲ್ಲಿ ತೊಡಗಿದ್ದವರ ಜೊತೆಗೆ ವ್ಯವಹಾರ ಇರಿಸಿಕೊಂಡ ಆರೋಪದಡಿ ದೇವಲ ಗಾಣಗಾಪುರ ಠಾಣೆಯ ಕಾನ್‌ಸ್ಟೆಬಲ್ ಒಬ್ಬರನ್ನು ಈಚೆಗಷ್ಟೇ ಅಮಾನತು ಮಾಡಲಾಗಿದ್ದು, ಜಿಲ್ಲೆಯಲ್ಲಿ ನಡೆಯುತ್ತಿರುವ ಮರಳು ಮಾಫಿಯಾದ ಪ್ರತಿಬಿಂಬವಾಗಿದೆ.

2017ರಲ್ಲಿ ವಿದೇಶದಿಂದ ಮರಳನ್ನು ಆಮದು ಮಾಡಿಕೊಂಡು, ಮಾರಲು ಅವಕಾಶ ಕಲ್ಪಿಸಲಾಗಿತ್ತು. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಮತ್ತು ಇತರ ಎಂಟು ಖಾಸಗಿ ಕಂಪನಿಗಳು ವಿದೇಶದಿಂದ ಮರಳು ಆಮದು ಪರವಾನಗಿ ಪಡೆದಿವೆ. ಈ ಪೈಕಿ, ಎಂಎಸ್‌ಐಎಲ್, ಚೆನ್ನೈನ ಕಂಪನಿಗಳಾದ ಇಂಟೆಗ್ರೇಟೆಡ್ ಸರ್ವಿಸ್ ಪಾಯಿಂಟ್, ಟಿಎಂಟಿ ಮತ್ತು ಆಕಾರ್ ಎಂಟರ್‌ಪ್ರೈಸಸ್ ಕಂಪನಿಗಳು ಮಾತ್ರ ಆಮದು ಮಾಡಿವೆ.

ಮಲೇಷ್ಯಾದಿಂದ ಎಂಎಸ್‌ಐಎಲ್ ಎರಡು ಬಾರಿ ಒಟ್ಟು 1.03 ಲಕ್ಷ ಟನ್ ಮರಳು ಆಮದು ಮಾಡಿಕೊಂಡಿದೆ. ಅದರಲ್ಲಿ 14,750 ಟನ್ ಮಾತ್ರ ಮಾರಾಟವಾಗಿದೆ. ಉಳಿದ 89 ಸಾವಿರ ಟನ್ ಕೃಷ್ಣಪಟ್ಟಣಂ ಬಂದರಿನಲ್ಲಿದೆ. ಮರಳು ಆಮದಿಗೆ ಎಂಎಸ್‌ಐಎಲ್ ₹28 ಕೋಟಿ ವ್ಯಯ ಮಾಡಿದೆ. ಅದರ ಮಾರಾಟದಿಂದ ಸಂಗ್ರಹವಾಗಿರುವ ನಿರ್ವಹಣಾ ಶುಲ್ಕ ₹67.97 ಲಕ್ಷ.

ಬಂದರು ಕೊರತೆ ಇರುವುದರಿಂದ ಹಾಗೂ ಕರಾವಳಿ ಪ್ರದೇಶದಿಂದ ರಾಜ್ಯದ ಇತರ ಪ್ರದೇಶಗಳೆಡೆ ಮರಳು ಸಾಗಿಸಲು ಹೆಚ್ಚಿನ ವೆಚ್ಚ ತಗಲುವುದರಿಂದ ವಿದೇಶಿ ಮರಳಿಗೆ ಜನರಿಂದ ಉತ್ತಮ ಪ್ರತಿಕ್ರಿಯೆ ಸಿಗಲಿಲ್ಲ.

ಪೂರಕ ಮಾಹಿತಿ: ಚಂದ್ರಹಾಸ ಹಿರೇಮಳಲಿ (ಬೆಂಗಳೂರು), ಹುಬ್ಬಳ್ಳಿ, ಮಂಗಳೂರು, ಕಲಬುರಗಿ ಬ್ಯೂರೊ

ಆಸ್ಟ್ರೇಲಿಯಾಕ್ಕೆ ಚೊಚ್ಚಲ ವಿಶ್ವಕಪ್

ಟಿ20 ವಿಶ್ವಕಪ್ ಮೆಲುಕು

- ಭಾರತದಲ್ಲಿ ನಡೆದ ಆರನೇ ಐಸಿಸಿ ಟಿ20 ವಿಶ್ವಕಪ್ ಟೂರ್ನಿ (2016) ಬಳಿಕ ಐದು ವರ್ಷ ಈ ಟೂರ್ನಿ ನಡೆಯಲಿಲ್ಲ. ನಂತರ ನಡೆದ (2021) ಟೂರ್ನಿಯಲ್ಲಿ ಆಸ್ಟ್ರೇಲಿಯಾ ಕ್ರಿಕೆಟ್ ತಂಡವು ಮೊದಲ ಬಾರಿ ವಿಶ್ವಕಪ್ ಗೆದ್ದುಕೊಂಡಿತು.
- ಐದು ವರ್ಷ ಟಿ20 ವಿಶ್ವಕಪ್ ನಡೆಯದೆ ಇರಲು ಹಲವು ಕಾರಣಗಳೂ ಇದ್ದವು. 2017 ರಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿ (ಮಿನಿ ವಿಶ್ವಕಪ್) ಹಾಗೂ 2019 ರಲ್ಲಿ ಏಕದಿನ ವಿಶ್ವಕಪ್ ನಡೆಯಿತು. 2020ರಲ್ಲಿ ಕೋವಿಡ್–19 ಕಾರಣಕ್ಕೆ ಟೂರ್ನಿ ಸಾಧ್ಯವಾಗಲಿಲ್ಲ.
- 2020ರ ಟಿ20 ವಿಶ್ವಕಪ್ ಆಸ್ಟ್ರೇಲಿಯಾದಲ್ಲಿ ಅಕ್ಟೋಬರ್‌ನಲ್ಲಿ ನಡೆಯಬೇಕಿತ್ತು. ಆದರೆ ಕೋವಿಡ್ ಕಾರಣಕ್ಕೆ ಮುಂದೂಡಲಾಯಿತು. ನಂತರ ಭಾರತ ಆತಿಥ್ಯ ವಹಿಸಿಕೊಂಡರೂ ನಡೆಸಲು ಸಾಧ್ಯವಾಗಲಿಲ್ಲ. ತಟಸ್ಥ ತಾಣವಾದ ಯುಎಇಯಲ್ಲಿ ನಡೆಸಲು ಬಿಸಿಸಿಐ ಸಮ್ಮತಿಸಿತು.
- ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿ ಕಣಕ್ಕಿಳಿದಿದ್ದ ಭಾರತ ತಂಡಕ್ಕೆ ನಾಲ್ಕರ ಘಟ್ಟ ಪ್ರವೇಶಿಸಲು ವಿಫಲವಾಯಿತು.
- ಭಾರತ ತಂಡವು ವಿಶ್ವಕಪ್ ಇತಿಹಾಸದಲ್ಲಿಯೇ ಮೊದಲ ಬಾರಿ ತನ್ನ ಬದ್ಧ ಎದುರಾಳಿ ಪಾಕಿಸ್ತಾನದ ಎದುರು ಸೋಲು ಅನುಭವಿಸಿತು. ಇದುವರೆಗೆ ವಿಶ್ವಕಪ್ (ಏಕದಿನ ಮತ್ತು ಟಿ20) ಟೂರ್ನಿಗಳಲ್ಲಿ ಭಾರತವು ಪಾಕಿಸ್ತಾನದ ಎದುರು ಸೋತಿರಲಿಲ್ಲ.
- ವಿರಾಟ್ ಕೊಹ್ಲಿ ನೇತೃತ್ವದ ಭಾರತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 157 ರನ್ ಗಳಿಸಿತು. ಆದರೆ, ಈ ಮೊತ್ತವನ್ನು ರಕ್ಷಿಸಿಕೊ-ಳ್ಳುವಲ್ಲಿ ಭಾರತದ ಬೌಲರ್‌ಗಳು ವಿಫಲರಾದರು. ಪಾಕ್ ಆರಂಭಿಕ ಜೋಡಿ ಬಾಬರ್ ಆಜಂ (ಔಟಾಗದೆ 68) ಮತ್ತು ಮೊಹಮ್ಮದ್ ರಿಜ್ವಾನ್ (ಔಟಾಗದೆ 79) ಅವರು 17.5 ಓವರ್‌ಗಳಲ್ಲಿ ತಮ್ಮ ತಂಡವನ್ನು ಗೆಲುವಿನ ದಡ ಸೇರಿಸಿದರು.

ಪ್ರಮುಖ ಅಂಶಗಳು

- ಏಳನೇ ವಿಶ್ವಕಪ್: 2021 (ಅಕ್ಟೋಬರ್ 17 ರಿಂದ ನವೆಂಬರ್ 14)
- ಆತಿಥ್ಯ: ಭಾರತ
- ಪಂದ್ಯ ನಡೆದ ಸ್ಥಳ: ಒಮನ್/ ಯುನೈಟೆಡ್ ಅರಬ್ ಎಮಿರೇಟ್ಸ್
- ರನ್ನರ್ಸ್ ಅಪ್: ನ್ಯೂಜಿಲೆಂಡ್
- ಸ್ಪರ್ಧಿಸಿದ ತಂಡಗಳು: 16
- ಪಂದ್ಯಗಳು: 45
- ಸರಣಿ ಶ್ರೇಷ್ಠ: ಡೇವಿಡ್ ವಾರ್ನರ್ (289 ರನ್)
- ಶ್ರೇಷ್ಠ ಬ್ಯಾಟರ್: ಬಾಬರ್ ಆಜಂ (ಪಾಕಿಸ್ತಾನ, 303 ರನ್)
- ಶ್ರೇಷ್ಠ ಬೌಲರ್: ವನಿಂದು ಹಸರಂಗ (ಶ್ರೀಲಂಕಾ, 16 ವಿಕೆಟ್)



ಡೇವಿಡ್ ವಾರ್ನರ್

- ನ್ಯೂಜಿಲೆಂಡ್ ಮೊದಲ ಬಾರಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಇಟ್ಟಿತ್ತು. ಆಗ ಟೆಸ್ಟ್ ವಿಶ್ವ ಚಾಂಪಿಯನ್ ಆಗಿದ್ದ ನ್ಯೂಜಿಲೆಂಡ್ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿತ್ತು.
- ನವೆಂಬರ್ 14 ರಂದು ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದ-ಲ್ಲಿ ನಡೆದ ಫೈನಲ್‌ನಲ್ಲಿ ಮಿಚೆಲ್ ಮಾರ್ಷ್ (ಅಜೇಯ 77) ಮತ್ತು ಡೇವಿಡ್ ವಾರ್ನರ್ (53) ಅವರ ಅಬ್ಬರದ ಅರ್ಧಶತಕಗಳ ಬಲದಿಂದ ಆಸ್ಟ್ರೇಲಿಯಾ 8 ವಿಕೆಟ್‌ಗಳಿಂದ ನ್ಯೂಜಿಲೆಂಡ್ ಎದುರು ಜಯಿಸಿತು.

ಆಧಾರ: ಕ್ರೀಡಾ ವೆಬ್‌ಸೈಟ್‌ಗಳ

ಟಿ20 ರ‍್ಯಾಂಕಿಂಗ್: ಅಗ್ರಸ್ಥಾನದಲ್ಲಿ ಭಾರತ

ದುಬೈ (ಪಿಟಿಐ): ಭಾರತ ತಂಡವು ಐಸಿಸಿ ಟಿ20 ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಭಾರತದ ಸೂರ್ಯಕುಮಾರ್ ಯಾದವ್, ಇಂಗ್ಲೆಂಡ್‌ನ ಅದಿಲ್ ರಶೀದ್ ಕ್ರಮವಾಗಿ ಬ್ಯಾಟರ್ ಮತ್ತು ಬೌಲರ್‌ಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ.

ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಆತಿಥ್ಯದಲ್ಲಿ ಜೂನ್ 2ರಂದು ಟಿ20 ವಿಶ್ವಕಪ್ ಟೂರ್ನಿ ಆರಂಭವಾಗಲಿದೆ. ಅದಕ್ಕೂ ಮುನ್ನ ಬಿಡುಗಡೆಯಾದ ಪಟ್ಟಿಯಲ್ಲಿ ಚೊಚ್ಚಲ ವಿಶ್ವಕಪ್ ಗೆದ್ದಿದ್ದ ಭಾರತ ತಂಡವು 264 ಪಾಯಿಂಟ್ಸ್‌ಗಳೊಂದಿಗೆ ಮೊದಲ ಸ್ಥಾನ ಕಾಪಾಡಿಕೊಂಡಿದೆ.

ಎರಡು ಬಾರಿಯ ಚಾಂಪಿಯನ್ ವೆಸ್ಟ್ ಇಂಡೀಸ್ ಎರಡು ಸ್ಥಾನ ಬಡ್ತಿ ಪಡೆದು ನಾಲ್ಕನೇ ಸ್ಥಾನಕ್ಕೆ ಏರಿದೆ. ಇತ್ತೀಚಿನ ಕೆಲ ಟೂರ್ನಿಗಳಲ್ಲಿ ತಂಡವು ಉತ್ತಮ ಪ್ರದರ್ಶನ ತೋರಿದ್ದು ಇದಕ್ಕೆ ಕಾರಣ. 2021ರ ಚಾಂಪಿಯನ್ ಆಸ್ಟ್ರೇಲಿಯಾ (257) ಮತ್ತು ಹಾಲಿ ಚಾಂಪಿಯನ್ ಇಂಗ್ಲೆಂಡ್ (254) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನದಲ್ಲಿವೆ. ನ್ಯೂಜಿಲೆಂಡ್ (250), ಪಾಕಿಸ್ತಾನ (244) ಮತ್ತು ದಕ್ಷಿಣ ಆಫ್ರಿಕಾ (244) ಕ್ರಮವಾಗಿ ಐದು, ಆರು ಮತ್ತು ಏಳನೇ ಸ್ಥಾನದಲ್ಲಿವೆ.

ಅಮೆರಿಕದ ಹವೆಗೆ ಒಗ್ಗಿಕೊಳ್ಳಲು ಭಾರತ ಕ್ರಿಕೆಟಿಗರ ಯತ್ನ

ನಾಸೌ ಕೌಂಟಿ ಮೈದಾನದಲ್ಲಿ ಅಭ್ಯಾಸ



ಅಭ್ಯಾಸ ನಡೆಸಿದ ಭಾರತ ತಂಡದ ಆಟಗಾರರು –ಪಿಟಿಐ ಚಿತ್ರ

ನ್ಯೂಯಾರ್ಕ್ (ಪಿಟಿಐ): ಎರಡು ತಿಂಗಳ ಕಾಲ ಐಪಿಎಲ್‌ನ ಇರುಳು ಬೆಳಕಲ್ಲಿ ಬಿಡುವಿಲ್ಲದ ಕ್ರಿಕೆಟ್ ಆಡಿದ್ದ ಭಾರತ ತಂಡದ ಆಟಗಾರರು ವಿಭಿನ್ನವಾದ ಇಲ್ಲಿನ ಹವಾಮಾನದಲ್ಲಿ ಟಿ20 ವಿಶ್ವಕಪ್ ಕ್ರಿಕೆಟ್‌ಗೆ ಪೂರ್ವಭಾವಿಯಾಗಿ ಬುಧವಾರ ಲಘು ಅಭ್ಯಾಸದಲ್ಲಿ ತೊಡಗಿದರು. ಭಾರತ ತನ್ನ ಪೂರ್ವಭಾವಿ ಹಂತದ ಪಂದ್ಯಗಳನ್ನು ಸ್ಥಳೀಯ ಕಾಲಮಾನ ಬೆಳಿಗ್ಗೆ 10.30ಕ್ಕೆ ಆಡಲಿದೆ. ಕೊಹ್ಲಿ ಅಭ್ಯಾಸದಲ್ಲಿ ಕಾಣಿಸಿಕೊಳ್ಳಲಿಲ್ಲ.

ಆರ್‌ಸಿಬಿಗೆ ಆಡಿದ್ದ ವಿರಾಟ್ ಕೊಹ್ಲಿ ವೈಯಕ್ತಿಕ ಕೆಲಸಗಳಿಂದ ಬುಧವಾರ ಹಾಜರಾಗಲಿಲ್ಲ. ಅವರು ಶುಕ್ರವಾರ ತಂಡವನ್ನು ಕೂಡಿಕೊಳ್ಳುವ ಸಾಧ್ಯತೆಯಿದೆ. ಆದರೆ ದೀರ್ಘ ಅವಧಿಯ ವಿಮಾನ ಪ್ರಯಾಣದ ನಂತರ ಅವರು, ಭಾರತ ತಂಡಕ್ಕೆ ಬಾಂಗ್ಲಾದೇಶ ವಿರುದ್ಧ ಶನಿವಾರ ಸಿಗುವ ಏಕೈಕ ಅಭ್ಯಾಸ ಪಂದ್ಯಕ್ಕೆ ಆಡುವರೇ ಎಂಬುದು ಸ್ಪಷ್ಟವಾಗಿಲ್ಲ.

ಬೆಳಿಗ್ಗೆ ಇಲ್ಲಿ ಅಷ್ಟೇನೂ ಸೆಕೆ ಇರುವುದಿಲ್ಲ. 25 ರಿಂದ 27 ಡಿಗ್ರಿ ಸೆಲ್ಷಿಯಸ್‌ನ ಹಿತಕರ ಅನುಭವ ಸಿಗಲಿದೆ. ಭಾರತದ ನೆರವು ಸಿಬ್ಬಂದಿ, ಇಲ್ಲಿನ ಹೊರವಲಯದ ನಾಸೌ ಕೌಂಟಿ ಮೈದಾನದಲ್ಲಿ ಆಟಗಾರರಿಗೆ ಬೆಳಿಗ್ಗೆ ಇಲ್ಲಿನ ಹವಾಮಾನಕ್ಕೆ ಒಗ್ಗಿಕೊಳ್ಳಲು ಅವಕಾಶ ನೀಡಿದರು. 14 ಆಟಗಾರರು ಪಾಲ್ಗೊಂಡಿದ್ದು, ಜಾಗಿಂಗ್ ಮತ್ತು ಲಘು ವ್ಯಾಯಾಮದಲ್ಲಿ ತೊಡಗಿದರು.

ಇಲ್ಲಿನ ಕಾಲಮಾನಕ್ಕೆ ಅವರು ಒಗ್ಗಿಕೊಳ್ಳಲುತ್ತಿದ್ದಾರೆ. ಇವತ್ತು ಮೊದಲ ಬಾರಿಗೆ ಅವರು ಮೈದಾನಲ್ಲಿ ಅಭ್ಯಾಸ ನಡೆಸಿದರು ಎಂದು ಸ್ಟ್ರೆಂತ್ ಮತ್ತು ಕಂಡಿಷನಿಂಗ್ ಕೋಚ್ ಸೋಹಮ್ ದೇಸಾಯಿ ಬಿಸಿಸಿಐ ಟಿ.ವಿ.ಗೆ ತಿಳಿಸಿದರು.

ಕಳೆದ ಬಾರಿ ವೆಸ್ಟ್ ಇಂಡೀಸ್ ಪ್ರವಾಸದ ಸಂದರ್ಭದಲ್ಲಿ ಭಾರತ ತಂಡ ಫ್ಲಾರಿಡಾದ ಲಾಡೆರ್‌ಡೇಲ್‌ನಲ್ಲಿ ಸೀಮಿತ ಓವರುಗಳ ಪಂದ್ಯ ಆಡಿತ್ತು.

‘ಮೊದಲ ಬಾರಿ ನ್ಯೂಯಾರ್ಕ್‌ನ-ಲ್ಲಿ ಕ್ರಿಕೆಟ್ ಆಡುತ್ತಿದ್ದೇವೆ. ಇದೊಂದು ಖುಷಿಯ ಸಂದರ್ಭ’ ಎಂದು ರವೀಂದ್ರ ಜಡೇಜ ಹೇಳಿದರು.

ಹಾರ್ದಿಕ್ ಪಾಂಡ್ಯ ಕೂಡ ಇಲ್ಲಿನ ಹದವಾದ ಬಿಸಿಲು ಕಂಡು ಖುಷಿಯಾಗಿದ್ದರು. ಇಲ್ಲಿನ ಕ್ರಿಕೆಟ್ ಆಸಕ್ತಿಗಳನ್ನು ತಿಳಿದುಕೊಳ್ಳಲು ಸೂರ್ಯಕುಮಾರ್ ಯಾದವ್ ಉತ್ಸುಕರಾಗಿದ್ದರು.

ಮೊದಲ (2007) ಟಿ20 ವಿಶ್ವಕಪ್ ವಿಜೇತರಾದ ಭಾರತ ಮೊದಲ ಪಂದ್ಯವನ್ನು ಜೂನ್ 5ರಂದು ಐರ್ಲೆಂಡ್ ವಿರುದ್ಧ ಆಡಲಿದೆ. ನಂತರ ಪಂದ್ಯ ಜೂನ್ 9ರಂದು ಪಾಕಿಸ್ತಾನ ವಿರುದ್ಧ ನಡೆಯಲಿದೆ. ಅಮೆರಿಕದ ವಿರುದ್ಧ ಪಂದ್ಯ ಜೂನ್ 12ರಂದು ನಡೆಯಲಿದೆ. ಫ್ಲಾರಿಡಾದಲ್ಲಿ ಕೆನಡಾ ವಿರುದ್ಧ ಅಂತಿಮ ಲೀಗ್ ಪಂದ್ಯ ಜೂನ್ 15ರಂದು ಆಡಲಿದೆ.

ಕೋಚ್‌ಗಳೊಂದಿಗೆ ಮೈದಾನಕ್ಕೆ ಇಳಿದು ಗೆದ್ದ ಆಸ್ಟ್ರೇಲಿಯಾ

ಸಿಡ್ನಿ (ಎಎಫ್‌ಪಿ): ಕೆಲ ಆಟಗಾರರ ಅನುಪಸ್ಥಿತಿಯ ಕಾರಣಕ್ಕಾಗಿ ಕೋಚ್, ನೆರವು ಸಿಬ್ಬಂದಿಯೊಂದಿಗೆ ಕಣಕ್ಕೆ ಇಳಿದ ಆಸ್ಟ್ರೇಲಿಯಾ ತಂಡವು ಮಂಗಳವಾರ ನಡೆದ ಟಿ20 ವಿಶ್ವಕಪ್ ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ ನಮೀಬಿಯಾ ತಂಡವನ್ನು ಏಳು ವಿಕೆಟ್‌ಗಳಿಂದ ಸುಲಭವಾಗಿ ಮಣಿಸಿತು.

ಐಪಿಎಲ್ ಟೂರ್ನಿಯಲ್ಲಿ ಪಾಲ್ಗೊಂಡಿದ್ದ ಪ್ಯಾಟ್ ಕಮಿನ್ಸ್, ಟ್ರಾವಿಸ್ ಹೆಡ್, ಮಾರ್ಕಸ್ ಸ್ಟೊಯಿನಿಸ್, ಮಿಚೆಲ್ ಸ್ಟಾರ್ಕ್, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಕ್ಯಾಮರಾನ್ ಗ್ರೀನ್ ಅವರು ಇನ್ನೂ ಆಸ್ಟ್ರೇಲಿಯಾ ತಂಡವನ್ನು ಸೇರಿಕೊಂಡಿಲ್ಲ. ಹೀಗಾಗಿ, ಅಭ್ಯಾಸ ಪಂದ್ಯದ ವೇಳೆ ತಂಡದ 9 ಆಟಗಾರರು ಮಾತ್ರ ಇದ್ದರು.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡದ ನಾಯಕ ಮಿಚೆಲ್ ಮಾರ್ಷ್ ಬೌಲಿಂಗ್ ಆಯ್ದುಕೊಂಡರು. ಒಂದು ಹಂತದಲ್ಲಿ ಬದಲಿ ಫೀಲ್ಡರ್‌ಗಳಾಗಿ ನಾಲ್ವರು ನೆರವು ಸಿಬ್ಬಂದಿಯನ್ನು ನಿಯೋಜಿಸಲಾಯಿತು. ಆಸ್ಟ್ರೇಲಿಯಾ ತಂಡದ ಮುಖ್ಯ ಆಯ್ಕೆಗಾರ 41 ವರ್ಷದ ಜಾರ್ಜ್ ಬೈಲಿ, 46 ವರ್ಷದ ಫೀಲ್ಡಿಂಗ್ ಕೋಚ್ ಆಂಡ್ರೆ ಬೊರೊವೆಕ್, ಬ್ಯಾಟಿಂಗ್ ಕೋಚ್ 49 ವರ್ಷದ ಬ್ರಾಡ್ ಹಾಗ್ ಮತ್ತು ಮುಖ್ಯ ಕೋಚ್ 42 ವರ್ಷದ ಆಂಡ್ರ್ಯೂ ಮೆಕ್ ಡೊನಾಲ್ಡ್ ಅವರೂ ಮೈದಾನಕ್ಕೆ ಇಳಿದರು ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ.

ಮೊದಲು ಬ್ಯಾಟಿಂಗ್ ನಡೆಸಿದ ನಮೀಬಿಯಾ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗೆ 119 ರನ್ ಗಳಿಸಿತು. ಡೇವಿಡ್ ವಾರ್ನರ್ ಔಟಾಗದೇ 54 (21ಎ) ಅವರ ಬ್ಯಾಟಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು 10 ಓವರ್‌ಗಳಲ್ಲಿ 3 ವಿಕೆಟ್‌ಗೆ 123 ರನ್ ಸೇರಿಸಿ ಜಯ ಗಳಿಸಿತು.

ಆ.22ರಿಂದ ಯುಟಿಟಿ ಟೂರ್ನಿ

ಚೆನ್ನೈ (ಪಿಟಿಐ): ಭಾರತದ ಪ್ರಮುಖ ಟೇಬಲ್ ಟೆನಿಸ್ ಲೀಗ್ ‘ಅಲ್ಟಿಮೇಟ್ ಟೇಬಲ್ ಟೆನಿಸ್’ನ (ಯುಟಿಟಿ) ಐದನೇ ಆವೃತ್ತಿ ಆ.22ರಿಂದ ಸೆ.7 ರವರೆಗೆ ಚೆನ್ನೈನ ಜವಾಹರಲಾಲ್ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ಈ ಬಾರಿ ಎರಡು ಹೊಸ ತಂಡಗಳು ಲೀಗ್‌ನಲ್ಲಿ ಸ್ಪರ್ಧಿಸುತ್ತಿವೆ.

ಈತನಕ ನಡೆದ ಆವೃತ್ತಿಗಳಲ್ಲಿ ಆರು ತಂಡಗಳು ಮಾತ್ರ ಸೆಣಸಾಟ ನಡೆಸಿದ್ದವು. ಜೈಪುರ ಪೇಟ್ರಿಯಾಟ್ಸ್ ಮತ್ತು ಅಹಮದಾಬಾದ್ ಎಸ್‌ಜಿ ಪೈಪರ್ಸ್ ಈ ಆವೃತ್ತಿಯಲ್ಲಿ ಕಣಕ್ಕೆ ಇಳಿಯಲಿವೆ. ಹಾಲಿ ಚಾಂಪಿಯನ್ ಗೋವಾ ಚಾಲೆಂಜರ್ಸ್, ಚೆನ್ನೈ ಲಯನ್ಸ್, ದಬಾಂಗ್ ಡೆಲ್ಲಿ ಟಿಟಿಸಿ, ಯು ಮುಂಬಾ ಟಿಟಿ, ಪುಣೇರಿ ಪಲ್ಟನ್, ಬೆಂಗಳೂರು ಸ್ಮಾಷರ್ಸ್ ತಂಡಗಳು ಸ್ಪರ್ಧೆಯಲ್ಲಿ ಇರಲಿವೆ. ಪ್ರತಿ ತಂಡವು ಇಬ್ಬರು ವಿದೇಶಿ ಆಟಗಾರರು ಸೇರಿದಂತೆ ಆರು ಮಂದಿಯನ್ನು ಒಳಗೊಂಡಿರಲಿದೆ.

ಹಂಪಿ ವಿರುದ್ಧ ಗೆಲುವು ಅಗ್ರಸ್ಥಾನದಲ್ಲಿ ವೈಶಾಲಿ

ಸ್ಟಾವೆಂಜರ್ (ನಾರ್ವೆ): ಭಾರತದ ಯುವ ಆಟಗಾರ್ತಿ, ಗ್ರ್ಯಾಂಡ್‌ಮಾಸ್ಟರ್ ಆರ್.ವೈಶಾಲಿ, ಸ್ವದೇಶದ ಅನುಭವಿ ಆಟಗಾರ್ತಿ ಕೋನೇರು ಹಂಪಿ ಅವರನ್ನು ಸೋಲಿಸಿ ನಾರ್ವೆ ಚೆಸ್ ಟೂರ್ನಿಯ ನಂತರ ಮಹಿಳಾ ವಿಭಾಗದಲ್ಲಿ ಮಂಗಳವಾರ ಅಗ್ರಸ್ಥಾನಕ್ಕೇರಿದರು. ಎರಡು ಸುತ್ತುಗಳ ನಂತರ ಅವರು ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.


ಆರ್. ವೈಶಾಲಿ –ಪಿಟಿಐ ಚಿತ್ರ

ಚೀನಾದ ಟಿಂಗ್ಜಿ ಲೀ, ವಿಶ್ವ ಚಾಂಪಿಯನ್ ಜು ವೆನ್‌ಜುನ್, ಉಕ್ರೇನ್‌ನ ಅನ್ನಾ ಮುಝಿಚುಕ್ ಮತ್ತು ಸ್ವೀಡನ್‌ನ ಪಿಯಾ ಕ್ರಾಮ್ಲಿಂಗ್ ಐದರವರೆಗಿನ ಸ್ಥಾನಗಳನ್ನು ಹಂಚಿಕೊಂಡಿದ್ದಾರೆ. ಹಂಪಿ (1.5 ಪಾಯಿಂಟ್ಸ್) ಕೊನೆಯ ಸ್ಥಾನದಲ್ಲಿದ್ದಾರೆ. ಆರು ಮಂದಿ ಆಟಗಾರ್ತಿಯರ ಈ ಟೂರ್ನಿ ರೌಂಡ್‌ರಾಬಿನ್ ಮಾದರಿಯಲ್ಲಿ ನಡೆಯುತ್ತಿದೆ.

ಪುರುಷರ ವಿಭಾಗದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಮೂರು ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನದಲ್ಲಿದ್ದಾರೆ. ಈ ವಿಭಿನ್ನ ಟೂರ್ನಿಯಲ್ಲಿ ಡ್ರಾ ಆದ ಪಂದ್ಯಗಳನ್ನು 'ಆರ್ಮ್‌ಗೆಡನ್' ಮಾದರಿಯಲ್ಲಿ ನಿರ್ಧರಿಸಲಾಗುತ್ತದೆ. ಈ ಮಾದರಿಯಲ್ಲಿ ಬಿಳಿ ಕಾಯಿಗಳಿಗೆ 10 ನಿಮಿಷ, ಕಪ್ಪು ಕಾಯಿಗಳನ್ನು ಆಡುವ ಆಟಗಾರನಿಗೆ 7 ನಿಮಿಷ ಇರುತ್ತದೆ. ಒಂದೊಮ್ಮೆ ಪಂದ್ಯ ಡ್ರಾ ಆದರೆ ಕಪ್ಪು ಕಾಯಿಗಳಲ್ಲಿ ಆಡುವ ಆಟಗಾರ ವಿಜೇತ ಎನಿಸುತ್ತಾನೆ.

ಎರಡನೇ ಸುತ್ತಿನಲ್ಲಿ ಅವರು ಹಿಕಾರು ನಕಾಮುರಾ ವಿರುದ್ಧ ಆಡಿದರು. ಟೂರ್ನಿಯಲ್ಲಿರುವ ಭಾರತದ ಏಕೈಕ ಆಟಗಾರ ಪ್ರಜ್ಞಾನಂದ ಎರಡನೇ ಸುತ್ತಿನಲ್ಲಿ ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ಎದುರು ಸೋಲನುಭವಿಸಿದರು.

ಪ್ರಜ್ಞಾನಂದ 2.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಫ್ರಾನ್ಸ್‌ನ ಅಲಿರೇಝಾ ಫಿರೋಝ್, ಹಿಕಾರು ನಕಾಮುರಾ ಮತ್ತು ಡಿಂಗ್ ಲಿರೆನ್ ತಲಾ 2.5 ಪಾಯಿಂಟ್ಸ್ ಕಲೆಹಾಕಿದ್ದಾರೆ. ಫ್ಯಾಬಿಯಾನೊ ಕರುವಾನಾ (2 ಪಾಯಿಂಟ್ಸ್) ಕೊನೆಯ ಸ್ಥಾನದಲ್ಲಿದ್ದಾರೆ.

ಕರುವಾನಾ ಮತ್ತು ಫಿರೋಝ್ ಕ್ಲಾಸಿಕಲ್ ಪಂದ್ಯ 'ಡ್ರಾ' ಮಾಡಿದರು. ಆದರೆ ಫಿರೋಜ್ ಅವರು ಆರ್ಮ್‌ಗೆಡನ್‌ನಲ್ಲಿ ಮೇಲುಗೈ ಸಾಧಿಸಿದರು.

ವಿಶ್ವ ಚೆಸ್ ಚಾಂಪಿಯನ್‌ಷಿಪ್ ಆತಿಥ್ಯಕ್ಕೆ ಬಿಡ್ ಸಲ್ಲಿಸಿದ ಭಾರತ

ನವದೆಹಲಿ (ಪಿಟಿಐ): ಹದಿಹರೆಯದ ಚೆಸ್ ತಾರೆ ಡಿ.ಗುಕೇಶ್ ಮತ್ತು ಹಾಲಿ ವಿಶ್ವ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ನಡುವಣ ನಡೆಯಲಿರುವ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಆತಿಥ್ಯಕ್ಕೆ ಭಾರತವು ಬಿಡ್ ಸಲ್ಲಿಸಿದೆ. ಈ ವರ್ಷದ ನವೆಂಬರ್– ಡಿಸೆಂಬರ್‌ನಲ್ಲಿ ಈ ಚಾಂಪಿಯನ್‌ಷಿಪ್ ನಡೆಯಬೇಕಾಗಿದೆ.

ಕಳೆದ ತಿಂಗಳು ಕೆನಡಾದಲ್ಲಿ ನಡೆದ ಕ್ಯಾಂಡಿಡೇಟ್ಸ್ ಟೂರ್ನಿಯನ್ನು ಗೆಲ್ಲುವ ಮೂಲಕ 17 ವರ್ಷದ ಗುಕೇಶ್, ವಿಶ್ವ ಚೆಸ್ ಪಟ್ಟಕ್ಕೆ ಅತಿ ಕಿರಿಯ ಚಾಲೆಂಜರ್ ಎನಿಸಿದ್ದರು. ಭಾರತ ಒಂದೊಮ್ಮೆ ಚಾಂಪಿಯನ್‌ಷಿಪ್ ಆತಿಥ್ಯದ ಹಕ್ಕನ್ನು ಪಡೆದರೆ, ಈ ಪ್ರತಿಷ್ಠಿತ ಕೂಟ ನವೆಂಬರ್ 20 ರಿಂದ ಡಿಸೆಂಬರ್ 15ರವರೆಗೆ ಚೆನ್ನೈನಲ್ಲಿ ನಿಗದಿಯಾಗಲಿದೆ.

ತಮಿಳುನಾಡು ಸರ್ಕಾರದಿಂದ ಬಿಡ್ ಹೋಗಿದೆ. 'ಭಾರತದಿಂದ ಬಿಡ್ ಸ್ವೀಕರಿಸಲಾಗಿದೆ' ಎಂದು ವಿಶ್ವ ಚೆಸ್‌ನ ಅಧಿಕೃತ ಸಂಸ್ಥೆಯಾದ ಫಿಡೆ ಸಿಇಒ ಎಮಿಲ್ ಸುತೋವ್‌ಸ್ಕಿ ಪಿಟಿಐಗೆ ತಿಳಿಸಿದರು.

ಈವರೆಗೆ ಇನ್ಯಾವುದೇ ದೇಶದಿಂದ ಫಿಡೆಯು ಬಿಡ್ ಸ್ವೀಕರಿಸಿಲ್ಲ. ಮೇ 31 ಇದಕ್ಕೆ ಕೊನೆಯ ದಿನವಾಗಿದೆ. ಭಾರತದ ಜೊತೆ ಸಿಂಗಪುರ ಕೂಡ ಬಿಡ್ ಸಲ್ಲಿಸುವ ನಿರೀಕ್ಷೆಯಿದೆ ಎನ್ನಲಾಗಿದೆ. ಆದರೆ ಇದುವರೆಗೆ ಅದು ಈ ನಿಟ್ಟಿನಲ್ಲಿ ಮುಂದುವರಿದಿಲ್ಲ. ಇದುವರೆಗೆ ಬೇರಾವುದೇ ದೇಶವು ಬಿಡ್ ಸಲ್ಲಿಸಿಲ್ಲ. ಕೊನೆಯ ದಿನದವರೆಗೆ ಕಾಯುತ್ತೇವೆ. ಮುಂದಿನ ಫಿಡೆ ಕೌನ್ಸಿಲ್ ಸಭೆಯಿದೆ. ನಂತರ ನಿಯಮಗಳ ಅನುಸಾರವಾಗಿ ನಾವು ಆತಿಥ್ಯದ ಹಕ್ಕನ್ನು ನಿರ್ಧರಿಸಲಿದ್ದೇವೆ ಎಂದು ಸುತೋವ್‌ಸ್ಕಿ ಹೇಳಿದರು.

ಎಐಸಿಎಫ್ ಬಿಡ್ ಗೆದ್ದಲ್ಲಿ, ಸುಮಾರು ₹71 ಕೋಟಿ ರೂಪಾಯಿ ನೀಡಬೇಕಾಗುತ್ತದೆ. ಟೂರ್ನಿಯ ಅವಧಿ 25 ದಿನಗಳದ್ದು. ನಿಯಮಗಳನ್ನು ಜುಲೈ 1ರೊಳಗೆ ಪೂರ್ಣಗೊಳಿಸಲಾಗುತ್ತದೆ.

ಒಟ್ಟು ಬಹುಮಾನ ನಿಧಿ ₹20 ಕೋಟಿಗೂ ಅಧಿಕ ಇರಲಿದೆ. ಇದು 2023ರ ಚಾಂಪಿಯನ್‌ಷಿಪ್‌ಗಿಂತ (ಆಗ ₹17 ಕೋಟಿ) ಅಧಿಕವಾಗಿದೆ.

ಫ್ರೆಂಚ್ ಓಪನ್ ಟೆನಿಸ್: ಸಿಟ್ಸಿಪಾಸ್, ಜೇಬರ್, ಕೆನಿನ್ ಮುನ್ನಡೆ

ಮೂರನೇ ಸುತ್ತಿಗೆ ಅಲ್ಕರಾಜ್

ಪ್ಯಾರಿಸ್ (ಎಪಿ): ಫೋರ್‌ಹ್ಯಾಂಡ್ ಹೊಡೆತಗಳಲ್ಲಿ ಲಯ ಕಂಡುಕೊಳ್ಳಲು ಪರದಾಡಿದ ಕಾರ್ಲೋಸ್ ಅಲ್ಕರಾಜ್, 176ನೇ ಕ್ರಮಾಂಕದ ಕ್ವಾಲಿಫೈಯರ್ ಆಟಗಾರನ ಎದುರು ಗೆಲುವಿಗೆ ಮುನ್ನ ಬುಧವಾರ ನಾಲ್ಕು ಸೆಟ್‌ಗಳ ಹೋರಾಟ ನಡೆಸಬೇಕಾಯಿತು. ಅಂತಿಮ ಸೆಟ್‌ನಲ್ಲಿ ಒಗ್ಗಿಕೊಂಡ ಅವರು, ಸತತ ಐದು ಗೇಮ್‌ಗಳನ್ನು ಪಡೆದು ಜೇಸ್ಪರ್ ಡಿ ಜಾಂಗ್ ಅವರನ್ನು 6–3, 6–4, 2–6, 6–2 ರಿಂದ ಜಯ ಗಳಿಸಿ ಮೂರನೇ ಸುತ್ತಿಗೆ ಕಾಲಿಟ್ಟರು.

ಬೆಳಿಗ್ಗೆ ಸುರಿದ ಭಾರಿ ಮಳೆಯಿಂದಾಗಿ 23 ಸಿಂಗಲ್ಸ್ ಪಂದ್ಯಗಳನ್ನು ಮುಂದೂಡಬೇಕಾಯಿತು. ಅದೃಷ್ಟಶಾಲಿಯಾದ, ಮೂರನೇ ಶ್ರೇಯಾಂಕದ ಅಲ್ಕರಾಜ್ ಅವರು ಹೇಗೊ, ಕೋರ್ಟ್ ಫಿಲಿಪ್ ಷಾಟಿಯೆ ಮೈದಾನದಲ್ಲಿ ಪಂದ್ಯ ಮುಗಿಸಿದರು.

ಆದರೆ ಅಲ್ಕರಾಜ್‌ಗೆ ನೆದರ್ಲೆಂಡ್ಸ್‌ನ 23 ವರ್ಷದ ಕ್ವಾಲಿಫೈಯರ್ ಡಿ ಜಾಂಗ್ ಉತ್ತಮ ಹೋರಾಟ ನೀಡಿದರು. ಇದು ಅವರಿಗೆ ಎರಡನೇ ಗ್ರ್ಯಾನ್‌ಸ್ಲಾಮ್ ಪ್ರಧಾನ ಸುತ್ತು ಆಗಿದೆ. ಮಾಜಿ ಅಗ್ರಮಾನ್ಯ ಆಟಗಾರನಾಗಿರುವ 21 ವರ್ಷದ ಅಲ್ಕರಾಜ್ ಎರಡು ಗ್ರ್ಯಾನ್‌ಸ್ಲ್ಯಾಮ್ ಟೂರ್ನಿ ಜಯಿಸಿದ್ದಾರೆ. ಎರಡನೇ ಸುತ್ತಿನ ಪಂದ್ಯದಲ್ಲಿ ಅವರು ಮುಂಗೈ ಹೊಡೆತದಲ್ಲಿ ಅನೇಕ 26 ತಪ್ಪುಗಳನ್ನು ಎಸಗಿದರು.


ಗೆಲುವಿನ ಸಂಭ್ರಮದಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ –ಎಎಫ್‌ಪಿ ಚಿತ್ರ

ಅಲ್ಕರಾಜ್ ಮುಂದಿನ ಸುತ್ತಿನಲ್ಲಿ 27ನೇ ಶ್ರೇಯಾಂಕದ ಸೆಬಾಸ್ಟಿಯನ್ ಕೋರ್ಡಾ ಅಥವಾ ದಕ್ಷಿಣ ಕೊರಿಯಾದ ಕ್ವಾನ್ ಸೂನ್‌-ವೂ ಅವರನ್ನು ಎದುರಿಸಲಿದ್ದು, ಗೆದ್ದರೆ ಪ್ರಿಕ್ವಾರ್ಟರ್‌ಫೈನಲ್ ಪ್ರವೇಶಿಸಲಿದ್ದಾರೆ.

2020ರ ಆಸ್ಟ್ರೇಲಿಯನ್ ಓಪನ್ ಚಾಂಪಿಯನ್ ಹಾಗೂ ಕಳೆದ ವರ್ಷ ರನ್ನರ್ ಅಪ್ ಆಗಿದ್ದ ಸೋಫಿಯಾ ಕೆನಿನ್, ಎರಡು ಪ್ರಮುಖ ಟೂರ್ನಿಗಳ ಫೈನಲ್ ತಲುಪಿರುವ ಆನ್ಸ್ ಜೇಬರ್ ಮತ್ತು ಸ್ಟೆಫಾನೊಸ್ ಸಿಟ್ಸಿಪಾಸ್ ಅವರೂ ಮೂರನೇ ಸುತ್ತು ತಲುಪಿದರು.

ಮಹಿಳಾ ವಿಭಾಗದಲ್ಲಿ ಟ್ಯುನೀಷಿಯಾದ ಜೇಬರ್ 6–3, 1–6, 6–3ರಿಂದ ಕ್ಯಾಮಿಲೊ ಒಸೊರಿಯೊ ಅವರನ್ನು ಸೋಲಿಸಿದರೆ, ಪುರುಷರ ವಿಭಾಗದಲ್ಲಿ ಸಿಟ್ಸಿಪಾಸ್ 6–2, 6–7 (2), 6–4 ರಿಂದ ಡೇನಿಯಲ್ ಅಲ್ಟ್‌ಮೇರ್ ಅವರನ್ನು ಹಿಮ್ಮೆಟ್ಟಿಸಿದರು.

ಈ ವರ್ಷ ಪರದಾಡಿರುವ, 25 ವರ್ಷದ ಕೆನಿಸ್ 6–3, 6–3 ರಿಂದ 21ನೇ ಶ್ರೇಯಾಂಕದ ಫ್ರಾನ್ಸ್‌ನ ಕೆರೊಲಿನ್ ಗಾರ್ಸಿಯಾ ಅವರನ್ನು ಮಣಿಸಿದರು.

ಶ್ವಾಂಟೆಕ್ ಮುನ್ನಡೆ: ಹಾಲಿ ಚಾಂಪಿಯನ್, ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ 7-6 (7/1), 1-6, 7-5 ರಿಂದ ನಾಲ್ಕು ಗ್ರ್ಯಾನ್‌ಸ್ಲಾಮ್ ವಿಜೇತೆ ನವೊಮಿ ಒಸಾಕಾ ಅವರನ್ನು ಮಣಿಸಿ ಮೂರನೇ ಸುತ್ತು ಪ್ರವೇಶಿಸಿದರು. ಇಗಾ, ಕೊನೆಯ ಸೆಟ್‌ನಲ್ಲಿ 2–5ರಿಂದ ಹಿನ್ನಡೆ ಕಂಡಿದ್ದರು. ನಂತರ ಹಿಡಿತ ಸಾಧಿಸಿದ ಅವರು, ಸತತ ಐದು ಗೇಮ್‌ಗಳನ್ನು ಗೆದ್ದು ಮುನ್ನಡೆದರು.

ಜೊಕೊವಿಚ್ ಶುಭಾರಂಭ

ವಿಶ್ವದ ಅಗ್ರಮಾನ್ಯ ಆಟಗಾರ ನೊವಾಕ್ ಜೊಕೊವಿಚ್ ಶುಭಾರಂಭ ಮಾಡಿದರು. ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಎದುರು ನೋಡುತ್ತಿರುವ ಸರ್ಬಿಯಾದ ಜೊಕೊವಿಚ್ 6-4, 7-6 (3), 6-4 ರಿಂದ ಫ್ರಾನ್ಸ್‌ನ ಪಿಯರೆ ಹ್ಯೂಸ್ ಹರ್ಬರ್ಟ್ ಅವರನ್ನು ಮಣಿಸಿದರು. ಜೊಕೊವಿಚ್ ಮುಂದಿನ ಸುತ್ತಿನಲ್ಲಿ ಸ್ಪೇನ್‌ನ ರಾಬರ್ಟ್ ಕಾರ್ಬಲೆಸ್ ಬೇನಾ ಅವರನ್ನು ಎದುರಿಸುವರು.

ಬ್ಯಾಸ್ಕೆಟ್‌ಬಾಲ್ ಎಂಎನ್‌ಕೆಗೆ ಜಯ

ಬೆಂಗಳೂರು: ಶ್ರೇಯಸ್ ಮತ್ತು ಅಜಿನ್ ಅವರ ಆಟದ ಬಲದಿಂದ ಎಂಎನ್‌ಕೆ ರಾವ್ ಪಾರ್ಕ್ ಬಿಸಿ ತಂಡವು ಎಂ.ಸಿ. ಶ್ರೀನಿವಾಸ ಸ್ಮರಣಾರ್ಥ ರಾಜ್ಯ ಬಿ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಸೂಪರ್ ಲೀಗ್ ಹಂತದ ಪಂದ್ಯದಲ್ಲಿ ಭಾರತ್ ಎಸ್‌ಯು ತಂಡವನ್ನು 88–57ರಿಂದ ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮಧ್ಯಂತರದ ವೇಳೆ 50–26ರಿಂದ ಮುನ್ನಡೆ ಪಡೆದಿದ್ದ ಎಂಎನ್‌ಕೆ ತಂಡವು ಉತ್ತರಾರ್ಧದಲ್ಲೂ ಪಾಬಲ್ಯ ಮೆರೆಯಿತು. ಶ್ರೇಯಸ್ ಮತ್ತು ಸಜಿನ್ ಕ್ರಮವಾಗಿ 17 ಮತ್ತು 16 ಅಂಕ ಗಳಿಸಿದರು. ವಿಮಾನಪುರ ಎಸ್‌ಸಿ ತಂಡವು 73–68ರಿಂದ ಕೋರಮಂಗಲ ಎಸ್‌ಸಿ ತಂಡವನ್ನು ಸೋಲಿಸಿತು.

ಬೆಳಿಗ್ಗೆ ನಡೆದ ಪಂದ್ಯದಲ್ಲಿ ಎಂಎನ್‌ಕೆ ತಂಡವು 69–42ರಿಂದ ದೇವಾಂಗ ಯೂನಿಯನ್ ತಂಡವನ್ನು; ಭಾರತ್ ತಂಡವು 63–55ರಿಂದ ವಿಮಾನಪುರ ತಂಡವನ್ನು; ಕೆಎಸ್‌ಪಿ ತಂಡವು 67–47ರಿಂದ ಕೋರಮಂಗಲ ತಂಡವನ್ನು ಸೋಲಿಸಿದವು.

ಬ್ಯಾಡ್ಮಿಂಟನ್: ಸಿಂಧು, ಪ್ರಣಯ್ ಮುನ್ನಡೆ

ಸಿಂಗಪುರ (ಪಿಟಿಐ): ಮಾಜಿ ಚಾಂಪಿಯನ್ ಪಿ.ವಿ.ಸಿಂಧು ಬುಧವಾರ ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತಿಗೆ ಮುನ್ನಡೆದರು. ಆದರೆ ಪುರುಷರ ವಿಭಾಗದಲ್ಲಿ ಲಕ್ಷ್ಯ ಸೇನ್ ಅವರು ತೀವ್ರ ಹೋರಾಟ ಪ್ರದರ್ಶಿಸಿದರೂ ವಿಶ್ವದ ಅಗ್ರಮಾನ್ಯ ಆಟಗಾರ ವಿಕ್ಟರ್ ಆಕ್ಸೆಲ್‌ಸನ್ ಅವರಿಗೆ ಸೋಲಬೇಕಾಯಿತು.

ಎರಡು ವರ್ಷ ಹಿಂದೆ ಕೊನೆಯ ಸಲ ಇಲ್ಲಿಯೇ ಬಿಡಬ್ಲ್ಯುಎಫ್ ಪ್ರಶಸ್ತಿ ಗೆದ್ದಿದ್ದ ಸಿಂಧು 21–12, 22–20 ರಿಂದ ವಿಶ್ವದ 21ನೇ ಕ್ರಮಾಂಕದ ಆಟಗಾರ್ತಿ ಲಿನೆ ಹೊಜ್‌ರಮಾಕ್ ಕಾಯರ್ಸ್‌ಫೆಲ್ಟ್ ಅವರನ್ನು ಸೋಲಿಸಿದರು. ಕಳೆದ ವಾರ ಥಾಯ್ಲೆಂಡ್ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದ ಸಿಂಧು ಈ ಪಂದ್ಯದಲ್ಲಿ ಗೆಲುವಿಗೆ ತೆಗೆದುಕೊಂಡಿದ್ದು 44 ನಿಮಿಷಗಳನ್ನಷ್ಟೇ. ಅವರ ಮುಂದಿನ ಎದುರಾಳಿ, ರಿಯೊ ಒಲಿಂಪಿಕ್ ಚಾಂಪಿಯನ್ ಕರೊಲಿನಾ ಮರಿನ್ ಅವರು.

ವಿಶ್ವದ ಮೂರನೇ ಕ್ರಮಾಂಕದ ಆಟಗಾರ್ತಿ ಮರಿನ್ ಮತ್ತು ಸಿಂಧು ಡೆನ್ಮಾರ್ಕ್ ಓಪನ್‌ನಲ್ಲಿ ಕೊನೆಯ ಬಾರಿ ಎದುರಾಳಿಗಳಾಗಿದ್ದಾಗ ಇಬ್ಬರ ನಡುವೆ ವಾಗ್ವಾದ ನಡೆದು, ಎಲ್ಲೊ ಕಾರ್ಡ್ ಎಚ್ಚರಿಕೆ ಪಡೆದಿದ್ದರು. ಮರಿನ್, ಸಿಂಧು ವಿರುದ್ಧ 11–5ರ ಗೆಲುವಿನ ದಾಖಲೆ ಹೊಂದಿದ್ದಾರೆ.


ಭಾರತದ ಪಿ.ವಿ. ಸಿಂಧು –ಪಿಟಿಐ ಚಿತ್ರ

ಭಾರತದ ಮತ್ತೊಬ್ಬ ಸಿಂಗಲ್ಸ್ ಆಟಗಾರ ಎಚ್‌.ಎಸ್. ಪ್ರಣಯ್ ಎರಡನೇ ಸುತ್ತಿಗೆ ಮುನ್ನಡೆದರು. ಅವರು 21-9, 18-21, 21-9 ಮೂರು ಗೇಮ್‌ಗಳ ಹೋರಾಟದಲ್ಲಿ ಬೆಲ್ಜಿಯಂನ ಜೂಲಿಯನ್ ಕರಾಗ್ಗಿ ಅವರನ್ನು ಮಣಿಸಿದರು. ಅವರು ಮುಂದಿನ ಸುತ್ತಿನಲ್ಲಿ ಜಪಾನ್‌ನ ಕೆಂಟಾ ನಿಶಿಮೊಟೊ ಎದುರಿಸುವರು.

ಒಲಿಂಪಿಕ್ಸ್‌ಗೆ ಪದಾರ್ಪಣೆ ಮಾಡಲಿರುವ ವಿಶ್ವದ 14ನೇ ನಂಬರ್ ಆಟಗಾರ ಲಕ್ಷ್ಯ ಹೋರಾಟ ನಡೆಸಿದರೂ ಅಂತಿಮವಾಗಿ ಆಕ್ಸೆಲ್‌ಸನ್ ಎದುರು ಮಣಿಯಬೇಕಾಯಿತು. 62 ನಿಮಿಷಗಳ ಸೆಣಸಾಟದಲ್ಲಿ ಆಕ್ಸೆಲ್‌ಸನ್ 21–13, 16–21, 21–13 ರಿಂದ ಜಯ ಗಳಿಸಿದರು. ಆಕ್ಸೆಲ್‌ಸನ್ ಕಳೆದ ವಾರವಷ್ಟೇ ಥಾಯ್ಲೆಂಡ್ ಓಪನ್‌ನಲ್ಲಿ ಈ ಋತುವಿನ ಮೊದಲ ಪ್ರಶಸ್ತಿ ಗಳಿಸಿದ್ದರು.

ಕಿದಂಬಿ ಶ್ರೀಕಾಂತ್ ಅವರ ಮೊದಲ ಸುತ್ತಿನ ಪಂದ್ಯವೂ ನಿರಾಸೆಯಲ್ಲಿ ಅಂತ್ಯಕಂಡಿತು. ಅವರು 14–21, 3–11 ರಲ್ಲಿ ಐದನೇ ಶ್ರೇಯಾಂಕದ ಜಪಾನ್‌ನ ಆಟಗಾರ ಕೊಡಯಿ ನರವೋಕಾ ಎದುರು ಪಂದ್ಯದಿಂದ ನಿವೃತ್ತರಾದರು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಬಿ.ಸುಮೀತ್ ರೆಡ್ಡಿ – ಎನ್.ಸಿಕ್ಕಿ ರೆಡ್ಡಿ 18–21, 19–21ರಲ್ಲಿ ಮಲೇಷ್ಯಾದ ಗೊಹ್ ಸೂನ್ ಹುವತ್ – ಲಾಯಿ ಶೆವನ್ ಜೋಡಿಗೆ ಮಣಿಸಿದರು. ಇನ್ನೊಂದು ಪಂದ್ಯದಲ್ಲಿ ವೆಂಕಟ್ ಗೌರವ್ ಪ್ರಸಾದ್– ಜೂಹಿ ದೇವಾಂಗನ್ ಜೋಡಿ 8–21, 8–21ರಲ್ಲಿ ಮಾಡ್ಸ್ ವೆಸ್ಟರ್‌ಗಾರ್ಡ್– ಕ್ರಿಸ್ಟಿನ್ ಬುಷ್ ಎದುರು ಸೋತಿತು.

ಬಾಕ್ಸಿಂಗ್: ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟ ಅಂಕುಶಿತಾ, ನಿಶಾಂತ್


ಬ್ಯಾಂಕಾಕ್ (ಪಿಟಿಐ): ಮಾಜಿ ವಿಶ್ವ ಯೂತ್ ಚಾಂಪಿಯನ್ ಅಂಕುಶಿತಾ ಬೋರೊ (60 ಕೆ.ಜಿ) ಮತ್ತು ನಿಶಾಂತ್ ದೇವ್ (71 ಕೆ.ಜಿ) ಅವರು ಸುಲಭ ಗೆಲುವಿನೊಡನೆ ಬುಧವಾರ ಎರಡನೇ ಬಾಕ್ಸಿಂಗ್ ವಿಶ್ವ ಒಲಿಂಪಿಕ್ ಕ್ವಾಲಿಫೈಯರ್‌ನ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು.

ಬೊರೊ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಏಷ್ಯನ್ ಚಾಂಪಿಯನ್ ರಿಮ್ಮಾ ವೊಲೊಸ್ಸೆಂಕೊ ಅವರನ್ನು 4–1 ಅಂತರದಿಂದ ಸೋಲಿಸಿದರು.

ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ನಿಶಾಂತ್ ದೇವ್ ಕೂಡ ಕರಾರುವಾಕ್ ಪಂಚ್‌ಗಳೊಡನೆ 5–0 ಯಿಂದ ಥಾಯ್ಲೆಂಡ್‌ನ ಪೀರಾಪಟ್ ಯೆಸುಂಗ್‌ನೊಯಿನ್ ಅವರನ್ನು ಸೋಲಿಸಿ ಎಂಟರ ಘಟ್ಟ ತಲುಪಿದರು.

ಬೆಳಿಗ್ಗೆ, ರಾಷ್ಟ್ರೀಯ ಚಾಂಪಿಯನ್ ಅರುಂಧತಿ ಚೌಧರಿ ಅವರೂ ಸಹ 66ಕೆ.ಜಿ. ವಿಭಾಗದ ತಮ್ಮ ಪಂದ್ಯದಲ್ಲಿ ಜಯಗಳಿಸಿ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು. ಅರುಂಧತಿ 5–0 ಯಿಂದ ಸರ್ವಾನು ಮತದ ತೀರ್ಪಿನಲ್ಲಿ ಪೋರ್ಟೊರಿಕೊದ ಸ್ಟಿಫಾನಿ ಪೀನೀರೊ ಅವರನ್ನು ಸೋಲಿಸಿದ್ದರು.

ಆದರೆ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದ ನರೇಂದರ್ ಬೆರ್ವಾಲ್ (+92 ಕೆ.ಜಿ) ಹೊರಬಿದ್ದರು.ಬೆರ್ವಾಲ್ 2–3 ರಿಂದ ಇಕ್ವೆಡೋರ್‌ನ ಗೆರ್ಲಾನ್ ಗಿಲ್ಮರ್ ಕಾಂಗೊ ಚಲಾ ಅವರಿಗೆ ಮಣಿದರು. ಗುರುವಾರ ಸಚಿನ್ ಸಿವಾಚ್ (57 ಕೆ.ಜಿ) ಅವರು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಟರ್ಕಿಯ ಬತುಹಾನ್ ಸಿಫ್ಟ್‌ಸಿ ಅವರನ್ನು ಎದುರಿಸಲಿದ್ದಾರೆ.


ನಿಶಾಂತ್ ದೇವ್

2022ರ ಕಾಮನ್‌ವೆಲ್ತ್ ಚಾಂಪಿಯನ್ ಅಮಿತ್ ಪಂಘಲ್ (51 ಕೆ.ಜಿ), ಸಂಜೀತ್ (92 ಕೆ.ಜಿ) ಮತ್ತು ಜೈಸ್ಮಿನ್ (ಮಹಿಳಾ ವಿಭಾಗದ 57 ಕೆ.ಜಿ) ಅವರು ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದಾರೆ.

ಒಲಿಂಪಿಕ್ಸ್: ಬಾಕ್ಸಿಂಗ್ ಸ್ವರ್ಣ ಗೆದ್ದವರಿಗೆ ನಗದು ಬಹುಮಾನ ಘೋಷಿಸಿದ ಐಬಿಎ

ಜಿನೇವಾ (ಎಪಿ): ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡೆಗಳಲ್ಲಿ ಚಿನ್ನ ಗೆಲ್ಲುವ ಪ್ರತಿಯೊಬ್ಬ ಬಾಕ್ಸಿಂಗ್ ಪಟುವಿಗೆ ₹41.68 ಲಕ್ಷ ನಗದು ಬಹುಮಾನ ನೀಡುವುದಾಗಿ ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಐಬಿಎ) ಪ್ರಕಟಿಸಿದೆ. ವಿಶೇಷ ಎಂದರೆ ಅಂತರ-ರಾಷ್ಟ್ರೀಯ ಒಲಿಂಪಿಕ್ ಸಮಿತಿಯು ಬಾಕ್ಸಿಂಗ್ ಸಂಸ್ಥೆಯನ್ನು ನಿರ್ಬಂಧಿಸಿದೆ.

ನಗದು ಬಹುಮಾನದ ಭರವಸೆಯು, ಒಲಿಂಪಿಕ್ ಸಂಸ್ಥೆಯ ಜೊತೆ ಇನ್ನಷ್ಟು ಸಂಘರ್ಷಕ್ಕೆ ದಾರಿಮಾಡಿಕೊಡಲಿದೆ. ಒಟ್ಟು 13 ತೂಕ ವಿಭಾಗಗಳಲ್ಲಿ ಎಂಟರ ಘಟ್ಟ ತಲುಪುವ ಬಾಕ್ಸರ್‌ಗಳಿಗೆ ಪುರುಷ ಮತ್ತು ಮಹಿಳಾ ಸ್ಪರ್ಧಿಗಳಿಗೆ ಸುಮಾರು ₹8.33 ಲಕ್ಷ ನೀಡುವುದಾಗಿಯೂ ಐಬಿಎ ಪ್ರಕಟಿಸಿದೆ. ಅವರ ಕೋಚ್‌ಗಳು, ರಾಷ್ಟ್ರೀಯ ತಂಡಗಳಿಗೂ ಬಹುಮಾನ ಘೋಷಿಸಿದೆ. ಕೋಚ್, ರಾಷ್ಟ್ರೀಯ ತಂಡಗಳಿಗೆ ₹10 ಲಕ್ಷ ನೀಡುವುದಾಗಿಯೂ ಪ್ರಕಟಿಸಿದೆ.

ಕ್ರೀಡಾ ಸಂಸ್ಥೆಗಳು ನೀಡುವ ಬಹುಮಾನ ಹಣಕ್ಕೂ ಐಒಸಿ ಸಮ್ಮತಿ ನೀಡಿಲ್ಲ. ಈ ಹಿಂದೆ ಏಪ್ರಿಲ್‌ನಲ್ಲಿ, ವಿಶ್ವ ಅಥ್ಲೆಟಿಕ್ಸ್ ಪ್ಯಾರಿಸ್ ಕ್ರೀಡೆಗಳಲ್ಲಿ ಚಿನ್ನ ಗೆಲ್ಲುವ 48 ಅಥ್ಲೀಟುಗಳಿಗೆ ತಲಾ ₹41 ಲಕ್ಷ ನೀಡುವುದಾಗಿ ಪ್ರಕಟಿಸಿತ್ತು.

ಬಹುಮಾನ ಹಣದ ಮೂಲ ಸ್ಪಷ್ಟವಾಗಿಲ್ಲ. ಆದರೆ ಐಬಿಎದ ರಷ್ಯಾ ಅಧ್ಯಕ್ಷ ಉಮರ್ ಕ್ರೆಮ್ಲೆವ್ ಅವರಿಗೆ ದೇಶದ ಅತಿ ದೊಡ್ಡ ಇಂಧನ ಸಂಸ್ಥೆ ಗ್ಯಾಝ್‌ಪ್ರೊಮ್ ಬೆಂಬಲವಿದೆ. ಹಣಕಾಸು ವಿಷಯದಲ್ಲಿ ಪಾರದರ್ಶಕತೆ ಕಾಪಾಡದ ಕಾರಣಕ್ಕೆ ಐಒಸಿ, ಬಾಕ್ಸಿಂಗ್ ಸಂಸ್ಥೆಯನ್ನು ನಿರ್ಬಂಧಿಸಿದೆ. 2020ರ ಟೋಕಿಯೊ ಒಲಿಂಪಿಕ್ಸ್ ಬಾಕ್ಸಿಂಗ್ ಸ್ಪರ್ಧೆಗಳನ್ನೂ, ಐಬಿಎ ನೆರವಿಲ್ಲದೇ ಐಒಸಿಯೇ ಸಂಘಟಿಸಿತ್ತು.

ವಾಲಿಬಾಲ್: ಮಹಿಳಾ ತಂಡಕ್ಕೆ 5ನೇ ಸ್ಥಾನ

ಮನಿಲಾ (ಪಿಟಿಐ): ಭಾರತ ಮಹಿಳಾ ವಾಲಿಬಾಲ್ ತಂಡ 3–0 ಯಿಂದ ಇರಾನ್ ತಂಡವನ್ನು ಸೋಲಿಸಿ, ಇಲ್ಲಿ ಬುಧವಾರ ಮುಕ್ತಾಯಗೊಂಡ ಎವಿಸಿ ಮಹಿಳಾ ಚಾಲೆಂಜರ್ ಕಪ್ ಟೂರ್ನಿಯಲ್ಲಿ ಐದನೇ ಸ್ಥಾನ ಪಡೆಯಿತು.

ಭಾರತ ತಂಡ 25–17, 25–6, 25–11 ರಲ್ಲಿ ಜಯಗಳಿಸಿತು. ನಾಯಕಿ ಜಿನಿ, ಬ್ಲಾಕರ್ ಸೂರ್ಯಾ, ಅನುಶ್ರೀ ಮತ್ತು ಶಿಲ್ಪಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. 2022ರ ಆವೃತ್ತಿಯಲ್ಲಿ ಭಾರತ ಕಂಚಿನ ಪದಕ ಗೆದ್ದುಕೊಂಡಿತ್ತು.